ಬುಧವಾರ, ಅಕ್ಟೋಬರ್ 22, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 292 | ಪುಟ 16

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 84,426 | ನಿಫ್ಟಿ 25,868 | ಚಿನ್ನ (Std. 10g) ₹1,36,740 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,83,340 (ಬೆಂಗಳೂರು)

ಬಿಡುವು

ಪ್ರಿಯ ಓದುಗರು, ಜಾಹೀರಾತುದಾರರು ಹಾಗೂ ಪತ್ರಿಕಾ ವಿತರಕರಿಗೆ **ದೀಪಾವಳಿಯ ಶುಭಾಶಯಗಳು**

ಬಲಿಪಾಡ್ಯಮಿ ಪ್ರಯುಕ್ತ ಬುಧವಾರ ಕಚೇರಿಗೆ ಬಿಡುವು, ಹೀಗಾಗಿ ಗುರುವಾರದ ಸಂಚಿಕೆ ಪ್ರಕಟವಾಗುವುದಿಲ್ಲ.

ದಿನದ ಬೆಳವಣಿಗೆಗಳ ಅಪ್‌ಡೇಟ್ಸ್‌ಗಾಗಿ www.prajavani.net ನೋಡಿ.

ತೆರಿಗೆ ಪಾಲು: ಜಗಳ ಜೋರು

‘ತೆರಿಗೆ ಪಾಲು, ನೆರೆ ಪರಿಹಾರ, ಅನುದಾನದ ಹಂಚಿಕೆಯಲ್ಲಿ ಕೇಂದ್ರದ ಎನ್‌ಡಿಎ ಸರ್ಕಾರ ಅನ್ಯಾಯ ಮಾಡುತ್ತಿದೆ’ ಎಂಬ ಕಾಂಗ್ರೆಸ್ ಸರ್ಕಾರದ ಪ್ರಹಾರಕ್ಕೆ ತಿರುಗೇಟು ನೀಡಿರುವ ವಿರೋಧ ಪಕ್ಷ ಬಿಜೆಪಿ, ‘ತೆರಿಗೆ ಪಾಲಿನ ಹಣವನ್ನು ರಾಜ್ಯ ಸರ್ಕಾರ ಲೂಟಿ ಮಾಡುತ್ತಿದೆ’ ಎಂದು ಹರಿಹಾಯ್ದಿದೆ. ಪಾಲಿನ ವಿಷಯ ಎರಡೂ ಪಕ್ಷಗಳ ನಾಯಕರ ಮಧ್ಯೆ ವಾಕ್ಸಮರಕ್ಕೆ ದಾರಿ ಮಾಡಿಕೊಟ್ಟಿದೆ

ರಾಜ್ಯಕ್ಕೆ ಮೋದಿ ಅನ್ಯಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕಕ್ಕೆ ತೆರಿಗೆ ಹಂಚಿಕೆ, ಬೆಂಗಳೂರು ನಗರದ ಸಮಗ್ರ ಅಭಿವೃದ್ಧಿಗೆ ಅನುದಾನ ನೀಡುವ ವಿಚಾರದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಬೆಂಗಳೂರಿನ ಗಾಂಧಿನಗರ ಕ್ಷೇತ್ರದ ಚಿಕ್ಕಪೇಟೆಯಲ್ಲಿ ನಾನಾ ಅಭಿವೃದ್ಧಿ ಕಾಮಗಾರಿಗಳಿಗೆ ಬುಧವಾರ ಚಾಲನೆ ನೀಡಿ ಅವರು ಮಾತನಾಡಿದರು.

ಕೇಂದ್ರ ಲೋಕಸಭಾ ಕ್ಷೇತ್ರದ ಸಂಸದ ಪಿ.ಸಿ.ಮೋಹನ್ ನಿಮ್ಮ ಪರವಾಗಿ ಸಂಸತ್‌ನಲ್ಲಿ ಎಂದಾದರೂ ಬಾಯಿ ಬಿಟ್ಟಿದ್ದಾರಾ ಹೇಳಿ ಎಂದು ಪ್ರಶ್ನಿಸಿದ ಅವರು, ‘ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರು, ಬೆಂಗಳೂರು ಸಂಸದರು ಗಟ್ಟಿ ದನಿಯಲ್ಲಿ ಇದನ್ನು ಪ್ರಶ್ನಿಸಬೇಕು. ಮತದಾರರು ಮುಂದಾದರೂ ಎಚ್ಚರಿಕೆಯಿಂದಲೇ ಮತ ಹಾಕಬೇಕು’ ಎಂದು ಹೇಳಿದರು.

‘2017ರಲ್ಲಿ ಜಿಎಸ್‌ಟಿ ಜಾರಿ ಮಾಡಿದ ಕೇಂದ್ರ ಸರ್ಕಾರ ಹೆಚ್ಚು ತೆರಿಗೆಯನ್ನು ಜನರಿಂದ ವಸೂಲು ಮಾಡಿದೆ. ಸತತ ಎಂಟು ವರ್ಷಗಳ ಕಾಲ ಜನರಿಂದ ತೆರಿಗೆ ಸುಲಿಗೆ ಮಾಡಿ ಈಗ ಕೊಂಚ ಕಡಿತ ಮಾಡಿದೆ. ಇದನ್ನೇ ದೀಪಾವಳಿ ಉಡುಗೊರೆ ಎಂದು ಮೋದಿ ಅವರು ಜಾಹೀರಾತು ನೀಡಿದ್ದಾರೆ. ನಾಚಿಕೆ ಬಿಟ್ಟು ಬೆನ್ನು ತಟ್ಟಿಕೊಳ್ಳುತ್ತಿರುವ ಮೋದಿಯವರು ಈಗ, ತುಸು ತೆರಿಗೆ ಇಳಿಸಿ ಕರ್ನಾಟಕಕ್ಕೂ ₹15 ಸಾವಿರ ಕೋಟಿ ನಷ್ಟ ಮಾಡಿದ್ದಾರೆ’ ಎಂದು ಟೀಕಿಸಿದರು.

‘ಬೆಂಗಳೂರಿನ ಅಭಿವೃದ್ಧಿಗೆ ನರೇಂದ್ರ ಮೋದಿ ಅವರಿಂದ ಈವರೆಗೂ ನೆರವು ಸಿಕ್ಕಿಲ್ಲ. ಅವರೇ ಘೋಷಿಸಿದ ಹಣವೂ ಬಿಡುಗಡೆ ಮಾಡಿಲ್ಲ. ನಮ್ಮ ಸರ್ಕಾರವೇ ₹1.20 ಲಕ್ಷ ಕೋಟಿ ಅನುದಾನ ಬಳಸಿ ಬೆಂಗಳೂರು ಸಮಗ್ರ ಅಭಿವೃದ್ಧಿಗೆ ಮುಂದಾಗಿದೆ’ ಎಂದು ಹೇಳಿದರು.

‘ಮೆಟ್ರೊ ಯೋಜನೆ ಮೂಲಕ ಸಂಚಾರ ದಟ್ಟಣೆ ತಪ್ಪಿಸುವ ಪ್ರಯತ್ನ ನಮ್ಮಿಂದ ಆಗಿದೆ. 50:50ರ ಅನುದಾನದಡಿ ಮೆಟ್ರೊ ಯೋಜನೆ ರೂಪಿಸಿದರೂ ಕರ್ನಾಟಕವೇ ಶೇ 87ರಷ್ಟು ಹಣ ವಿನಿಯೋಗಿಸಿದೆ. ಕೇಂದ್ರ ಸರ್ಕಾರದ ಪಾಲು ಅತ್ಯಲ್ಪ ಬಂದಿದೆ. ದೆಹಲಿ, ಮುಂಬೈ ನಂತರ ಹೆಚ್ಚು ತೆರಿಗೆ ಕೊಡುವ ನಗರವಾದರೂ ಅಭಿವೃದ್ಧಿಗೆ ಕೇಂದ್ರದ ನೆರವು ಸಿಗುತ್ತಿಲ್ಲ’ ಎಂದು ಸಿದ್ದರಾಮಯ್ಯ ಹರಿಹಾಯ್ದರು.



▶10

> ಜಿಎಸ್‌ಟಿ ಹಂಚಿಕೆಯಲ್ಲಿ ಅನ್ಯಾಯವಾಗಿದ್ದರೂ ಮೋದಿಗೆ ಮತ ಹಾಕಿ ತಲೆಮೇಲೆ ಕೈ ಇಟ್ಟುಕೊಳ್ಳುವ ಸನ್ನಿವೇಶ ಮತದಾರರು ತಂದುಕೊಂಡಿದ್ದೀರಿ. ಮುಂದೆ ಎಚ್ಚರಿಕೆಯಿಂದ ಮತ ಹಾಕಿ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಕರ್ನಾಟಕದಲ್ಲಿನ ತೆರಿಗೆ ಕಳ್ಳತನದ ಬಗ್ಗೆ ಯಾವಾಗ ಮಾತನಾಡುತ್ತೀರಿ? ಕೆಲಸಕ್ಕೆ ಕರೀಬೇಡಿ, ಊಟಕ್ಕೆ ಮಾತ್ರ ಮರೀಬೇಡಿ ಎನ್ನುವಂತೆ ಕಾಂಗ್ರೆಸ್ ಸರ್ಕಾರ ನಡೆದುಕೊಳ್ಳುತ್ತಿದೆ
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

‘ತೆರಿಗೆ ಕಳ್ಳತನ ನಿಲ್ಲಿಸಿ’

‘ನಮ್ಮ ತೆರಿಗೆಯ ಕಳ್ಳತನ ಮಾಡುವುದನ್ನು ನಿಲ್ಲಿಸುವವರೆಗೆ, ನಮ್ಮಿಂದ ತೆರಿಗೆ ಸಂಗ್ರಹಣೆ ಮಾಡಬೇಡಿ’ ಎಂದು ಸಾರ್ವಜನಿಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ. ಇದು ಜನರ ಆಕ್ರೋಶಕ್ಕೆ ಹಿಡಿದ ಕೈಗನ್ನಡಿ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.



ಈ ಕುರಿತು ‘ಎಕ್ಸ್’ ಮಾಡಿರುವ ಅಶೋಕ, ‘ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಅವರ ನಿರ್ಲಕ್ಷ್ಯಕ್ಕೆ ಬೆಂಗಳೂರಿನ ನಾಗರಿಕರು ಬೇಸತ್ತಿದ್ದಾರೆ. ಹೀಗಾಗಿ ಜನ ‘ತೆರಿಗೆ ಕಳ್ಳತನ ನಿಲ್ಲಿಸಿ, ರಸ್ತೆ ಗುಂಡಿಗಳನ್ನು ನಾವೇ ಮುಚ್ಚುತ್ತೇವೆ ಎಂದು ಧ್ವನಿ ಎತ್ತಿದ್ದಾರೆ’ ಎಂದು ಹೇಳಿದ್ದಾರೆ.

‘ಕೆಲಸ ಮಾಡದಿದ್ದರೆ ನಮ್ಮ ಬಳಿ ತೆರಿಗೆ ವಸೂಲಿ ಮಾಡಬೇಡಿ ಎಂದು ನಾಗರಿಕರು ಮುಖ್ಯಮಂತ್ರಿಯೊಬ್ಬರಿಗೆ ಪತ್ರ ಬರೆದಿರುವುದು ಸ್ವತಂತ್ರ ಭಾರತದ ಇತಿಹಾಸದಲ್ಲಿ ಇದೇ ಮೊದಲು. ಇದೇನಾ ರಾಹುಲ್‌ಗಾಂಧಿ ಅವರೇ ನಿಮ್ಮ ಕರ್ನಾಟಕದ ಮಾಡೆಲ್’ ಎಂದು ಅಶೋಕ ಕುಟುಕಿದ್ದಾರೆ.

‘₹10 ಲಕ್ಷ ತಂದಿದ್ದೀರಾ’

ಬಿಜೆಪಿಯ ಒಬ್ಬ ಸಂಸದ ₹10 ಲಕ್ಷ ಅನುದಾನವನ್ನು ಕೇಂದ್ರದಿಂದ ಕರ್ನಾಟಕಕ್ಕೆ ತಂದಿದ್ದರೆ ಜನರು ನೀಡುವ ಶಿಕ್ಷೆಗೆ ತಲೆಬಾಗುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

‘ಬಿಜೆಪಿಯ ನಾಲ್ವರು ಸಂಸದರನ್ನು ಬೆಂಗಳೂರು ಜನರು ಗೆಲ್ಲಿಸಿದ್ದಾರೆ. ರಾಜ್ಯಸಭೆಯಲ್ಲಿ ಕರ್ನಾಟಕವನ್ನು ಪ್ರತಿನಿಧಿಸುವ ನಿರ್ಮಲಾ ಸೀತಾರಾಮನ್ ಅವರೂ ಕೇಂದ್ರದ ಹಣಕಾಸು ಸಚಿವರಾಗಿದ್ದಾರೆ. ಈಗ ಪ್ರತಿನಿಧಿಸುತ್ತಿರುವ ಸಂಸದರು ಒಂದೇ ಒಂದು ಯೋಜನೆಗೂ ಅರ್ಜಿ ಕೊಟ್ಟಿಲ್ಲ’ ಎಂದು ದೂರಿದರು.

‘ಮನಮೋಹನ್‌ಸಿಂಗ್ ಅವರು ಪ್ರಧಾನಿಯಾಗಿದ್ದಾಗ ಜೆ- ನರ್ಮ್ ಯೋಜನೆಯಡಿ ಬೆಂಗಳೂರಿಗೆ ಅನುದಾನ ಕೊಟ್ಟಿದ್ದರು. ನರೇಂದ್ರ ಮೋದಿ ಅವರು ಮೆಟ್ರೊ ಹಳದಿ ಮಾರ್ಗ ಉದ್ಘಾಟನೆಗೆ ಬಂದಿದ್ದಾಗ ನಗರದ ಅಭಿವೃದ್ಧಿಗೆ ₹1.5 ಲಕ್ಷ ಕೋಟಿ ಮೊತ್ತದ ಯೋಜನೆಗಳಿಗೆ ಅನುದಾನ ನೀಡಬೇಕು ಎಂದು ಕೋರಿದರೂ ಇದುವರೆಗೂ ಉತ್ತರವೇ ಬಂದಿಲ್ಲ’ ಎಂದು ಶಿವಕುಮಾರ್ ಹೇಳಿದರು.

‘ತೆರಿಗೆ ಹಣ ಲೂಟಿ’

‘ರಾಜ್ಯದಲ್ಲಿ ತೆರಿಗೆದಾರರ ಹಣವನ್ನು ಲೂಟಿ ಮಾಡುತ್ತಿರುವ ಸಿದ್ದರಾಮಯ್ಯ ಸರ್ಕಾರ, ಆ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬಳಸದೇ ಹೈಕಮಾಂಡ್‌ಗೆ ಕಳಿಸುತ್ತಿದೆ. ಇದು ಇವರ ಎರಡೂವರೆ ವರ್ಷಗಳ ಸಾಧನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಆರೋಪಿಸಿದರು.



‘ಗ್ಯಾರಂಟಿ ಜಪ ಮಾಡುತ್ತಿರುವ ಇವರು ಎರಡೂವರೆ ವರ್ಷಗಳಲ್ಲಿ ಒಂದಾದರೂ ಹೊಸ ಯೋಜನೆ ಜಾರಿ ಮಾಡಿದ್ದಾರಾ? ತನ್ನ ಅಸಂಖ್ಯ ತಪ್ಪುಗಳು ಮತ್ತು ವೈಫಲ್ಯಗಳನ್ನು ಮುಚ್ಚಿಕೊಳ್ಳಲು ದಿನಕ್ಕೊಂದು ಹೊಸ ನಾಟಕ ಆಡುತ್ತಿದ್ದಾರೆ. ಒಂದು ದಿನ ಆರ್‌ಎಸ್‌ಎಸ್ ನಿಷೇಧ ಮಾಡುತ್ತೇವೆ ಎನ್ನುತ್ತಾರೆ, ಇನ್ನೊಂದು ದಿನ ಮೋದಿ ಹಣ ಕೊಟ್ಟಿಲ್ಲ ಎನ್ನುತ್ತಾರೆ. ಕರ್ನಾಟಕಕ್ಕೆ ಮೋದಿ ಅನ್ಯಾಯ ಮಾಡಿಲ್ಲ. ಆದರೆ, ಸಿದ್ದರಾಮಯ್ಯ ಏನು ಕೊಟ್ಟಿದ್ದಾರೆ? ಎರಡು ವರ್ಷಗಳಲ್ಲಿ ಕೊಟ್ಟಿರುವ ಒಂದಾದರೂ ಹೊಸ ಯೋಜನೆ ಹೇಳಲಿ’ ಎಂದು ಅವರು ಸವಾಲೆಸೆದರು.

▶10

ಬಿಜೆಪಿ–ಜೆಡಿಎಸ್ ಸಮನ್ವಯಕ್ಕೆ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ–2024ರ ನಂತರ ಬಿಜೆಪಿ–ಜೆಡಿಎಸ್ ಮಧ್ಯೆ ಕ್ಷೀಣಿಸಿದ್ದ ವಿಶ್ವಾಸವನ್ನು ಮತ್ತೆ ಹಳಿಗೆ ತರಲು ಮುಂದಾಗಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ದೀಪಾವಳಿ ಶುಭಾಶಯ ಕೋರುವ ನೆಪದಲ್ಲಿ ಕೇಂದ್ರ ಸಚಿವ ಎಚ್‌.ಡಿ.ಕುಮಾರಸ್ವಾಮಿ ಅವರ ಮನೆಗೆ ತೆರಳಿ ಮಾತುಕತೆ ನಡೆಸಿದರು.

ಭೇಟಿಯ ನಂತರ ಸುದ್ದಿಗಾರರ ಜತೆ ಮಾತನಾಡಿದ ವಿಜಯೇಂದ್ರ, ‘ರಾಜ್ಯದ ಪ್ರಸ್ತುತ ಸ್ಥಿತಿಗತಿ, ಸರ್ಕಾರದ ಕಾರ್ಯವೈಖರಿ ಕುರಿತು ಕುಮಾರಸ್ವಾಮಿ ಹಾಗೂ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರ ಜತೆ ಚರ್ಚೆ ನಡೆಸಿದೆವು. ರಾಜ್ಯ ಸರ್ಕಾರದ ಆಡಳಿತ ವೈಫಲ್ಯ, ಭ್ರಷ್ಟಾಚಾರದ ವಿರುದ್ಧ ಜಂಟಿಯಾಗಿ ಹೋರಾಟ ಮಾಡಲು ನಿರ್ಧರಿಸಿದ್ದೇವೆ. ಅದಕ್ಕಾಗಿ ರಾಜ್ಯಮಟ್ಟದ ಸಮನ್ವಯ ಸಮಿತಿ ರಚಿಸಲು ಎರಡೂ ಪಕ್ಷಗಳು ಸಮ್ಮತಿಸಿವೆ’ ಎಂದರು.

‘ಗ್ರೇಟರ್ ಬೆಂಗಳೂರು ಪ್ರಾಧಿಕಾರದ ವ್ಯಾಪ್ತಿಯ ನಗರ ಪಾಲಿಕೆಗಳ ಚುನಾವಣೆಗಾಗಿ ಮತ್ತೊಂದು ಸಮನ್ವಯ ಸಮಿತಿ ರಚಿಸಲು ಕುಮಾರಸ್ವಾಮಿ ಅವರು ಸಲಹೆ ನೀಡಿದ್ದಾರೆ. 10 ದಿನಗಳ ಒಳಗೆ ಜೆಡಿಎಸ್ ಸದಸ್ಯರ ಪಟ್ಟಿ ಕಳುಹಿಸುತ್ತಾರೆ. ನಂತರ ಬಿಜೆಪಿ ಹೆಸರುಗಳನ್ನೂ ಸೇರಿಸಿ ಸಮನ್ವಯ ಸಮಿತಿಗಳನ್ನು ಘೋಷಿಸಲಾಗುವುದು. ಎರಡೂ ಪಕ್ಷಗಳ ತಲಾ ಐವರು ಸದಸ್ಯರು ಸಮಿತಿಯಲ್ಲಿ ಇರುತ್ತಾರೆ’ ಎಂದು ಮಾಹಿತಿ ನೀಡಿದರು.

▶8

ADVERTORIAL

ಮಂಡಿನೋವಿಗೆ ಸರ್ಜರಿ ಇಲ್ಲದೇ ಉಪಶಮನ

12000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ನೀಡಿದೆ ಅಲಿವಿಯೇಟ್

ಮೊಣಕಾಲು ನೋವಿನ ಉಪಶಮನಕ್ಕೆ ಪ್ಲೇಟ್ಲೆಟ್ ಪ್ಲಾಸ್ಮಾ ಚಿಕಿತ್ಸೆ ಚುಚ್ಚುಮದ್ದು

ಅಲಿವಿಯೇಟ್ ನಲ್ಲಿ ನೀಡುವ ಚಿಕಿತ್ಸೆಯ 4 ಲಾಭಗಳು

- 30-60 ನಿಮಿಷದ ವಿಧಾನ
- 48 ಗಂಟೆಗಳಲ್ಲಿ ಕೆಲಸಕ್ಕೆ ತೆರಳಬಹುದು
- ಆಸ್ಪತ್ರೆ ವಾಸವಿಲ್ಲ
- ಹೆಚ್ಚಿದ ಚಲನಶೀಲತೆ

ಬೆಂಗಳೂರಿನ ನಿವಾಸಿ ಸುರೇಶ್ ಆರ್ ಎಸ್ ಎಂಬುವವರಿಗೆ ತೀವ್ರ ಮೊಣಕಾಲು ನೋವು ಕಾಣಿಸಿಕೊಂಡಿದ್ದು, ಇದರಿಂದ ಮೂಲಭೂತ ಕೆಲಸಗಳನ್ನು ಮಾಡುವುದು ಕೂಡ ಕಷ್ಟಕರವಾಗಿತ್ತು. ಸಂಧಿವಾತದ ವಿರುದ್ಧದ ಹೋರಾಟದಲ್ಲಿ, ಅವರು ಹಲವಾರು ವೈದ್ಯರನ್ನು ಭೇಟಿಯಾದರು, ವಿವಿಧ ವೈದ್ಯಕೀಯ ವಿಧಾನಗಳಲ್ಲಿ ವಿಫಲರಾಗಿದ್ದರಿಂದ ಅವರ ಹುಡುಕಾಟ ಮುಂದುವರೆಯಿತು.

ಒಮ್ಮೆ ದಿನಪತ್ರಿಕೆಯ ಲೇಖನವನ್ನು ನೋಡಿದ ಅವರು ಕೂಡಲೇ ಬೆಂಗಳೂರಿನ 'ಅಲಿವಿಯೇಟ್ ಪೇನ್ ಕ್ಲಿನಿಕ್' ನಲ್ಲಿ ಹೆಸರಾಂತ ನೋವು ತಜ್ಞ **ಡಾ. ಸ್ವಾಗತೇಶ್ ಬಸ್ತಿಯಾ** ಅವರನ್ನು ಭೇಟಿಯಾದರು.

ಅಲ್ಲಿ ನೋವಿನ ಉಪಶಮನದ ಬಗ್ಗೆ ನಿರ್ಣಯ ಮಾಡಿದ ಅಲಿವಿಯೇಟ್‌ನ ವೈದ್ಯರು, ನಂತರ ಅವರ ಮೊಣಕಾಲುಗಳ ಹಾನಿಯ ಸ್ಥಿತಿಗೆ ಲಭ್ಯವಿರುವ ಕಾರ್ಯವಿಧಾನಗಳ ಅಗತ್ಯತೆ ಮತ್ತು ಪ್ರಕಾರದ ಬಗ್ಗೆ ಆಳವಾಗಿ ವಿವರಿಸಿದರು. ಇತ್ತೀಚಿಗೆ ಲಭ್ಯವಿರುವ ಸಾಬೀತಾದ ಅಂತರರಾಷ್ಟ್ರೀಯ ಪ್ರಗತಿಗಳ ಪ್ರಕಾರ ವೈದ್ಯರು ಅತ್ಯುತ್ತಮ ಚಿಕಿತ್ಸೆಯನ್ನು ನೀಡುವುದಾಗಿ ಭರವಸೆ ಕೊಟ್ಟರು.

ನಂತರ ಅವರಿಗೆ **ಸ್ಟೆಮ್ ಸೆಲ್ ಥೆರಪಿ + ಪಿ ಆರ್ ಪಿ + ಪ್ರೊಲೋಥೆರಪಿ** ಚಿಕಿತ್ಸೆಯನ್ನು ನೀಡಲಾಯಿತು.

ಇದಾದ ಒಂದು ತಿಂಗಳಿಗಿಂತ ಕಡಿಮೆ ಅವಧಿಯಲ್ಲಿ ಅವರು ಹಿಂದಿನ ದಿನಗಳಂತೆ ತಮ್ಮ ಸಕ್ರಿಯ, **ನೋವು ಮುಕ್ತ** ಜೀವನಶೈಲಿಗೆ ಮರಳಿದರು. ಸುರೇಶ್ ರವರು ಈಗ ಹೊಸ ಜೀವನ ಮತ್ತು ಚಲನಶೀಲತೆಯ ಎರಡನೇ ಇನ್ನಿಂಗ್ಸ್ ಸಂತೋಷದಿಂದ ಆನಂದಿಸುತ್ತಿದ್ದಾರೆ.

ಅಲಿವಿಯೇಟ್‌ನಲ್ಲಿ ನೀಡುವ ಕೆಲವು ಪ್ರಭಾವಕಾರಿ ಚಿಕಿತ್ಸೆಗಳು ಹೀಗಿವೆ:

ಸ್ಟೆಮ್ ಸೆಲ್ ಥೆರಪಿ: ಹಾನಿಗೊಳಗಾದ ಮಂಡಿಯ ಅಂಗಾಂಶ ಪುನರುತ್ಪಾದಿಸಲು, ರೋಗಿಯ ಸ್ವಂತ ಮೂಳೆ ಮಜ್ಜೆ ಅಥವಾ ಕೊಬ್ಬಿನಿಂದ ಹೊರತೆಗೆಯಲಾದಂತಹ ಗುಣಪಡಿಸುವ ಸಾಮರ್ಥ್ಯವಿರುವ ಕಾಂಡಕೋಶಗಳನ್ನು ಮಂಡಿಯ ಜಂಟಿಗೆ ಚುಚ್ಚಲಾಗುತ್ತದೆ.

ಪಿಆರ್‌ಪಿ: ಈ ಕಾರ್ಯವಿಧಾನದಲ್ಲಿ, ಗುಣಪಡಿಸುವಿಕೆಯನ್ನು ಉತ್ತೇಜಿಸಲು ಮತ್ತು ಉರಿಯೂತವನ್ನು ಕಡಿಮೆ ಮಾಡಲು ನಿಮ್ಮ ಸ್ವಂತ ರಕ್ತದಿಂದ ಕೇಂದ್ರೀಕೃತ ಪ್ಲೇಟ್‌ಲೆಟ್‌ಗಳನ್ನು ಬಳಸಲಾಗುತ್ತದೆ.

ಪ್ರೊಲೋಥೆರಪಿ: ಗಾಯಗೊಳಗಾದ ಕಾರ್ಟಿಲೆಜ್ ಅಥವಾ ಸ್ನಾಯುರಜ್ಜುಗೆ ಗ್ಲೂಕೋಸ್ ಅನ್ನು ಇಂಜೆಕ್ಟ್ ಮಾಡುವುದರಿಂದ ಗುಣಪಡಿಸುವಿಕೆಯನ್ನು ಉತ್ತೇಜಿಸುತ್ತದೆ ಮತ್ತು ಸಡಿಲವಾದ ಕೀಲುಗಳನ್ನು ಬಿಗಿಗೊಳಿಸುತ್ತದೆ.

ನೀವು ಅಸ್ಥಿಸಂಧಿವಾತದಿಂದ ಬಳಲುತ್ತಿರುವ ರೋಗಿಗಳಲ್ಲಿ ಒಬ್ಬರಾಗಿದ್ದರೆ, ಚಿಂತಿಸಬೇಡಿ. ನಿಮ್ಮ ಸಕ್ರಿಯ ಜೀವನಶೈಲಿಯನ್ನು ಮರಳಿ ತರಲು ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಪರಿಣಾಮಕಾರಿ ಚಿಕಿತ್ಸೆಗಳು ಲಭ್ಯವಿದೆ

ಅಲಿವಿಯೇಟ್
ನೋವು ನಿವಾರಣಾ ಕೇಂದ್ರಗಳು

ಬೆಂಗಳೂರಿನಲ್ಲಿ ಇವರ ಕ್ಲಿನಿಕ್ಸ್ ಇಲ್ಲಿವೆ
ಪೀಣ್ಯಾ, ದಾಸರಹಳ್ಳಿ | ಸದಾಶಿವನಗರ | ಜಯನಗರ | ಇಂದಿರಾನಗರ | ವೈಟ್‌ಫೀಲ್ಡ್

CALL NOW 81475 50855 | 080 23614888

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಪಥಸಂಚಲನಕ್ಕೆ ‘ತ್ರಿಕೋನ ಸ್ಪರ್ಧೆ’

ಆರ್‌ಎಸ್‌ಎಸ್, ಭೀಮ ಆರ್ಮಿ, ದಲಿತ ಪ್ಯಾಂಥರ್‌ನಿಂದ ಜಿಲ್ಲಾಡಳಿತಕ್ಕೆ ಮನವಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಚಿತ್ತಾಪುರದಲ್ಲಿ ‘ಪಥ ಸಂಚಲನ’ದ ಮೂಲಕ ‘ಶಕ್ತಿ’ ಪ್ರದರ್ಶಿಸಲು ಪೈಪೋಟಿ ಮುಂದುವರಿದಿದೆ. ನವೆಂಬರ್ 2ರಂದು ಪಥಸಂಚಲನ ನಡೆಸಲು ಅನುಮತಿ ಕೋರಿ ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್‌ಎಸ್‌ಎಸ್) ಮಂಗಳವಾರ ಜಿಲ್ಲಾಡಳಿತಕ್ಕೆ ಮನವಿ ಮಾಡಿದ ಬೆನ್ನಲ್ಲೇ, ಭೀಮ ಆರ್ಮಿ ಹಾಗೂ ದಲಿತ ಪ್ಯಾಂಥರ್ ಸಂಘಟನೆಗಳೂ ಅದೇ ದಿನ ಪಥಸಂಚಲನಕ್ಕೆ ತಮಗೂ ಅವಕಾಶ ನೀಡುವಂತೆ ಮನವಿ ಸಲ್ಲಿಸಿವೆ.

> ಆರ್‌ಎಸ್‌ಎಸ್ ಸೇರಿ ಮೂರು ಸಂಘಟನೆಗಳು ಅನುಮತಿ ಕೋರಿ ಅರ್ಜಿ ಸಲ್ಲಿಸಿವೆ. ಆ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ಎಸ್‌ಪಿ, ಎಸಿ ಹಾಗೂ ತಹಶೀಲ್ದಾರ್‌ಗೆ ರವಾನಿಸಿದ್ದೇನೆ
> **ಫೌಜಿಯಾ ತರನ್ನುಮ್ ಬಿ.,** ಜಿಲ್ಲಾಧಿಕಾರಿ

ಸಾರ್ವಜನಿಕ ಸ್ಥಳದಲ್ಲಿ ಆರ್‌ಎಸ್‌ಎಸ್ ಚಟುವಟಿಕೆ ನಿಷೇಧಿಸುವಂತೆ ಸಚಿವ ಪ್ರಿಯಾಂಕ್ ಖರ್ಗೆ ಮುಖ್ಯಮಂತ್ರಿಗೆ ಪತ್ರ ಬರೆದಿದ್ದು ವಿವಾದಕ್ಕೆ ಎಡೆ ಮಾಡಿಕೊಟ್ಟಿತ್ತು.

▶8

‘ಎಲ್ಲರ ದೃಷ್ಟಿ ಚಿತ್ತಾಪುರದತ್ತ’

ನ.2ರಂದು ಪಥಸಂಚಲನಕ್ಕೆ ಅನುಮತಿ ಕೋರಿ ಆರ್‌ಎಸ್‌ಎಸ್ ಮತ್ತೆ ಅರ್ಜಿ ಸಲ್ಲಿಸಿದ ಬೆನ್ನಲ್ಲೇ ಬಿಜೆಪಿ ಮುಖಂಡರು ಸಾಮಾಜಿಕ ಜಾಲತಾಣಗಳಲ್ಲಿ ‘ಎಲ್ಲರ ದೃಷ್ಟಿ ಚಿತ್ತಾಪುರದತ್ತ’ (ALL EYES ON CHITTAPUR) ಎಂದು ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವುದು ಸದ್ದು ಮಾಡಿದೆ. ವಾಟ್ಸ್‌ಆ್ಯಪ್ ಸ್ಟೇಟಸ್‌ಗಳಲ್ಲೂ ಈ ಫೋಟೊ, ಸಂದೇಶಗಳನ್ನು ಹಾಕಿಕೊಳ್ಳಲಾಗುತ್ತಿದೆ.

ಗೌರವ ವಂದನೆ

ಪ್ರಜಾವಾಣಿ ಚಿತ್ರ ರಂಜು ಪಿ.

ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ‘ಪೊಲೀಸ್ ಸಂಸ್ಮರಣಾ ದಿನಾಚರಣೆ’ ಕಾರ್ಯಕ್ರಮದಲ್ಲಿ ಕೆ.ಎಸ್‌.ಆರ್‌.ಪಿ ಪೊಲೀಸರು ಹುತಾತ್ಮ ಪೊಲೀಸರಿಗೆ ಗೌರವ ವಂದನೆ ಸಲ್ಲಿಸಿದರು

ಸೀಟ್ ಬ್ಲಾಕಿಂಗ್: ಕೆಇಎ ಹದ್ದಿನ ಕಣ್ಣು

ಪ್ರವೇಶ ಪಡೆಯದ 667 ವಿದ್ಯಾರ್ಥಿಗಳಿಗೆ ನೋಟಿಸ್

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟ್ ಬ್ಲಾಕಿಂಗ್ ಪ್ರಕರಣಗಳತ್ತ ಹದ್ದಿನ ಕಣ್ಣು ನೆಟ್ಟಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ), ಅಂತಿಮ ಸುತ್ತಿನ ಸೀಟು ಹಂಚಿಕೆಯ ನಂತರ ಪ್ರವೇಶ ಪಡೆಯದ 667 ವಿದ್ಯಾರ್ಥಿಗಳಿಗೆ ನೋಟಿಸ್ ನೀಡಿದೆ.

2024–25ನೇ ಸಾಲಿನ ಪ್ರವೇಶದ ವೇಳೆ ಸೀಟ್ ಬ್ಲಾಕಿಂಗ್ ಪ್ರಕರಣವನ್ನು ಪತ್ತೆ ಮಾಡಲಾಗಿತ್ತು. ಎಂಜಿನಿಯರಿಂಗ್ ಕೋರ್ಸ್‌ಗಳ ಸೀಟ್ ಬ್ಲಾಕಿಂಗ್ ದಂಧೆ ನಡೆಸುತ್ತಿದ್ದವರ ವಿರುದ್ಧ ಮಲ್ಲೇಶ್ವರದ ಸೈಬರ್ ಅಪರಾಧ ಹಾಗೂ ಮಾದಕ ವಸ್ತುಗಳ ನಿಯಂತ್ರಣ ಠಾಣೆಯಲ್ಲಿ (ಸೈಬರ್) ಎಫ್‌ಐಆರ್ ದಾಖಲಿಸಲಾಗಿತ್ತು. ಕೆಲ ಕಾಲೇಜುಗಳ ಆಡಳಿತ ಮಂಡಳಿಗಳನ್ನೂ ವಿಚಾರಣೆಗೆ ಒಳಪಡಿಸಲಾಗಿತ್ತು. ಪ್ರಕರಣದಲ್ಲಿ ಭಾಗಿಯಾದ ಆರೋಪದ ಮೇಲೆ ಮಧ್ಯವರ್ತಿಗಳನ್ನು ಬಂಧಿಸಲಾಗಿತ್ತು.

> ಕೊನೆ ಸುತ್ತಿನ ಸೀಟು ಹಂಚಿಕೆ ನಂತರ ಪ್ರವೇಶ ಪಡೆಯುವುದು ಕಡ್ಡಾಯ. ಆದರೂ ಕೆಲವರು ಪ್ರವೇಶ ಪಡೆದಿಲ್ಲ. ಇದರಿಂದ ಅವರ ಹಿಂದಿದ್ದ ವಿದ್ಯಾರ್ಥಿಗಳಿಗೆ ಅನ್ಯಾಯ ಮಾಡಿದಂತಾಗುತ್ತದೆ
> **ಎಚ್‌.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

▶8

ಒಂದು ದೀಪದ ಕಥೆ... ಬುದ್ಧಿಮಾಂದ್ಯ ಮಕ್ಕಳಿಗಾಗಿ ‘ಪವರ್‌ಲಿಫ್ಟರ್’ ಆದ ಗೃಹಿಣಿಯ ಯಶೋಗಾಥೆ

‘ಅಮ್ಮ’ ಎಂದರೆ ಬಲಾಢ್ಯ ಮಹಿಳೆ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜೀವನವೇ ಭಾರ...’ ಎಂದು ಕೊರಗುವವರನ್ನು ಬಡಿದೆಬ್ಬಿಸುವ ಪ್ರೇರಣಾದಾಯಿ ತಾಯಿಯೊಬ್ಬರ ಕತೆ ಇದು. ತಮ್ಮ ಮುಂದಿದ್ದ ಕಡುಕಠಿಣ ಸಮಸ್ಯೆಗಳನ್ನೇ ಸಾಧನೆಯ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಂಡು ಅಂತರರಾಷ್ಟ್ರೀಯ ಮಟ್ಟದ ಪವರ್‌ಲಿಫ್ಟರ್ ಆಗಿ ಬೆಳೆದ ದೀಪಾ ಅಜಯ್ ಅವರೇ ಆ ತಾಯಿ.

ದೀಪಾ ಅವರು ಜೀವನದಲ್ಲಿ ಕ್ರೀಡಾಪಟುವಾಗುವ ಬಗ್ಗೆ ಎಂದಿಗೂ ಯೋಚಿಸಿರಲಿಲ್ಲ. ಆದರೆ ತಮ್ಮ ಇಬ್ಬರು ಬುದ್ಧಿಮಾಂದ್ಯ ಗಂಡುಮಕ್ಕಳ ಪೋಷಣೆಗಾಗಿ ಆರಂಭಿಸಿದ ಕಸರತ್ತು ಅವರನ್ನು ಪವರ್‌ಲಿಫ್ಟರ್ ಆಗಿ ರೂಪಿಸಿದೆ. ಒಂದು ವಾರದ ಹಿಂದಷ್ಟೇ ದಕ್ಷಿಣ ಆಫ್ರಿಕಾದ ಕೇಪ್‌ಟೌನ್‌ನಲ್ಲಿ ನಡೆದ ವಿಶ್ವ ಮಾಸ್ಟರ್ಸ್ ಕ್ಲಾಸಿಕ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನ 69 ಕೆ.ಜಿಯೊಳಗಿನವರ ವಿಭಾಗದಲ್ಲಿ ದೀಪಾ ನಾಲ್ಕನೇ ಸ್ಥಾನ ಗಳಿಸಿ ಬಂದಿದ್ದಾರೆ. ಅದರಲ್ಲಿ ಸ್ಕ್ವಾಟ್ಸ್ ವಿಭಾಗದಲ್ಲಿ 162.5 ಕೆ.ಜಿ. ಭಾರ ಎತ್ತಿದ ಅವರು ಏಷ್ಯನ್ ದಾಖಲೆ ಬರೆದರು. ಬೆಳ್ಳಿ ಪದಕ ಜಯಿಸಿದರು. ಬೆಂಚ್‌ಪ್ರೆಸ್ (87.5 ಕೆ.ಜಿ) ಮತ್ತು ಡೆಡ್‌ಲಿಫ್ಟ್ (182.5 ಕೆ.ಜಿ) ವಿಭಾಗಗಳಲ್ಲಿಯೂ ತಮ್ಮ ಭುಜಬಲ ಪರಾಕ್ರಮ ಮೆರೆದರು. ಒಟ್ಟು 432.5 ಕೆ.ಜಿ ತೂಕ ಎತ್ತಿ ಗಮನ ಸೆಳೆದರು.

ದೀಪಾ ಅವರಿಗೆ ಈಗ 45 ವರ್ಷ. ಅವರ ಇಬ್ಬರೂ ಮಕ್ಕಳಾದ ಆದಿತ್ಯ (21 ವರ್ಷ) ಮತ್ತು ಆಶಿಶ್ (14 ವರ್ಷ) ಬುದ್ಧಿಮಾಂದ್ಯರು. ಖಾಸಗಿ ಬ್ಯಾಂಕ್ ಉದ್ಯೋಗಿಯಾಗಿದ್ದ ದೀಪಾ ಅವರು ನೌಕರಿ ಬಿಟ್ಟು ಮಕ್ಕಳ ಆರೈಕೆಗೆ ಪೂರ್ಣವಾಗಿ ಸಮರ್ಪಿಸಿಕೊಂಡರು. ಮಕ್ಕಳು ಬೆಳೆಯುತ್ತ ಹೋದಂತೆ ದೇಹತೂಕ ಹೆಚ್ಚಾಗುವುದು ಸಹಜ. ಇಬ್ಬರನ್ನೂ ವಿಶೇಷ ಮಕ್ಕಳ ಶಾಲೆಗೆ ಕರೆದೊಯ್ಯಲು, ವಿವಿಧ ಆಟ, ಚಟುವಟಿಕೆಗಳಲ್ಲಿ ತೊಡಗಿಸಲು ಎತ್ತಿಕೊಂಡೇ ಓಡಾಡಬೇಕಾದ ಪರಿಸ್ಥಿತಿ ದೀಪಾ ಅವರಿಗೆ ಇತ್ತು.

ಅಂತರರಾಷ್ಟ್ರೀಯ ಮಾಸ್ಟರ್ ಪವರ್ ಲಿಫ್ಟರ್ ದೀಪಾ (ಎಡದಿಂದ ಮೊದಲನೆಯವರು) ಅವರು ತಮ್ಮ ಮಕ್ಕಳು ಹಾಗೂ ಪತಿ ಅಜಯ್ ಅವರೊಂದಿಗೆ ಪ್ರಜಾವಾಣಿ ಚಿತ್ರ

‘ಮಕ್ಕಳು ಬೆಳೆದಂತೆ ತೂಕ ಏರುವುದು ಸಹಜ. ಆದರೆ ವಿಶೇಷ ಮಕ್ಕಳಿಗೆ ದೈನಂದಿನ ಅಭ್ಯಾಸಗಳನ್ನು ಹೇಳಿಕೊಡಲು ಎತ್ತಿಕೊಂಡು ಓಡಾಡುವುದು ಅನಿವಾರ್ಯ. ಆದರೆ ನಮಗೆ ವಯಸ್ಸಾದಂತೆ ದೈಹಿಕ ಶಕ್ತಿ ಕ್ಷೀಣಿಸುತ್ತದೆ. ಆದ್ದರಿಂದ ಮಕ್ಕಳನ್ನು ಹೇಗೆ ನಿಭಾಯಿಸುವುದು ಎಂಬ ಯೋಚನೆ ಬಂತು. ನಮ್ಮ ಅಪಾರ್ಟ್‌ಮೆಂಟ್‌ನಲ್ಲಿದ್ದ ಜಿಮ್ನಾಷಿಯಂನಲ್ಲಿ ಭಾರ ಎತ್ತುವ ಕಸರತ್ತು ಆರಂಭಿಸಿದೆ. ಆ ಹವ್ಯಾಸವೇ ಬೆಳೆಯುತ್ತ ಪವರ್‌ಲಿಫ್ಟಿಂಗ್‌ನತ್ತ ವಾಲಿದೆ. ಕಳೆದ ಎರಡು ವರ್ಷಗಳಲ್ಲಿ ಪವರ್‌ಲಿಫ್ಟಿಂಗ್ ಅಭ್ಯಾಸವನ್ನೂ ಮಾಡಿದೆ. ಕೆಲವು ಸ್ಪರ್ಧೆಗಳಲ್ಲಿ ಪ್ರಶಸ್ತಿ ಜಯಿಸಿದೆ’ ಎಂದು ದೀಪಾ ಹೆಮ್ಮೆಯಿಂದ ಹೇಳುತ್ತಾರೆ.

2023ರಲ್ಲಿ ಮೊದಲ ಸಲ ಅವರು ಸ್ಪರ್ಧಾಕಣಕ್ಕಿಳಿದರು. ಬೆಂಗಳೂರು ಜಿಲ್ಲಾಮಟ್ಟದಲ್ಲಿ ಅವರು ಸ್ಪರ್ಧಿಸಿದರು. ಅಲ್ಲಿಂದ ಇದುವರೆಗೆ ರಾಷ್ಟ್ರ ಮಟ್ಟದಲ್ಲಿ 14 ಚಿನ್ನದ ಪದಕಗಳನ್ನು ಗೆದ್ದಿದ್ದಾರೆ. ರಾಷ್ಟ್ರ ಮಟ್ಟದಲ್ಲಿ 16 ಮತ್ತು ಮೂರು ಏಷ್ಯನ್ ದಾಖಲೆಗಳನ್ನು ನಿರ್ಮಿಸಿದ್ದಾರೆ. ಸುಮಾರು ಎರಡು ತಿಂಗಳುಗಳ ಹಿಂದೆ ಜಪಾನಿನ ಹಿಮೆಜಿಯಲ್ಲಿ ನಡೆದಿದ್ದ ಏಷ್ಯಾ ಆಫ್ರಿಕಾ ಪೆಸಿಫಿಕ್ ಪವರ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ತಮ್ಮ ಸಾಮರ್ಥ್ಯ ಮೆರೆದಿದ್ದರು.

▶2

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಮಳೆಯಾಗುವ ಸಾಧ್ಯತೆ ಇದೆ

ಅನುದಾನಿತ ಸಂಸ್ಥೆ ನೌಕರರೂ 'ಲೋಕಾ' ವ್ಯಾಪ್ತಿಗೆ: ಹೈಕೋರ್ಟ್

ಬೆಂಗಳೂರು: 'ಸರ್ಕಾರದಿಂದ ಅನುದಾನ ಪಡೆಯುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ವಿರುದ್ಧವೂ ಲೋಕಾಯುಕ್ತರು ತನಿಖೆ ನಡೆಸಬಹುದು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ತಮ್ಮ ವಿರುದ್ಧದ ಲೋಕಾಯುಕ್ತ ವರದಿ ಆಧರಿಸಿ ಕೈಗೊಳ್ಳಲಾಗಿದ್ದ ತನಿಖೆ ಪ್ರಶ್ನಿಸಿ ನೆಲಮಂಗಲದ ಬೈರಶೆಟ್ಟಿಹಳ್ಳಿಯ ಶ್ರೀ ಬಾಲಾಂಜನೇಯ ಪ್ರೌಢಶಾಲೆ ಗ್ರಂಥಪಾಲಕ ಹಾಗೂ ಲಿಪಿಕ ಬಿ.ಲಕ್ಷ್ಮೀನಾರಾಯಣ ಸಲ್ಲಿಸಿದ್ದ ಮೇಲ್ಮನವಿ ವಜಾಗೊಳಿಸಿರುವ ನ್ಯಾಯಮೂರ್ತಿ ಡಿ.ಕೆ.ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸರ್ಕಾರದಿಂದ ಅನುದಾನ ಪಡೆಯುವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಯನ್ನು ಕೆಲವು ಉದ್ದೇಶಗಳಿಗಾಗಿ ಸರ್ಕಾರಿ ಸಿಬ್ಬಂದಿ ಎಂದು ಪರಿಗಣಿಸಬೇಕು ಎಂದು ಹೈಕೋರ್ಟ್‌ನ ಪೂರ್ಣ ಪೀಠ ನಿರ್ಧರಿಸಲಾಗಿದೆ. ಅವರ ವೇತನ, ಭತ್ಯೆ ಮತ್ತು ಸೇವಾ ಷರತ್ತುಗಳನ್ನು ಸರ್ಕಾರವೇ ನಿಯಂತ್ರಿಸುತ್ತದೆ. ಹೀಗಾಗಿ, ಅರ್ಜಿದಾರರ ವಿರುದ್ಧವೂ ಲೋಕಾಯುಕ್ತ ತನಿಖೆ ನಡೆಸಬಹುದು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಲೋಕಾಯುಕ್ತ ಕಾಯ್ದೆಯ ಸೆಕ್ಷನ್ 12(3)ರಡಿ ನೀಡಿರುವ ವರದಿ ಮತ್ತು ಸಿಸಿಎ ನಿಯಮ 14ಎ ಅಡಿ ತನಿಖೆ ನಡೆಸಲು ಸರ್ಕಾರ ಹೊರಡಿಸಿರುವ ಆದೇಶಗಳು ಸರಿ ಇದೆ' ಎಂದು ನ್ಯಾಯಪೀಠ ವಿವರಿಸಿದೆ.

ಪ್ರಕರಣವೇನು?: 'ಶಾಲಾ ಆಡಳಿತ ಮಂಡಳಿಯಿಂದ ಅಗತ್ಯ ಅನುಮತಿ ಪಡೆಯದೆ ಬಿ.ಲಕ್ಷ್ಮೀನಾರಾಯಣ ಇತರ ನಾಲ್ವರು 2004 ಮತ್ತು 2005ರಲ್ಲಿ ವಾಜರಹಳ್ಳಿ ಹಾಗೂ ನೆಲಮಂಗಲ ವ್ಯಾಪ್ತಿಯಲ್ಲಿ ಜಮೀನು ಖರೀದಿ ಮಾಡಿದ್ದಾರೆ' ಎಂದು 2013ರಲ್ಲಿ ಲೋಕಾಯುಕ್ತದಲ್ಲಿ ದೂರು ಸಲ್ಲಿಕೆಯಾಗಿತ್ತು.

'ವಾರದೊಳಗೆ ರಸ್ತೆಗಳಿಗೆ ಡಾಂಬರು ಹಾಕಿ'

ಚಿಕ್ಕಪೇಟೆಯಲ್ಲಿ ಕಾಮಗಾರಿಗೆ ಚಾಲನೆ ನೀಡಿದ ಮುಖ್ಯಮಂತ್ರಿ
ವೇದಿಕೆಯಲ್ಲೇ ಜಿಬಿಎ ಮುಖ್ಯ ಆಯುಕ್ತರಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದ ರಸ್ತೆ ಗುಂಡಿಗಳನ್ನು ಒಂದು ವಾರದೊಳಗೆ ಮುಚ್ಚಿಸಿ, ಹೊಸ ಪದರ ಡಾಂಬರು ಹಾಕಿ' ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದರು.

ಗಾಂಧಿನಗರ ಕ್ಷೇತ್ರದ ವ್ಯಾಪ್ತಿಯ ಚಿಕ್ಕಪೇಟೆಯಲ್ಲಿ ₹54 ಕೋಟಿ ವೆಚ್ಚದಲ್ಲಿ ರಸ್ತೆಗಳ ವೈಟ್ ಟಾಪಿಂಗ್ ಸಹಿತ ನಾನಾ ಕಾಮಗಾರಿಗೆ ಮಂಗಳವಾರ ಚಾಲನೆ ನೀಡಿದ ಅವರು, 'ಮಳೆಯಿಂದಾಗಿ ಹಾಳಾಗಿರುವ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಜತೆಗೆ ರಸ್ತೆಗಳ ದೀರ್ಘಬಾಳಿಕೆಗೆ ವೈಟ್ ಟಾಪಿಂಗ್‌ಗೂ ಅನುಮತಿ ನೀಡಲಾಗಿದೆ' ಎಂದು ಹೇಳಿದರು.

'ಬಿಜೆಪಿಯು ಅಧಿಕಾರದಲ್ಲಿದ್ದಾಗ ಒಂದು ಹೊಸ ರಸ್ತೆ ನಿರ್ಮಿಸಲಿಲ್ಲ. ರಸ್ತೆ ಗುಂಡಿಗೆ ಮಣ್ಣೂ ಹಾಕಲಿಲ್ಲ. ಈಗ ಇರುವ ರಸ್ತೆಗಳೆಲ್ಲ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ಆಗಿರುವಂಥವು. ಆದರೂ ಬಿಜೆಪಿಯವರು ನಮ್ಮ ಮೇಲೆ ಸಾಲ ಹೊರಿಸಿ ಹೋದರು. ಸಾಲದ ಭಾರವನ್ನು ಸಹಿಸಿಕೊಂಡು ಗ್ಯಾರಂಟಿ ಯೋಜನೆಗಳೊಂದಿಗೆ ಅಭಿವೃದ್ಧಿಗೂ ಒತ್ತು ನೀಡಿದ್ದೇವೆ' ಎಂದರು.

'ಚಿಕ್ಕಪೇಟೆ ಹೃದಯ ಭಾಗವಾಗಿರುವ ಈ ಪ್ರದೇಶವನ್ನು ಕೆಂಪೇಗೌಡರ ಕಾಲದಲ್ಲಿ ಪೇಟೆ ಭಾಗ ಎಂದೇ ಕರೆಯಲಾಗುತ್ತಿತ್ತು. ಈಗಲೂ ಹಿಂದಿನ ಸ್ವರೂಪವನ್ನೇ ಉಳಿಸಿಕೊಂಡಿವೆ. ರಸ್ತೆ ವಿಸ್ತರಿಸಿ ಅಭಿವೃದ್ಧಿ ಮಾಡೋಣ ಎಂದಾಗ ದಿನೇಶ್ ಗುಂಡೂರಾವ್ ಒಪ್ಪಿಗೆ ನೀಡಲಿಲ್ಲ. ಈ ಭಾಗದ ಜನರಿಗೆ ಸಮಸ್ಯೆ ಆಗಲಿದೆ ಎನ್ನುವ ಕಾರಣ ನೀಡಿದ್ದರು. ಈಗ ಹಿಂದಿನ ಸ್ಥಿತಿ ಉಳಿಸಿಕೊಂಡು ವೈಜ್ಞಾನಿಕವಾಗಿ ಅಭಿವೃದ್ಧಿ ಯೋಜನೆ ರೂಪಿಸಿದ್ದಾರೆ' ಎಂದು ಸಿದ್ದರಾಮಯ್ಯ ತಿಳಿಸಿದರು.

ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, 'ಚಿಕ್ಕಪೇಟೆಯಲ್ಲಿ ಕಟ್ಟಡಗಳನ್ನು ತೆರವು ಮಾಡದೇ ಎರಡು ವರ್ಷದೊಳಗೆ ಕಾಮಗಾರಿ ಮುಗಿಸುತ್ತೇವೆ. ಒಳಚರಂಡಿ, ಮಳೆ ನೀರು, ಅನಿಲ ಮಾರ್ಗವಲ್ಲದೇ ಬೆಂಕಿ ಅವಘಡ ತಡೆ ಹೈಡ್ರಾಂಟ್ ಅನ್ನು ಸೇರಿಸಿ ವೈಜ್ಞಾನಿಕ ಯೋಜನೆಯನ್ನು ರೂಪಿಸಲಾಗಿದೆ' ಎಂದು ಹೇಳಿದರು.

ಸಚಿವ ಡಿ.ಸುಧಾಕರ್, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯ್ ಸಿಂಗ್, ಶಾಸಕ ವೆಂಕಟೇಶ್, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಹಾಜರಿದ್ದರು.

₹4 ಸಾವಿರ ಕೋಟಿ ವೆಚ್ಚದಲ್ಲಿ ವೈಟ್ ಟಾಪಿಂಗ್: ಡಿಸಿಎಂ

'ಬೆಂಗಳೂರು ನಗರದ 1,650 ಕಿ.ಮೀ ಪ್ರಮುಖ ರಸ್ತೆಗಳಲ್ಲಿ ಸದ್ಯ 83 ರಸ್ತೆಗಳ 148 ಕಿ.ಮೀ ವೈಟ್ ಟಾಪಿಂಗ್ ಕಾಮಗಾರಿ ₹18 ಕೋಟಿ ವೆಚ್ಚದಲ್ಲಿ ಜಾರಿಯಲ್ಲಿದೆ. ಇನ್ನೂ 500 ಕಿ.ಮೀ ರಸ್ತೆಗಳ ಕಾಮಗಾರಿಗಳನ್ನು ₹4 ಸಾವಿರ ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ವಿಸ್ತೃತ ಯೋಜನಾ ವರದಿ(ಡಿಪಿಆರ್) ಸಿದ್ದಪಡಿಸಲಾಗುತ್ತಿದೆ. ಅದು ಮುಂದಿನ ವಾರ ಅಂತಿಮಗೊಳ್ಳಲಿದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

'ವೈಟ್ ಟಾಪಿಂಗ್ ರಸ್ತೆ ನಿರ್ಮಾಣದಿಂದ ಮುಂದಿನ ಮೂರು ದಶಕ, ರಸ್ತೆ ಬಾಳಿಕೆ ಬರಲಿದೆ. ಇದಲ್ಲದೇ ಬೆಂಗಳೂರಿನ 350 ಕಿ.ಮೀ ಉದ್ದದ 182 ರಸ್ತೆಗಳಲ್ಲಿ ಬ್ಲ್ಯಾಕ್ ಟಾಪಿಂಗ್ ಕಾಮಗಾರಿಯನ್ನು ₹695 ಕೋಟಿ ವೆಚ್ಚದಲ್ಲಿ ನಡೆಸಲಾಗುತ್ತಿದೆ. ಮುಖ್ಯಮಂತ್ರಿಯವರು ಕೂಡ ರಸ್ತೆಗಳ ಗುಂಡಿ ಮುಚ್ಚಲು ₹1,100 ಕೋಟಿ ಅನುದಾನ ಒದಗಿಸಿದ್ದು, 500 ಕಿ.ಮೀ ಡಾಂಬರೀಕರಣ ಮಾಡಲಾಗುತ್ತಿದೆ' ಎಂದು ಹೇಳಿದರು.

'ಭವಿಷ್ಯದ ಬೆಂಗಳೂರಿಗಾಗಿ 113 ಕಿ.ಮೀ ಎಲಿವೇಟೆಡ್ ಮೇಲ್ಸೇತುವೆ, 40 ಕಿ.ಮೀ ಸುರಂಗ ರಸ್ತೆ ಯೋಜನೆಯೂ ಸೇರಿದೆ. 117 ಕಿ.ಮೀ ಉದ್ದದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ ನಿರ್ಮಾಣಕ್ಕೆ ಸಂಪುಟ ಅನುಮತಿ ನೀಡಿ ಭೂಸ್ವಾಧೀನಕ್ಕೆ ದರ ನಿಗದಿ ಮಾಡಲಾಗಿದೆ. ಜಿಬಿಎ ರಚನೆ ಹಿಂದಿರುವ ಆಶಯವೂ ಬೆಂಗಳೂರು ಪ್ರಗತಿಯೇ. ಈಗಾಗಲೇ 10 ಸಾವಿರ ರಸ್ತೆ ಗುಂಡಿ ಮುಚ್ಚಿದ್ದೇವೆ. ಹೀಗಿದ್ದರೂ ಬಿಜೆಪಿಯವರು ಸುಮ್ಮನೆ ಟೀಕೆ ಮಾಡುತ್ತಿದ್ದಾರೆ. ಕೆಂಪೇಗೌಡರು ಕಟ್ಟಿದ ಬೆಂಗಳೂರನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆಸಲು ಮುಂದಾಗಿದ್ದೇವೆ. ಮುಂದಿನ 10 ವರ್ಷದ ನಂತರ ಇಲ್ಲಿನ ಜನರು ನೆನಪಿಸಿಕೊಳ್ಳುವ ಪ್ರಗತಿ ಕಾಣಲಿದೆ' ಎಂದರು.

ಆರನೇ ಗ್ಯಾರಂಟಿ: 'ನಮ್ಮ ಸರ್ಕಾರವು ಬೆಂಗಳೂರಿನ ನಿವಾಸಿಗಳ ಆಸ್ತಿ ರಕ್ಷಣೆಯ ದಾಖಲೆ ಒದಗಿಸುವ ಆರನೇ ಗ್ಯಾರಂಟಿಯನ್ನು ನೀಡಿದೆ. ಗ್ರಾಮೀಣ ಭಾಗದಲ್ಲಿ 1.10 ಕೋಟಿ ಖಾತಾ ಬದಲಾವಣೆ ಮಾಡಿದಂತೆಯೇ, ಬೆಂಗಳೂರಿನಲ್ಲೂ 28 ಲಕ್ಷ 'ಎ' ಖಾತಾ ನೀಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಇದರಿಂದ ಆಸ್ತಿ ಮಾಲೀಕರು ಸಾಲ ಪಡೆಯಲು ಸಹಕಾರಿಯಾಗಲಿದೆ. ಇದಕ್ಕೆ ಕೇಂದ್ರ ಸರ್ಕಾರವೂ ಮೆಚ್ಚುಗೆ ಸೂಚಿಸಿದೆ' ಎಂದು ತಿಳಿಸಿದರು.

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ

ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ, # ಜಿ.ಬಿ.-7, ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ. Email ID: rchochikballapur@gmail.com, Phone & Fax: 08156-277040

ಸಂಖ್ಯೆ:ಆರ್‌ಸಿಹೆಚ್/ಚಿಪುರ/ಎನ್.ಹೆಚ್.ಎಂ/ನೇಮಕಾತಿ/38/2025-26. (E-25871) ದಿನಾಂಕ:17.10.2025

::ಸಂಕ್ಷಿಪ್ತ ಜಾಹಿರಾತು::

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ 2025-26ನೇ ಸಾಲಿನಲ್ಲಿ ಖಾಲಿಯಿರುವ ಹಾಗೂ ಅನುಮೋದನೆಯಾಗಿರುವ ಹುದ್ದೆಗಳನ್ನು (31.03.2026ರ ಅಂತ್ಯದ ವರೆಗೆ) ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು ಗುತ್ತಿಗೆ ಆಧಾರದಲ್ಲಿ ವೈದ್ಯಾಕೀಯ ಹುದ್ದೆಗಳನ್ನು ಮೆರಿಟ್ ಆಧಾರದ ಮೇಲೆ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಲು ನೇಮಕಾತಿ ಅಧಿಸೂಚನೆ ವಿವರಗಳನ್ನು **https://chikkaballapur.nic.in** ವೆಬ್ ಸೈಟ್‌ನಲ್ಲಿ ಲಗತ್ತಿಸಿದ್ದು ಆನ್‌ಲೈನ್ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿದ್ದು. **ದಿನಾಂಕ: 17.10.2025 ರಿಂದ 27.10.2025ರ ಬೆಳಗ್ಗೆ: 11:00 ಗಂಟೆಯೊಳಗೆ** ಅಗತ್ಯ ಮಾಹಿತಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು. ಹಾಗೂ ಸಂಬಂಧಿಸಿದ ಅರ್ಜಿದಾರರು ಅಧಿಸೂಚನೆಯಲ್ಲಿ ತಿಳಿಸಿರುವಂತೆ **ದಿನಾಂಕ:29.10.2025, 30.10.2025 ಮತ್ತು 31.10.2025ರಂದು ಬೆಳಗ್ಗೆ 11:00 ಕ್ಕೆ** ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಮೂಲ ದಾಖಲೆಗಳೊಂದಿಗೆ ಪರಿಶೀಲನೆಗಾಗಿ ಖುದ್ದಾಗಿ ಹಾಜರಾಗತಕ್ಕದ್ದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:236/ಕೆಎಸ್‌ಎಂಸಿಎ/2025-26

ಫಾರಂ ಜಿ

ಸರ್ವೆ ನಂ. 367, ಮಳಖೇಡ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ, ಗುಲ್ಬರ್ಗ, ಕರ್ನಾಟಕ - 585317 ವಿಳಾಸದಲ್ಲಿ ಸಿಮೆಂಟ್ ಉತ್ಪಾದನಾ ಚಟುವಟಿಕೆಯಲ್ಲಿ ತೊಡಗಿಕೊಂಡಿರುವ

ಮೆ. ಶ್ರೀ ಬಾಲಾಜಿ ಸಿಮೆಂಟ್ ಅಂಡ್ ಪವರ್ ಲಿಮಿಟೆಡ್‌ಗಾಗಿ

ಆಸಕ್ತಿ ವ್ಯಕ್ತಪಡಿಸುವಿಕೆಗೆ ಆಹ್ವಾನ

[ಭಾರತದ ಇನ್ಸಾಲ್ವನ್ಸಿ ಅಂಡ್ ಬ್ಯಾಂಕ್‌ರಪ್ಸಿ ಮಂಡಳಿಯ (ಸಾಂಸ್ಥಿಕ ವ್ಯಕ್ತಿಗಳ ಇನ್ಸಾಲ್ವನ್ಸಿ ರೆಸೊಲ್ಯೂಷನ್ ಪ್ರಾಸೆಸ್) ನಿಯಮಾವಳಿ, 2016ರ ನಿಯಮಾವಳಿ 36ಎ, ಉಪ ನಿಯಮಾವಳಿ (1)ರ ಅಡಿಯಲ್ಲಿ]

ಕ್ರ.ಸಂ.	ಸಂಬಂಧಿತ ವಿವರಗಳು	
1.	ಸಾಂಸ್ಥಿಕ ಸಾಲಗಾರರ ಹೆಸರು ಜೊತೆಗೆ ಪಾನ್ ಮತ್ತು ಸಿಐಎನ್/ಎಲ್‌ಎಲ್‌ಪಿ ನಂ.	ಮೆ. ಶ್ರೀ ಬಾಲಾಜಿ ಸಿಮೆಂಟ್ ಅಂಡ್ ಪವರ್ ಲಿಮಿಟೆಡ್ ಪಾನ್: AAECS5900Q ಸಿಐಎನ್: : U26941KA1979PLC003477
2.	ನೋಂದಾಯಿತ ಕಚೇರಿ ವಿಳಾಸ	ಸರ್ವೆ ನಂ. 367, ಮಳಖೇಡ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ, ಗುಲ್ಬರ್ಗ, ಕರ್ನಾಟಕ - 585317
3.	ವೆಬ್‌ಸೈಟ್‌ನ ಯುಆರ್‌ಎಲ್	ಇಲ್ಲ
4.	ಬಹುತೇಕ ಸ್ಥಾಪಿತ ಸ್ವತ್ತುಗಳು ಸ್ಥಿತಗೊಂಡಿರುವ ಸ್ಥಳದ ವಿವರ	ಸರ್ವೆ ನಂ. 367, ಮಳಖೇಡ ಗ್ರಾಮ, ಸೇಡಂ ತಾಲ್ಲೂಕು, ಕಲಬುರಗಿ ಜಿಲ್ಲೆ, ಗುಲ್ಬರ್ಗ, ಕರ್ನಾಟಕ - 585317
5.	ಅಳವಡಿಸಲಾಗಿರುವ ಪ್ರಮುಖ ಉತ್ಪನ್ನಗಳ/ಸೇವೆಗಳ ಸಾಮರ್ಥ್ಯ	600 ಟಿಪಿಡಿ ಸಿಮೆಂಟ್ ಉತ್ಪಾದನೆ
6.	ಕಳೆದ ಹಣಕಾಸು ವರ್ಷದಲ್ಲಿ ಮಾರಾಟಗೊಂಡಿರುವ ಪ್ರಧಾನ ಉತ್ಪನ್ನಗಳ/ಸೇವೆಗಳ ಪ್ರಮಾಣ ಮತ್ತು ಮೌಲ್ಯ	ಜೂನ್ 2022 ರಿಂದ ಕಂಪನಿಯು ಕಾರ್ಯಾಚರಣೆಯಲ್ಲಿ ಇರಲಿಲ್ಲ
7.	ಉದ್ಯೋಗಿಗಳ/ಕಾರ್ಮಿಕರ ಸಂಖ್ಯೆ	113 (ಕಾರ್ಮಿಕರು: 61 ಮತ್ತು ಉದ್ಯೋಗಿಗಳು: 52)
8.	ಲಭ್ಯವಿರುವ ಕಳೆದ ಎರಡು ವರ್ಷಗಳ ಹಣಕಾಸು ವರದಿಗಳ (ಶೆಡ್ಯೂಲ್‌ಗಳ ಸಮೇತ) ಹೆಚ್ಚಿನ ವಿವರಗಳು, ಕ್ರೆಡಿಟರ್ ಗಳ ಪಟ್ಟಿಗಳು ಲಭ್ಯವಿರುವ ಯುಆರ್‌ಎಲ್:	https://drive.google.com/drive/folders/1Orl2p0c-LYIkUhKWdZ8zD3BxZXVlso9_?usp=drive_link
9.	ಕಾಯ್ದೆಯ ಸೆಕ್ಷನ್ 25(2)(ಎಚ್) ಅಡಿಯಲ್ಲಿ ರೆಸೊಲ್ಯೂಷನ್ ಅರ್ಜಿದಾರ ಅರ್ಹತೆ ಲಭ್ಯವಿರುವ ಯುಆರ್‌ಎಲ್:	ಕೆಳಗಿನ ಲಿಂಕ್‌ನಲ್ಲಿ ಅನುಬಂಧ ಎ ಲಭ್ಯವಿರುತ್ತದೆ: : https://drive.google.com/drive/folders/1Orl2p0c-LYIkUhKWdZ8zD3BxZXVlso9_?usp=drive_link
10.	ಆಸಕ್ತಿ ವ್ಯಕ್ತಪಡಿಸುವಿಕೆ ಸ್ವೀಕರಿಸುವ ಕೊನೆಯ ದಿನಾಂಕ	06-11-2025
11.	ಸಂಭಾವ್ಯ ರೆಸೊಲ್ಯೂಷನ್ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಹೊರಡಿಸುವ ದಿನಾಂಕ	16-11-2025
12.	ತಾತ್ಕಾಲಿಕ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ	21-11-2025
13.	ಸಂಭಾವ್ಯ ರೆಸೊಲ್ಯೂಷನ್ ಅರ್ಜಿದಾರರ ಅಂತಿಮ ಪಟ್ಟಿ ಹೊರಡಿಸುವ ದಿನಾಂಕ	01-12-2025
14.	ಸಂಭಾವ್ಯ ರೆಸೊಲ್ಯೂಷನ್ ಅರ್ಜಿದಾರರಿಗೆ ಮಾಹಿತಿ ಮೆಮೊರ್ಯಾಂಡಮ್, ಮೌಲ್ಯಮಾಪನ ಶ್ರೇಣಿ ಮತ್ತು ರೆಸೊಲ್ಯೂಷನ್ ಯೋಜನೆಗಳಿಗಾಗಿ ಮನವಿ ಹೊರಡಿಸುವ ದಿನಾಂಕ	06-12-2025
15.	ರೆಸೊಲ್ಯೂನ್ ಯೋಜನೆಗಳ ಸಲ್ಲಿಕೆಗೆ ಕೊನೆಯ ದಿನಾಂಕ	05-01-2026
16.	ಆಸಕ್ತಿ ವ್ಯಕ್ತಪಡಿಸುವಿಕೆ ಸಲ್ಲಿಸಬೇಕಾದ ಪ್ರಾಸೆಸ್ ಇಮೇಲ್ ಐಡಿ	sribalajicement.cirp@gmail.com

ದಿನಾಂಕ: 22-10-2025
ಸ್ಥಳ: ಹೈದರಾಬಾದ್

ಗುಳ್ಳಪಲ್ಲಿ ಕಿಶೋರ್ ಬಾಬು
ರೆಸೊಲ್ಯೂಷನ್ ಪ್ರೊಫೆಷನಲ್
ಐಬಿಬಿಐ ನೊಂದಣಿ ಸಂ. IBBI/IPA-003/IP-N-00384/2021-2022/13926
11-11-169, ಸೌಭಾಗ್ಯಪುರಂ, ರಸ್ತೆ ನಂ. 1, ಕೊಥಪೇಟ್, ಹೈದರಾಬಾದ್ - 500035
ಶ್ರೀ ಬಾಲಾಜಿ ಸಿಮೆಂಟ್ ಮತ್ತು ಪವರ್ ಲಿಮಿಟೆಡ್ ಪರವಾಗಿ

ಪ್ರಕಟಣೆ



1. ಹೆಚ್‌ಕ್ಯೂ ಎಂಇಜಿ & ಸೆಂಟರ್, ಬೆಂಗಳೂರು ಇಲ್ಲಿನ, ಶ್ರೀ ವಿ ಪದ್ಮನಾಭನ್ ಬಿನ್ ಲೇಟ್ ವೇಣು, ಗಾರ್ಡನರ್, ನಂ. 6007 ಎಂಬುವರು, 05 ಸೆಪ್ಟಂಬರ್ 2024 ರಿಂದ ಜಾರಿಗೊಂಡಂತೆ, ಯಾವುದೇ ಮಾಹಿತಿ ನೀಡದೆಯೆ/ರಜೆ ಪಡೆಯದೆಯೆ, ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ರುತ್ತಾರೆ.
2. ಶ್ರೀ ವಿ ಪದ್ಮನಾಭನ್, ಗಾರ್ಡನರ್, ನಂ. 6007 ಇವರಿಗೆ ಸಿಸಿಎಸ್ (ಸಿಸಿ & ಎ) ನಿಯಮಗಳು, 1965ರ ನಿಯಮಗ 14 ಮತ್ತು 16ರ ಅಡಿಯಲ್ಲಿ ಶೋಕಾಸ್ ನೋಟಿಸ್‌ಗಳನ್ನು ಮತ್ತು ಮೆಮೊರ್ಯಾಂಡಮ್ ಆಫ್ ಚಾರ್ಜಸ್‌ಗಳನ್ನು ಹೊರಡಿಸಲಾಗಿತ್ತು ಮತ್ತು ಕರ್ತವ್ಯಕ್ಕೆ ಮರಳಿ ಹಾಜರಾಗಬೇಕೆಂದು ಸೂಚಿಸಲಾಗಿತ್ತು, ಇಲ್ಲವಾದಲ್ಲಿ ಸಿಸಿಎಸ್ (ಸಿಸಿ & ಎ) ನಿಯಮಗಳು, 1965ರ ಪ್ರಕಾರ, ನಿಮ್ಮ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುತ್ತದೆ ಎಂದು ಕೂಡ ನೋಂದಾಯಿತ ಅಂಚೆ ಮುಖಾಂತರ ಅವರಿಗೆ ತಿಳಿಸಲಾಗಿತ್ತು. ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ಕೂಡ ಶ್ರೀ ವಿ ಪದ್ಮನಾಭನ್, ಗಾರ್ಡನರ್, ನಂ. 6007 ಇವರ ಕುರಿತಾದ ವಿವರಗಳನ್ನು ಪತ್ತೆ ಮಾಡಿ ಕೊಡಬೇಕೆಂದು ಮನವಿ ಮಾಡಲಾಗಿತ್ತು, ಅದರಂತೆ ಸದರಿ ವ್ಯಕ್ತಿಯು ಪತ್ತೆಯಾಗಿರುವುದಿಲ್ಲ ಮತ್ತು ಅವರ ಕುರಿತಾದ ಯಾವುದೇ ಮಾಹಿತಿ ಸಿಕ್ಕಿರುವುದಿಲ್ಲ ಎಂದು ಪ್ರತಿಕ್ರಿಯೆ ಬಂದಿರುತ್ತದೆ.
3. ಈ ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳ ಅವಧಿಯೊಳಗೆ, ಏಕೆ ನಿಮ್ಮನ್ನು ಸೇವೆಯಿಂದ ವಜಾಗೊಳಿಸಬಾರದು ಎಂಬುದಕ್ಕೆ ಕಾರಣ ನೀಡಬೇಕೆಂದು, ಈ ಮೂಲಕ ನಿಮಗೆ ಕೊನೆಯದಾಗಿ ಕರೆ ನೀಡಲಾಗುತ್ತಿದೆ, ಇಲ್ಲವಾದಲ್ಲಿ ಸಿಸಿಎಸ್ (ಸಿಸಿ & ಎ) ನಿಯಮಗಳು, 1965ರ ನಿಯಮ 19 (2)ರ ನಿಯಮಗಳನ್ವಯ, ನಿಮ್ಮನ್ನು ಸೇವೆಯಿಂದ ವಜಾಗೊಳಿಸುವ ಏಕಪಕ್ಷೀಯ ನಿರ್ಧಾರ ಕೈಗೊಳ್ಳಲಾಗುತ್ತದೆ.

ಸಹಿ/- (ಎ ಎಸ್ ಠಾಕೂರ್)
ಬ್ರಿಗೇಡಿಯರ್ ಕಮಾಂಡಂಟ್
ಎಚ್‌ಕ್ಯೂ ಎಂಇಜಿ & ಸೆಂಟರ್ ಬೆಂಗಳೂರು - 42

CBC 10622/11/0036/2526

ವಿಜಯನಗರ ಕ್ಲಬ್

ವಿಜಯನಗರ, ಬೆಂಗಳೂರು-560104. ದೂ: 080-2330 0675, 9606098126

ಟೆಂಡರ್ ಆಹ್ವಾನ

ವಿಜಯನಗರ ಕ್ಲಬ್, ಬೆಂಗಳೂರು ಇಲ್ಲಿ ಬಹುಮಹಡಿ ಕಾರ್ ಪಾರ್ಕಿಂಗ್ ಮತ್ತು ಟೆನಿಸ್ ಕೋರ್ಟ್ ನಿರ್ಮಾಣದ ಕೆಲಸಕ್ಕಾಗಿ, ಹೆಸರಾಂತ ನೋಂದಾಯಿತ ಅನುಭವ ಹೊಂದಿರುವ ಅರ್ಹ / ಅರ್ಹ ಗುತ್ತಿಗೆದಾರರಿಂದ ಎರಡು ಕವರ್‌ಗಳಲ್ಲಿ ಮೊಹರು ಮಾಡಿದ ತಾಂತ್ರಿಕ ಮತ್ತು ಹಣಕಾಸು ಬಿಡ್‌ಗಳನ್ನು ಪ್ರತ್ಯೇಕವಾಗಿ ಆಹ್ವಾನಿಸಲಾಗಿದೆ.

ಅಂದಾಜು ವೆಚ್ಚ: ರೂ.400 ಲಕ್ಷ (ಸಿವಿಲ್ ಕೆಲಸಗಳು, ವಿದ್ಯುತ್ ಮತ್ತು ನೈರ್ಮಲ್ಯ ಪ್ಲಂಬಿಂಗ್ ಕೆಲಸಗಳು ಸೇರಿದಂತೆ)

ಸಮಯದ ವೇಳಾಪಟ್ಟಿ / ಕಾರ್ಯಕ್ರಮಗಳ ಕ್ಯಾಲೆಂಡರ್

(1) ಟೆಂಡರ್ ಫಾರಂ ದರ ರೂ.5,000/- ವಿಜಯನಗರ ಕ್ಲಬ್, ಬೆಂಗಳೂರು ಪರವಾಗಿ ನಗದು / ಡಿಡಿ ರೂಪದಲ್ಲಿ ಸ್ವೀಕರಿಸಲಾಗುವುದು. (2) ಟೆಂಡರ್ ಫಾರಂಗಳನ್ನು ನೀಡುವ ದಿನಾಂಕ: 20.10.2025. (3) ಭರ್ತಿಮಾಡಿದ ಟೆಂಡರ್ ಫಾರಂಗಳನ್ನು ಸಲ್ಲಿಸಲು ಕೊನೆಯ ದಿನಾಂಕ:30.10.2025 ರಾತ್ರಿ 7.00ರವರೆಗೆ. ಟೆಂಡರ್ ಫಾರಂ ತೆರೆಯುವ ದಿನಾಂಕ: 31.10.2025.

ಯಾವುದೇ ಕಾರಣವನ್ನು ನೀಡದೆ ಯಾವುದೇ ದರಪಟ್ಟಿಗಳನ್ನು ಸ್ವೀಕರಿಸುವ / ತಿರಸ್ಕರಿಸುವ ಹಕ್ಕನ್ನು ವಿಜಯನಗರ ಕ್ಲಬ್‌ನ ಕಾರ್ಯದರ್ಶಿ ಅವರು ಹೊಂದಿರುತ್ತಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: 080-23300675 / ಮೊಬೈಲ್ ಸಂಖ್ಯೆ. 9606098126

ಸಹಿ/-
ಕಾರ್ಯದರ್ಶಿ, ವಿಜಯನಗರ ಕ್ಲಬ್

ಬೆಂಗಳೂರನಲ್ಲಿ ಕಾರ್ತಿಕ ಮಾಸ ನಿಮಿತ್ತ ರುದ್ರಾಕ್ಷಿ ಪ್ರದರ್ಶನ ಹಾಗೂ ಮಾರಾಟ

ಅಕ್ಟೋಬರ್ 22 ರಿಂದ 27 ರವರೆಗೆ ಆಯೋಜನೆ

ಬೆಂಗಳೂರು: ನಗರದ **ಹೊಟೇಲ್** Hotel Le Foliage, Beside Sangeeta Gadgets, **ಸಂಗಮ ಸರ್ಕಲ್ ಬಸ್ ಸ್ಟಾಪ್ ಹತ್ತಿರ,** Opp. Metro Pillar EP-No.9, **ಎದುರಿಗೆ, 46 ನೇ ಕ್ರಾಸ್ 8 ಬ್ಲಾಕ್, ಸಿಆರ್ ಲೇಔಟ್, 1ನೇ ಹಂತ, ಜೆ.ಪಿ. ನಗರ, ಬೆಂಗಳೂರು, ಆಗಸ್ಟ್ 22 ರಿಂದ 27** ರವರೆಗೆ ರುದ್ರಾಕ್ಷಿ ಪ್ರದರ್ಶನ ಮಾರಾಟ, **ಒಂದು ಮುಖಿ ಯಿಂದ 21 ಮುಖಿ ರುದ್ರಾಕ್ಷಗಳು ಲಭ್ಯವಿವೆ.** ಇಂಡಸ್-ನೇಪಾಳ ಸಂಸ್ಥೆಯ **ನಿರ್ದೇಶಕ ಡಾ. ನರೇಂದ್ರ ಕಾಶಿರೆಡ್ಡಿ** ಯಾವ ರುದ್ರಾಕ್ಷಿಯನ್ನು ಯಾವಾಗ ಹಾಗೂ ಯಾರು ಧರಿಸಬೇಕು ಎಂಬುದರ ಬಗ್ಗೆ ಯಾವುದೇ ಪಂಚಾಂಗ ಮತ್ತು ಕಂಪ್ಯೂಟರ್ ಸಹಾಯವಿಲ್ಲದೆ, ವೇದ ಗಣಿತದ ಮೂಲಕ ಜನ್ಮರಾಶಿ, ಜನ್ಮನಕ್ಷತ್ರದ ಆಧಾರದ ಮೇಲೆ ತಿಳಿಸಲಾಗುವುದು. ಮಾಂಸಹಾರಿಗಳು ಸಹ ರುದ್ರಾಕ್ಷಿಗಳನ್ನು ಧರಿಸಬಹುದು. ಮಳಿಗೆಯು **ಬೆಳಗ್ಗೆ 10.30 ರಿಂದ ರಾತ್ರಿ 09.00** ರವರೆಗೆ ತೆರದಿ ರುತ್ತದೆ. **ಸಂಪರ್ಕಿಸಿ: ಡಾ. ನರೇಂದ್ರ ಕಾಶಿರೆಡ್ಡಿ 7097396666**

ADVT

ನಗರಸಭೆ ಕಾರ್ಯಾಲಯ
ಕೋಲಾರ

ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/10/2025-26 ದಿನಾಂಕ:18.10.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ 2025-26 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಲ್ಲಿ 5 ಸಂಖ್ಯೆ ಕಾಮಗಾರಿಗಳಿಗೆ, 2025-26ನೇ ಸಾಲಿನ ಎಸ್.ಎಫ್.ಸಿ ಮುಕ್ತನಿಧಿಯಲ್ಲಿ 1 ಸಂಖ್ಯೆ ಕಾಮಗಾರಿಗೆ ಮತ್ತು 2025-26ನೇ ಸಾಲಿನ ನಗರಸಭೆ ನಿಧಿಯ 4 ಸಂಖ್ಯೆ ಕಾಮಗಾರಿಗೆ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಸಾಮಾನ್ಯ ವರ್ಗಕ್ಕೆ 6 ಸಂಖ್ಯೆ, ಪರಿಶಿಷ್ಟ ಜಾತಿಗೆ 1 ಸಂಖ್ಯೆ, ಪರಿಶಿಷ್ಟ ಪಂಗಡಕ್ಕೆ 2 ಸಂಖ್ಯೆ ಮತ್ತು ಪ್ರವರ್ಗ-II(ಎ) ಗೆ 1 ಸಂಖ್ಯೆ ಒಟ್ಟು 10 ಸಂಖ್ಯೆ ಪ್ಯಾಕೇಜ್ ಕಾಮಗಾರಿಗಳಿಗೆ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್: **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 03.11.2025 ರ ಸಂಜೆ 17.30 ಗಂಟೆವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 05.11.2025 ರ ಬೆಳಿಗ್ಗೆ 11.00 ಗಂಟೆಗೆ. ಹಾಗೂ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 07.11.2025 ಬೆಳಿಗ್ಗೆ 11.00 ಗಂಟೆಗೆ ಅಥವಾ** ಸೂಚಿತ ದಿನಾಂಕದಂದು ತೆರೆಯಲಾಗುವುದು. **ಸೂಚನೆ:** ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/-	ಸಹಿ/-	ಸಹಿ/-	ಸಹಿ/-
ಕೆ.ಲಕ್ಷ್ಮೀದೇವಮ್ಮ ರಮೇಶ್	ಸಂಗೀತ.ವಿ ಜಗದೀಶ್	ಫೈರೋಜ್ ಖಾನ್	ಪೌರಾಯುಕ್ತರು
ಅಧ್ಯಕ್ಷರು	ಉಪಾಧ್ಯಕ್ಷರು	ಸ್ಥಾಯಿ ಸಮಿತಿ ಅಧ್ಯಕ್ಷರು	ನಗರಸಭೆ, ಕೋಲಾರ
ನಗರಸಭೆ, ಕೋಲಾರ	ನಗರಸಭೆ, ಕೋಲಾರ	ನಗರಸಭೆ, ಕೋಲಾರ	

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:323/ಕೆಎಸ್‌ಎಂಸಿಎ/2025-26

ಭಾರತ ಸರ್ಕಾರ

ಬಾಹ್ಯಾಕಾಶ ಇಲಾಖೆ, ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)

ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಇಸ್ರೋ ಅತಿಥಿ ಗೃಹದ ಎದುರು, ದೇವನಹಳ್ಳಿ, ಕರ್ನಾಟಕ-562164 ದೂರವಾಣಿ: 080-29916308

इसरो isro

ಇ-ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ, ಈ ಕೆಳಕಂಡ ಕಾಮಗಾರಿಗಳಿಗೆ ಇ-ಟೆಂಡರಿಂಗ್ ವಿಧಾನದ ಮೂಲಕ ಆನ್‌ಲೈನ್ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂಖ್ಯೆ	ಟೆಂಡರ್ ಗಿಟ್ಟ ಅಂದಾಜು ಮೊತ್ತ	ಪೂರ್ಣಗೊಳ್ಳುವ ಅವಧಿ	ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಟೆಂಡರ್ ತೆರೆಯುವ ದಿನಾಂಕ	ಇಎಂಡಿ
01	ದೇವನಹಳ್ಳಿಯ ಹೆಚ್‌ಎಸ್‌ಎಫ್‌ಸಿಯ ಕ್ಯಾಂಪಸ್‌ನಲ್ಲಿರುವ ಡಿಜಿ ಸೆಟ್‌ಗಳ ಸುತ್ತಲೂ ಚೈನ್‌ಲಿಂಕ್ ಫೆನ್ಸಿಂಗ್ ಒದಗಿಸುವುದು (ಸಿವಿಲ್ ಕಾಮಗಾರಿ) **HSFC/CMG/MM/C/158/2025-26, Dt: 21.10.2025**	ರೂ. 15.55 ಲಕ್ಷಗಳು	02 ತಿಂಗಳು	22.10.2025 (11.00 ಗಂಟೆ) ರಿಂದ 02.11.2025 (23.30 ಗಂಟೆ) ವರೆಗೆ	04.11.2025 11.00 ಗಂಟೆ ವರೆಗೆ	04.11.2025 11.30 ಗಂಟೆ	ರೂ. 31,100/-
02	ದೇವನಹಳ್ಳಿಯ ಹೆಚ್‌ಎಸ್‌ಎಫ್‌ಸಿಯ 11/0.433 ಕೆವಿ ಉಪಕೇಂದ್ರದಲ್ಲಿ ಚೇಂಜ್‌ಓವರ್ ಪ್ಯಾನಲ್ (ಸಿಒಪಿ) 1 & 2 ರ ವಿಸ್ತರಣೆ ಮತ್ತು 2 ಸಂಖ್ಯೆಯ ಎಪಿಎಫ್‌ಸಿ ಪ್ಯಾನೆಲ್‌ಗಳ ಸ್ಥಳಾಂತರ **HSFC/CMG/MM/E/159/2025-26, Dt: 21.10.2025**	ರೂ. 7.92 ಲಕ್ಷಗಳು	04 ತಿಂಗಳು				ರೂ. 15,840/-
03	ದೇವನಹಳ್ಳಿಯ ಹೆಎಚ್‌ಎಸ್‌ಎಫ್‌ಸಿಯಲ್ಲಿರುವ ಸಮರ್ಥನ್, ಭದ್ರತಾ ಕಟ್ಟಡಗಳಿಗೆ ಅಲ್ಯೂಮಿನಿಯಂ/ಗ್ಲಾಸ್ ಪಾರ್ಟಿಷನ್ ಕಾಮಗಾರಿ ಹಾಗೂ ಇತರೆ ಪೂರಕ ಕಾಮಗಾರಿಗಳು ಮಾಡುವುದು. **HSFC/CMG/MM/C/160/2025-26, Dt: 21.10.2025**	ರೂ. 11.35 ಲಕ್ಷಗಳು	03 ತಿಂಗಳು				ರೂ. 22,700/-

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಾಯಿಸಿ ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕ ಪಾವತಿಸುವುದರ ಮೂಲಕ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಮಾರಾಟಗಾರರ ನೋಂದಣಿಯ ಪ್ರಕ್ರಿಯೆಯನ್ನು ಮೇಲಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಅರ್ಹತಾ ಮಾನದಂಡ ಮತ್ತು ಇತರೆ ವಿವರಗಳಿಗಾಗಿ ಆಸಕ್ತ ಟೆಂಡರ್‌ದಾರರು ದ್ವಿಭಾಷೆ (ಹಿಂದಿ ಮತ್ತು ಇಂಗ್ಲೀಷ್) ಗಳಲ್ಲಿರುವ ಟೆಂಡರ್ ಆಹ್ವಾನ ಪ್ರಕಟಣೆ (ಎನ್‌ಐಟಿ) ಯನ್ನು ವೆಬ್‌ಸೈಟ್ **www.isro.gov.in** ನಲ್ಲಿ ನೋಡಬಹುದು. ಇತರೆ ವಿವರಗಳು ಹಾಗೂ ಟೆಂಡರ್ ದಸ್ತಾವೇಜುಗಳ ಖರೀದಿಗೆ ವೆಬ್‌ಸೈಟ್ **www.tenderwizard.com/ISRO** ಗೆ ಭೇಟಿನೀಡಿ

ಸಹಿ/- ಮುಖ್ಯಸ್ಥರು ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ಮಜುಂದಾರ್– ಡಿಕೆಶಿ ಭೇಟಿ: ಅಭಿವೃದ್ಧಿ ಬಗ್ಗೆ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿನ ರಸ್ತೆಗುಂಡಿ ಮತ್ತು ಕಸದ ಸಮಸ್ಯೆಯ ಕುರಿತು ರಾಜ್ಯ ಸರ್ಕಾರವನ್ನು ಇತ್ತೀಚೆಗೆ ಕಟುವಾಗಿ ಟೀಕಿಸಿದ್ದ ಬಯೋಕಾನ್ ಕಂಪನಿ ಮುಖ್ಯಸ್ಥರಾದ ಕಿರಣ್ ಮಜುಂದಾರ್ ಷಾ ಅವರು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಮಂಗಳವಾರ ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.

ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅವರ ಅಧಿಕೃತ ನಿವಾಸ 'ಕಾವೇರಿ'ಯಲ್ಲಿ ಷಾ ಭೇಟಿ ಮಾಡಿದರು. ಈ ವೇಳೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇದ್ದರು.

ಷಾ ಅವರ ಭೇಟಿ ಕುರಿತು ಸಂತಸ ವ್ಯಕ್ತಪಡಿಸಿ ತಮ್ಮ 'ಎಕ್ಸ್' ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಡಿ.ಕೆ. ಶಿವಕುಮಾರ್, 'ಬೆಂಗಳೂರಿನ ಬೆಳವಣಿಗೆ, ನಾವೀನ್ಯತೆ ಮತ್ತು ಕರ್ನಾಟಕದ ಬೆಳವಣಿಗೆಯ ಮುಂದಿನ ಹಾದಿಯ ಕುರಿತು ನಾವು ಚರ್ಚೆ ನಡೆಸಿದೆವು' ಎಂದಿದ್ದಾರೆ.

ಷಾ ಅವರು ಬೆಂಗಳೂರಿನ ಕಳಪೆ ಮೂಲಸೌಕರ್ಯ, ಅದರಲ್ಲೂ ರಸ್ತೆಗುಂಡಿ ಮತ್ತು ಕಸದ ನಿರ್ವಹಣೆ ಬಗ್ಗೆ ಇತ್ತೀಚೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು. ಇದು ಆಡಳಿತಾರೂಢ ಕಾಂಗ್ರೆಸ್ ಸರ್ಕಾರದ ವಿರುದ್ಧ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು.

ಷಾ ಅವರ ಟೀಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದ ಡಿ.ಕೆ. ಶಿವಕುಮಾರ್, 'ಉದ್ಯಮಿಗಳಿಗೆ ವೈಯಕ್ತಿಕ ಕಾರ್ಯ ಸೂಚಿಗಳಿವೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಇವರೆಲ್ಲ ಯಾಕೆ ಬಾಯಿ ಬಿಟ್ಟಿರಲಿಲ್ಲ' ಎಂದು ಪ್ರಶ್ನಿಸಿದ್ದರು. 'ಸರ್ಕಾರದಿಂದ ಎಲ್ಲ ಸವಲತ್ತು ಪಡೆದು ಬೆಳೆದವರು, ತಾವು ಬೆಳೆದ ನಗರಕ್ಕೆ ಧಕ್ಕೆ ತರಬಾರದು' ಎಂದೂ ಹೇಳಿದ್ದರು.

ಕಿರಣ್ ಮಜುಂದಾರ್ ಷಾ ಅವರು ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದರು

ಶಿವಕುಮಾರ್ ಅವರ 'ವೈಯಕ್ತಿಕ ಕಾರ್ಯಸೂಚಿ' ಆರೋಪಕ್ಕೆ 'ಎಕ್ಸ್'ನಲ್ಲಿ ತಿರುಗೇಟು ನೀಡಿದ್ದ ಷಾ, 'ನಿಮ್ಮ ಮಾತು ಸತ್ಯವಲ್ಲ. ನಾವು ಹಿಂದಿನ ಬಿಜೆಪಿ ಮತ್ತು ಜೆಡಿಎಸ್ ಸರ್ಕಾರಗಳ ಅವಧಿಯಲ್ಲೂ ನಗರದ ಸಮಸ್ಯೆಗಳ ಬಗ್ಗೆ ಧ್ವನಿ ಎತ್ತಿದ್ದೇವೆ. ಸ್ವಚ್ಛ ಮತ್ತು ಸುಸ್ಥಿತಿಯಲ್ಲಿರುವ ರಸ್ತೆಗಳನ್ನು ಹೊಂದುವುದೇ ನಮ್ಮ ಕಾರ್ಯಸೂಚಿ' ಎಂದಿದ್ದರು.

ಕಿರಣ್ ಮಜುಂದಾರ್ ಷಾ ಅವರು ಕೇಂದ್ರ ಸಚಿವ ಎಚ್.ಡಿ. ಕುಮಾರ ಸ್ವಾಮಿ, ಬಿಜೆಪಿ ನಾಯಕರಾದ ಬಿ.ಎಸ್. ಯಡಿಯೂರಪ್ಪ, ಸಿ.ಎನ್. ಅಶ್ವತ್ಥ ನಾರಾಯಣ, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರನ್ನೂ ಭೇಟಿಯಾಗಿದ್ದರು. ಷಾ ಅವರು ತಮ್ಮ ಕುಟುಂಬದ ಸಮಾರಂಭವೊಂದಕ್ಕೆ ಆಮಂತ್ರಣ ನೀಡಲು ತಮ್ಮನ್ನು ಭೇಟಿಯಾಗಿದ್ದರು ಎಂದು ಅಶ್ವತ್ಥನಾರಾಯಣ ಅವರು ತಮ್ಮ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

'ಅಮ್ಮ' ಎಂದರೆ ಬಲಾಢ್ಯ ಮಹಿಳೆ...

ಒಂದನೇ ಪುಟದಿಂದ...

ಅಲ್ಲಿ 22 ದೇಶಗಳ ಸ್ಪರ್ಧಾಳುಗಳ ಪೈಪೋಟಿ ನಡುವೆ ಒಂದು ಚಿನ್ನ, ಮೂರು ಬೆಳ್ಳಿ ಮತ್ತು ಒಂದು ಕಂಚಿನ ಪದಕವನ್ನು ತಮ್ಮ ಕೊರಳಿಗೇರಿಸಿಕೊಂಡಿದ್ದರು. ಅಲ್ಲಿ ರನ್ನರ್ಸ್ ಅಪ್ ಆಗಿದ್ದ ಅವರು 'ಬಲಾಢ್ಯ ಮಹಿಳೆ' ಎಂಬ ಗೌರವ ಗಳಿಸಿದ್ದರು. ಆಗಸ್ಟ್‌ನಲ್ಲಿ ನಡೆದಿದ್ದ ಮಾಸ್ಟರ್ ನ್ಯಾಷನಲ್ಸ್‌ನಲ್ಲಿ ಅವರು 'ಸ್ಟ್ರಾಂಗ್ ವುಮನ್' ಪ್ರಶಸ್ತಿ ಗೆದ್ದರು.

ಅಲ್ಪ ಅವಧಿಯಲ್ಲಿಯೇ ಬಹಳಷ್ಟು ಸ್ಪರ್ಧೆಗಳಲ್ಲಿ ಭಾಗವಹಿಸಿರುವ ದೀಪಾ ಅವರು ಮುಂಬರುವ ಕೆಲವು ತಿಂಗಳು ಅಭ್ಯಾಸಕ್ಕಷ್ಟೇ ಒತ್ತು ನೀಡಲಿದ್ದಾರಂತೆ.

ಬಹುಶಃ ಮುಂದಿನ ವರ್ಷದ ಆಗಸ್ಟ್‌ನಲ್ಲಿ ಸ್ಪರ್ಧೆಗೆ ತೆರಳುವ ಸಾಧ್ಯತೆ ಇದೆ. ಆದರೆ ಮಕ್ಕಳಿಗಾಗಿ ತಮ್ಮ ದೇಹವನ್ನು ಹುರಿಗೊಳಿಸಿಕೊಳ್ಳುವ ಅವರ ಕಾಯಕ ನಿತ್ಯ ನಿರಂತರವಾಗಿರಲಿದೆ.

> **ಒಂದೇ ಒಂದು ದಿನವೂ ಅಭ್ಯಾಸವನ್ನು ತಪ್ಪಿಸಲು ಯಾವುದೇ ನೆಪವನ್ನು ದೀಪಾ ಹೇಳಿಲ್ಲ. ಮಕ್ಕಳಿಗಾಗಿ ತಾವು ಶಕ್ತಿಶಾಲಿಯಾಗಬೇಕು. ದೈಹಿಕವಾಗಿ ಬಲಾಢ್ಯರಾಗಬೇಕು ಎಂಬ ಏಕೈಕ ಗುರಿಯೇ ಅವರನ್ನು ಈ ಮಟ್ಟಕ್ಕೆ ಬೆಳೆಸಿದೆ. ನಾನು ಕೌಶಲಗಳನ್ನು ಹೇಳಿಕೊಟ್ಟಿರುವೆ. ಆದರೆ ಛಲ, ಬಲ ಎಲ್ಲವೂ ಅವರದ್ದೇ. ಅವರಿಗೆ ತಾಲೀಮು ನೀಡುವ ಅವಕಾಶ ನನಗೆ ಸಿಕ್ಕಿದ್ದು ಭಾಗ್ಯವೇ ಸರಿ**
> **ಕೌಶಿಕ್,** ತರಬೇತುದಾರ

ದೇಹತೂಕ ಹೆಚ್ಚಳ ತಂದ ಆತಂಕ

ದೀಪಾ ಅಜಯ್ ಅವರು ಕೇಪ್‌ಟೌನ್‌ನಲ್ಲಿ ತಮ್ಮ ದೇಹ ತೂಕ ಹೆಚ್ಚಳದಿಂದಾಗಿ ಸ್ಪರ್ಧೆಯಿಂದ ಅನರ್ಹಗೊಳ್ಳುವ ಆತಂಕ ಎದುರಿಸಿದ್ದರು.

'ಅಲ್ಲಿ ನಾನು ದೇಹತೂಕ ಹೆಚ್ಚಳದ ಸವಾಲನ್ನೂ ಎದುರಿಸಬೇಕಾಯಿತು. ಸ್ಪರ್ಧೆಗೂ ಕೆಲವು ಗಂಟೆಗಳ ಮುಂಚಿನ ಪರೀಕ್ಷೆಯಲ್ಲಿ ನಿಗದಿತ ತೂಕಕ್ಕಿಂತ (69 ಕೆಜಿ) 100 ಗ್ರಾಮ್ ಹೆಚ್ಚು ತೂಗಿದ್ದೆ. ವ್ಯಕ್ತಿಗಳಿಂದ ಪ್ರಾಯೋಜಕತ್ವ ಪಡೆದುಕೊಂಡು ಹೋಗಿದ್ದೆ. ಅನರ್ಹಗೊಂಡರೆ ಏನು ಗತಿ ಎಂಬ ಆತಂಕ ಕಾಡಿತ್ತು. ಮತ್ತೆ ಹೋಟೆಲ್‌ಗೆ ಮರಳಿ ಸೌನಾ ಬಾತ್ ಮಾಡಿ, ಕೆಲವು ಕಸರತ್ತು ಮಾಡಿ ತೂಕವನ್ನು ಇಳಿಕೆ ಮಾಡಿಕೊಂಡು ಮರಳಿದ್ದೆ. ಸ್ಪರ್ಧೆಗೆ ಅರ್ಹಳಾಗಿದ್ದೆ' ಎಂದು ದೀಪಾ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಮ್ಮ ಸಾಹಸಗಾಥೆಯನ್ನು ವಿವರಿಸಿದರು.

'ನನ್ನ ಪತ್ನಿ ಮಕ್ಕಳ ಲಾಲನೆ, ಪಾಲನೆಯ ನಡುವೆಯೂ ಸಿಕ್ಕ ಅಲ್ಪ ಸಮಯಾವಕಾಶದಲ್ಲಿ ಈ ಸಾಧನೆ ಮಾಡಿದ್ದಾರೆ. ಇದು ನನಗೂ ಬೆರಗು ಮೂಡಿಸುತ್ತದೆ. ಇದೊಂದು ಅಸಾಧಾರಣ ಸಾಧನೆ. ದಶಕಗಳಿಂದ ಅಭ್ಯಾಸ ಮಾಡಿದ ವೃತ್ತಿಪರರೊಂದಿಗೆ ಸ್ಪರ್ಧಿಸಿ ಸ್ಥಾನ ಪಡೆದು ಬಂದಿದ್ದಾರೆ' ಎಂದು ದೀಪಾ ಅವರ ಪತಿ, ವಿಪ್ರೊ ಉದ್ಯೋಗಿಯಾಗಿರುವ ಅಜಯ್ ಹೆಮ್ಮೆ ವ್ಯಕ್ತಪಡಿಸಿದರು.

ಸಾರ್ವಜನಿಕ ನೋಟಿಸ್

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನಂದರೆ ನನ್ನ ಕಕ್ಷಿದಾರರು ಈ ಕೆಳಗೆ [illegible]

ಸಲ್ಲಿಸತಕ್ಕದ್ದು/ಸಂಪರ್ಕಿಸತಕ್ಕದ್ದು, ಒಂದು ವೇಳೆ 15 (ಹದಿನೈದು) ದಿನಗಳ ನಂತರ ಬಂದಂತಹ ಅಹವಾಲು ಅಥವಾ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು 560080 ರ ಸದಾಶಿವನಗರದ ಬಳ್ಳಾರಿ ರಸ್ತೆಯಲ್ಲಿರುವ Upper Palace Orchid ಪ್ರದೇಶದಲ್ಲಿ ಇದ್ದು, ಸೈಟ್ ನಂ. 216ರ 1/3ನೇ ಭಾಗ, ಪೂರ್ವ ದಿಂದ ಪಶ್ಚಿಮಕ್ಕೆ 121 ಅಡಿ ಮತ್ತು ಉತ್ತರ ದಿಂದ ದಕ್ಷಿಣಕ್ಕೆ 80 ಅಡಿ ಗಾತ್ರದ ನಿವೇಶನ. ದಿನಾಂಕ 28.07.1971 ರ ವಿಭಾಗದ ಪ್ರಕಾರ ಈ ಭಾಗ ಹಂಚಲಾಗಿದೆ.

ಪೂರ್ವಕ್ಕೆ : ಬಳ್ಳಾರಿ ರಸ್ತೆಗೆ ಸಂಪರ್ಕ ಇರುವ ಪಥ ಮತ್ತು ಎಂ.ಎನ್. ಲಕ್ಷ್ಮಣಗೌಡ ಹಾಗೂ ಎಂ.ಎನ್. ಚಂದ್ರೇಗೌಡ ಅವರ ಆಸ್ತಿಗಳು
ಪಶ್ಚಿಮಕ್ಕೆ : ಸೈಟ್ ನಂ. 233
ಉತ್ತರಕ್ಕೆ : ಎಂ.ಎನ್. ಲಕ್ಷ್ಮಣಗೌಡ ಅವರ ಕಾರ್ ಶೆಡ್ ಮತ್ತು ಪಥ, ನಂತರ ಶ್ರೀನಿವಾಸಲು ಅವರಿಗೆ ಸೇರಿದ ಸೈಟ್ ನಂ.217
ದಕ್ಷಿಣಕ್ಕೆ : ಕೆ. ಹನುಮಂತಯ್ಯ ಅವರಿಗೆ ಸೇರಿದ ಸೈಟ್ ನಂ. 215

ಮನೆ, ಕಾರ್ ಶೆಡ್ ಮತ್ತು ಮುಂಭಾಗದ ತೆರೆಯಿರುವ ಸ್ಥಳವನ್ನು ಒಳಗೊಂಡ ಈ ಆಸ್ತಿ ಸುಮಾರು 3,200 ಚದರ ಅಡಿ.

ಶ್ರೀ ಮಂಜುನಾಥ್ ಎಂ ಹೆಗಡೆ, ವಕೀಲರು
ಸಂಖ್ಯೆ 888, 3ನೇ ಕ್ರಾಸ್, 5ನೇ ಮೈನ್ ಎಂ.ಸಿ. ಲೇಔಟ್, ವಿಜಯನಗರ, ಬೆಂಗಳೂರು - 560040
Email: hegdeylp@gmail.com
Mob:9845770270

ಎಸ್ಕಾಂಗಳ ಆನ್‌ಲೈನ್ ಸೇವೆ ಅಲಭ್ಯ

ಬೆಂಗಳೂರು: ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ತುರ್ತು ನಿರ್ವಹಣೆ ಕಾರಣದಿಂದಾಗಿ ರಾಜ್ಯದ ಐದು ಎಸ್ಕಾಂಗಳ ಆನ್‌ಲೈನ್ ಸೇವೆಗಳು ಅ.24ರ ರಾತ್ರಿ 8ರಿಂದ ಅ.25ರ ಮಧ್ಯಾಹ್ನ 1ರವರೆಗೆ ನಗರ ಪ್ರದೇಶಗಳಲ್ಲಿ ಲಭ್ಯ ಇರುವುದಿಲ್ಲ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಸ್ಕಾಂ, ಹೆಸ್ಕಾಂ, ಮೆಸ್ಕಾಂ, ಜೆಸ್ಕಾಂ ಹಾಗೂ ಸೆಸ್ಕ್ ವ್ಯಾಪ್ತಿ ಆನ್‌ಲೈನ್ ಸೇವೆಗಳಾದ ವಿದ್ಯುತ್ ಬಿಲ್ ಪಾವತಿ, ಹೆಸರು ಬದಲಾವಣೆ, ಜಕಾತಿ ಬದಲಾವಣೆ ಹಾಗೂ ಹೊಸ ಸಂಪರ್ಕ ಸೇರಿದಂತೆ ಆನ್‌ಲೈನ್ ಆಧರಿತ ಸೇವೆಗಳಿಗೆ ಅವಕಾಶವಿಲ್ಲ ಎಂದು ತಿಳಿಸಲಾಗಿದೆ.

ಹಾಗೆಯೇ ವಿದ್ಯುತ್ ಬಿಲ್ ಪಾವತಿಗಾಗಿ ಬಳಸುವ ಬೆಸ್ಕಾಂ ಮಿತ್ರ ಆ್ಯಪ್, ಬೆಂಗಳೂರು ಒನ್, ಕರ್ನಾಟಕ ಒನ್ ಸೇರಿದಂತೆ ಮೊದಲಾದ 'ಥರ್ಡ್ ಪಾರ್ಟಿ' ಪಾವತಿ ಸೇವೆಗಳೂ ಅಲಭ್ಯ ಎಂದು ಬೆಸ್ಕಾಂ ತಿಳಿಸಿದೆ.

ಬೆಸ್ಕಾಂ: ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಕೋಲಾರ, ಚಿಂತಾಮಣಿ, ಕನಕಪುರ, ರಾಮನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು, ಶಿರಾ, ಚನ್ನಪಟ್ಟಣ, ಆನೇಕಲ್, ಮುಳಬಾಗಿಲು, ಬಂಗಾರಪೇಟೆ, ಗೌರಿಬಿದನೂರು, ಹೊಸಕೋಟೆ, ದೊಡ್ಡಬಳ್ಳಾಪುರ, ಕೆ.ಜಿ.ಎಫ್, ಚಳ್ಳಕೆರೆ, ಕುಣಿಗಲ್, ಹರಿಹರ, ಹಿರಿಯೂರು ಮತ್ತು ತಿಪಟೂರು.

ತಿದ್ದುಪಡಿ

ಪತ್ರಿಕೆಯ ಮಂಗಳವಾರದ ಸಂಚಿಕೆಯ ಪುಟ 4ಎನಲ್ಲಿ ಪ್ರಕಟವಾದ 'ದಲಿತ ಸಾಹಿತಿಯೆಂಬ 'ಕ್ರೆಡಿಟ್' ಅಗತ್ಯವಿಲ್ಲ' ಸುದ್ದಿಯ 'ಕಿಕ್ಕರ್ ಹೆಡ್ಡಿಂಗ್'ನಲ್ಲಿ 'ಪುಸ್ತಕಗಳ ಜನಾರ್ಪಣೆ ಸಮಾರಂಭದಲ್ಲಿ ಎಲ್. ಹನುಮಂತಯ್ಯ ಅಭಿಪ್ರಾಯ' ಎಂದಾಗಬೇಕಿತ್ತು. ಈ ಮಾಹಿತಿ ತಪ್ಪಾಗಿ ಪ್ರಕಟವಾಗಿತ್ತು.

10 ತಿಂಗಳಾದರೂ ಮುಗಿಯದ ಕಾಮಗಾರಿ

ನೀಲಸಂದ್ರದ ಇನ್ಫ್ಯಾಂಟ್ ಚರ್ಚ್‌ನಿಂದ ಸಿಎಂಪಿ ಗೇಟ್‌ವರೆಗಿನ ರಸ್ತೆ ಅಭಿವೃದ್ಧಿ

ನೀಲಸಂದ್ರ ಇನ್ಫ್ಯಾಂಟ್ ಚರ್ಚ್‌ನ ಬಜಾರ್ ರಸ್ತೆಯಲ್ಲಿ ಸಂಚಾರ ದಟ್ಟಣೆ ಉಂಟಾಗಿದೆ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

● ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- ಶೇಕಡ 70ರಷ್ಟು ವ್ಯಾಪಾರ -ವಹಿವಾಟು ಕುಸಿತ
- ಅಂಗಡಿ ಬಾಡಿಗೆ ಕಟ್ಟಲು ಪರದಾಡುತ್ತಿರುವ ವ್ಯಾಪಾರಿಗಳು
- ರಸ್ತೆ ದೂಳುಮಯ: ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ

ಬೆಂಗಳೂರು: ನೀಲಸಂದ್ರದ ಇನ್ಫ್ಯಾಂಟ್ ಚರ್ಚ್‌ಗೆ ಸಂಪರ್ಕ ಕಲ್ಪಿಸುವ ಬಜಾರ್ ಮುಖ್ಯ ರಸ್ತೆಯಲ್ಲಿ ಹತ್ತು ತಿಂಗಳ ಹಿಂದೆ ಆರಂಭಿಸಿದ್ದ ರಸ್ತೆ ಅಭಿವೃದ್ಧಿ, ಕೊಳವೆ ಮಾರ್ಗದ ಕಾಮಗಾರಿ ಕುಂಟುತ್ತಾ ಸಾಗಿದೆ. ಇದರಿಂದ ವ್ಯಾಪಾರಿಗಳು, ಖರೀದಿಗೆ ಬರುವ ಗ್ರಾಹಕರು, ಸ್ಥಳೀಯ ನಿವಾಸಿಗಳು ಹೈರಾಣಾಗಿದ್ದಾರೆ.

ಶಾಂತಿನಗರ ವಿಧಾನಸಭಾ ಕ್ಷೇತ್ರದ ನೀಲಸಂದ್ರದ ಇನ್ಫ್ಯಾಂಟ್ ಚರ್ಚ್‌ನಿಂದ ಸಿಎಂಪಿ ಗೇಟ್‌ವರೆಗಿನ ಬಜಾರ್ ರಸ್ತೆ ಹದಗೆಟ್ಟು ಹೋಗಿದೆ. ಪಾದಚಾರಿ ಮಾರ್ಗದಿಂದ ನಾಲ್ಕು ಅಡಿ ಕೆಳಗಡೆ ರಸ್ತೆಯನ್ನು ಅಗೆದು, ಅಲ್ಲಲ್ಲಿ ಬೃಹತ್ ಗುಂಡಿಗಳನ್ನು ತೋಡಲಾಗಿದೆ. ಸುರಕ್ಷತೆಗೆ ಯಾವುದೇ ರೀತಿಯ ಬ್ಯಾರಿಕೇಡ್‌ಗಳನ್ನು ಅಳವಡಿಸಿಲ್ಲ. ಮಳೆ ಬಂದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಮಳೆ ನೀರು ಹರಿದು ಹೋಗಲು ವ್ಯವಸ್ಥೆ ಮಾಡಿಲ್ಲ. ಮಳೆ ಬಾರದೇ ಇದ್ದಾಗ ಇಡೀ ಪ್ರದೇಶವೇ ದೂಳುಮಯವಾಗುತ್ತದೆ.

ಇಲ್ಲಿ ರಸ್ತೆ ಅಭಿವೃದ್ಧಿ, ಪೈಪ್‌ಲೈನ್, ಮಳೆ ನೀರು ಚರಂಡಿ ಮತ್ತು ಪಾದಚಾರಿ ಮಾರ್ಗದ ಕಾಮಗಾರಿಯನ್ನು 2024ರ ಡಿಸೆಂಬರ್‌ನಲ್ಲಿಯೇ ಪ್ರಾರಂಭಿಸಲಾಗಿತ್ತು. ಹತ್ತು ತಿಂಗಳ ಹಿಂದೆಯೇ ರಸ್ತೆಯನ್ನು ಸಂಪೂರ್ಣವಾಗಿ ಅಗೆದು ಹಾಗೆಯೇ ಬಿಡಲಾಗಿದೆ. ಕಾಮಗಾರಿ ನಿಧಾನ ಗತಿಯಲ್ಲಿ ಸಾಗಿದೆ. ಇದರಿಂದ ಇಲ್ಲಿನ ವ್ಯಾಪಾರ-ವಹಿವಾಟಿಗೆ ಪೆಟ್ಟು ಬಿದ್ದಿದೆ. ಈ ರಸ್ತೆಯಲ್ಲಿ ಬಸ್‌ಗಳು ಸಂಚರಿಸುತ್ತಿದ್ದವು. ಆದರೆ, ರಸ್ತೆ ಕಾಮಗಾರಿ ನಡೆಯುತ್ತಿರುವುದರಿಂದ ಇಲ್ಲಿ ಬಿಎಂಟಿಸಿ ಬಸ್‌ಗಳೇ ಬರುತ್ತಿಲ್ಲ. ಇದರಿಂದ ಗ್ರಾಹಕರ ಸಂಖ್ಯೆ ಕಡಿಮೆ ಆಗಿದೆ.

‘ಜವಳಿ, ಪಾದರಕ್ಷೆಗಳು, ಮಹಿಳೆಯರ ಆಲಂಕಾರಿಕ ವಸ್ತುಗಳ ಅಂಗಡಿಗಳು, ಮಾಂಸ, ಕಿರಾಣಿ, ಔಷಧಿ ಅಂಗಡಿಗಳಿವೆ. ರಸ್ತೆ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಇಲ್ಲಿ ವಾಹನಗಳಷ್ಟೇ ಅಲ್ಲ ಸಾರ್ವಜನಿಕರೂ ಓಡಾಡದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇದರಿಂದ ವಹಿವಾಟು ಸಂಪೂರ್ಣವಾಗಿ ಕುಸಿದಿದೆ. ಅಂಗಡಿಯ ಬಾಡಿಗೆ ಕಟ್ಟಲು ಆಗುತ್ತಿಲ್ಲ’ ಎಂದು ವ್ಯಾಪಾರಿಗಳು ಹೇಳಿದರು.

ನೀಲಸಂದ್ರ ಇನ್ಫ್ಯಾಂಟ್ ಚರ್ಚ್‌ನ ಬಜಾರ್ ರಸ್ತೆಯಲ್ಲಿ ತೋಡಿರುವ ಗುಂಡಿ

‘ರಸ್ತೆ ಬದಿಯಲ್ಲಿ ಪಾದಚಾರಿ ಮಾರ್ಗವೂ ಸೇರಿದಂತೆ ಅಲ್ಲಲ್ಲಿ ಮಣ್ಣಿನ ರಾಶಿ ಹಾಕಲಾಗಿದೆ. ಹೀಗಾಗಿ ನಡೆದಾಡುವವರು ಪಾದಚಾರಿ ಮಾರ್ಗವನ್ನು ದಾಟಲಾಗದೇ ಮುಖ್ಯ ರಸ್ತೆಯಲ್ಲೇ ಹಾದು ಹೋಗಬೇಕು. ರಸ್ತೆಯಲ್ಲಿಯೇ ವ್ಯಾಪಾರ-ವಹಿವಾಟು ಮಾಡುವುದರಿಂದ ಸಂಚಾರ ದಟ್ಟಣೆ ಆಗುತ್ತಿದೆ. ಕೆಲವೊಮ್ಮೆ ಅಪಘಾತಗಳು ಸಂಭವಿಸುತ್ತಿವೆ. ಕಾಮಗಾರಿ ಮುಗಿಸುವಂತೆ ಗುತ್ತಿಗೆದಾರರಿಗೆ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ. ಈ ಬಗ್ಗೆ ಶಾಸಕರಿಗೆ ದೂರು ನೀಡಿದರೂ ಕಾಮಗಾರಿ ನಿಧಾನವಾಗಿಯೇ ನಡೆಯುತ್ತಿದೆ’ ಎಂದು ಆರೋಪಿಸಿದರು.

‘ಪಾಲಿಕೆ ಮತ್ತು ಜಲಮಂಡಳಿ ಸಿಬ್ಬಂದಿ ನಾನಾ ಕಾರಣಗಳಿಂದ ಕಾಮಗಾರಿ ವಿಳಂಬ ಮಾಡುತ್ತಿದ್ದಾರೆ. ರಸ್ತೆಗಳಲ್ಲಿ ಗುಂಡಿಗಳಿರುವ ಕಾರಣ, ಗ್ರಾಹಕರು, ವ್ಯಾಪಾರಿಗಳು ಬಿದ್ದು ಕಾಲು ಮುರಿದುಕೊಂಡಿದ್ದಾರೆ. ಮಳೆ ಬಂದರೆ ರಸ್ತೆಯಲ್ಲಿ ಓಡಾಡಲು ಆಗುವುದಿಲ್ಲ. ಈ ರೀತಿಯ ಪರಿಸ್ಥಿತಿಯಿಂದಾಗಿ ಖರೀದಿಗೆ ಬರುವ ಗ್ರಾಹಕರ ಸಂಖ್ಯೆ ವಿರಳವಾಗಿದೆ. ಹಬ್ಬಗಳು ಸೇರಿದಂತೆ ವಾರಾಂತ್ಯದಲ್ಲಿ ಸಾವಿರಾರು ಗ್ರಾಹಕರನ್ನು ಸೆಳೆಯುತ್ತಿದ್ದ ಈ ಮಾರುಕಟ್ಟೆ ಹತ್ತು ತಿಂಗಳಿಂದ ದಯನೀಯ ಸ್ಥಿತಿಗೆ ತಲುಪಿದೆ. ಶೇ 70ರಷ್ಟು ವ್ಯಾಪಾರ ಕಡಿಮೆಯಾಗಿದೆ’ ಎಂದು ವ್ಯಾಪಾರಿ ಅಲ್ತಾಫ್ ಅಳಲು ತೋಡಿಕೊಂಡರು.

ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎ. ಹ್ಯಾರಿಸ್ ಅವರನ್ನು ಪ್ರತಿಕ್ರಿಯೆಗಾಗಿ ‘ಪ್ರಜಾವಾಣಿ’ ಪ್ರತಿನಿಧಿ ಸಂಪರ್ಕಿಸಿದಾಗ ಅವರು ಮೊಬೈಲ್ ಕರೆಯನ್ನು ಸ್ವೀಕರಿಸಲಿಲ್ಲ.

ಸಾರ್ವಜನಿಕರು ಏನಂತಾರೆ?

ರಸ್ತೆ ಕಾಮಗಾರಿ ನಡೆಯುತ್ತಿರುವುದರಿಂದ ನಿತ್ಯ ದೂಳಿನ ಸಮಸ್ಯೆ ಹೆಚ್ಚಾಗುತ್ತಿದೆ. ಇದರಿಂದ ಇಲ್ಲಿನ ವ್ಯಾಪಾರಿಗಳು ನಾನಾ ರೋಗಗಳಿಂದ ಬಳಲುತ್ತಿದ್ದಾರೆ. ಗ್ರಾಹಕರು ಬಾರದೇ ಅಂಗಡಿಯ ಬಾಡಿಗೆ ಕಟ್ಟುವುದಕ್ಕೂ ಸಮಸ್ಯೆ ಆಗಿದೆ

ಬಾಷಾ, ಬಟ್ಟೆ ಅಂಗಡಿ ಮಾಲೀಕ

ಮಳೆ ಬಂದರೆ ಇಡೀ ರಸ್ತೆ ಕೆಸರುಮಯವಾಗುತ್ತಿದೆ. ಇಂತಹ ದುಃಸ್ಥಿತಿಯಲ್ಲಿ ಸಾರ್ವಜನಿಕರು ಹೇಗೆ ಓಡಾಡಬೇಕು. ನೀಲಸಂದ್ರಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯನ್ನು ಕೂಡಲೇ ದುರಸ್ತಿಗೊಳಿಸಬೇಕು. ಈ ಬಗ್ಗೆ ಶಾಸಕರಿಗೆ ಮನವಿ ಸಲ್ಲಿಸಲಾಗಿದೆ

ಕುಮಾರ್, ಸ್ಥಳೀಯರು

ಹತ್ತು ತಿಂಗಳಿಂದ ಕಾಮಗಾರಿ ನಡೆಯುತ್ತಿದೆ. ಇದರಿಂದ ಈ ರಸ್ತೆಯಲ್ಲಿ ಬಿಎಂಟಿಸಿ ಬಸ್‌ಗಳು ಬರುತ್ತಿಲ್ಲ. ಇದರಿಂದ ಗ್ರಾಹಕರ ಸಂಖ್ಯೆ ಕಡಿಮೆ ಆಗಿದ್ದು, ವ್ಯಾಪಾರ-ವಹಿವಾಟಿಗೆ ಹೊಡೆತ ಬಿದ್ದಿದೆ. ಪ್ರತಿ ತಿಂಗಳು ₹40 ಸಾವಿರ ಬಾಡಿಗೆ ಕಟ್ಟಬೇಕಿದೆ. ಅಭಿವೃದ್ಧಿ ಹೆಸರಿನಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡುವುದು ಎಷ್ಟು ಸರಿ?

ಮಹಮ್ಮದ್ ಮಾಜ್, ಮಾಂಸದ ಅಂಗಡಿಯ ಮಾಲೀಕ

ಬಜಾರ್ ರಸ್ತೆಯಲ್ಲಿ ಸಂಚರಿಸುವ ಆಟೊಗಳನ್ನು 15 ದಿನಗಳಿಗೊಮ್ಮೆ ರಿಪೇರಿ ಮಾಡಿಸಬೇಕು. ರಸ್ತೆಯನ್ನು ಅಗೆದು ಹಾಕಿರುವುದರಿಂದ ವಾಹನ ಸಂಚಾರವೇ ದುಸ್ತರವಾಗಿದೆ. ಬಜಾರ್ ರಸ್ತೆಗೆ ಸುತ್ತಿ ಬಳಸಿ ಬರಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆ ದುರಸ್ತಿ ಕಾಮಗಾರಿಗೆ ವೇಗ ನೀಡಬೇಕು

ಸತೀಶ್, ಆಟೊ ಚಾಲಕ

ಸಾಂಸ್ಕೃತಿಕ ಮುನ್ನೋಟ

ಎಸ್.ವಿ.ಆರ್ @50: ಚಿತ್ರೋತ್ಸವ

ಎಸ್.ವಿ. ರಾಜೇಂದ್ರಸಿಂಗ್ ಬಾಬು

ಬೆಂಗಳೂರು: ಚಲನಚಿತ್ರ ನಿರ್ದೇಶಕ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ಚಲನಚಿತ್ರ ನಿರ್ದೇಶಕರಾಗಿ 50 ವರ್ಷ ಪೂರೈಸಿರುವ ಪ್ರಯುಕ್ತ ಬೆಂಗಳೂರು ಚಲನಚಿತ್ರ ವಾಣಿಜ್ಯ ಮಂಡಳಿಯಿಂದ ಅಕ್ಟೋಬರ್ 23ರಿಂದ 27ರವರೆಗೆ ಚಾಮರಾಜಪೇಟೆಯ ಕರ್ನಾಟಕ ಕಲಾವಿದರ ಸಂಘದಲ್ಲಿ ‘ಎಸ್.ವಿ.ಆರ್ @50–ಸಾಧನೆ, ಸಂಭ್ರಮ, ಚಿತ್ರೋತ್ಸವ’ ಆಯೋಜಿಸಲಾಗಿದೆ.

ಇದೇ 23ರಂದು ಬೆಳಿಗ್ಗೆ 10ಕ್ಕೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ನಟ ಸುದೀಪ್ ಪಾಲ್ಗೊಳ್ಳಲಿದ್ದಾರೆ. ಅತಿಥಿಗಳಾಗಿ ಶಿವರಾಜ ತಂಗಡಗಿ, ದಿನೇಶ್ ಗುಂಡೂರಾವ್, ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾಸರವಳ್ಳಿ, ನಾಗತಿಹಳ್ಳಿ ಚಂದ್ರಶೇಖರ್, ಹಂಸಲೇಖ, ರಾಘವೇಂದ್ರ ರಾಜ್‌ಕುಮಾರ್ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12ಕ್ಕೆ ‘ಹೂವು ಹಣ್ಣು’, 3.30ಕ್ಕೆ ‘ಅಂತ’ ಚಲನಚಿತ್ರ ಪ್ರದರ್ಶನ ನಡೆಯಲಿದೆ.

ಅ.24ರಂದು ಬೆಳಿಗ್ಗೆ 10.30ಕ್ಕೆ ‘ಭೂಮಿ ತಾಯಿಯ ಚೊಚ್ಚಲ ಮಗ’, ‘ಕುರಿಗಳು ಸಾರ್ ಕುರಿಗಳು’ ಅ.25ರಂದು ಬೆಳಿಗ್ಗೆ 10.30ಕ್ಕೆ ‘ಬಂಧನ’, ಮಧ್ಯಾಹ್ನ 2.30ಕ್ಕೆ ‘ಗಂಡಭೇರುಂಡ’ ಅ.26ರಂದು ಬೆಳಿಗ್ಗೆ 10.30ಕ್ಕೆ ‘ಮುತ್ತಿನಹಾರ’, ಮಧ್ಯಾಹ್ನ 2.30ಕ್ಕೆ ‘ನಾಗರಹೊಳೆ’ ಚಲನಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಅ.27ರಂದು ಬೆಳಿಗ್ಗೆ 11.30ಕ್ಕೆ ಜೆ.ಸಿ. ರಸ್ತೆಯ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಸಮಾರೋಪ ಸಮಾರಂಭದಲ್ಲಿ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರಿಗೆ ಸನ್ಮಾನ ನಡೆಯಲಿದ್ದು, ಸಂಜೆ 6.30ಕ್ಕೆ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲ್ಗೊಳ್ಳಲಿದ್ದಾರೆ.

ಸಂಗೀತ ಕಛೇರಿ, ವಾರ್ಷಿಕೋತ್ಸವ

ಬೆಂಗಳೂರು: ಸುಸ್ವರಲಯ ಪ್ರೌಢ ಸಂಗೀತ ಕಲಾ ಶಾಲೆಯ ವಾರ್ಷಿಕೋತ್ಸವ, ಬಿರುದು ಪ್ರದಾನ ಹಾಗೂ ಸಂಗೀತ ಕಛೇರಿ ಅಕ್ಟೋಬರ್ 24ರಿಂದ 26ರವರೆಗೆ ಬಸವನಗುಡಿಯ ಬಿ.ಪಿ. ವಾಡಿಯಾ ರಸ್ತೆಯಲ್ಲಿರುವ ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ನಡೆಯಲಿದೆ.

ಅ.24ರಂದು ಸಂಜೆ 4ಕ್ಕೆ ವಿದ್ವಾನ್ ಎಂ. ವಾಸುದೇವರಾವ್ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ. ಗಾಯಕ ಕಾಂಚನ ಈಶ್ವರ ಭಟ್ ಅವರಿಗೆ ಸ್ವರಲಯ ರತ್ನ ಬಿರುದು ಪ್ರದಾನ ಮಾಡಲಾಗುತ್ತದೆ. ವೀಣಾ ವಾದಕಿ ಗೀತಾ ರಮಾನಂದ್ ಅವರಿಗೆ ‘ಸ್ವರಲಯಶೃಂಗ’ ಬಿರುದು ಪ್ರದಾನ ಮಾಡಲಾಗುತ್ತದೆ. ಸಂಜೆ 6.15ರಿಂದ ಗೀತಾ ರಮಾನಂದ, ಕಾಂಚನಾ ಎ. ಈಶ್ವರ್ ಭಟ್, ಶಮಿತ್ ಎಸ್. ಗೌಡ ಅವರು ಸಂಗೀತ ಕಛೇರಿ ನಡೆಸಿಕೊಡಲಿದ್ದಾರೆ. ಅ.25ರಂದು ಬೆಳಿಗ್ಗೆ 9.30ರಿಂದ ತಾಳವಾದ್ಯ ಹಾಗೂ ಸಂಗೀತ ಕಛೇರಿ ನಡೆಯಲಿದೆ. ಅ.26ರಂದು ವಿವಿಧ ಸಂಗೀತ ಕಛೇರಿಗಳು ನಡೆಯಲಿವೆ.

ಸಂಪರ್ಕ: 94480 59595.

ಥಿಯೇಟರ್ ಫೆಸ್ಟಿವಲ್ 24ರಿಂದ

ಬೆಂಗಳೂರು: ಜೆ.ಪಿ. ನಗರದ ರಂಗಶಂಕರದಲ್ಲಿ ಅಕ್ಟೋಬರ್ 24ರಿಂದ ನವೆಂಬರ್ 1ರವರೆಗೆ ಥಿಯೇಟರ್ ಫೆಸ್ಟಿವಲ್ ನಡೆಯಲಿದೆ.

ಅ.24ರಂದು ‘ಕವನ ಎ. ಅಂಬೇಡ್ಕರೈಟ್ ಒಪೇರಾ’, ಅ.25ರಂದು ‘ಸಮ್ಥಿಂಗ್ ಲೈಕ್ ಟ್ರುತ್’, ಅ.26ರಂದು ‘ಆಖಿರ್‌ಕಾರ್’, ಅ.31ರಂದು ‘ನಾಮ್ ಮೇ ಕಾ ರಖಾ ಹೈ’, ನ.1ರಂದು ‘ಕತ್ತಲ ನೆರಳು’ ಕುರಿತು ವಿವಿಧ ತಜ್ಞರು ಚರ್ಚಿಸಲಿದ್ದಾರೆ.

ಯಕ್ಷ ಷಡಾನನ 25ಕ್ಕೆ

ಬೆಂಗಳೂರು: ಮನೋಜ್ ಭಟ್ ಹೆಗ್ಗಾರಳ್ಳಿ ಅವರ ಸಂಯೋಜನೆಯಲ್ಲಿ ಇದೇ 25ರಂದು ರಾತ್ರಿ 9.45ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ‘ಯಕ್ಷ ಷಡಾನನ’ ಎಂಬ ಐದು ಪೌರಾಣಿಕ ಪ್ರಸಂಗಗಳ ಪ್ರದರ್ಶನ ನಡೆಯಲಿದೆ. ‘ಧರ್ಮಾಂಗದ’, ‘ಮಾಗಧ’, ‘ರುದ್ರಕೋಪ’, ‘ಮಾಗಧ’ ಹಾಗೂ ‘ಗದಾಯುದ್ಧ’ ಪ್ರಸಂಗಗಳು ಜರುಗಲಿವೆ.

ಸಂಪರ್ಕ: 98806 04186.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪಟಾಕಿ ಸಿಡಿಸುವುದನ್ನು ನೋಡುತ್ತಿದ್ದವರಿಗೂ ತಾಗಿದ ಕಿಡಿ

ಪಟಾಕಿ ಅವಘಡ: ಹಲವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ವೇಳೆ ನಗರದಲ್ಲಿ ಪಟಾಕಿ ಸಿಡಿತದಿಂದ ಅವಘಡಗಳು ಸಂಭವಿಸಿದ್ದು, ಎರಡು ದಿನದಲ್ಲಿ 42 ಮಕ್ಕಳು ಸೇರಿ 77 ಮಂದಿ ಗಾಯಗೊಂಡಿದ್ದಾರೆ.

ನಗರದ ಮಿಂಟೊ ಆಸ್ಪತ್ರೆಯಲ್ಲಿ ಆರು ಮಕ್ಕಳು ಮತ್ತು ಏಳು ಮಂದಿ ವಯಸ್ಕರು, ಡಾ. ಅಗರವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಮೂವರು ಮಕ್ಕಳು, ಶಂಕರ್ ಕಣ್ಣಿನ ಆಸ್ಪತ್ರೆಯಲ್ಲಿ ಐವರು ಮಕ್ಕಳು ಸೇರಿ 13 ಮಂದಿ ಹಾಗೂ ನಾರಾಯಣ ನೇತ್ರಾಲಯದಲ್ಲಿ 31 ಮಕ್ಕಳು ಸೇರಿ 53 ಮಂದಿಗೆ ಚಿಕಿತ್ಸೆ ನೀಡಲಾಗಿದೆ.

ಹೆಚ್ಚಿನ ಮಕ್ಕಳು ಪಟಾಕಿ ಸಿಡಿಸುವುದನ್ನು ನೋಡುತ್ತಿದ್ದಾಗ ಕಣ್ಣಿಗೆ ಗಾಯ ಮಾಡಿಕೊಂಡಿದ್ದಾರೆ. ಮಕ್ಕಳು ಪಟಾಕಿ ಸಿಡಿಸುವಾಗ ದೊಡ್ಡವರು ಗಮನ ಹರಿಸಬೇಕು. ಯಾವುದೇ ಗಾಯವಾದಲ್ಲಿ ತಡ ಮಾಡದೆ ಹತ್ತಿರದ ಕಣ್ಣಿನ ಆಸ್ಪತ್ರೆಗೆ ಭೇಟಿ ನೀಡಬೇಕು. ಸಂಭಾವ್ಯ ಕಣ್ಣಿನ ಗಾಯಗಳಿಂದ ರಕ್ಷಿಸಿಕೊಳ್ಳಲು ರಕ್ಷಣಾ ಕನ್ನಡಕಗಳನ್ನು ಬಳಸುವಂತೆ ವೈದ್ಯರು ಸಲಹೆ ನೀಡಿದ್ದಾರೆ.

ನಾರಾಯಣ ನೇತ್ರಾಲಯದಲ್ಲಿ ಈವರೆಗೂ 51 ಮಂದಿ ಹೊರ ರೋಗಿಗಳ ವಿಭಾಗದಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಇದರಲ್ಲಿ 18 ವರ್ಷದೊಳಗಿನವರು 31 ಪುರುಷರು ಹಾಗೂ 13 ಮಹಿಳೆಯರು ಸೇರಿದ್ದಾರೆ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದ 67 ವರ್ಷದ ವಿದೇಶಿ ವ್ಯಕ್ತಿಯೊಬ್ಬರ ಕಣ್ಣಿಗೆ ಪಟಾಕಿ ಕಿಡಿ ಸಿಡಿದು ಗಾಯವಾಗಿದ್ದು, ರೆಟಿನಾ ಪರೀಕ್ಷೆಗೆ ಒಳಪಡುವಂತೆ ವೈದ್ಯರು ಸಲಹೆ ನೀಡಿದ್ದಾರೆ. ಪಟಾಕಿ ಸಿಡಿಸುವ ವೇಳೆ ಹತ್ತು ವರ್ಷದ ಬಾಲಕನ ಮುಖಕ್ಕೆ ಬೆಂಕಿ ತಾಗಿ, ಕಣ್ಣಿನ ರೆಪ್ಪೆಯ ಕೂದಲು ಸುಟ್ಟು ಹೋಗಿವೆ. ಕಾರ್ನಿಯಾದ ಮೇಲೆ ಮಸಿಯ ಕಣಗಳು ಅಂಟಿಕೊಂಡಿದ್ದು, ಗೀರುಗಳು ಬಿದ್ದಿವೆ ಹಾಗೂ ರೆಪ್ಪೆ ಊದಿಕೊಂಡಿತ್ತು. ಕಣ್ಣು ತೊಳೆದು, ಔಷಧ ನೀಡಲಾಯಿತು. ಕಾರ್ನಿಯಾ ವಿಭಾಗದಲ್ಲಿ ಚಿಕಿತ್ಸೆಗೆ ಸಮಯ ನಿಗದಿಪಡಿಸಲಾಗಿದೆ.

ಪಟಾಕಿ ಸಿಡಿಸುವ ವೇಳೆ ಗಾಯಗೊಂಡಿದ್ದ ಮೂವರು ಮಕ್ಕಳಿಗೆ ಡಾ.ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯ ಹೊರ ರೋಗಿಗಳ ವಿಭಾಗದಲ್ಲಿ ಚಿಕಿತ್ಸೆ ನೀಡಿ ಕಳುಹಿಸಲಾಗಿದೆ.

ಶಂಕರ್ ಕಣ್ಣಿನ ಆಸ್ಪತ್ರೆಯಲ್ಲಿ ಮೂವರು ಮಕ್ಕಳು ಹಾಗೂ ಎಂಟು ಮಂದಿ ವಯಸ್ಕರಿಗೆ ಚಿಕಿತ್ಸೆ ನೀಡಲಾಗಿದೆ. ಪಟಾಕಿ ಹಚ್ಚುವಾಗ ಸಣ್ಣ ಕಿಡಿಗಳು ತಾಗಿ ಸಣ್ಣ ಗಾಯವಾಗಿತ್ತು. ಕಣ್ಣುಗಳನ್ನು ತೊಳೆದು, ಹೆಚ್ಚಿನ ಆರೈಕೆ ಮಾಡಲಾಗಿದೆ.

ನೆಲಮಂಗಲ ರೋಟರಿ ಸಂಸ್ಥೆ ವತಿಯಿಂದ 46 ಫಲಾನುಭವಿಗಳಿಗೆ ಉಚಿತವಾಗಿ ಹೊಲಿಗೆ ಯಂತ್ರಗಳನ್ನು ವಿತರಿಸಲಾಯಿತು. ಜಿಲ್ಲಾ ಪಾಲಕ ಡಾ.ಎಲಿಜಬತ್ ಚೆರಿಯನ್, ಜಿಲ್ಲಾ ಕಾರ್ಯದರ್ಶಿ ಎಂ.ಜಗದೀಶ್, ತಾಲ್ಲೂಕು ಅಧ್ಯಕ್ಷ ಜಿ.ಆರ್. ನಾಗರಾಜು, ರೋಟರಿ ಟ್ರಸ್ಟ್ ಅಧ್ಯಕ್ಷ ಎಂ.ಎನ್.ಹರೀಶ್ ಕುಮಾರ್, ಮಾಜಿ ಅಧ್ಯಕ್ಷರಾದ ಎಸ್.ಗಂಗರಾಜು, ರಾಜಶೇಖರ್, ನವೀನ್ ಕುಮಾರ್ ಇದ್ದಾರೆ

ಚಿಕ್ಕದೇವಸಂದ್ರದಲ್ಲಿ ದೀಪೋತ್ಸವ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದೀಪಾವಳಿ ಹಬ್ಬದ ಪ್ರಯುಕ್ತ ಚಿಕ್ಕದೇವಸಂದ್ರ ಗ್ರಾಮದ ಶ್ರೀದೊಡ್ಡಮ್ಮದೇವಿ ದೇವಸ್ಥಾನದ ಆವರಣದಲ್ಲಿ ದೀಪೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಪ್ರತಿ ವರ್ಷವೂ ವಿಭಿನ್ನವಾಗಿ ಹಮ್ಮಿಕೊಳ್ಳಲಾಗುವ ದೀಪೋತ್ಸವ ಕಾರ್ಯಕ್ರಮದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಕಲ್ಯಾಣಿ ನಿರ್ಮಾಣ ಮಾಡಿ ದೀಪಗಳನ್ನು ಬೆಳಗಿಸಲಾಯಿತು.

ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ದೀಪೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿ, ‘ಚಿಕ್ಕದೇವಸಂದ್ರ ಗ್ರಾಮದಲ್ಲಿ ಪ್ರತಿ ವರ್ಷ ಹಮ್ಮಿಕೊಳ್ಳಲಾಗುವ ದೀಪೋತ್ಸವ ವಿಶೇಷವಾಗಿರುತ್ತದೆ’ ಎಂದು ಹೇಳಿದರು.

ಶ್ರೀದೊಡ್ಡಮ್ಮದೇವಿಗೆ ನೋಟುಗಳಿಂದ ಅಲಂಕಾರ ಮಾಡಲಾಗಿತ್ತು

ಗ್ರಾಮದ ಮುಖಂಡರಾದ ಡಿ.ಎಂ. ನಾಗರಾಜ್, ಮುನಿವೆಂಕಟಪ್ಪ, ಆಂಧ್ರ ಬ್ಯಾಂಕ್ ತಿಮ್ಮಣ್ಣ, ಡಿ.ಎಚ್.ರಮೇಶ್, ಎಂ.ರವಿಕುಮಾರ್, ನಾಗರಾಜ್ ಪೇಂಟರ್, ಲಾರಿಚಂದ್ರು, ಮೇಸ್ತ್ರಿ ಗೋವಿಂದಪ್ಪ ಇದ್ದರು.

ನಗರದಲ್ಲಿ ಇಂದು

ಗೋದೀಪ-ದೀಪಾವಳಿ ವಿಶೇಷ ಗೋಪೂಜೆ: ಸಾನ್ನಿಧ್ಯ: ರಾಘವೇಶ್ವರ ಭಾರತೀ ಸ್ವಾಮೀಜಿ, ಭಾಗವಹಿಸುವವರು: ದಿನೇಶ್ ಕುಮಾರ್, ಶಿವಶ್ರೀ ಸ್ಕಂದಪ್ರಸಾದ್, ತೇಜಸ್ವಿ ಸೂರ್ಯ, ಮಂಜುಳಾ ರವಿ ಸುಬ್ರಮಣ್ಯ, ಎಲ್.ಎ. ರವಿಸುಬ್ರಮಣ್ಯ, ಸುಷ್ಮಾ ಅರುಣ್ ಶ್ಯಾಮ್, ಅರುಣ್ ಶ್ಯಾಮ್ ಎಂ., ಬಿ.ವಿ. ರುಕ್ಮಾವತಿ, ನಾ. ಸೋಮೇಶ್ವರ, ಆಯೋಜನೆ ಮತ್ತು ಸ್ಥಳ: ಶ್ರೀರಾಮಾಶ್ರಮ, ಗಿರಿನಗರ, ಸಂಜೆ 5

‘ಗಿರಿಜಾ ಕಲ್ಯಾಣ’ ಧಾರ್ಮಿಕ ಪ್ರವಚನ: ದ್ವೈಪಾಯನಚಾರ್ ಜೋಶಿ, ಆಯೋಜನೆ ಮತ್ತು ಸ್ಥಳ: ವ್ಯಾಸರಾಜ ಮಠ, ಸುಬ್ರಹ್ಮಣ್ಯನಗರ, ರಾಜಾಜಿನಗರ ಎರಡನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ..
nagaradalli_indu@prajavani.co.in

ನಗರದಲ್ಲಿ ನಾಳೆ (23-10-2025)

ಎಸ್.ವಿ.ಆರ್ @50–ಸಾಧನೆ, ಸಂಭ್ರಮ, ಚಿತ್ರೋತ್ಸವದ ಉದ್ಘಾಟನೆ: ಎಚ್.ಡಿ. ಕುಮಾರಸ್ವಾಮಿ, ಅತಿಥಿಗಳು: ಸುದೀಪ್, ಶಿವರಾಜ ತಂಗಡಗಿ, ದಿನೇಶ್ ಗುಂಡೂರಾವ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುನಿರತ್ನ, ಬಿ.ಬಿ. ಕಾವೇರಿ, ಉಪಸ್ಥಿತಿ: ಲಕ್ಷ್ಮಿ, ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾಸರವಳ್ಳಿ, ನಾಗತಿಹಳ್ಳಿ ಚಂದ್ರಶೇಖರ್, ಹಂಸಲೇಖ, ರಾಕ್‌ಲೈನ್ ವೆಂಕಟೇಶ್, ರಾಘವೇಂದ್ರ ರಾಜ್‌ಕುಮಾರ್, ಆಯೋಜನೆ: ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ, ಸ್ಥಳ: ಡಾ. ರಾಜ್‌ಕುಮಾರ್ ಭವನ, ಕರ್ನಾಟಕ ಕಲಾವಿದರ ಸಂಘ, ಚಾಮರಾಜಪೇಟೆ, ಬೆಳಿಗ್ಗೆ 10ರಿಂದ

ಕಿತ್ತೂರು ರಾಣಿ ಚನ್ನಮ್ಮ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ತಂಗಡಗಿ, ಅತಿಥಿಗಳು: ವಿಜಯಾನಂದ ಕಾಶಪ್ಪನವರ, ಉದಯ್ ಬಿ. ಗರುಡಾಚಾರ್, ಕೆ.ವಿ. ನಾಗರಾಜಮೂರ್ತಿ, ರಾಣಿ ಸತೀಶ್, ಉಪನ್ಯಾಸ: ಮಹಾಂತೇಶ ಬಿರಾದಾರ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಬೆಳಿಗ್ಗೆ 11

ಪಿ. ರಘೋತ್ತಮ ರಾವ್ ಅವರ ‘ಅರ್ಥ್, ಸ್ಕೈ ಆ್ಯಂಡ್ ಸ್ಪೇಸ್’, ‘ಸ್ಕೈ, ಸ್ಪೇಸ್ ಆ್ಯಂಡ್ ಔಟರ್ ಸ್ಪೇಸ್’ ಮಕ್ಕಳ ಪುಸ್ತಕಗಳ ಬಿಡುಗಡೆ: ಸಿ.ಜಿ. ಕೃಷ್ಣದಾಸ್ ನಾಯರ್, ಎ.ಎಸ್. ಕಿರಣ್‌ಕುಮಾರ್, ಎಚ್.ಎನ್. ಸುರೇಶ್, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 11

ಸಂಸ್ಥಾಪನಾ ದಿನಾಚರಣೆ, ‘ಡಾ.ಎಸ್.ಆರ್.ಸಿ ಸ್ಮಾರಕ’ ಪ್ರಶಸ್ತಿ ಪ್ರದಾನ: ಅತಿಥಿಗಳು: ಕೆ.ಜೆ. ಜಾರ್ಜ್, ಡಾ. ಭಗವಾನ್ ಬಿ.ಸಿ., ಡಾ.ಎಸ್. ಚಂದ್ರಶೇಖರ್ ಶೆಟ್ಟಿ, ಅಧ್ಯಕ್ಷತೆ: ವಿ.ವಿ. ಕೃಷ್ಣ ರೆಡ್ಡಿ, ಆಯೋಜನೆ: ಡಾ.ಎಸ್. ಆರ್. ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್, ಸ್ಥಳ: ಇಂಡಿಯಾ ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರೈಸ್ಟ್, ಹೆಣ್ಣೂರು ಮುಖ್ಯರಸ್ತೆ, ಸೇಂಟ್ ಥಾಮಸ್ ಟೌನ್, ಮಧ್ಯಾಹ್ನ 3.30

ಹರಿದಾಸ ಮಂಜರಿ: ಗಾಯನ: ಲಾವಣ್ಯ ವೆಂಕಟೇಶ್, ಪಿಟೀಲು: ಶ್ರೀಹರಿ, ಮೃದಂಗ: ರಾಹುಲ್ ಬೆಟ್ಟ, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7



ಹುಸಿ ಬಾಂಬ್ ಬೆದರಿಕೆ ಹಾವಳಿ ಜಾಸ್ತಿ

ಪೊಲೀಸರಿಗೆ ಸವಾಲಾದ ದುಷ್ಕರ್ಮಿಗಳ ಪತ್ತೆ, ನಕಲಿ ಖಾತೆಯಿಂದ ಸಂದೇಶ

• ಕೆ.ಎಸ್.ಸುನಿಲ್

ಬೆಂಗಳೂರು: ವಿಮಾನ ನಿಲ್ದಾಣ, ನ್ಯಾಯಾಲಯ, ಹೋಟೆಲ್, ಮಾಲ್, ಶಾಲಾ- ಕಾಲೇಜುಗಳು, ವಸ್ತುಸಂಗ್ರಹಾಲಯ ಹಾಗೂ ರಾಜಕೀಯ ನಾಯಕರನ್ನು ಗುರಿಯಾಗಿಸಿಕೊಂಡು ಬಾಂಬ್ ಸ್ಫೋಟಿಸುವ ಬೆದರಿಕೆ ಕರೆ ಮತ್ತು ಸಂದೇಶಗಳಿಗೆ ಸಂಬಂಧಿಸಿದ ಪ್ರಕರಣಗಳ ಸಂಖ್ಯೆ ನಗರದಲ್ಲಿ ಹೆಚ್ಚುತ್ತಿದೆ.

ನಗರದಲ್ಲಿ ಒಂದು ವರ್ಷದಿಂದ ಈ ರೀತಿಯ 34 ಪ್ರಕರಣಗಳು ದಾಖಲಾಗಿವೆ. ಅದರಲ್ಲೂ ಪಶ್ಚಿಮ ವಲಯದಲ್ಲಿರುವ 14 ಠಾಣೆಗಳಲ್ಲಿ ಒಟ್ಟು 29 ಪ್ರಕರಣಗಳು ದಾಖಲಾಗಿವೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯ ಪ್ರಕರಣಗಳು ಹೆಚ್ಚು ವರದಿಯಾಗುತ್ತಿದ್ದು, ಪೊಲೀಸರಿಗೆ ತಲೆ ನೋವಾಗಿ ಪರಿಣಮಿಸಿದೆ.

ರಾಜ್ಯದ ಇತರೆ ನಗರಗಳಿಗೆ ಹೋಲಿಸಿದರೆ ಬೆಂಗಳೂರು ನಗರದಲ್ಲೇ ಬಾಂಬ್ ಬೆದರಿಕೆ ಹಾವಳಿ ಜಾಸ್ತಿಯಾಗಿದೆ. ಕಳೆದ ಕೆಲವು ದಿನಗಳ ಹಿಂದಷ್ಟೇ ನಗರದ ಹಲವು ಪ್ರತಿಷ್ಠಿತ ಖಾಸಗಿ ಶಾಲೆಗಳಿಗೆ ಹುಸಿ ಬಾಂಬ್ ಬೆದರಿಕೆ ಕರೆ, ಸಂದೇಶಗಳು ಬಂದಿದ್ದವು. ಇವು ವಿದ್ಯಾರ್ಥಿಗಳು ಮತ್ತು ಪೋಷಕರನ್ನು ತೀವ್ರ ಆತಂಕಕ್ಕೆ ದೂಡುತ್ತಿವೆ.

ಬೆಂಗಳೂರಿನ ಕೆಂಪೇಗೌಡ ವಿಮಾನ ನಿಲ್ದಾಣ, ಹೈಕೋರ್ಟ್, ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ನಿವಾಸ ಹಾಗೂ ರಾಜಭವನಕ್ಕೂ ಬಾಂಬ್ ಬೆದರಿಕೆಯ ಇ-ಮೇಲ್‌ಗಳು ಬಂದು ದುಗುಡ ತಂದಿದ್ದವು.



ಕೆಲ ತಿಂಗಳ ಹಿಂದೆ ನಗರದ 40ಕ್ಕೂ ಅಧಿಕ ಶಾಲೆಗಳಿಗೆ ಒಂದೇ ದಿನ ಇ- ಮೇಲ್‌ನಿಂದ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಪೊಲೀಸರು ಬಾಂಬ್ ಪತ್ತೆ ತಂಡ, ಶ್ವಾನದಳ ಹಾಗೂ ಅಗ್ನಿಶಾಮಕ ದಳದೊಂದಿಗೆ ಶಾಲೆಗಳಿಗೆ ದೌಡಾಯಿಸಿ ತೀವ್ರ ತಪಾಸಣೆ ನಡೆಸಿದ್ದರು. ಆದರೆ, 'ಯಾವುದೇ ಸ್ಫೋಟಕ ವಸ್ತು ಪತ್ತೆಯಾಗಿಲ್ಲ. ಇದೊಂದು ಹುಸಿ ಬೆದರಿಕೆ' ಎಂದು ಖಚಿತಪಡಿಸಿದ್ದರು. ಬಳಿಕ, ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಶಾಲಾ ಆಡಳಿತ ಮಂಡಳಿ ಸದಸ್ಯರು ನಿಟ್ಟುಸಿರು ಬಿಟ್ಟರು.

ಯಾವ ಸ್ಥಳದಿಂದ, ಯಾರು ಇ-ಮೇಲ್ ಬೆದರಿಕೆ ಸಂದೇಶ ಕಳುಹಿಸಿದ್ದಾರೆ ಎಂಬುದರ ಕುರಿತು ಪೊಲೀಸರು ತಾಂತ್ರಿಕವಾಗಿ ಪರಿಶೀಲನೆ ನಡೆಸಿದರು. ಪ್ರಾಥಮಿಕ ತನಿಖೆಯಂತೆ ಇ-ಮೇಲ್ ಡೊಮೈನ್ ಬ್ರಿಟಿಷ್ ಇಂಡಿಯನ್ ಓಷನ್ ಟೆರಿಟರಿ ಮೂಲದ್ದಾಗಿದೆ ಎಂಬುದು ಕಂಡು ಬಂದಿದೆ. ಆದರೆ, ಆರೋಪಿಗಳ ಸುಳಿವು ಸಿಕ್ಕಿಲ್ಲ.

'ಹುಸಿ ಬಾಂಬ್ ಬೆದರಿಕೆ ಪ್ರಕರಣಗಳಲ್ಲಿ ದುಷ್ಕರ್ಮಿಗಳ ಪತ್ತೆಯೇ ಇಲಾಖೆಗೆ ಸವಾಲಾಗಿದೆ. ಕೆಲವು ಪ್ರಕರಣಗಳನ್ನು ಪತ್ತೆ ಮಾಡಿ, ಆರೋಪಿಗಳನ್ನು ಬಂಧಿಸಲಾಗಿದೆ. ಕೆಲ ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣಾ ಹಂತದಲ್ಲಿವೆ. ವಿದೇಶಗಳಲ್ಲಿ ಕುಳಿತು ನಕಲಿ ಖಾತೆಯಿಂದ ಇ-ಮೇಲ್ ಕಳುಹಿಸುವುದು ಮತ್ತು ನಕಲಿ ಸಿಮ್‌ಗಳನ್ನು ಬಳಸಿ ಕರೆಗಳನ್ನು ಮಾಡುವುದರಿಂದ ದುಷ್ಕರ್ಮಿಗಳ ಜಾಡು ಪತ್ತೆ ಹಚ್ಚುವುದು ದೊಡ್ಡ ಸವಾಲಾಗಿದೆ. ಈ ರೀತಿಯ ಬೆದರಿಕೆ ಸಂದೇಶ ಮತ್ತು ಕರೆಗಳನ್ನು ನಿರ್ಲಕ್ಷ್ಯ ಮಾಡುವಂತಿಲ್ಲ' ಎನ್ನುತ್ತಾರೆ ಹಿರಿಯ ಪೊಲೀಸ್ ಅಧಿಕಾರಿಗಳು.

'ದೇಶದಾದ್ಯಂತ ಬಾಂಬ್ ಸ್ಫೋಟಿಸುವ ಹುಸಿ ಬೆದರಿಕೆ ಸಂಬಂಧ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಕೇಂದ್ರ ತನಿಖಾ ಸಂಸ್ಥೆಗಳು, ಅಂತರರಾಜ್ಯ ಪೊಲೀಸ್ ತಂಡಗಳು ಗಂಭೀರ ತನಿಖೆ ನಡೆಸುತ್ತಿವೆ. ಆದರೆ, ದುಷ್ಕರ್ಮಿಗಳ ಸುಳಿವು ಇದುವರೆಗೂ ಸಿಕ್ಕಿಲ್ಲ. ಈ ನಿಟ್ಟಿನಲ್ಲಿ ತನಿಖಾ ಸಂಸ್ಥೆಗಳ ಜತೆಗೂ ಮಾಹಿತಿ ವಿನಿಮಯ ಮಾಡಿಕೊಂಡು ದುಷ್ಕರ್ಮಿಗಳ ಪತ್ತೆಗೆ ಶ್ರಮಿಸಲಾಗುತ್ತಿದೆ' ಎಂದು ಹೇಳಿದರು.

ಪ್ರತ್ಯೇಕ ತನಿಖಾ ತಂಡ ರಚನೆ

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರ ನಿವಾಸಗಳಲ್ಲಿ ಬಾಂಬ್ ಸ್ಫೋಟಿಸುವ ಬೆದರಿಕೆ ಸೇರಿದಂತೆ ನಗರದಲ್ಲಿ ಸದ್ದು ಮಾಡುತ್ತಿರುವ ಹುಸಿ ಬಾಂಬ್ ಬೆದರಿಕೆ ಸಂದೇಶಗಳ ಮೂಲ ಭೇದಿಸಿ ದುಷ್ಕರ್ಮಿಗಳ ಪತ್ತೆ ಹಚ್ಚುವ ಸಲುವಾಗಿ ಬೆಂಗಳೂರು ಉತ್ತರ ವಿಭಾಗದ ಡಿಸಿಪಿ ಬಿ.ಎಸ್.ನೇಮಗೌಡ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ.

ಒಂದು ವರ್ಷದಿಂದ ನಿರಂತರವಾಗಿ ಬರುತ್ತಿರುವ ಬಾಂಬ್ ಬೆದರಿಕೆ ಸಂದೇಶಗಳ ಮೂಲವನ್ನು ಪತ್ತೆ ಹಚ್ಚಬೇಕಿದ್ದು, ತಾಂತ್ರಿಕ ಆಯಾಮದಲ್ಲಿ ಪ್ರತ್ಯೇಕ ತನಿಖೆ ನಡೆಯಬೇಕಿದೆ. ಈ ನಿಟ್ಟಿನಲ್ಲಿ ತನಿಖಾ ತಂಡ ರಚನೆಯಾಗಿದೆ.

'ಪಶ್ಚಿಮ ವಲಯದಲ್ಲಿರುವ 14 ಠಾಣೆಗಳಲ್ಲಿ ಒಟ್ಟು 29 ಪ್ರಕರಣಗಳು ಇದುವರೆಗೂ ದಾಖಲಾಗಿವೆ. ಅವುಗಳನ್ನು ಉತ್ತರ ವಿಭಾಗದ ಸೈಬರ್ ಅಪರಾಧ ಠಾಣೆಗೆ ವರ್ಗಾವಣೆ ಮಾಡಲಾಗಿದ್ದು, ವಿಶೇಷ ತಂಡದ ಮೂಲಕ ತನಿಖೆ ನಡೆಸ-ಲಾಗುತ್ತದೆ. ಉತ್ತರ ವಿಭಾಗದ ಸೈಬರ್ ಅಪರಾಧ ಠಾಣೆಯ ಎಸಿಪಿ, ಇನ್‌ಸ್ಪೆಕ್ಟರ್ ಹಾಗೂ ಇದುವರೆಗೂ ಪ್ರಕರಣಗಳು ದಾಖಲಾಗಿರುವ ಠಾಣೆಗಳ ಸಿಬ್ಬಂದಿಯನ್ನು ತನಿಖಾ ತಂಡದಲ್ಲಿ ಸೇರಿಸಿಕೊಳ್ಳಲಾಗಿದೆ. ದೇಶದ ಬೇರೆ ಬೇರೆ ಕಡೆಯೂ ಇದೇ ರೀತಿ ಬಾಂಬ್ ಬೆದರಿಕೆ ಬಂದಿದ್ದ ಕಾರಣ ಅನ್ಯ ರಾಜ್ಯಗಳ ತನಿಖಾ ಸಂಸ್ಥೆಗಳ ಸಹಕಾರದೊಂದಿಗೆ ತನಿಖೆ ನಡೆಯಲಿದೆ' ಎಂದು ಡಿಸಿಪಿ ಬಿ.ಎಸ್.ನೇಮಗೌಡ ತಿಳಿಸಿದ್ದಾರೆ.

'ಬೆದರಿಕೆ ಸಂದೇಶಗಳನ್ನು ಕಳುಹಿಸುತ್ತಿರುವ ಇ-ಮೇಲ್ ವಿಳಾಸಗಳು ಬದಲಾಗುತ್ತಿವೆ. ಹಾಗಾಗಿ ತಾಂತ್ರಿಕ ಆಯಾಮದಲ್ಲಿ ತನಿಖೆ ನಡೆಸಿ ಸಂದೇಶ ಕಳುಹಿಸಿರುವ ಮೇಲ್‌ಗಳ ಐಪಿ ವಿಳಾಸ ಪತ್ತೆ ಹಚ್ಚಬೇಕಿದ್ದು, ಅದಕ್ಕೆ ಸಂಬಂಧಿಸಿದ ಕಂಪನಿಗಳ ಜತೆಗೂ ಸಮಾಲೋಚನೆ ನಡೆಸಲಾಗುತ್ತಿದೆ. ಬೆದರಿಕೆ ಸಂದೇಶಗಳ ಹಿಂದಿನ ಉದ್ದೇಶವೇನು ಎಂಬುದು ದುಷ್ಕರ್ಮಿಗಳ ಪತ್ತೆ ಬಳಿಕವಷ್ಟೇ ಹೇಳಲು ಸಾಧ್ಯ' ಎಂದು ತಿಳಿಸಿದರು.

ಕೆಲ ದಿನಗಳ ಹಿಂದೆ ರಾಜಭವನಕ್ಕೆ ಬಾಂಬ್ ಇರಿಸಿರುವುದಾಗಿ ಬೆದರಿಕೆ ಕರೆ ಮಾಡಿದ್ದ ಆರೋಪಿ ಭಾಸ್ಕರ್ ಎಂಬಾತನನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು. 'ಪೊಲೀಸರು ಎಷ್ಟರ ಮಟ್ಟಿಗೆ ಅಲರ್ಟ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಪರಿಶೀಲಿಸಲು ಕರೆ ಮಾಡಿದ್ದೆ' ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಿಳಿಸಿದ್ದ ಎಂದು ಪೊಲೀಸರು ಹೇಳಿದರು.

ನಾಲ್ವರನ್ನು ಬಂಧಿಸಿದ ಬೆಳ್ಳಂದೂರು ಠಾಣೆ ಪೊಲೀಸರು

ಫುಡ್ ಡೆಲಿವರಿ ಹುಡುಗರ ದರೋಡೆ

ಪ್ರಜಾವಾಣಿ ವಾರ್ತೆ

ಬಿಪಿನ್ ಕರ್ಕಿ

ಪಾರಸ್ ಸಿಂಗ್

ಮೀರ್ ಲೋಹಾರ್

ಮುಕೇಶ್ ಸಾಯಿ

ಬೆಂಗಳೂರು: ಫುಡ್ ಡೆಲಿವರಿ ಹುಡುಗರನ್ನು ಅಡ್ಡಗಟ್ಟಿ ದರೋಡೆ ನಡೆಸುತ್ತಿದ್ದ ನಾಲ್ವರು ಆರೋಪಿಗಳನ್ನು ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ನೇಪಾಳ ಮೂಲದ ಪಾರಸ್ ಸಿಂಗ್ (25), ಮುಕೇಶ್ ಸಾಯಿ (19), ಬಿಪಿನ್ ಕರ್ಕಿ (20), ಸಮೀರ್ ಲೋಹಾರ್ (24) ಬಂಧಿತರು. ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಂಧಿತರಿಂದ ಒಂಬತ್ತು ಮೊಬೈಲ್ ಫೋನ್‌ಗಳು ಹಾಗೂ ಮೂರು ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಫುಡ್ ಡೆಲಿವರಿ ಹುಡುಗ ಸುರೇಶ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳೆಲ್ಲರೂ ಕೊಡತಿ ಗೇಟ್ ಬಳಿ ವಾಸವಾಗಿದ್ದರು. ಖಾಸಗಿ ಕಂಪನಿಗಳಲ್ಲಿ ಸೆಕ್ಯೂರಿಟಿ ಗಾರ್ಡ್ ಹಾಗೂ ಹೌಸ್ ಕೀಪಿಂಗ್ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಸುಲಭವಾಗಿ ಹಣ ಸಂಪಾದನೆ ಮಾಡಲು ಸಂಚು ರೂಪಿಸಿದ ಆರೋಪಿಗಳು, ರಾತ್ರಿ ವೇಳೆ ಫುಡ್ ಡೆಲಿವರಿ ಹುಡುಗರ ಬೈಕ್ ಅಡ್ಡಗಟ್ಟಿ ಹಲ್ಲೆ ಮಾಡಿ, ಮೊಬೈಲ್ ದೋಚಿ ಪರಾರಿ ಆಗುತ್ತಿದ್ದರು. ಸೆ.13ರಂದು ರಾತ್ರಿ 11.30ರ ಸುಮಾರಿಗೆ ಕಸವನಹಳ್ಳಿ ರಸ್ತೆ ಮಾರ್ಗದಲ್ಲಿ ಫುಡ್ ಡೆಲಿವರಿಗೆ ಹೋಗುತ್ತಿದ್ದ ಸುರೇಶ್ ಅವರ ಬೈಕ್ ಅನ್ನು ಆರೋಪಿಗಳು ಅಡ್ಡಗಟ್ಟಿದ್ದರು. ಮೂರು ಬೈಕ್‌ನಲ್ಲಿ ಬಂದಿದ್ದ ಆರೋಪಿಗಳು, ಸುರೇಶ್ ಅವರ ಮೇಲೆ ಹಲ್ಲೆ ನಡೆಸಿ ಮೊಬೈಲ್ ಕಸಿದು ಪರಾರಿಯಾಗಿದ್ದರು. ಈ ಸಂಬಂಧ ಸುರೇಶ್ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಳ್ಳಂದೂರು ಅಲ್ಲದೇ ಹೆಬ್ಬಗೋಡಿ, ಪರಪ್ಪನ ಅಗ್ರಹಾರ, ಬಂಡೆಪಾಳ್ಯ, ಎಚ್ ಎಸ್ ಆರ್ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ 9 ಮೊಬೈಲ್ ಗಳನ್ನು ಆರೋಪಿಗಳು ದೋಚಿದ್ದರು. ಕಳವು ಮಾಡಿದ ಮೊಬೈಲ್ ಫೋನ್ ಗಳನ್ನು ಆರೋಪಿಗಳೇ ಬಳಸಿಕೊಳ್ಳುತ್ತಿದ್ದರು ಎಂಬ ಮಾಹಿತಿ ಸಿಕ್ಕಿದೆ. ಬೇರೆ ಎಲ್ಲಾದರೂ ಮಾರಾಟ ಮಾಡಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅನುಚಿತ ವರ್ತನೆ: ವೈದ್ಯನ ಬಂಧನ

ಬೆಂಗಳೂರು: ಚಿಕಿತ್ಸೆಗೆಂದು ಬಂದಿದ್ದ 21 ವರ್ಷದ ಯುವತಿಯ ಜತೆಗೆ ಅನುಚಿತವಾಗಿ ವರ್ತಿಸಿದ್ದ ಆರೋಪದಡಿ ವೈದ್ಯ, ಚರ್ಮರೋಗ ತಜ್ಞ ಪ್ರವೀಣ್ ಅವರನ್ನು ಅಶೋಕನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಗರದ ಆಸ್ಟಿನ್ ಟೌನ್‌ನಲ್ಲಿ ಕ್ಲಿನಿಕ್ ನಡೆಸುತ್ತಿದ್ದ ಪ್ರವೀಣ್, ಯುವತಿ ಚಿಕಿತ್ಸೆಗೆ ಬಂದಿದ್ದ ಸಂದರ್ಭದಲ್ಲಿ ಅವರ ಜತೆಗೆ ಅನುಚಿತ ವರ್ತನೆ ತೋರಿದ್ದರು. ಯುವತಿಯ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ.

ದೂರಿನಲ್ಲಿ ಏನಿದೆ?: 'ಅ.18ರಂದು ಸಂಜೆ 7 ಗಂಟೆಗೆ ಯುವತಿ ಕ್ಲಿನಿಕ್‌ಗೆ ಬಂದಿದ್ದರು. ಆ ಸಮಯದಲ್ಲಿ ವೈದ್ಯರು ಪರೀಕ್ಷೆಯ ನೆಪದಲ್ಲಿ ಯುವತಿಯ ಬಟ್ಟೆ ಬಿಚ್ಚಿಸಿ ಮುತ್ತು ನೀಡಿದ್ದಾರೆ. ಅಲ್ಲದೇ, ಪ್ರತ್ಯೇಕ ರೂಂ ಮಾಡುತ್ತೇನೆ. ಸಹಕಾರ ನೀಡಬೇಕು ಎಂಬುದಾಗಿ ಬೆದರಿಕೆ ಹಾಕಿದ್ದರು' ಎಂದು ನೀಡಿದ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ದುರುದ್ದೇಶದಿಂದ ನನ್ನ ದೇಹದ ವಿವಿಧ ಭಾಗಗಳನ್ನು ಸ್ಪರ್ಶಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಆ ವೈದ್ಯನ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಯುವತಿ ದೂರಿನಲ್ಲಿ ಆಗ್ರಹಿಸಿದ್ದಾರೆ.

ರಾಕೇಶ್ ಹ್ಯಾಟ್ರಿಕ್: ಕಿಕ್‌ಸ್ಟಾರ್ಟ್‌ಗೆ ಜಯ

ಬೆಂಗಳೂರು: ಎನ್. ರಾಕೇಶ್ ಸಿಂಗ್ (25ನೇ ನಿ., 41ನೇ ನಿ. ಹಾಗೂ 63ನೇ ನಿ.) ಅವರ ಹ್ಯಾಟ್ರಿಕ್ ಗೋಲಿನ ನೆರವಿನಿಂದ ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 3-1ರಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ರಾಕೇಶ್ ಸಿಂಗ್ ಅವರು ಪಂದ್ಯದುದ್ದಕ್ಕೂ ಪಾರಮ್ಯ ಮೆರೆದರು. ಅಗ್ನಿಪುತ್ರ ತಂಡದ ಪರ ಅಝುಫರ್ ನೂರಾನಿ (59ನೇ ನಿ.) ಏಕೈಕ ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಮಂಗಲೆನ್‌ಥಂಗ್ ಸಿಂಗಸಿತ್ (72ನೇ ನಿ.) ಹಾಗೂ ಥಂಗಜಲೆನ್ ಹವೊಕಿಪ್ (85ನೇ ನಿ.) ಅವರ ಆಟದ ಸಹಾಯದಿಂದ ಪರಿಕ್ರಮ ಎಫ್‌ಸಿ ತಂಡವು 2-0ಯಿಂದ ಎಫ್‌ಸಿ ರಿಯಲ್ ಬೆಂಗಳೂರು ತಂಡವನ್ನು ಸೋಲಿಸಿತು.

ಮತ್ತೊಂದು ಪಂದ್ಯದಲ್ಲಿ ಸಂಘಟಿತ ಆಟವಾಡಿದ ಯುನೈಟೆಡ್ ಸ್ಟಾರ್ಸ್ ಎಫ್‌ಸಿ ಆಟಗಾರರು 4-2ರಿಂದ ಬೆಂಗಳೂರು ಸಿಟಿ ಎಫ್‌ಸಿ ತಂಡದ ಎದುರು ರೋಚಕ ಜಯ ಸಾಧಿಸಿದರು. ಯುನೈಟೆಡ್ ಸ್ಟಾರ್ಸ್ ತಂಡದ ವಿನಯ್ ಆರ್. (45 + 2ನೇ ನಿ. ಹಾಗೂ 85ನೇ ನಿ.) ಅವಳಿ ಗೋಲು ಹೊಡೆದರೆ, ಕವಿ ಅರಸನ್ ಕೆ.(73ನೇ ನಿ.) ಹಾಗೂ ಮುರಳಿ ಶ್ರೀನಿವಾಸ್ (81ನೇ ನಿ.) ಉತ್ತಮ ಬೆಂಬಲ ನೀಡಿದರು. ಸಿಟಿ ಎಫ್‌ಸಿ ತಂಡದ ಅಜಯ್ ಶಂಕರ್ (19ನೇ ನಿ.) ಹಾಗೂ ಮೊಹಮ್ಮದ್ ಹಬೀಲ್ (79ನೇ ನಿ.) ಅವರು ತಲಾ ಒಂದು ಬಾರಿ ಚೆಂಡನ್ನು ಗೋಲು ಪೆಟ್ಟಿಗೆಗೆ ಸೇರಿಸಿದರು.

ಬಾಲಕಿಯರ ಫುಟ್‌ಬಾಲ್ ತಂಡಕ್ಕೆ ₹22 ಲಕ್ಷ ಬಹುಮಾನ

ನವದೆಹಲಿ (ಪಿಟಿಐ): ಎಎಫ್‌ಸಿ 17 ವರ್ಷದೊಳಗಿನ ಬಾಲಕಿಯರ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಗೆ ಇದೇ ಮೊದಲ ಬಾರಿಗೆ ಅರ್ಹತೆ ಗಿಟ್ಟಿಸಿಕೊಂಡ ಭಾರತ ತಂಡಕ್ಕೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮಂಗಳವಾರ ₹22 ಲಕ್ಷ ಬಹುಮಾನ (25,000 ಅಮೆರಿಕನ್ ಡಾಲರ್) ಘೋಷಿಸಿದೆ.

ಅಸಾಧಾರಣ ಪ್ರದರ್ಶನ ತೋರಿ ಏಷ್ಯಾಕಪ್ ಟೂರ್ನಿಯಲ್ಲಿ ಭಾಗವಹಿಸುವ ಅವಕಾಶ ಪಡೆದಿರುವ ಬಾಲಕಿಯರ ತಂಡವನ್ನು ಅಭಿನಂದಿಸಲು ನಗದು ಬಹುಮಾನ ಘೋಷಿಸಲಾಗಿದೆ ಎಂದು ಎಐಎಫ್‌ಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಭಾರತ 17 ವರ್ಷದೊಳಗಿನ ಬಾಲಕಿಯರ ತಂಡವು ಕಳೆದ ವಾರ ಕಿರ್ಗಿಸ್ತಾನ ಹಾಗೂ ಉಜ್ಬೇಕಿಸ್ತಾನ ತಂಡಗಳನ್ನು ಮಣಿಸಿ, ಜಿ ಗುಂಪಿನಲ್ಲಿ ಅಗ್ರಸ್ಥಾನದೊಂದಿಗೆ ಚೀನಾದಲ್ಲಿ ಮುಂದಿನ ವರ್ಷ ನಡೆಯಲಿರುವ ಟೂರ್ನಿಗೆ ಅರ್ಹತೆ ಸಂಪಾದಿಸಿತ್ತು.

ಭಾರತ ತಂಡವು ಕೊನೆಯಬಾರಿಗೆ 2005ರಲ್ಲಿ ಈ ಟೂರ್ನಿಯಲ್ಲಿ ಭಾಗವಹಿಸಿತ್ತು. ಆದರೆ, ಆ ಸಮಯದಲ್ಲಿ ಕ್ವಾಲಿಫಿಕೇಷನ್ ಸುತ್ತು ಇರಲಿಲ್ಲ.

ಫುಡ್ ಡೆಲಿವರಿ ನೆಪದಲ್ಲಿ ಮನೆಗೆ ನುಗ್ಗಿ ಕೃತ್ಯ

ವೃದ್ಧೆಗೆ ಇರಿದು ನಗದು ದೋಚಿದವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿ ಮನೆಗೆ ಫುಡ್ ಡೆಲಿವರಿ ಹುಡುಗರ ಸೋಗಿನಲ್ಲಿ ನುಗ್ಗಿ ನಗದು ಹಾಗೂ ದಾಖಲೆಗಳನ್ನು ಕಳವು ಮಾಡಿ ಪರಾರಿಯಾಗಿದ್ದ ಮೂವರನ್ನು ಬನಶಂಕರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿಯ ಮಡಿವಾಳಪ್ಪ ಅಲಿಯಾಸ್ ಮ್ಯಾಡಿ (26), ಆತನ ಸೋದರ ಗಣೇಶ್ ಚೌಕಿ(24) ಹಾಗೂ ಸಂಬಂಧಿ ವಿಠಲ್ (24) ಬಂಧಿತ ಆರೋಪಿಗಳು.

ಆರೋಪಿಗಳಿಂದ ₹3.75 ಲಕ್ಷ ನಗದು ಮತ್ತು ದಾಖಲೆಗಳನ್ನು ಜಪ್ತಿ ಮಾಡಲಾಗಿದೆ.

ಸೆ.14ರ ರಾತ್ರಿ ರಿಯಲ್ ಎಸ್ಟೇಟ್ ಉದ್ಯಮಿ ರಾಹುಲ್ ಅವರ ಮನೆಗೆ ಆರೋಪಿಗಳು ನುಗ್ಗಿ ಅವರ ತಾಯಿ ಕನಕಪುಷ್ಪಾ ಅವರಿಗೆ ಚಾಕುವಿನಿಂದ ಇರಿದು ₹8 ಲಕ್ಷ ನಗದು ಹಾಗೂ ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

'ದೂರುದಾರೆ ಕನಕಪುಷ್ಪಾ ಅವರ ಪುತ್ರ ರಾಹುಲ್ ರಿಯಲ್ ಎಸ್ಟೇಟ್ ಉದ್ಯಮಿ ಆಗಿದ್ದು, ನಾಲ್ಕು ತಿಂಗಳ ಹಿಂದೆ ಕಲುಬುರಗಿ ಮೂಲದ ಮಡಿವಾಳಪ್ಪನನ್ನು ಕಾರು ಚಾಲಕನಾಗಿ ಕೆಲಸಕ್ಕೆ ಸೇರಿಸಿಕೊಂಡಿದ್ದರು. ತಮ್ಮ ಮನೆಯ ಕೊಠಡಿಯೊಂದರಲ್ಲಿ ವಾಸ್ತವ್ಯಕ್ಕೆ ಅವಕಾಶ ನೀಡಿದ್ದರು. ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ನೆರವು ನೀಡುವಂತೆ ಮಡಿವಾಳಪ್ಪನಿಗೆ ಸೂಚಿಸಿದ್ದರು. ನೆರವು ನೀಡಿದರೆ ಕಮಿಷನ್ ನೀಡುವುದಾಗಿಯೂ ಭರವಸೆ ನೀಡಿದ್ದರು. ಈ ಮಧ್ಯೆ ವ್ಯವಹಾರವೊಂದರಲ್ಲಿ ಮಡಿವಾಳಪ್ಪ ಅವರು ಹೆಚ್ಚಿನ ಕಮಿಷನ್‌ಗೆ ಬೇಡಿಕೆ ಇಟ್ಟಿದ್ದರು. ಇಬ್ಬರ ಮಧ್ಯೆ ಗಲಾಟೆ ನಡೆದು, ಚಾಲಕ ಕೆಲಸದಿಂದ ಮಡಿವಾಳಪ್ಪನನ್ನು ತೆಗೆದುಹಾಕಿದ್ದರು. ಕೆಲಸದಿಂದ ತೆಗೆದುಹಾಕಿದ್ದಕ್ಕೆ ರಾಹುಲ್ ಅವರ ಮೇಲೆ ಆರೋಪಿ ದ್ವೇಷ ಸಾಧಿಸುತ್ತಿದ್ದ. ಅವರ ಮನೆಯಲ್ಲಿ ದರೋಡೆ ನಡೆಸಲು ಸಂಚು ರೂಪಿಸಿದ್ದ' ಎಂದು ಮೂಲಗಳು ಹೇಳಿವೆ.

ಮಡಿವಾಳಪ್ಪ

ಗಣೇಶ್ ಚೌಕಿ

ವಿಠಲ್

'ಸೆ.14ರಂದು ರಾತ್ರಿ ಕನಕಪುಷ್ಪಾ ಒಬ್ಬರೇ ಇರುವುದನ್ನು ತಿಳಿದಿದ್ದ ಆರೋಪಿಗಳು, ರಾಹುಲ್ ಅವರ ಮನೆ ಬಳಿ ಬಂದಿದ್ದರು. ರಾತ್ರಿ 9.45ರ ಸುಮಾರಿಗೆ ಫುಡ್ ಡೆಲಿವರಿ ಹುಡುಗರ ಸೋಗಿನಲ್ಲಿ ಬಾಗಿಲು ಬಡಿದಿದ್ದರು. ಮನೆಯ ಒಳಗಿದ್ದ ಕನಕಪುಷ್ಪಾ ಅವರು ಯಾರು ಎಂದು ಪ್ರಶ್ನಿಸಿದಾಗ, ಫುಡ್ ಡೆಲಿವರಿ ಹುಡುಗರು ಎಂಬುದಾಗಿ ಆರೋಪಿಗಳು ಹೇಳಿದ್ದರು. ಅದನ್ನು ನಂಬಿದ ಕನಕಪುಷ್ಪಾ ಅವರು ಬಾಗಿಲು ತೆರೆಯುತ್ತಿದ್ದಂತೆಯೇ ಮೂವರು ಒಳಗೆ ನುಗ್ಗಿದ್ದರು. ಬಳಿಕ ಕನಕಪುಷ್ಪಾ ಅವರ ಬಾಯಿಗೆ ಬಟ್ಟೆ ತುರುಕಿ ಹಲ್ಲೆ ನಡೆಸಿದ್ದರು. ಬಳಿಕ ಚಾಕುವಿನಿಂದ ಚುಚ್ಚಿ ಬೀರುವಿನಲ್ಲಿಟ್ಟಿದ್ದ ₹8 ಲಕ್ಷ ನಗದು ಮತ್ತು ರಿಯಲ್ ಎಸ್ಟೇಟ್ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಕಳವು ಮಾಡಿಕೊಂಡು ಪರಾರಿ ಆಗಿದ್ದರು' ಎಂದು ಪೊಲೀಸರು ಹೇಳಿದರು.

ಮೃತಪಟ್ಟಂತೆ ನಟಿಸಿದ್ದ ಕನಕಪುಷ್ಪಾ

ಕನಕಪುಷ್ಪಾ ಅವರ ಬಾಯಿಗೆ ಬಟ್ಟೆ ತುರುಕಿ, ಕುತ್ತಿಗೆಗೆ ಚಾಕು ಇರಿದು ಆರೋಪಿಗಳು ಹಲ್ಲೆ ನಡೆಸಿದ್ದರು. ಈ ವೇಳೆ ಆರೋಪಿ ಮಡಿವಾಳಪ್ಪ 'ವೃದ್ಧೆ ಸತ್ತಿದ್ದಾಳೆಯೇ ಪರಿಶೀಲಿಸಿ; ಬದುಕಿದರೆ ಆಕೆಯೇ ಸಾಕ್ಷಿಯಾಗುತ್ತಾಳೆ' ಎಂದು ಇತರೆ ಆರೋಪಿಗಳಿಗೆ ಹೇಳಿದ್ದ. ಅದನ್ನು ಕನಕಪುಷ್ಪಾ ಅವರು ಕೇಳಿಸಿಕೊಂಡು ಮೃತಪಟ್ಟಂತೆ ನಟಿಸಿದ್ದರು. ಬಳಿಕ, ಆರೋಪಿಗಳು ನಗದು ಮತ್ತು ದಾಖಲೆ ತೆಗೆದುಕೊಂಡು ಹೋಗಿದ್ದರು ಎಂದು ಮೂಲಗಳು ತಿಳಿಸಿವೆ.

ಆರೋಪಿಗಳ ಹೆಸರು ರೌಡಿಪಟ್ಟಿಗೆ

ಪಟಾಕಿ ಕಿಡಿ ತಾಗಿದ ವಿಚಾರಕ್ಕೆ ಗಲಾಟೆ: ತಪ್ಪೊಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಪೊಲೀಸ್ ಠಾಣಾ ವ್ಯಾಪ್ತಿಯ ದೊಡ್ಡರಾಮಣ್ಣ ಮತ್ತು ಚಿಕ್ಕಣ್ಣ ಬಡಾವಣೆ ಮುಖ್ಯರಸ್ತೆಯಲ್ಲಿ ಭಾನುವಾರ ರಾತ್ರಿ ಮಾರಕಾಸ್ತ್ರ ಗಳನ್ನು ಬೀಸಿ, ಇಬ್ಬರ ಮೇಲೆ ಹಲ್ಲೆ ನಡೆಸಿ ಪುಂಡಾಟ ತೋರಿದ್ದ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಐದಕ್ಕೆ ಏರಿದೆ.

ಅಮೀನ್ ಷರೀಫ್ (24), ಸೈಯದ್ ಅಬ್ಬಾಜ್ (20), ಸೈಯದ್ ಖಾದರ್ (21) ಜತೆಗೆ ಕಾನೂನು ಸಂಘರ್ಷಕ್ಕೆ ಒಳಗಾದ ಇಬ್ಬರು ಬಾಲಕರನ್ನೂ ಹೆಣ್ಣೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕರನ್ನು ಬಾಲಮಂದಿರಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಪಟಾಕಿ ಕಿಡಿ ತಾಗಿದ್ದಕ್ಕೆ ಮಾತಿಗೆ ಮಾತು ಬೆಳೆದು ಗಲಾಟೆ ಆಗಿತ್ತು. ಆ ಸಂದರ್ಭದಲ್ಲಿ ಇಬ್ಬರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದೆವು ಎಂಬುದಾಗಿ ಆರೋಪಿಗಳು ವಿಚಾರಣೆ ವೇಳೆ ತಪ್ಪೊಪ್ಪಿ-ಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಅ.19ರಂದು ಬೆಳಿಗ್ಗೆ ಕಿರಣ್ ಅವರು ಮನೆ ಎದುರು ಪಟಾಕಿ ಹೊಡೆಯುವಾಗ ಬೈಕ್‌ನಲ್ಲಿ ಬರುತ್ತಿದ್ದ ಆರೋಪಿ ಒಬ್ಬನಿಗೆ ಪಟಾಕಿ ಕಿಡಿ ತಾಗಿತ್ತು. ಇದರಿಂದ ಅಸಮಾಧಾನ ಗೊಂಡಿದ್ದ ಆರೋಪಿಯೊಬ್ಬ ಕಿರಣ್ ಅವರೊಂದಿಗೆ ವಾಗ್ವಾದ ನಡೆಸಿದ್ದರು. ಬಳಿಕ, ರಾತ್ರಿ 9 ಗಂಟೆ ಸುಮಾರಿಗೆ ಮಾರಕಾಸ್ತ್ರಗಳ ಸಮೇತ ಹುಡುಗರನ್ನು ಕರೆಯಿಸಿಕೊಂಡಿದ್ದರು. ನಂತರ, ಆ ಹುಡುಗರು ಕಿರಣ್ ಮೇಲೆ ಲಾಂಗ್‌ನಿಂದ ಹಲ್ಲೆ ನಡೆಸಿದ್ದರು. ಇದನ್ನು ತಡೆಯಲು ಬಂದಿದ್ದ ಸ್ನೇಹಿತ ಭರತ್ ಮೇಲೆಯೂ ಆರೋಪಿಗಳು ಹಲ್ಲೆ ನಡೆಸಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿಗಳ ವಿರುದ್ಧ ಶಸ್ತ್ರಾಸ್ತ್ರ ಕಾಯ್ದೆ ಅಡಿ ಪ್ರಕರಣ ದಾಖಲಿಸಿ-ಕೊಳ್ಳಲಾಗಿದೆ. ನ್ಯಾಯಾಲಯಕ್ಕೆ ಹಾಜರುಪಡಿಸಿ ಮೂವರು ಆರೋಪಿಗಳನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಆರೋಪಿಗಳಿಗೆ ಮಾರಕಾಸ್ತ್ರಗಳು ಎಲ್ಲಿ ಸಿಕ್ಕಿದವು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಆರೋಪಿಗಳು ರೌಡಿಪಟ್ಟಿಗೆ: ಆರೋಪಿಗಳು ರಸ್ತೆಯಲ್ಲಿ ಮಾರಕಾಸ್ತ್ರ ಬೀಸಿ ಭಯದ ವಾತಾವರಣ ಸೃಷ್ಟಿಸಿದ್ದರು. ಅಲ್ಲದೇ ಸಮಾಜದ ಸ್ವಾಸ್ಥ್ಯ ಹಾಳು ಮಾಡಿದ್ದಾರೆ. ಬಂಧಿತರ ಪೈಕಿ ಅಮೀನ್ ಷರೀಫ್, ಸೈಯದ್ ಅಬ್ಬಾಜ್, ಸೈಯದ್ ಖಾದರ್ ಅವರನ್ನು ರೌಡಿಪಟ್ಟಿಗೆ ಸೇರಿಸಲಾಗುವುದು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕೆರೆಗೆ ಬಿದ್ದು ಒಂದೇ ಮನೆಯ ಮೂವರ ಸಾವು

ಹುಳಿಯಾರು (ತುಮಕೂರು ಜಿಲ್ಲೆ): ಸಮೀಪದ ಯರೇಕಟ್ಟೆ ಗ್ರಾಮದ ಕೆರೆ ಬಳಿ ಬಹಿರ್ದೆಸೆಗೆ ತೆರಳಿದ್ದ ವೇಳೆ ತಂದೆ, ಮಗಳು ಹಾಗೂ ಅಣ್ಣನ ಮೊಮ್ಮಗಳು ಕೆರೆಗೆ ಬಿದ್ದು ಮೃತಪಟ್ಟಿರುವ ಘಟನೆ ಮಂಗಳವಾರ ನಡೆದಿದೆ. ಯರೇಕಟ್ಟೆ ಗ್ರಾಮದ ವೆಂಕಟೇಶ್ (47), ಮಗಳು ಶ್ರಾವ್ಯ (12) ಹಾಗೂ ವೆಂಕಟೇಶ್ ಅವರ ಅಣ್ಣನ ಮೊಮ್ಮಗಳು ಪುಣ್ಯ (11) ಮೃತರು.

ಸಂಜೆ 6 ಗಂಟೆ ಸಮಯದಲ್ಲಿ ಗ್ರಾಮದ ಬಳಿ ಕೆರೆ ಕಡೆ ಬಹಿರ್ದೆಸೆಗೆ ಶ್ರಾವ್ಯ, ಪುಣ್ಯ ಸೇರಿದಂತೆ ಮೂವರು ಹೋಗಿದ್ದಾರೆ. ಕೆರೆಯಲ್ಲಿ ನೀರು ಮುಟ್ಟಲು ಹೋಗಿ ಶ್ರಾವ್ಯ ಹಾಗೂ ಪುಣ್ಯ ಕಾಲು ಜಾರಿ ಬಿದ್ದಿದ್ದಾರೆ.

ರಕ್ಷಣೆಗೆ ವೆಂಕಟೇಶ್ ಹಾಗೂ ಮಂಜುನಾಥ್ ಹೋಗಿದ್ದರು. ಈ ವೇಳೆ ವೆಂಕಟೇಶ್ ಕಾಲು ಜಾರಿ ಕೆರೆಗೆ ಬಿದ್ದಿದ್ದಾರೆ. ವೆಂಕಟೇಶ್ ಹಾಗೂ ಶ್ರಾವ್ಯ ಮುಳುಗಿ ಮೃತಪಟ್ಟರೆ, ಪುಣ್ಯ ಹುಳಿಯಾರು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ಕೊಠಡಿಯನ್ನೇ ಕ್ಲಿನಿಕ್ ಆಗಿ ಬದಲಾವಣೆ ಮಾಡಿಕೊಂಡಿದ್ದ ಆರೋಪಿ

ವೈದ್ಯನಿಂದಲೇ ಅನಸ್ತೇಶಿಯಾ ಖರೀದಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈದ್ಯೆ ಕೃತಿಕಾ ರೆಡ್ಡಿ(28) ಅವರ ಕೊಲೆ ಪ್ರಕರಣದ ಆರೋಪಿ ಡಾ. ಜಿ.ಎಸ್. ಮಹೇಂದ್ರ ರೆಡ್ಡಿ ಅವರ ವಿಚಾರಣೆ ತೀವ್ರಗೊಳಿಸಿರುವ ಹೆಬ್ಬಗೋಡಿ ಠಾಣೆಯ ಪೊಲೀಸರು, ಆರೋಪಿಯ ಮನೆಯಲ್ಲಿ ಸ್ಥಳ ಮಹಜರು ನಡೆಸಿದ್ದಾರೆ.

ಮಹಜರು ಪ್ರಕ್ರಿಯೆ ವೇಳೆ ಕೃತಿಕಾ ರೆಡ್ಡಿ ಅವರಿದ್ದ ಕೊಠಡಿಯಲ್ಲಿ ರಾಶಿ ರಾಶಿ ಔಷಧಗಳು ಪತ್ತೆಯಾಗಿವೆ. ಅವುಗಳನ್ನು ಪರಿಶೀಲನೆಗೆ ಒಳಪಡಿಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅನಾರೋಗ್ಯದಿಂದ ಬಳಲುತ್ತಿದ್ದ ಪತ್ನಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿ 'ಸಹಜ ಸಾವು' ಎಂಬುದಾಗಿ ಮಹೇಂದ್ರ ರೆಡ್ಡಿ ಅವರು ಬಿಂಬಿಸಿದ್ದರು. ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ಪರೀಕ್ಷೆಯ ವೇಳೆ ಕೃತಿಕಾ ರೆಡ್ಡಿ ಅವರ ದೇಹದಲ್ಲಿ ಅನಸ್ತೇಶಿಯಾ ಮಾದರಿ ಇರುವುದು ಪತ್ತೆಯಾಗಿತ್ತು. ಬಳಿಕ, ಕೃತಿಕಾ ಅವರ ತಂದೆ ಪೊಲೀಸರಿಗೆ ದೂರು ನೀಡಿದ್ದರು. ದೂರು ಆಧರಿಸಿ ಪತಿಯನ್ನು ಬಂಧಿಸಿ, ತಮ್ಮ ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

ಕೊಲೆಯಾದ ಡಾ.ಕೃತಿಕಾ ರೆಡ್ಡಿ ಹಾಗೂ ಆರೋಪಿ ಜಿ.ಎಸ್.ಮಹೇಂದ್ರ ರೆಡ್ಡಿ

'ಕೃತಿಕಾ ಅವರಿಗೆ ಅನಸ್ತೇಶಿಯಾ ನೀಡಿ ಕೊಲೆ ಮಾಡಿರುವುದಾಗಿ ಆರೋಪಿ ತಪ್ಪೊಪ್ಪಿಕೊಂಡಿದ್ದಾರೆ. ತಾನೇ ಮೆಡಿಕಲ್ ಶಾಪ್‌ಗೆ ತೆರಳಿ ಔಷಧ ತಂದಿರುವುದಾಗಿಯೂ ಆರೋಪಿ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಅನಸ್ತೇಶಿಯಾ ಕೇಳಿದಾಗ ಮೆಡಿಕಲ್ ಶಾಪ್‌ನವರು ಕೊಡಲು ನಿರಾಕರಿಸಿದ್ದರು. 'ನಾನು ಸರ್ಜನ್' ಎಂದು ಗುರುತಿನ ಚೀಟಿ ತೋರಿಸಿದ್ದರು. 'ಚಿಕಿತ್ಸೆಗೆ ಅನಸ್ತೇಶಿಯಾ ಬೇಕಾಗಿದೆ' ಎಂಬುದಾಗಿಯೂ ಮೆಡಿಕಲ್ ಶಾಪ್‌ನವರ ಬಳಿ ನಂಬಿಸಿದ್ದರು. ಅದನ್ನು ನಂಬಿದ್ದ ಮೆಡಿಕಲ್ ಶಾಪ್‌ವೊಂದರ ಸಿಬ್ಬಂದಿ, ಮಹೇಂದ್ರ ರೆಡ್ಡಿ ಕೇಳಿದ್ದ ಔಷಧವನ್ನು ನೀಡಿದ್ದರು' ಎಂಬುದು ಗೊತ್ತಾಗಿದೆ.

'ಮೆಡಿಕಲ್ ಶಾಪ್ ಸಿಬ್ಬಂದಿಯಿಂದ ಮಾಹಿತಿ ಪಡೆದುಕೊಳ್ಳಲಾಗಿದೆ. ಅವರ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಔಷಧವನ್ನು ಮನೆಗೆ ತಂದು ಐ.ವಿ ಮೂಲಕ ಅನಸ್ತೇಶಿಯಾ ನೀಡಿದ್ದರು. ಅನಸ್ತೇಶಿಯಾ ನೀಡಿದ ಬಳಿಕ ಕೃತಿಕಾ ಅವರು ನಿದ್ರೆಗೆ ಜಾರಿದ್ದರು. ಬಳಿಕ ಕೋಮಾಸ್ಥಿತಿಗೆ ತಲುಪಿ, ಕೃತಿಕಾ ಅವರು ಮೃತಪಟ್ಟಿದ್ದರು. ಅಂದು ರಾತ್ರಿ ಅದೇ ಕೊಠಡಿಯಲ್ಲೇ ಆರೋಪಿ ಸಹ ಮಲಗಿದ್ದರು' ಎಂದು ಮೂಲಗಳು ತಿಳಿಸಿವೆ.

'ಕೃತಿಕಾ ಅವರ ಕೊಠಡಿಯನ್ನು ಆರೋಪಿ ಕ್ಲಿನಿಕ್ ರೀತಿ ಬದಲಾಯಿಸಿಕೊಂಡಿದ್ದರು. ಋತುಚಕ್ರದ ಸಮಯದಲ್ಲೂ ಕೃತಿಕಾ ಅವರಿಗೆ ಡ್ರಿಪ್ ಹಾಕಿಕೊಳ್ಳಲು ಮಹೇಂದ್ರ ರೆಡ್ಡಿ ಒತ್ತಾಯಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

JYOTI NIVAS COLLEGE AUTONOMOUS
Koramangala, Bangalore -560 095
Ph : 25530137 Fax : 2553 3886
www.jyotinivas.org
Email : info@jyotinivas.org
REQUIRES
Assistant Professors
in Psychology, Computer Science, Mathematics and French
Qualification : Ph.D from a reputed University.
Preference for Reserved Category.
Apply to the Principal Jyoti Nivas College Autonomous
info@jyotinivas.org on or before 25.10.2025

सेन्ट्रल मैन्युफैक्चरिंग टेक्नोलॉजि इंस्टिट्यूट cmti
CENTRAL MANUFACTURING TECHNOLOGY INSTITUTE
Tumkur Road, Bengaluru – 560 022
(An Autonomous R&D Institute under Ministry of Heavy Industries, Govt. of India)
Advt No: 05/2025
Recruitment on Contract Basis through Walk-In Interview
The CMTI is a premier Institute of National repute, devoted to Research in various aspects of Applied Manufacturing Science. CMTI is executing various sponsored projects & is looking for the following candidates to work in the projects.

Sl No.	Name of the Post	Stipend (per Month)	No. of Posts
01.	Junior Research Fellow	Rs. 37,000/- + HRA	02
02.	Project Associate-I*	Rs. 25,000/- + HRA	25
03	Project Assistant – II	Rs. 20,000/- + HRA	05
04	Project Assistant – I	Rs. 18,000/- + HRA	01
05	Data Entry Operator cum Assistant	Rs. 20,000/- + HRA	02

*The Stipend varies based on the experience.
For Interview Dates: Please refer to the Advertisement in the Institute Website.
The engagement is purely temporary on Contractual basis OR Co-Terminus with the project. Interested and those who are eligible may register their names along with the application (in the format) duly filled between 09:00 to 09:30 Hrs on the respective dates mentioned in CMTI Website at CMTI.
Other relevant details about the posts, nature of jobs, etc., are available in the Institute website:www.cmti.res.in. Any amendment to this Advertisement will be notified in the Institute Website.
Sd/- (Chief Administrative Officer)

Commerical

HAL And Around

PRIME COMMERCIAL Plot for Sale- HAL- Whitefield Main Road Vacant commercial plot measuring 8,769 sqft, Strategic Location: High- footfall corridor, close to tech parks, retail hubs, and premium residential zones Ideal for: Showrooms, office complexes, nursing home, boutique hotels, flagship retail Clear Title & Ready for Development Excellent Road Frontage & Access A rare opportunity to own a landmark site in one of Bengaluru's fastest- growing commercial belts. Contact Kartik: +91 9900020184

Gopalan Foundation is hiring trained and experienced Teachers
GOPALAN NATIONAL SCHOOL (NORTH)
YELAHANKA
English, Kannada, Hindi, Math, Science and Social Science.
Qualifications:
Middle School - TGT & B. Ed.
Secondary School - PGT & B. Ed.
Experience:
Minimum 5 years in a CBSE School
hr@gopalancolleges.com

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Sites

Jigani

KHB Sites in Surya City Near Jigani
STRRA & BMRDA APPROVED PLOTS
Near Bannerghatta Road Akhata & Ekhata Plots Ready for Registration SBI & Nationalised Bank Loan (Land Owner Share) **Call : 74115 54412**

BUSINESS

Business to Business

Finance

WE ARRANGE Mortgage, Purchase Construction and Business Loan from Scheduled Bank. Mrs Jyothi- 8971132289/ 9380509779.

PERSONAL

Change of Name

I SHILPA S W/o Sri Purushotham S aged about 38 years residing at 43 near Govt. High School Melenallasandra Jigani Bangalore 560105 have changed my daughter's Name HARISMITHA. P to HARISMITHA .P KASHYAP vide affidavit dated 17/10/2025 sworn before notary Devika kumari A Bangalore.

I SHILPA S W/o Sri Purushotham S aged about 38 years residing at 43 near Govt. High School Melenallasandra Jigani Bangalore 560105 have changed my Son's Name HARSHITH. P to HARSHITH .P KASHYAP vide affidavit dated 17/10/2025 sworn before notary Devika kumari A Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

PUBLIC NOTICE

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನನ್ನ ಕ್ಲೈಂಟ್ ಅವರು ನಂ.51, ದ್ವಾರಕಾಮಯಿ, 3ನೆ ಅಡ್ಡರಸ್ತೆ, ಮಂಜುನಾಥನಗರ, ಕನಕಪುರ ಮುಖ್ಯರಸ್ತೆ, ರಘುವನಹಳ್ಳಿ, ಬೆಂಗಳೂರು–560062 ವಿಳಾಸದಲ್ಲಿ ವಾಸವಾಗಿರುವ **ಶ್ರೀ ಎ.ಎನ್. ಪ್ರಕಾಶ್, S/o** ಲೇಟ್ ನಾಗರಾಜು, ವಯಸ್ಸು 54 ವರ್ಷಗಳು ಎಂಬ ಮಾಲೀಕರಿಂದ ಈ ಕೆಳಗೆ ನೀಡಲಾಗಿರುವ ಶೆಡ್ಯೂಲ್‌ನಲ್ಲಿರುವ ಅಚರ ಆಸ್ತಿಯನ್ನು ಖರೀದಿಸಲು ಒಪ್ಪಂದ ಮಾಡಿಕೊಂಡಿದ್ದಾರೆ. ಮೇಲೆ ತಿಳಿಸಿದ ಆಸ್ತಿಯಲ್ಲಿ ಯಾವುದೇ ಕ್ಲೇಮು/ಹಕ್ಕುಗಳು/ಆಸಕ್ತಿ ಅಥವಾ ಮೇಲೆ ಕೆಳಗೆ ತಿಳಿಸಿರುವ ಆಸ್ತಿಯ ಮೇಲಿನ ಮಾರಾಟಕ್ಕೆ ಯಾವುದೇ ಆಕ್ಷೇಪಣೆ ಇರುವ ಯಾವುದೇ ವ್ಯಕ್ತಿ/ವ್ಯಕ್ತಿಗಳು ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ **15 ದಿನಗಳೊಳಗೆ** ಈ ಕೆಳಗೆ ಸಹಿ ಮಾಡಿರುವವರ ವಿಳಾಸಕ್ಕೆ ಬೆಂಬಲ ದಾಖಲೆಗಳ ಸಮೇತ ಲಿಖಿತ ರೂಪದಲ್ಲಿ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು ಮತ್ತು ಇದಕ್ಕೆ ವಿಫಲವಾದಲ್ಲಿ ಮೇಲೆ ಕೆಳಗೆ ತಿಳಿಸಿರುವ ಆಸ್ತಿಗೆ ಯಾವುದೇ ಕ್ಲೇಮುಗಳಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಖರೀದಿಯನ್ನು ಮುಂದುವರಿಸುವಂತೆ ಸೂಚಿಸಲಾಗುತ್ತದೆ.

ಶೆಡ್ಯೂಲ್

ಅಮ್ಮನಪುರ ಗ್ರಾಮ, ಕೈಲಂಚನ–1 ಹೋಬಳಿ, ರಾಮನಗರ ತಾಲೂಕು ಮತ್ತು ಜಿಲ್ಲೆಯಲ್ಲಿರುವ ಕೃಷಿ ಭೂಮಿಯ ಎಲ್ಲಾ ಮತ್ತು ಯಾವುದೇ ಭಾಗ ಹಾಗೂ ಕೆಳಗೆ ತಿಳಿಸಲಾಗಿರುವ ಭೂ ವಿವರಗಳು:–

ಸರ್ವೆ #	ವ್ಯಾಪ್ತಿ	ಗಡಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
17	2 ಎಕರೆ 13 ಗುಂಟೆಗಳು	ದಾಸಪ್ಪ ಅವರಿಗೆ ಸೇರಿದ ಭೂಮಿ	ಎ.ಎನ್. ಪ್ರಕಾಶ್, ಸರ್ವಮಂಗಳಮ್ಮ ಮತ್ತು ಶಿವಣ್ಣ ಅವರಿಗೆ ಸೇರಿದ ಭೂಮಿ	ಸರ್ಕಾರಿ ಭೂಮಿ	ಸರ್ವಮಂಗಳಮ್ಮ ಅವರಿಗೆ ಸೇರಿದ ಭೂಮಿ
18/2 (ಹಳೆ ಸ.ಸಂ.18)	1 ಎಕರೆ 20 ಗುಂಟೆಗಳು	ಹೊಂಬಾಳಯ್ಯ ಅವರಿಗೆ ಸೇರಿದ ಭೂಮಿ	ಲಿಂಗಯ್ಯ ಮತ್ತು ಚಿಕ್ಕಕುನ್ನಯ್ಯ ಅವರಿಗೆ ಸೇರಿದ ಭೂಮಿ	ಎ.ಎನ್. ಪ್ರಕಾಶ್ ಅವರಿಗೆ ಸೇರಿದ ಭೂಮಿ	ದಾಸೇಗೌಡ ಅವರಿಗೆ ಸೇರಿದ ಭೂಮಿ
18/4 (ಹಳೆ ಸ.ಸಂ..18, ನಂತರ 18/3)	1 ಎಕರೆ 20 ಗುಂಟೆಗಳು	ಹೊಂಬಾಳಯ್ಯ ಮತ್ತು ಸರ್ವಮಂಗಳ ಅವರಿಗೆ ಸೇರಿದ ಭೂಮಿ	ಲಿಂಗಯ್ಯ ಮತ್ತು ಚಿಕ್ಕಕುನ್ನಯ್ಯ ಅವರಿಗೆ ಸೇರಿದ ಭೂಮಿ	ಎ.ಎನ್. ಪ್ರಕಾಶ್ ಅವರಿಗೆ ಸೇರಿದ ಭೂಮಿ	ದಾಸೇಗೌಡ ಅವರಿಗೆ ಸೇರಿದ ಭೂಮಿ

ಶ್ರೀ ಕೆ. ಬಿ. ತಿಪ್ಪೇಸ್ವಾಮಿ, ವಕೀಲರು,
#22, ಎಲ್‌ಎಸ್–25, 1ನೇ ಮಹಡಿ, ಎಸ್‌ಎಸ್‌ಬಿ ಮಟ್ಟದ ಕಾಂಪ್ಲೆಕ್ಸ್
ಟ್ಯಾಂಕ್ ಬಂಡ್ ರಸ್ತೆ, ಬೆಂಗಳೂರು–560009.
ಸ್ಥಳ: ಬೆಂಗಳೂರು
ದಿನಾಂಕ: 22.10.2025

The BIG Xperience

HARSHA
Happiness. Redefined.

ಹಬ್ಬದ ಸಂಭ್ರಮಕ್ಕೆ ಭರಪೂರ ಕೊಡುಗೆಗಳು!

ಇಂದೇ ಭೇಟಿ ನೀಡಿ



ರೆಫ್ರಿಜರೇಟರ್, ವಾಶಿಂಗ್ ಮಶಿನ್, ಡಿಶ್ ವಾಶರ್, ಪ್ಯಾನೆಲ್ ಟಿವಿ & ಏಸಿ ಕ್ಯಾಶ್‌ಬ್ಯಾಕ್ ₹30,000* ವರೆಗೆ	ಕಾಂಬಿ ಕೊಡುಗೆಯೊಂದಿಗೆ ಗಿಫ್ಟ್ ವೋಚರ್ ₹25,000* ಮೌಲ್ಯದ	ವಾಶಿಂಗ್ ಮಶಿನ್, ರೆಫ್ರಿಜರೇಟರ್, ಪ್ಯಾನೆಲ್ ಟಿವಿ & ಏಸಿ ಒಂದು ಇಎಂಐ ಉಚಿತ*
ಸ್ಮಾರ್ಟ್‌ಫೋನ್ ಕ್ಯಾಶ್‌ಬ್ಯಾಕ್ ₹5,000* ವರೆಗೆ	ಲ್ಯಾಪ್‌ಟಾಪ್ ಕ್ಯಾಶ್‌ಬ್ಯಾಕ್ ₹5,000* ವರೆಗೆ	ರೆಫ್ರಿಜರೇಟರ್, ಪ್ಯಾನೆಲ್ ಟಿವಿ & ಏಸಿ ಫೆಸ್ಟಿವ್ ಅಪ್‌ಗ್ರೇಡ್ ಬೋನಸ್ ₹10,000* ವರೆಗೆ

FESTIVAL OF HAPPINESS

ವಾಶಿಂಗ್ ಮಶಿನ್, ರೆಫ್ರಿಜರೇಟರ್, ಪ್ಯಾನೆಲ್ ಟಿವಿ & ಏಸಿ
ಇನ್‌ಸ್ಟಂಟ್ ಕ್ಯಾಶ್‌ಬ್ಯಾಕ್
₹26,000* ವರೆಗೆ

BAJAJ FINSERV — Cashback Offer up to ₹15,000*
Canara Bank — Flat 7.5% OFF upto ₹2,000* on Credit Card EMI & Non-EMI transaction
HDB Financial Services — Cashback Offer up to ₹25,000*
HDFC BANK — Festive Treats: Instant Discount upto ₹2,500* with HDFC Bank Debit/Credit Card EMI
IDFC FIRST Bank — Cashback Offer up to ₹30,000*
ICICI Bank — Flat 7.5% OFF upto ₹3,000* on Credit Card EMI & Debit Card EMI
SBI card — Instant Discount upto ₹12,000* on EMI transactions

HARSHA DEEPAVALI BAZAAR
11th Oct. - 3rd Nov. 2025

Conditions apply. Offers applicable on select models and brands. Models shown are indicative. Offer valid till stocks last. Finance at the sole discretion of the financier. Finance available only within city limits.

BLUE STAR | BOSCH | Electrolux | Godrej | Haier | Hisense | IFB | LG | LIEBHERR | LLOYD | MITSUBISHI ELECTRIC | Panasonic | SAMSUNG | SONY | TCL | VOLTAS | Whirlpool
ASUS | DELL | hp | lenovo | G Pixel | mi | motorola | NOKIA | NOTHING | ONEPLUS | oppo | realme | SAMSUNG | vivo

ಜವಹರಲಾಲ್ ನೆಹರು ರಸ್ತೆ, ರಾಜರಾಜೇಶ್ವರಿ ನಗರ, ಬೆಂಗಳೂರು -98. | ಜ್ಞಾನ ಗಂಗಾ ನಗರ, ಜ್ಞಾನಭಾರತಿ ಪೋಸ್ಟ್, ಬೆಂಗಳೂರು-56.
eHarsha.India | digital_harsha | www.harshaindia.com



ವಿಷವನ್ನು ಸೋಸೋಣ ಬನ್ನಿ!

ರಾಸಾಯನಿಕಗಳು ದೇಹದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ. ಇವು ಕುಡಿಯುವ ನೀರು, ಹಸುವಿನ ಹಾಲು, ತಾಯಿಯ ಹಾಲು ಮುಂತಾದವುಗಳ ಮೂಲಕ ನಮ್ಮೆಲ್ಲರ ದೇಹಗಳನ್ನು ಸೇರುತ್ತಿವೆ. ನೀರನ್ನು ವಿಷವಸ್ತುಗಳಿಂದ ಮುಕ್ತಗೊಳಿಸಲು ಹೊಸ ತಂತ್ರಜ್ಞಾನವೊಂದನ್ನು ವಿಜ್ಞಾನಿಗಳು ಅನ್ವೇಷಿಸಿದ್ದಾರೆ

• ಕೊಳ್ಳೇಗಾಲ ಶರ್ಮ

ಪರಿಸರ ಸಮಸ್ಯೆಗಳಲ್ಲಿ ಕುಡಿಯುವ ನೀರಿನ ಮಾಲಿನ್ಯ ಹಾಗೂ ಕೊಳಚೆ ನೀರಿನ ಸಂಸ್ಕರಣೆ ಪ್ರಮುಖವಾದವು. ನದಿ, ಕೊಳ, ಕೆರೆ, ಸಾಗರಗಳಲ್ಲದೆ, ಅಂತರ್ಜಲಮೂಲಗಳೂ ಮಲಿನವಾಗಿವೆ. ಈ ಮಾಲಿನ್ಯಗಳಲ್ಲಿ 'ಪರ್‌ಫ್ಲೂರೋಆಲ್ಕೈಲ್'ನ ಮಾಲಿನ್ಯವೂ ಒಂದು. ನಾವು ನಿತ್ಯವೂ ಬಳಸುವ ಹಲವಾರು ವಸ್ತುಗಳಿಂದ ಸೋರುವ ಈ ಬಗೆಯ ರಾಸಾಯನಿಕಗಳು ಬಡಪೆಟ್ಟಿಗೆ ನಾಶವಾಗುವುದಿಲ್ಲ. ಇಂತಹ ಶಾಶ್ವತ ಮಲಿನಕಗಳನ್ನೂ ನೀರಿನಿಂದ ಹೊರ ತೆಗೆದು ಶುಚಿಗೊಳಿಸುವ ಹೊಸ ವಿಧಾನವೊಂದನ್ನು ದಕ್ಷಿಣ ಕೊರಿಯಾದ ಕೊರಿಯಾ ಅಡ್ವಾನ್ಸಡ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಆ್ಯಂಡ್ ಟೆಕ್ನಾಲಜಿ ಸಂಸ್ಥೆಯ ಸೋಟೆ ಕಾಂಗ್ ಮತ್ತು ಸಂಗಡಿಗರು ರೂಪಿಸಿದ್ದಾರಂತೆ. ನೀರು ಹಾಗೂ ಕೊಳಚೆ ನೀರಿನಲ್ಲಿ ಇರುವ ಪರ್‌ಫ್ಲೂರೋಆಲ್ಕೈಲ್ ಹಾಗೂ ಪಾಲಿಫ್ಲೂರೋಆಲ್ಕೈಲ್ ರಾಸಾಯನಿಕಗಳನ್ನು ಸಾವಿರ ಪಟ್ಟು ಹೆಚ್ಚು ಹಾಗೂ ನೂರು ಪಟ್ಟು ವೇಗವಾಗಿ ಈ ವಿಧಾನ ಶುಚಿಗೊಳಿಸಲಿದೆ.

'ಪರ್‌ಫ್ಲೂರೋಆಲ್ಕೈಲ್' ಹಾಗೂ 'ಪಾಲಿಫ್ಲೂರೋಆಲ್ಕೈಲ್' ಎನ್ನುವವು ವಿಶಿಷ್ಟ ರಾಸಾಯನಿಕಗಳು. 'ಪಿಎಫ್ಎ' ಎಂದು ಚುಟುಕಾಗಿ ಕರೆಸಿಕೊಳ್ಳುವ ಇವು ಫ್ಲೂರೀನಿನ ಜೊತೆಗೆ ಇಥಿಲೀನಿನಂತಹ ಅಣುಗಳು ಬೆಸೆದುಕೊಂಡು ರೂಪುಗೊಂಡ ರಾಸಾಯನಿಕಗಳ ವರ್ಗ. ಈ ವರ್ಗದಲ್ಲಿರುವ ರಾಸಾಯನಿಕಗಳು ನೀರಿನಂತಹ ದ್ರವಗಳಿಂದ, ಗಟ್ಟಿಯಾದ ಅಂಟುಗಳವರೆಗೂ ಹಲವು ರೀತಿಯಲ್ಲಿ ರೂಪುಗೊಳ್ಳಬಲ್ಲವು. ನಾವು ನಿತ್ಯವೂ ಬಳಸುವ ಹಲವಾರು ವಸ್ತುಗಳಲ್ಲಿ ಇವು ಬೆರೆತಿರುತ್ತವೆ. ಉದಾಹರಣೆಗೆ, ಅಡುಗೆಮನೆಯಲ್ಲಿ ಬಳಸುವ ನಾನ್ ಸ್ಟಿಕ್ ಪಾತ್ರೆಗಳಿಗೆ ಹಚ್ಚಿರುವ ನಯವಾದ ಲೇಪಗಳಲ್ಲಿ, ಚಾಟ್ ಅಂಗಡಿಗಳಿಂದ ತರುವ ತಿನಿಸುಗಳನ್ನು ಪ್ಯಾಕ್ ಮಾಡಿದ ಪೇಪರ್ ಪ್ಯಾಕಿನ ಒಳಭಾಗದಲ್ಲಿನ ತೇವ ಅಂಟದ ನಯವಾದ ಲೇಪಗಳಲ್ಲಿ, ಕಲೆಗಳು ಹತ್ತದಂತಹ ನೆಲಹಾಸು ಕಂಬಳಿ, ಉಡುಪುಗಳಲ್ಲಿ, ನೀರಿನ ಕೊಳವೆಗಳನ್ನು ಅಂಟಿಸುವ ಗೋಂದುಗಳಲ್ಲಿ, ಬೆಂಕಿಯನ್ನು ಆರಿಸುವ ಪೋಮುಗಳಲ್ಲಿ, ಎಲೆಕ್ಟ್ರಾನಿಕ್ ಸಾಧನಗಳಲ್ಲಿ ಈ ವರ್ಗದ ರಾಸಾಯನಿಕಗಳು ಬಳಕೆಯಾಗುತ್ತವೆ.

ಇಷ್ಟೊಂದು ಉಪಯುಕ್ತವಾಗಿರುವ ಈ ರಾಸಾಯನಿಕಗಳಲ್ಲೊಂದು ದೋಷವಿದೆ. ಇವು ಒಮ್ಮೆ ನೀರು–ಮಣ್ಣುಗಳನ್ನು ಸೇರಿದರೆ ಹಾಗೆಯೇ ಉಳಿದುಬಿಡುತ್ತವೆ. ಬೇರೆ ವಸ್ತುಗಳು ಬಿಸಿಲು, ನೀರು, ಆಕ್ಸಿಜನ್‌ನಿಂದಾಗಿ ಶಿಥಿಲವಾಗಬಹುದು. ಆದರೆ ಪರ್‌ಫ್ಲೂರೋಆಲ್ಕೈಗಳು ಹಾಗಲ್ಲ. ಇವು ಸುಲಭವಾಗಿ ಬೇರೆ ರಾಸಾಯನಿಗಳ ಜೊತೆಗೆ ಪ್ರತಿಕ್ರಿಯಿಸುವುದಿಲ್ಲ, ಕೊಳೆಯುವುದಿಲ್ಲ, ಸುಟ್ಟರೆ ಬೂದಿಯೂ ಆಗುವುದಿಲ್ಲ. ಹೀಗಾಗಿ ನಿತ್ಯ ಬಳಸುವ ಎಲ್ಲ ವಸ್ತುಗಳಿಂದಲೂ ಸ್ವಲ್ಪ, ಸ್ವಲ್ಪವೇ ಸೋರಿ ಎಲ್ಲ ಜಲಮೂಲಗಳಲ್ಲೂ, ಆಹಾರಮೂಲಗಳಲ್ಲಿಯೂ ಬೆರೆತಿರುತ್ತವೆ.

ಮಾಲಿನ್ಯವೊಂದೇ ಸಮಸ್ಯೆ ಅಲ್ಲ. ಮಾಲಿನ್ಯದಿಂದ ಹೊರಸೂಸುವ ರಾಸಾಯನಿಕಗಳು ದೇಹದ ಮೇಲೆ ದುಷ್ಪರಿಣಾಮಗಳನ್ನು ಬೀರುತ್ತವೆ ಎನ್ನುವುದು ಆತಂಕದ ವಿಷಯ. ಪರ್‌ಫ್ಲೂರೋಆಲ್ಕೈಲುಗಳ ಸೇವನೆಯಿಂದಾಗಿ ಲಿವರ್‌ನ ಚಟುವಟಿಕೆಗಳಲ್ಲಿ ವ್ಯತ್ಯಾಸ ಉಂಟಾಗಬಹುದು. ದೇಹದ ರೋಗನಿರೋಧಕ ಶಕ್ತಿ ಕುಗ್ಗಬಹುದು. ಕೆಲವು ಕ್ಯಾನ್ಸರ್‌ಗಳು ಕೂಡ ಉಂಟಾಗುತ್ತವೆಂದು ಸುಳಿವುಗಳು ತಿಳಿಸಿವೆ. ಅಮೆರಿಕದಲ್ಲಿ ಹತ್ತು ವರ್ಷಗಳ ಹಿಂದೆ ನಡೆದ ಅಧ್ಯಯನವೊಂದು, ಒಂದು ಬಗೆಯ ಲ್ಯೂಕೀಮಿಯ ಹಾಗೂ ವಿಲ್ಮ್ಸ್ ಟ್ಯೂಮರ್ ಎನ್ನುವ ಕ್ಯಾನ್ಸರಿಗೆ ತುತ್ತಾಗಿದ್ದ ಎಳೆಯರ ತಾಯಂದಿರು ಬಸುರಾಗಿದ್ದಾಗ ಪರ್‌ಫ್ಲೂರೋಆಕ್ಟೇನ್ ಸಲ್ಫೊನಿಕ್ ಆಮ್ಲ ಹಾಗೂ ಪರ್‌ಫ್ಲೂರೋಆಕ್ಟನಾಯಿಕ್ ಆಮ್ಲಗಳ ಪ್ರಮಾಣ ಹೆಚ್ಚಿದ್ದ ನೀರನ್ನು ಸೇವಿಸಿದ್ದರು ಎಂದು ತಿಳಿಸಿದೆ.

ಅತ್ಯಲ್ಪ ಪ್ರಮಾಣದಲ್ಲಿಯೂ ಇಂತಹ ರಾಸಾಯನಿಕಗಳ ಸೇವನೆ ಅಪಾಯಕಾರಿಯಾಗಿದ್ದರಿಂದ ಕುಡಿಯುವ ನೀರಿನಲ್ಲಿ ಅವುಗಳ ಪ್ರಮಾಣವನ್ನು ಮಿತಿಗೊಳಿಸಲಾಗಿದೆ. ಪಿಎಫ್ಎ ಇರುವಂತಹ ನೀರನ್ನು ಶುಚಿಗೊಳಿಸಿ ಸರಬರಾಜು ಮಾಡಬೇಕೆನ್ನುವ ನಿಯಮವೂ ಇದೆ. ಈ ರಾಸಾಯನಿಕಗಳು ನೀರಿನ ಮೂಲಕ ಹಸುವಿನ ಹಾಲು, ತಾಯಿಯ ಹಾಲಿನಲ್ಲಿಯೂ ಸೇರಿಕೊಳ್ಳುತ್ತವೆ. ಮಕ್ಕಳು ಹಾಗೂ ದೊಡ್ಡವರ ರಕ್ತದಲ್ಲಿಯೂ ಇವುಗಳನ್ನು ಪತ್ತೆ ಮಾಡಲಾಗಿದೆ.

ಕುಡಿಯುವ ನೀರನ್ನು ಈ ವಿಷವಸ್ತುಗಳಿಂದ ಮುಕ್ತಗೊಳಿಸಲು ಹಲವು ವಿಧಾನಗಳನ್ನು ಬಳಸಲಾಗುತ್ತಿದೆ. ಪ್ರಮುಖವಾಗಿ ಆಕ್ಟಿವೇಟೆಡ್ ಕಾರ್ಬನ್ ಅಥವಾ ಅತಿ ಕ್ರಿಯಾಶೀಲವಾದ ಇದ್ದಿಲಿನಿಂದ ಅವನ್ನು ಪ್ರತ್ಯೇಕಿಸಬಹುದು. ಅಥವಾ ರಿವರ್ಸ್ ಆಸ್ಮಾಸಿಸ್ ತಂತ್ರದ ಮೂಲಕ, ಅತಿ ಸೂಕ್ಷ್ಮವಾದ ಕೃತಕ ಪೊರೆಗಳನ್ನು ಬಳಸಿ ನೀರನ್ನು ಶುಚಿಗೊಳಿಸಬಹುದು. ಆದರೆ ಇವು ಅಲ್ಪ ಪ್ರಮಾಣದಲ್ಲಿ ಆಗಬಹುದೇ ಹೊರತು, ಕೊಳಚೆ ನೀರಿನಲ್ಲಿರುವಷ್ಟು ಪ್ರಮಾಣದ ಪಿಎಫ್ಎಗಳನ್ನು ಈ ವಿಧಾನಗಳಿಂದ ಶುಚಿಗೊಳಿಸುವುದು ಕಷ್ಟ. ಈ ನಿಟ್ಟಿನಲ್ಲಿ ಹೊಸದೊಂದು ವಿಧಾನದ ಅಗತ್ಯವಿತ್ತು. ಕಾಂಗ್ ಮತ್ತು ಸಂಗಡಿಗರು ಅದನ್ನು ಈಗ ಒದಗಿಸಿದ್ದಾರೆ.

ಕಾಂಗ್ ತಂಡವು ತಾಮ್ರ ಹಾಗೂ ಅಲ್ಯುಮಿನಿಯಂ ಲೋಹಗಳ ನೈಟ್ರೇಟ್‌ಗಳು ಹೈಡ್ರಾಕ್ಸೈಡ್‌ಗಳ ಜೊತೆಗೆ ಬೆಸೆದುಕೊಂಡು, ಪದರ ಪದರವಾಗಿ ಇರುವಂತಹ ವಿಶೇಷ ರಾಸಾಯನಿಕವನ್ನು ತಯಾರಿಸಿದ್ದಾರೆ. ಈ ವರ್ಷ ರಸಾಯನಶಾಸ್ತ್ರದ ನೊಬೆಲ್ ಪಾರಿತೋಷಕವನ್ನು ಗಳಿಸಿದ ಸಂಶೋಧನೆಗಳ ಫಲ ಇದು ಎನ್ನಬಹುದು. ಈ ಲೋಹ ಹಾಗೂ ಸಾವಯವ ಬೆರೆತ ರಾಸಾಯನಿಕಗಳಲ್ಲಿ ಆಕ್ಟಿವೇಟೆಡ್ ಕಾರ್ಬನ್‌ನಲ್ಲಿ ಇರುವುದಕ್ಕಿಂತಲೂ ಹೆಚ್ಚು ರಂಧ್ರಗಳೂ, ಪಿಎಫ್ಎ ಅಣುಗಳು ಕೂಡಲು ಅವಕಾಶಗಳೂ ಇರುತ್ತವೆ. ಪ್ರತಿ ಗ್ರಾಂ ವಸ್ತುವೂ ಗರಿಷ್ಠ ಸುಮಾರು 1.72 ಗ್ರಾಂನಷ್ಟು ಪಿಎಫ್ಎಯನ್ನು ಅಂಟಿಸಿಕೊಳ್ಳಬಹುದು. ಅದುವೂ ಇದನ್ನು ಬಿಸಿ ಮಾಡಬೇಕಿಲ್ಲ. ನೀರಿನ ಆಮ್ಲೀಯತೆಯಲ್ಲಿಯೇ ಇಷ್ಟು ಪಿಎಫ್ಎಯನ್ನು ಅದು ಹೀರಿಕೊಳ್ಳುತ್ತದೆ. ಅಂಟಿಕೊಂಡ ಪಿಎಫ್ಎಯನ್ನು ಕಾಯಿಸಿ ಬೇರ್ಪಡಿಸಿ, ಅದರಲ್ಲಿರುವ ಫ್ಲೂರೀನನ್ನು ಕಿತ್ತೊಗೆದು, ಸುರಕ್ಷಿತ ರಾಸಾಯನಿಕವನ್ನಾಗಿಸಬಹುದು. ಹೀಗೆ ಕೇವಲ ನೀರನ್ನು ಶುಚಿಗೊಳಿಸುವುದಷ್ಟೆ ಅಲ್ಲ, ಪಿಎಫ್ಎಯನ್ನೂ ನಾಶಗೊಳಿಸುವ ವಿಧಾನ ಇದು ಎನ್ನುತ್ತಾರೆ, ಕಾಂಗ್.

ಪಿಎಫ್ಎಯನ್ನು ಕಿತ್ತೊಗೆದ ನಂತರ ಅದು ಮತ್ತೆ ಮೊದಲಿನಂತೆಯೇ ಆಗುತ್ತದೆ. ಇನ್ನಷ್ಟು ಪಿಎಫ್ಎ ಅಂಟಿಸಿಕೊಳ್ಳಲು ಸಿದ್ಧವಾಗುತ್ತದೆ. ಹೀಗೆ ಆರೇಳು ಬಾರಿ ಈ ವಸ್ತುವನ್ನು ಬಳಸಿ ನೀರನ್ನು ಶುಚಿಗೊಳಿಸಬಹುದು. ತಾವೇ ನಿರ್ದಿಷ್ಟ ಪ್ರಮಾಣದ ಪಿಎಫ್ಎ ಬೆರೆಸಿ ಮಲಿನಗೊಳಿಸಿದ ನೀರನ್ನು ಈ ವಸ್ತುವಿನ ಮೂಲಕ ಸೋಸಿ, ಎಷ್ಟು ಶುಚಿಗೊಳ್ಳುತ್ತದೆ ಎಂದು ಗಮನಿಸಿದ್ದಾರೆ. ಒಂದು ನಿಮಿಷದಲ್ಲಿ ಅರ್ಧ ಲೀಟರ್ ನೀರಿನಿಂದ ಏಳುನೂರು ಮಿಲಿಗ್ರಾಮಿನಷ್ಟು ಪಿಎಫ್ಎಯನ್ನು ಈ ವಸ್ತು ಶುಚಿಗೊಳಿಸುತ್ತದೆ. ಹೀಗೆ ಸೋಸುವ ಹಾಗೂ ಅನಂತರ ಬಿಸಿ ಮಾಡಿ ಪಿಎಫ್ಎ ಬೇರ್ಪಡಿಸುವ ಮೂಲಕ, ನಿರಂತರವಾಗಿ ನೀರನ್ನು ಶುಚಿಗೊಳಿಸಬಹುದು. ❖

ಓದಿನ ಓಘಕ್ಕೆ ಓಗೊಟ್ಟ ಓಮರ್ ಯಾಘಿ

ನೊಬೆಲ್ ವಿಜ್ಞಾನಿಗಳು 2

• ಕ್ಷಮಾ ವಿ. ಭಾನುಪ್ರಕಾಶ್

ಅದು ನಮ್ಮದೇ ಕಾಶ್ಮೀರವಾಗಲೀ, ದೂರದ ಗಾಜಾ ಆಗಲೀ, ಪರ-ವಿರೋಧಗಳ ನಡುವೆ, ಕುತಂತ್ರ–ಕುಯುಕ್ತಿಗಳ ನಡುವೆ, ಯಾರದ್ದೋ ಹಟಕ್ಕೆ, ಯಾರದ್ದೋ ಮೂಲಭೂತವಾದಕ್ಕೆ ಸಿಲುಕಿ ಸಮಸ್ಯೆ ಅನುಭವಿಸುವವರು ಸಾಮಾನ್ಯ ಜನರೇ. ಗಾಜಾದಲ್ಲಿ ಈಗಿರುವಂತಹ ಯುದ್ಧದ ಪರಿಸ್ಥಿತಿಯಲ್ಲಿಯೇ ಗುಳೇ ಹೊರಟ ಕುಟುಂಬದ ಸಾಮಾನ್ಯ ಹುಡುಗನೊಬ್ಬ, ಇಂದು ರಸಾಯನ ವಿಜ್ಞಾನದಲ್ಲಿ ನೊಬೆಲ್ ಪ್ರಶಸ್ತಿ ಪಡೆದ ಕಥೆಯಿದು. ಈ ವರ್ಷದ ರಸಾಯನವಿಜ್ಞಾನ ನೊಬೆಲ್ ಸಿಕ್ಕಿದ್ದು 'ಲೋಹ-ಸಾವಯವ ಚೌಕಟ್ಟು'ಗಳ ಬಗೆಗಿನ ಸಂಶೋಧನೆಗೆ ಎಂಬುದು ನಿಮಗೀಗಾಲೇ ತಿಳಿದಿರಬಹುದು. ಅದಕ್ಕೆ ಮುನ್ನುಡಿ ಬರೆದದ್ದು ರಿಚರ್ಡ್ ರಾಬ್ಸನ್. ಆದರೆ ಅವರ ಸಿದ್ಧಾಂತಕ್ಕೆ ಅನ್ವಯಿಕತೆ ಮತ್ತು ಪ್ರಾಯೋಗಿಕತೆಗಳನ್ನು ತಂದದ್ದು ಓಮರ್ ಯಾಘಿ ಮತ್ತು ಸುಸುಮು ಕಿಟಾಗವಾ ಎಂಬ ಇಬ್ಬರು ರಸಾಯನವಿಜ್ಞಾನಿಗಳು. ಓಮರ್ ಯಾಘಿ ಅವರ ಬದುಕು ವಿಜ್ಞಾನದ ವಿದ್ಯಾರ್ಥಿಗಳಿಗೆ ಮಾತ್ರವಲ್ಲ, ಮುಂದಿನ ಪೀಳಿಗೆಗೂ ಸ್ಫೂರ್ತಿದಾಯಕ.



ಓಮರ್ ಯಾಘಿ

ಓಮರ್ ಯಾಘಿಯವರು 1965ರ ಫೆಬ್ರುವರಿ 9ರಂದು ಪ್ಯಾಲೆಸ್ತೀನ್ ಮೂಲದ ಯುದ್ಧನಿರಾಶ್ರಿತ ಕುಟುಂಬದಲ್ಲಿ ಜನಿಸಿದರು. ವಿದ್ಯುತ್ತು, ಸ್ವಚ್ಛವಾದ ಕುಡಿಯುವ ನೀರಿನಂತಹ ಮೂಲಭೂತ ಸಂಪನ್ಮೂಲಗಳೂ ಲಭ್ಯವಿಲ್ಲದ ಪರಿಸ್ಥಿತಿಯಲ್ಲಿ ಓಮರ್ ತಮ್ಮ ಬಾಲ್ಯ ಕಳೆದರು. ದನದ ಕೊಟ್ಟಿಗೆಯಲ್ಲಿ ಹತ್ತಾರು ಮಕ್ಕಳ ಜೊತೆ ಮಲಗಬೇಕಿದ್ದ ಪರಿಸ್ಥಿತಿ. ಇಂಥ ಕಷ್ಟಗಳ ನಡುವೆಯೇ ತಮ್ಮ ತಂದೆಯ ಪ್ರೋತ್ಸಾಹ ಓಮರ್ ಅವರನ್ನು ಓದಿನ ಕಡೆಗೆ ಹೊರಳಿಸಿತು. ಕೆಳಕ್ಕೆಳೆಯುವ ಕೆಸರಿನೊಳಗೆ ಇದ್ದುಕೊಂಡೂ ಮೇಲಕ್ಕೇಳುವ ಉಮೇದಿಯಲ್ಲಿ ಅರಳುವ ಕಮಲದಂತೆ, 'ತಾನು ಓದಬೇಕು' ಎಂಬ ಹಂಬಲ ಓಮರ್ ಅವರನ್ನು ಇತರರಿಗಿಂತ ಭಿನ್ನವಾಗಿ ಬೆಳೆಯುವಂತೆ ಮಾಡಿತು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಹಂತದಲ್ಲೇ ವಿಜ್ಞಾನದ ಬಗ್ಗೆ ಮತ್ತು ಕಲಿಕೆಯ ಬಗ್ಗೆ ಇವರಿಗಿದ್ದ ಆಸಕ್ತಿಯ ಮೇರೆಗೆ, ಓಮರ್ ಅವರ ತಂದೆ ಈ 15 ವರ್ಷದ ಹುಡುಗನನ್ನು ಅಮೆರಿಕಕ್ಕೆ ಮುಟ್ಟಿಸಿದರು. ಕಷ್ಟದ ಬದುಕನ್ನೇ ಉಂಡು ಬಂದಿದ್ದ ಓಮರ್ ಅವರಿಗೆ, ಅಮೆರಿಕದಲ್ಲಿ ದಿನನಿತ್ಯದ ಅನಿವಾರ್ಯ ಅಸೌಕರ್ಯಗಳು ಕಂಗೆಡಿಸಲಿಲ್ಲ. ಅವರ ಲಕ್ಷ್ಯವೇನಿದ್ದರೂ ಓದಿನ ಕಡೆಗೆ, ರಸಾಯನವಿಜ್ಞಾನದ ಅದ್ಭುತಲೋಕದ ಕಡೆಗೆ. ಹಡ್ಸನ್ ವ್ಯಾಲಿ ಸಾಮುದಾಯಿಕ ಕಾಲೇಜು, ನ್ಯೂಯಾರ್ಕ್ ರಾಜ್ಯ ವಿಶ್ವವಿದ್ಯಾಲಯದದಲ್ಲಿ ಶಿಕ್ಷಣವನ್ನು ಮುಂದುವರೆಸುತ್ತಾ, ಇಲಿನಾಯ್ ವಿಶ್ವವಿದ್ಯಾಲಯದದಲ್ಲಿ ರಸಾಯನ ವಿಜ್ಞಾನದ ಪದವಿ ಪಡೆದರು. ನೀರನ್ನು ಹೊರತು ಪಡಿಸಿ, ಇತರ ಮಾಧ್ಯಮದಲ್ಲಿ 'ಪಾಲಿ–ಆಕ್ಸೋವಾನಡೇಟ್'ಗಳ ಸಂಶ್ಲೇಷಣೆ, ರಚನೆ, ರಾಸಾಯನಿಕತೆಯ ಸಾಧ್ಯತೆಯ ಬಗ್ಗೆ ಸಂಶೋಧನೆ ನಡೆಸಿ 1990ರಲ್ಲಿ ಪಿಎಚ್‌ಡಿ ಪದವಿಯನ್ನೂ ಪಡೆದರು.

ಅರಿಝೋನಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ತಮ್ಮ ವೃತ್ತಿಯನ್ನು ಆರಂಭಿಸಿದ ಓಮರ್, ನಂತರ ಮಿಶಿಗನ್ ವಿಶ್ವವಿದ್ಯಾಲಯ, ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದಂತಹ ಅನೇಕ ಪ್ರತಿಷ್ಠಿತ ವಿದ್ಯಾಲಯಗಳ ಭಾಗವಾಗಿ, ಪ್ರಾಧ್ಯಾಪಕರಾಗಿ ಮಾತ್ರವಲ್ಲದೇ, ಕಮಿಟಿಗಳ, ಅಧ್ಯಯನ-ಪೀಠಗಳ ಅಧ್ಯಕ್ಷರಾಗಿ, ನಿರ್ದೇಶಕರಾಗಿ ಕೂಡ ಕಾರ್ಯ ನಿರ್ವಹಿಸಿದರು. ಓಮರ್ ಅವರು ಹೆಚ್ಚು ಸಂಶೋಧನೆ ನಡೆಸಿದ್ದು, 'ರೆಟಿಕ್ಯುಲಾರ್ ಕೆಮಿಸ್ಟ್ರಿ' ಎಂಬ ರಸಾಯನವಿಜ್ಞಾನದ ಶಾಖೆಯಲ್ಲಿ. ವಿವಿಧ ಸಾವಯವ ಸಂಯುಕ್ತ ಪದಾರ್ಥಗಳಿಗೆ, ಲೋಹದ ಸಂಯುಕ್ತಗಳಿಗೆ ಪರಮಾಣುಗಳನ್ನು ಸೇರಿಸುವ, ರಾಸಾಯನಿಕ ಬಂಧಗಳನ್ನು ರಚಿಸುವ, ಹೊಸ ರಚನೆಗಳನ್ನು ಸೃಜಿಸುವ ಕ್ರಿಯಾತ್ಮಕ ಶಾಖೆಯಿದು. ಇಲ್ಲಿ ಮೂರು ಆಯಾಮದ ಸ್ಫಟಿಕಗಳ ರಚನೆಗೆ ಪ್ರಾಶಸ್ತ್ಯ; ಅದೇ ನಿಟ್ಟಿನಲ್ಲಿ ಸಂಶೋಧನೆಯಲ್ಲಿ ತೊಡಗಿದ್ದ ಓಮರ್ ಅವರನ್ನು ನೊಬೆಲ್ ಪ್ರಶಸ್ತಿಯ ಹೊಸ್ತಿಲಿಗೆ ತಂದು ನಿಲ್ಲಿಸಿದ್ದು, ಲೋಹ-ಸಾವಯವ ಚೌಕಟ್ಟುಗಳ ಧೃಡತೆಯ ಬಗ್ಗೆ ಅವರ ವಿಶಿಷ್ಟವಾದ ಅನ್ವೇಷಣೆಯೇ!



ರಸಾಯನವಿಜ್ಞಾನದ ಭಾಷೆಯಲ್ಲಿ 'ಕೋಆರ್ಡಿನೇಶನ್ ಪಾಲಿಮರ್' ಎಂಬ ಹೆಸರಿನಿಂದ ಗುರುತಿಸಲಾಗುವ ರಚನೆಗಳಿಗೆ ಭೌತಿಕ ದೃಢತೆ ತಂದುಕೊಡುವುದು ಕಷ್ಟದ ಮಾತೇ ಸರಿ. ಇಲ್ಲಿ ಲೋಹವೂ ಉಂಟು, ಸಾವಯವ ಗುಣ ತಂದುಕೊಡುವ ಇಂಗಾಲವೂ ಉಂಟು; ಜೊತೆಗೆ ಅನೇಕ ಅಯಾನುಗಳ, ಎಲೆಕ್ಟ್ರಾನುಗಳ ಕೊಡು-ಕೊಳ್ಳುವಿಕೆ, ಹಂಚಿಕೊಳ್ಳುವಿಕೆ ಮತ್ತು ಧನಾತ್ಮಕ-ಋಣಾತ್ಮಕ ಚಾರ್ಜ್‌ಗಳ ನರ್ತನ - ಇವೆಲ್ಲದರ ನಡುವೆ ರಾಸಾಯನಿಕ ಕ್ರಿಯಾತ್ಮಕತೆಗೂ ಮೀರಿ ಭೌತಿಕ ದೃಢತೆ ಅತಿ ಮುಖ್ಯವೆನಿಸುತ್ತದೆ. ಹೇಗೆಂದರೆ, ಫಳಫಳ ಪೈಂಟು, ಥಳ ಥಳ ಟೈಲ್ಸು, ಮಿರ ಮಿರ ಮಿಂಚುವ ಒಳಾಂಗಣ ವಿನ್ಯಾಸವೆಲ್ಲವೂ ಇದ್ದು ಮನೆಯ ಭೌತಿಕ ರಚನೆಗೆ, ಬುನಾದಿಗೆ, ಗೋಡೆಗೆ ಬಲವಿಲ್ಲದಿದ್ದರೆ ಪ್ರಯೋಜನವೇನು? ಹಾಗೆಯೇ, ಈ ಲೋಹ-ಸಾವಯವ ಚೌಕಟ್ಟುಗಳು ತಮ್ಮ ರಚನೆಯಿಂದ ಕೈಗಾರಿಕೆಗಳಲ್ಲಿ, ವೈದ್ಯಕೀಯ ಲೋಕದಲ್ಲಿ, ಪ್ರಯೋಗಾಲಯಗಳಲ್ಲಿ ಅನೇಕ ಅನ್ವಯಿಕೆಗಳನ್ನು ಸಾಧ್ಯವಾಗಿಸಬಹುದಾಗಿದ್ದರೂ, ಅದರ ಮೂಲಭೂತ ರಚನೆಗೆ ಭೌತಿಕವಾಗಿ ಬಲವಿಲ್ಲದಿಲ್ಲರೆ ಪ್ರಯೋಜನವೇನು?

ಹೀಗಾಗಿ, ಓಮರ್ ಅವರು ಆ ಸಮಸ್ಯೆಯನ್ನು ಪರಿಹರಿಸಲು ಮೂರು ಮುಖ್ಯ ಬದಲಾವಣೆಗಳನ್ನು ತಂದರು. ಈ ಚೌಕಟ್ಟುಗಳನ್ನು ತಯಾರಿಸುವಾಗ, ಲೋಹ ಮತ್ತು ಕಾರ್ಬಾಕ್ಸಿಲೇಟ್ ಅಯಾನುಗಳ ನಡುವೆ ರಾಸಾಯನಿಕ ಬಂಧವನ್ನು ಗಟ್ಟಿಗೊಳಿಸಿದರು. ಸ್ಫಟಿಕೀಕರಣದ ವೇಳೆ ಹೆಚ್ಚುವರಿ ಆಧಾರ ಸ್ತಂಭಗಳಾಗಿ ಲೋಹ-ಕಾರ್ಬಾಕ್ಸಿಲೇಟ್ ಗುಂಪುಗಳನ್ನು ಬಳಸಿದರು. ಈ ಚೌಕಟ್ಟಿನೊಳಗಿರುವ ಪರಮಾಣುಗಳ, ಅಣುಗಳ ನಡುವೆ ಇರುವ ಅಂತರವು, ಹೆಚ್ಚು ರಂಧ್ರಮಯವಾಗಿರುವಂತೆ ನೋಡಿಕೊಂಡರು. ಈ ಮೂರೂ ಬದಲಾವಣೆಗಳು ಅಪರಿಮಿತ ಹೊಸ ಸಾಧ್ಯತೆಗಳಿಗೆ ಎಡೆಮಾಡಿಕೊಟ್ಟಿತು. ಇದರಿಂದಾಗಿ ರಿಚರ್ಡ್ ರಾಬ್ಸನ್ ಅವರ ಸಿದ್ಧಾಂತವು 3-ಡಿ ರೂಪವನ್ನು ಪಡೆದು, ಹೊಸ ಅನ್ವಯಿಕೆಗಳಿಗೆ ತೆರೆದುಕೊಂಡಿತು. ವಿಷಾನಿಲ ಸೋರುವಲ್ಲಿ ಅನಿಲದ ಅಣುಗಳನ್ನು ಹಿಡಿದಿಡಲು, ಬಿರುಬಿಸಿಲ ಮರಳುಗಾಡಲ್ಲಿ ಗಾಳಿಯಿಂದ ನೀರನ್ನು ತಯಾರಿಸಲು, ದೇಹದ ನಿರ್ದಿಷ್ಟ ಭಾಗಕ್ಕೆ ಔಷಧವನ್ನು ತಲುಪಿಸಲು ಸಹಾಯಕವಾದ ಲೋಹ-ಸಾವಯವ ಚೌಕಟ್ಟಿಗೆ ಓಮರ್ ಅವರ ಈ ಸಂಶೋಧನೆಯು ಬಲ ತಂದಿದೆ; ಆಧುನಿಕ ಮಾನವನ ಅನೇಕ ಸಮಸ್ಯೆಗಳಿಗೆ ಇದು ಪರಿಹಾರಗಳನ್ನೂ ತಂದಿದೆ. ❖



ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿದ್ಯುಚ್ಛಕ್ತಿ

14) ರೋಧ ಬಗ್ಗೆ ಬರೆಯಿರಿ

ಉತ್ತರ:– ಒಂದು ನಿರ್ದಿಷ್ಟ ತಾಪಮಾನದಲ್ಲಿ, ಲೋಹದ ತಂತಿಯ ಸ್ಥಿರಾಂಕ R ಆಗಿದ್ದು, ಇದನ್ನು ರೋಧ ಎಂದು ಕರೆಯುವರು. ಇದು ವಾಹಕದ ಗುಣವಾಗಿದ್ದು ವಾಹಕದಲ್ಲಿ ಪ್ರವಹಿಸುವ ಆವೇಶಗಳ ಪ್ರವಾಹವನ್ನು ವಿರೋಧಿಸುತ್ತದೆ. ರೋಧದ SI ಏಕಮಾನವು ಓಮ್, ಇದನ್ನು ಗ್ರೀಕ್ ಅಕ್ಷರವಾದ Ω ನಿಂದ ಗುರುತಿಸುವರು.

ಯಾವುದೇ ಒಂದು ರೋಧಕದ ಮೂಲಕ ಪ್ರವಹಿಸುವ ವಿದ್ಯುತ್ ಪ್ರವಾಹವು ಅದರ ರೋಧಕ್ಕೆ ವಿಲೋಮ ಅನುಪಾತವನ್ನು ಹೊಂದಿರುತ್ತದೆ

15) ಯಾವುದಕ್ಕೆ ರೋಧಕ ಎಂದು ಕರೆಯುವರು ಕರೆಯುವರು?

ಉತ್ತರ:– ವಾಹಕದ ಮೂಲಕ ಇಲೆಕ್ಟ್ರಾನ್‌ಗಳ ಪ್ರವಾಹವು ಅದರ ರೋಧದಿಂದಾಗಿ ಕುಂಠಿತವಾಗುತ್ತದೆ. ಒಂದು ನಿರ್ದಿಷ್ಟ ಗಾತ್ರದ ವಸ್ತುವು ಕಡಿಮೆ ರೋಧವನ್ನು ಒದಗಿಸಿದರೆ ಅದು ಉತ್ತಮ ವಾಹಕವಾಗಿದೆ. ಒಂದು ವಾಹಕವು ಗಣನೀಯವಾದ ರೋಧವನ್ನು ಹೊಂದಿದ್ದರೆ ಅದನ್ನು ರೋಧಕ ಎಂದು ಕರೆಯುವರು. ಹೆಚ್ಚಿನ ರೋಧವನ್ನು ಒಡ್ಡುವ ಒಂದೇ ಗಾತ್ರದ ವಸ್ತುವು ದುರ್ಬಲ ವಾಹಕವಾಗಿದೆ.

16) ವಾಹಕದ ರೋಧವು ಅವಲಂಬಿಸಿರುವ ಅಂಶಗಳು ಯಾವುವು?

ಉತ್ತರ:– ವಾಹಕದ ರೋಧವು ಅವಲಂಬಿಸಿರುವ ಅಂಶಗಳು

ವಾಹಕದ ರೋಧವು (1) ವಾಹಕದ ಉದ್ದ (2), ವಾಹಕದ ಅಡ್ಡಕೊಯ್ತ (3), ವಸ್ತುವಿನ ಪ್ರಾಕೃತಿಕ ಗುಣ ಇವುಗಳ ಮೇಲೆ ಅವಲಂಬಿಸಿದೆ. ನಿಖರವಾದ ಮಾಪನಗಳ ಪ್ರಕಾರ, ಯಾವುದೇ ಏಕರೂಪ ಲೋಹೀಯ ವಾಹಕದ ರೋಧವು ಅದರ ಉದ್ದಕ್ಕೆ (l) ನೇರ ಅನುಪಾತದಲ್ಲಿರುತ್ತದೆ ಮತ್ತು ಅದರ ಅಡ್ಡಕೊಯ್ತಕ್ಕೆ (A) ವಿಲೋಮಾನುಪಾತದಲ್ಲಿರುತ್ತದೆ.

17) ರೋಧ ಶೀಲತೆಯ ಅಂತಾರಾಷ್ಟ್ರೀಯ ಏಕಮಾನ ಯಾವುದು?

ಉತ್ತರ:– ರೋಧಶೀಲತೆಯ ಅಂತರಾಷ್ಟ್ರೀಯ ಏಕಮಾನ **Ω m** (ಓಮ್–ಮೀಟರ್). ಇದು ಯಾವುದೇ ಒಂದು ವಸ್ತುವಿನ ವಿಶಿಷ್ಟ ಗುಣವಾಗಿದೆ.

18) ಕೆಳಗಿನ ಲೋಹಗಳ ರೋಧಶೀಲತೆಯನ್ನು ತಿಳಿಸಿ

ಬೆಳ್ಳಿ, ತಾಮ್ರ, ಅಲ್ಯುಮಿನಿಯಂ, ಟಂಗಸ್ಟನ್, ನಿಕ್ಕಲ್, ಕಬ್ಬಿಣ, ಕ್ರೋಮಿಯಂ, ಪಾದರಸ, ಮ್ಯಾಂಗನೀಸ್

ಉತ್ತರ:–

ಲೋಹ	ರೋಧಶೀಲತೆ (Ω m)
ಬೆಳ್ಳಿ	1.60×10^{-8}
ತಾಮ್ರ	1.62×10^{-8}
ಅಲ್ಯುಮಿನಿಯಂ	2.63×10^{-8}
ಟಂಗ್‌ಸ್ಟನ್	5.20×10^{-8}
ನಿಕ್ಕಲ್	6.84×10^{-8}
ಕಬ್ಬಿಣ	10.0×10^{-8}
ಕ್ರೋಮಿಯಂ	12.9×10^{-8}
ಪಾದರಸ	94.0×10^{-8}
ಮ್ಯಾಂಗನೀಸ್	1.84×10^{-6}

19) ಲೋಹಗಳು ಮತ್ತು ಮಿಶ್ರ ಲೋಹಗಳ ರೋಧಶೀಲತೆ ಎಷ್ಟು ವ್ಯಾಪ್ತಿಯನ್ನು ಹೊಂದಿರುತ್ತವೆ.?

ಉತ್ತರ:– ಲೋಹಗಳು ಮತ್ತು ಮಿಶ್ರ ಲೋಹಗಳು **10-8Ωm** ನಿಂದ 10–6**Ωm** ನ ವ್ಯಾಪ್ತಿಯ ಕಡಿಮೆ ರೋಧಶೀಲತೆಯನ್ನು ಹೊಂದಿರುತ್ತವೆ.

20) ಒಂದೇ ರೀತಿಯ ವಸ್ತುವಿನ ದಪ್ಪ ತಂತಿ ಅಥವಾ ತೆಳು ತಂತಿಯನ್ನು ಒಂದೇ ಮೂಲಕ್ಕೆ ಸಂಪರ್ಕಿಸಿದಾಗ ಯಾವ ತಂತಿಯ ಮೂಲಕ ವಿದ್ಯುತ್ ಸುಲಭವಾಗಿ ಹರಿಯುತ್ತದೆ? ಮತ್ತು ಹೇಗೆ?

ಉತ್ತರ:– ದಪ್ಪದಾದ ತಂತಿಯ ಮೂಲಕ ವಿದ್ಯುತ್ ಸುಲಭವಾಗಿ ಹರಿಯುತ್ತದೆ, ಏಕೆಂದರೆ ತಂತಿ ದಪ್ಪವಾಗಿದ್ದರೆ ರೋಧವು ಕಡಿಮೆ ಆಗುತ್ತದೆ. ಈ ಕಾರಣದಿಂದ ದಪ್ಪ ತಂತಿ ಅವಶ್ಯ

21) ವಿದ್ಯುತ್ ಟೋಸ್ಟರ್ ಮತ್ತು ವಿದ್ಯುತ್ ಇಸ್ತ್ರಿ ಪೆಟ್ಟಿಗೆಯ ಸುರುಳಿಗಳನ್ನು ಶುದ್ಧ ಲೋಹದ ಬದಲಿಗೆ ಮಿಶ್ರ ಲೋಹಗಳಿಂದ ತಯಾರಿಸುತ್ತಾರೆ. ಏಕೆ?

ಉತ್ತರ:– ಮಿಶ್ರಲೋಹದ ರೋಧಶೀಲತೆಯು ಅದರ ಘಟಕ ಲೋಹಗಳಿಗಿಂತಲೂ ಸಾಮಾನ್ಯವಾಗಿ ಹೆಚ್ಚಿನದಾಗಿರುತ್ತದೆ, ಮಿಶ್ರಲೋಹಗಳು ಹೆಚ್ಚಿನ ತಾಪಾಮಾನದಲ್ಲಿ ಸುಲಭವಾಗಿ ದಹಿಸುವುದಿಲ್ಲ, ಈ ಕಾರಣಕ್ಕಾಗಿ ಇವುಗಳನ್ನು ವಿದ್ಯುತ್ ಉಷ್ಣೋತ್ಪಾದನಾ ಸಾಧನಗಳಾದ ವಿದ್ಯುತ್ ಇಸ್ತ್ರೀ ಪೆಟ್ಟಿಗೆ, ಬೋಸ್ಟರ್ ಇತ್ಯಾದಿಗಳಲ್ಲಿ ಸಾಮಾನ್ಯವಾಗಿ ಬಳಸಲಾಗುತ್ತದೆ.

22) ಕೋಷ್ಟಕ 11.2ರಲ್ಲಿನ ದತ್ತಾಂಶವನ್ನು ಬಳಸಿಕೊಂಡು ಈ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ

ಎ) ಕಬ್ಬಿಣ ಮತ್ತು ಪಾದರಸಗಳಲ್ಲಿ ಉತ್ತಮವಾದ ವಾಹಕ ಯಾವುದು?

ಬಿ) ಯಾವ ವಸ್ತುವು ಅತ್ಯುತ್ತಮ ವಾಹಕವಾಗಿದೆ?

ಉತ್ತರ:– (ಎ) ಕಬ್ಬಿಣದ ರೋಧಶೀಲತೆ $= 10.0 \times 10^{-8}$

ಪಾದರಸದ ರೋಧಶೀಲತೆ $= 94.0 \times 10^{-8}$

ಪಾದರಸದ ರೋಧಶೀಲತೆ ಕಬ್ಬಿಣಕ್ಕಿಂತ ಹೆಚ್ಚಾಗಿದೆ, ಇದರಿಂದ ನಮಗೆ ತಿಳಿದು ಬರುವುದೇನೆಂದರೆ ಕಬ್ಬಿಣವು ಪಾದರಸಕ್ಕಿಂತ ಉತ್ತಮವಾಹಕವಾಗಿದೆ.

(ಬಿ) ಬೆಳ್ಳಿಯ ರೋಧಶೀಲತೆ ಕಡಿಮೆ ಇರುವುದರಿಂದ ಇದು ಉತ್ತಮ ವಾಹಕವಾಗಿದೆ.

23) (a) ವಿದ್ಯುತ್ ಬಲ್ಬ್‌ನ ತಂತುಗಳ ರೋಧವು 1200 Ω ಆಗಿದ್ದು, 220 V ಮೂಲದಿಂದ ವಿದ್ಯುತ್ ಬಲ್ಬ್ ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

(b) ಹೀಟರ್‌ನ ಸುರುಳಿಯ ರೋಧವು 100 Ω ಆಗಿದ್ದು, 220 V ಮೂಲದಿಂದ ವಿದ್ಯುತ್ ಹೀಟರ್‌ನ ಸುರುಳಿಯು ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

ಉತ್ತರ:– (a) ಕೊಟ್ಟಿರುವುದು, V = 220 V; R = 1200 Ω.

ಸಮೀಕರಣ (11.6)ರಿಂದ, ವಿದ್ಯುತ್ ಪ್ರವಾಹ I= 220 V/1200 Ω = 0.18 A.

(b) ಕೊಟ್ಟಿರುವುದು, V = 220 V, R = 100 Ω.

ಸಮೀಕರಣ (11.6) ರಿಂದ,

ವಿದ್ಯುತ್ ಪ್ರವಾಹ I = 220 V/100 Ω = 2.2 A.

24) ಒಂದು ವಿದ್ಯುತ್ ಹೀಟರ್, ವಿದ್ಯುತ್ ಮೂಲದಿಂದ 4 A ವಿದ್ಯುತ್ ಸೆಳೆಯುವಾಗ ಅದರ ತುದಿಗಳ ನಡುವಿನ ವಿಭವಾಂತರವು 60 V ಆಗಿದ್ದು ಸದರಿ ವಿದ್ಯುತ್ ಹೀಟರ್‌ನ ವಿಭವಾಂತರವನ್ನು 120V ಗೆ ಹೆಚ್ಚಿಸಿದಾಗ ಆ ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

CHEMISTRY

Coordination Compound

15. Discuss the nature of bonding in the following coordination entities on the basis of valence bond theory:

(i) $[Fe(CN)_6]^{4-}$ (ii) $[FeF_6]^{3-}$

(iii) $[Co(C_2O_4)_3]^{3-}$ (iv) $[CoF_6]^{3-}$

Ans: (.........Contd)

Thus, the geometry of the complex is octahedral, and it is a diamagnetic complex (since all the electrons are paired).

(ii) $[FeF_6]^{3-}$ In this coordinate entity, the oxidation state of iron is +3 Orbitals of Fe^{+3} ion



There are 6 F^- ions. Hence, it will go through d^2sp^3 or sp^3d^2 hybridisation.

Since F^- is a weak field ligand, it does not cause the pairing of the electrons in the 3d orbital. Thus, the most practical hybridisation is sp^3d^2. sp^3d^2 hybridised orbitals of Fe are :



Thus, the geometry of this coordinate entity is octahedral.

(iii) $[Co(C_2O_4)_3]^{3-}$

In this complex, the oxidation state of cobalt is +3.

Orbitals of Co^{3+} ion :



Oxalate is a weak field ligand. Thus, it will not cause the pairing of the 3d orbital electrons. As there are 6 ligands, hybridisation has to be either sp^3d^2 or d^2sp^3 hybridisation. sp^3d^2 hybridisation of Co^{3+} :



The 6 electron pairs from the 3 oxalate ions (oxalate anion is a bidentate ligand) occupy these sp^3d^2 orbitals :



Thus, the complex shows octahedral geometry.

(iv)) $[CoF_6]^{3-}$

In this complex, Cobalt has an oxidation state of +3.

Orbitals of Co^{3+} ion:



As fluoride ion is a weak field ligand, it will not cause the 3d electrons to pair. Hence, the Co^{3+} ion will go through sp^3d^2 hybridisation.

sp^3d^2 hybridised orbitals of Co^{3+} ion are :



Thus, the complex has a geometric configuration of an octahedral, and it is paramagnetic.

17. What is the spectrochemical series? Explain the difference between a weak field ligand and a strong field ligand.

Ans: A series of common ligands in ascending order of their crystal-field splitting energy (CFSE) is termed as the Spectrochemical series. Strong field ligands have larger values of CFSE. Whereas weak field ligands have smaller values of CFSE.

18. What is crystal field splitting energy? How does the magnitude of Δo decide the actual configuration of d orbitals in a coordination entity?

Ans: Crystal-field splitting energy is the difference in the energy between the two levels (i.e., t_{2g} and e_g) that have split from a degenerated d orbital because of the presence of a ligand. It is symbolised as Δo.

Once the orbitals split up, electrons start filling the vacant spaces. An electron each goes into the three t_{2g} orbitals, the fourth electron, however, can enter either of the two orbitals:

(1) It can go to the e_g orbital (producing $t_{2g}^3e_g^1$ like electronic configuration), or

(2) it can go to the t_{2g} orbitals (producing $t_{2g}^4e_g^0$ like electronic configuration).

This filling of the fourth electron is based on the energy level of Δo. If a ligand has an Δo value smaller than the pairing energy, then the fourth electron enters the e_g orbital. However, if the value of Δo is greater than the value of pairing energy, the electron enters t_{2g}orbital.

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ

EXCHANGE DHAMAKA
Upto ₹25,000
ವರೆಗೂ ಹಳೆಯ ಎಲೆಕ್ಟ್ರಾನಿಕ್ಸ್ ಗೃಹೋಪಯೋಗಿ ವಸ್ತುಗಳ, ಮೊಬೈಲ್‌ಗಳು ಮತ್ತು ಲ್ಯಾಪ್‌ಟಾಪ್‌ಗಳು ಎಕ್ಸ್‌ಚೇಂಜ್ ಮೇಲೆ*

CASH BACK BONANZA
Upto ₹50,000 ಕ್ಯಾಶ್ ಬ್ಯಾಕ್*

BALIPADYAMI Sale
UPTO 70% OFF

13 ಗಂಟೆಗಳ ತಡೆರಹಿತ ಶಾಪಿಂಗ್
ಮಳಿಗೆಗಳು 9.30 AM - 10.30 PM ತೆರೆದಿರುತ್ತದೆ

FINANCE BONANZA
Upto ₹15,000 ಕ್ಯಾಶ್ ಬ್ಯಾಕ್*

ಉಚಿತ* FIRE-BOLTT SMART CALLING WATCH WORTH ₹20000

HDFC BANK — We understand your world — 10% INSTANT CASH BACK ON CC & DC EMI* MIN TXN ₹17,000 MAX CAP ₹3,000 *T&C

10% INSTANT DISCOUNT* SBI card — *Min. Trxn.: ₹20,000; Max. Discount: ₹3,000 per card; Valid only on EMI Trxns.; Validity: 27 Sep - 31 Oct 2025. T&C Apply.

UPTO 5% OFF INSTANT CASH BACK — DBS, YES BANK, HSBC, one card, scapia, kotak, Bank of Baroda — MIN TXN ₹10,000 MAX CAP ₹7,500 *T&C

1 ಇ.ಎಮ್.ಐ ಉಚಿತ* — ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ* — BAJAJ FINSERV, IDFC FIRST Bank

LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು* — BT SPEAKER, INDUCTION COOKER, STEAM IRON, KETTLE, DRY IRON

Brand	Product	ಹಳೆಯ ಬೆಲೆ	ಹಬ್ಬದ ಬೆಲೆ
SAMSUNG	85 CRYSTAL UHD 4K SMART LED TV 85U8500F (20% CASH BACK)	₹2,12,190	FESTIVAL PRICE ₹2,02,090
LG	75 4K ULTRA HD SMART LED NANOCELL TV 75NANO83A6A (26% CASH BACK)	₹99,290	₹94,590
SONY	75 INCHES 4K ULTRA HD SMART LED TV K-75S30 (10% CASH BACK)	₹1,64,990	₹1,52,090
Panasonic	65 4K ULTRA HD LED SMART GOOGLE TV (10% CASH BACK)	₹59,790	₹56,890
NY	LOWEST PRICE CHALLENGE 55 4K LED (52% OFF, 10% CASH BACK)	₹29,500	₹28,500

Phone	Effective price	EMI	Offer
OPPO F31 (10% CASH BACK)	₹19,170* (PRICE AFTER CASH BACK)	₹1,775 Onwards	ಉಚಿತ: BT NECKBAND WORTH ₹1649
xiaomi Redmi 15	₹14,999* (PRICE AFTER CASH BACK)	₹1,250 Onwards	ಉಚಿತ: BT NECKBAND WORTH ₹1649
vivo V60E/60 (10% CASH BACK)	₹24,570* (PRICE AFTER CASH BACK)	₹2,275 Onwards	ಉಚಿತ: BT NECKBAND WORTH ₹1649
SAMSUNG A17	FESTIVAL PRICE ₹17,999* (PRICE AFTER CASH BACK)	₹1,900 Onwards	MAGSAFE W/L POWER BANK WORTH ₹7999 @ ₹99
iPhone 17	₹76,900* (PRICE AFTER CASH BACK)	₹3,454 Onwards	ಉಚಿತ: COMPLETE DAMAGE PROTECTION 1YR + ZEB BT SPEAKER WORTH ₹12490

BOSCH SERIES 6 14 PLACE SETTINGS FREE-STANDING DISHWASHER (10% CASH BACK) — ಹಳೆಯ ಬೆಲೆ ₹51,900 ಹಬ್ಬದ ಬೆಲೆ ₹49,900

Haier 400L TOUCH LED VISI COOLER GLASS DOOR, SINGLE DOOR FREEZER (25% CASH BACK) — ಹಳೆಯ ಬೆಲೆ ₹40,990 ಹಬ್ಬದ ಬೆಲೆ ₹38,990

DELL 3530 • 13TH GEN i5 • 16GB RAM, 512GB SSD • 15.6 FHD • WIN 11 MSO 24 (10% CASH BACK) EMI ₹4,249 — ಹಬ್ಬದ ಬೆಲೆ ₹49,990 — ಉಚಿತ: VIP 55CM TROLLEY BAG + COMPANY BAG PACK WORTH ₹9,999

hp VICTUS • RYZEN 5 5600H • 16GB, 512GB SSD • 4GB GFX • 15.6 FHD, WIN 11 (10% CASH BACK) EMI ₹4,416 — ಹಬ್ಬದ ಬೆಲೆ ₹52,990 — ಉಚಿತ: NAUTICA 25LTR TRAVEL BAG + COMPANY BAG PACK WORTH ₹6,999

Lenovo SLIM 3I • 13TH GEN i7 • 16GB RAM, 512GB SSD • 15.6 WXGA • WIN 11 MSO 24 (10% CASH BACK) EMI ₹5,333 — ಹಬ್ಬದ ಬೆಲೆ ₹63,990 — ಉಚಿತ: VIP 55CM TROLLEY BAG + COMPANY BAG PACK WORTH ₹9,999

Product	ಹಳೆಯ ಬೆಲೆ	ಹಬ್ಬದ ಬೆಲೆ
Haier 520LTRS LUMIERE 4 DOOR SIDE BY SIDE REFRIGERATOR (25% CASH BACK)	₹94,990	₹91,330
SAMSUNG 467 L FROST FREE DOUBLE DOOR, BESPOKE AI WIFI ENABLED REFRIGERATOR RT80F51C2FHL (20% CASH BACK)	₹61,390	₹58,490
Whirlpool 235 L FROST FREE DOUBLE DOOR REFRIGERATOR (10% CASH BACK)	₹26,790	₹25,490
LG 12/7KG FRONT LOAD WASHER DRYER, AI DIRECT DRIVE™ FHD1207STB (26% CASH BACK)	₹67,290	₹64,990
Godrej GODREJ 8 KG FULLY AUTOMATIC TOP LOAD WASHING MACHINE (10% CASH BACK)	₹21,490	₹20,490

GEYSER UPTO 60% OFF — BAJAJ, Haier, V-GUARD, Racold, HAVELLS, KENSTAR, Symphony
MIXER GRINDER UPTO 63% OFF — Preethi, Panasonic, V-GUARD, Prestige, BAJAJ, BOSCH, HAFELE, HAVELLS, Butterfly, Tefal
CHIMNEY UPTO 50% OFF — KAFF, FABER, HAFELE, Crompton, Prestige, BOSCH
WATER PURIFIER UPTO 53% OFF — EUREKA FORBES, LG, BRITA, Livpure, HAVELLS
IFB 25 L CONVECTION MICROWAVE OVEN — ಹಳೆಯ ಬೆಲೆ ₹13,390 ಹಬ್ಬದ ಬೆಲೆ ₹12,690
LG SOUNDBAR S65TR 5.1 CHAN, 600W, DOLBY DIGITAL, WIRELESS SUBWOOFER (26% CASH BACK) — ಹಳೆಯ ಬೆಲೆ ₹29,990 ಹಬ್ಬದ ಬೆಲೆ ₹20,490

LG SAMSUNG SONY Haier Panasonic NY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo OPPO ONEPLUS mi iPhone JBL BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS-beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR Pigeon BAJAJ Crompton MAHARAJA V-GUARD ZEBRONICS KAFF OZONE

GIRIAS THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬಿಡದಿ 8792565415 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಭಾರ್ತಿಯಾ ಮಾಲ್ 9036289560 | ಬೊಮ್ಮನಹಳ್ಳಿ 9035499022 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಳವಳ್ಳಿ 8792553793 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸರ್ಜಾಪುರ 95911 03536 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633

STORE LOCATOR

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರ್ಯಾಂಡ್‌ಗಳು ಮತ್ತು ಮಾದರಿಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 EMI ರಿಯಾಯಿತಿ. 3 EMI ಅನ್ನು ಕ್ಲಿಯರ್ ಮಾಡಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / BFL ವ್ಯಾಲೆಟ್‌ಗೆ ಜಮಾ ಮಾಡಲಾಗುತ್ತದೆ. ರೂ.15000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ ಮತ್ತು ಆಯ್ದ REF ಮತ್ತು AC ಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಉತ್ತಮ ಕೆಲಸದ ಸ್ಥಿತಿಯಲ್ಲಿರಲು MRP ಮತ್ತು ಉತ್ಪನ್ನದ ಮೇಲೆ ವಿನಿಮಯ ಕೊಡುಗೆ ಮಾನ್ಯವಾಗಿರುತ್ತದೆ. ಟಿವಿ, AC ಮತ್ತು ಡಿಶ್‌ವಾಶರ್‌ಗಳ ಮೇಲೆ ಜಿಎಸ್‌ಟಿ ಕಡಿಮೆಯಾಗಿದೆ.

179 ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA www.roundtableindia.org www.ladiescircleindia.org

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ಜೀವನತತ್ತ್ವವೆಂದರೆ ಅದು ಬೇರೇನಲ್ಲ, ಅದು ನಮ್ಮ ನಡತೆಯನ್ನು ಅಳೆಯುವ ಮಾನದಂಡ.

–ಬಿ.ಆರ್. ಅಂಬೇಡ್ಕರ್

ಸಂಪಾದಕೀಯ

ಖಾತಾ ಪರಿವರ್ತನೆ: ಉದ್ದೇಶ ಒಳ್ಳೆಯದು, ಸುಲಿಗೆ ತಪ್ಪಲಿ

ಬೆಂಗಳೂರು ಮಹಾನಗರದ 'ಬಿ' ಖಾತಾ ಆಸ್ತಿಗಳನ್ನು ನಿಗದಿತ ಶುಲ್ಕ ಪಡೆಯುವ ಮೂಲಕ 'ಎ' ಖಾತಾ ಆಸ್ತಿಗಳನ್ನಾಗಿ ಪರಿವರ್ತಿಸಲು ರಾಜ್ಯ ಸರ್ಕಾರ ಕೈಗೊಂಡಿರುವ ನಿರ್ಧಾರವು ಸ್ವಾಗತಾರ್ಹವಾದುದು. ವಾಸ್ತವವಾಗಿ ಬಲು ಹಿಂದೆಯೇ ಆಗಬೇಕಾಗಿದ್ದ ಕೆಲಸ ಇದಾಗಿತ್ತು. ಲಕ್ಷಾಂತರ ಆಸ್ತಿಗಳು ಇದರಿಂದ ಕಾನೂನುಬದ್ಧಗೊಳ್ಳಲಿದ್ದು, ಈ ಆಸ್ತಿಗಳ ಮಾಲೀಕರು ನಿಟ್ಟುಸಿರು ಬಿಡಲಿದ್ದಾರೆ. ಒಂದೆಡೆ, ದಾಖಲೆಗಳ ನಿರ್ವಹಣೆ ಸುಗಮವಾಗಲಿದ್ದರೆ, ಇನ್ನೊಂದೆಡೆ, ಪಾಲಿಕೆಗಳ ವರಮಾನವೂ ಹೆಚ್ಚಲಿದೆ. ಅತಂತ್ರ ಸ್ಥಿತಿಯಲ್ಲಿದ್ದ ನಗರದ ಸುಮಾರು 7.5 ಲಕ್ಷ ಆಸ್ತಿಗಳಿಗೆ 'ಎ' ಖಾತೆ ಸಿಗಲಿರುವ ಕಾರಣ ಅಕ್ರಮ–ಸಕ್ರಮ ಎಂದು ಭಾಗ ಮಾಡಿ ನೋಡುವ ಪರಿಪಾಟಕ್ಕೂ ಕೊನೆ ಬೀಳುವ ನಿರೀಕ್ಷೆ ಇದೆ. ಹೀಗಿದ್ದೂ ಖಾತೆಗಳ ಪರಿವರ್ತನೆ ಮಾಡುವುದಕ್ಕಾಗಿ ಸರ್ಕಾರವು ನಿಗದಿಪಡಿಸಿರುವ ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕವು ಮಧ್ಯಮವರ್ಗದವರ ಪಾಲಿಗೆ ನುಂಗಲಾರದ ತುತ್ತಾಗಿದೆ. ಒಂದು ಉದಾಹರಣೆ ತೆಗೆದುಕೊಳ್ಳುವುದಾದರೆ, ಪ್ರತಿ ಚದರ ಅಡಿಗೆ ₹7,000 ದರ ಇರುವ ಪ್ರದೇಶದ 30X40 ಚದರ ಅಡಿ ವಿಸ್ತೀರ್ಣದ ನಿವೇಶನಕ್ಕೆ 'ಎ' ಖಾತೆ ಪಡೆಯಲು ₹4.2 ಲಕ್ಷದಷ್ಟು ವೆಚ್ಚವಾಗಲಿದೆ. ತಮ್ಮ ಜೀವಮಾನದ ಉಳಿತಾಯದಿಂದ ನಿವೇಶನ ಖರೀದಿಸಿದ ಕುಟುಂಬಗಳ ಪಾಲಿಗೆ ಇದೊಂದು ದೊಡ್ಡ ಹೊರೆ. ಇಂತಹ ಆಸ್ತಿಗಳ ಮಾಲೀಕರು ನೋಂದಣಿ ಸಮಯದಲ್ಲಿ ಆಗಿನ ಮಾರ್ಗಸೂಚಿ ದರದ ಪ್ರಕಾರ ನೋಂದಣಿ ಮತ್ತು ಮುದ್ರಾಂಕ ಶುಲ್ಕವನ್ನು ಪಾವತಿಸಿದ್ದಾರೆ ಎಂಬುದನ್ನೂ ಗಣನೆಗೆ ತೆಗೆದುಕೊಳ್ಳಬೇಕು.

'ಬಿ' ಖಾತಾ ಆಸ್ತಿಗಳನ್ನು 'ಎ' ಖಾತಾ ಆಸ್ತಿಗಳಾಗಿ ಪರಿವರ್ತಿಸುವ ಸರ್ಕಾರದ ನಿರ್ಧಾರ ಒಳ್ಳೆಯದು. ಆದರೆ, ಈ ಪ್ರಕ್ರಿಯೆ ಜನಸಾಮಾನ್ಯರ ಪಾಲಿಗೆ ಹೊರೆ ಆಗಬಾರದು.

'ಬಿ' ಖಾತಾ ಆಸ್ತಿಗಳ ಬಿಕ್ಕಟ್ಟು ಕೇವಲ ನಾಗರಿಕರಿಂದಸೃಷ್ಟಿಯಾದಸಮಸ್ಯೆಯಲ್ಲ. ಇಂತಹ ಆಸ್ತಿಗಳ ನೋಂದಣಿಗೆ ಅವಕಾಶ ಕೊಟ್ಟು, ತೆರಿಗೆ ಸಂಗ್ರಹ ಮಾಡಿದ ಸರ್ಕಾರ ಸಹ ಈ ಸಮಸ್ಯೆಯ ಹೊಣೆಯನ್ನು ಹೊರಬೇಕು. ಇದುವರೆಗೆ ಆಡಳಿತದ ಹೊಣೆ ಹೊತ್ತವರೆಲ್ಲ ಈ ಪ್ರಮಾದದಲ್ಲಿ ಭಾಗೀದಾರರು. ಲಾಗಾಯ್ತಿನಿಂದಲೂ ಇಂತಹ ಆಸ್ತಿಗಳ ನೋಂದಣಿಗೆ ಸರ್ಕಾರವೇ ಮುಂದೆ ನಿಂತು ಅವಕಾಶ ಮಾಡಿಕೊಟ್ಟು, ಈಗ ದಂಡನೆಯ ಹಾದಿ ಹಿಡಿದಿರುವುದು ಸರಿಯಲ್ಲ. ಕಾನೂನುಬದ್ಧ ಆಗಿರದ ಆಸ್ತಿಗಳ ನೋಂದಣಿಗೆ ಸರ್ಕಾರವು ಮೊದಲಿನಿಂದಲೂ ಅನುಮತಿಯನ್ನೇ ನೀಡಬಾರದಿತ್ತು. ಪ್ರಸ್ತುತ ಅವ್ಯವಸ್ಥೆಯು ದಶಕಗಳ ಆಡಳಿತಾತ್ಮಕ ನಿರಾಸಕ್ತಿ ಮತ್ತು ಅನುಕೂಲಸಿಂಧು ರಾಜಕಾರಣದ ಪರಿಣಾಮವಾಗಿದೆ. ಯೋಜಿತ ಅಭಿವೃದ್ಧಿ ಮತ್ತು ನಾಗರಿಕ ಶಿಸ್ತಿಗಿಂತಲೂ ಮತಗಳು ಮತ್ತು ಆದಾಯವೇ ಆದ್ಯತೆ ಪಡೆದುದರ ಫಲಶ್ರುತಿ ಇದು. ಅಲ್ಲದೆ, ಯೋಜನೆಯ ವ್ಯಾಪ್ತಿ ಕೂಡ ಸೀಮಿತವಾಗಿದೆ. 'ಬಿ' ಖಾತಾಗಳನ್ನು ಹೊಂದಿರುವ ಅಪಾರ್ಟ್‌ಮೆಂಟ್‌ನಲ್ಲಿರುವ ಸಾವಿರಾರು ಗೃಹಗಳನ್ನು ಈ ಯೋಜನೆಯ ಪರಿಧಿಯಿಂದ ಹೊರಗೆ ಇಡಲಾಗಿದೆ. ಖಾಲಿ ನಿವೇಶನಗಳು ಮತ್ತು ಏಕ-ಘಟಕ ಕಟ್ಟಡ ಹೊಂದಿರುವ ನಿವೇಶನಗಳಿಗೆ ಮಾತ್ರ ಪ್ರಯೋಜನ ಸಿಗಲಿದೆ. ಅದೇ ರೀತಿ, ನಗರದ ಹೊರವಲಯದ ಪ್ರದೇಶಗಳಲ್ಲಿರುವ ಹಲವು ಬಡಾವಣೆಗಳು ಪಂಚಾಯಿತಿಗಳ ವ್ಯಾಪ್ತಿಗೆ ಬರುವುದರಿಂದ ಅಲ್ಲಿನ ಆಸ್ತಿಗಳಿಗೂ 'ಎ' ಖಾತಾ ಪಡೆಯುವ ಅದೃಷ್ಟವಿಲ್ಲ. ಅಲ್ಲಿನ ಖರೀದಿದಾರರು ಸಹ ನೋಂದಣಿ ಮತ್ತು ಮುದ್ರಾಂಕ ಶುಲ್ಕ ಪಾವತಿಸಿದ್ದಾರೆ. 'ಬಿ' ಖಾತಾ ಸಮಸ್ಯೆ ಎದುರಿಸುತ್ತಿರುವ ಎಲ್ಲಾ ಆಸ್ತಿಗಳನ್ನೂ ಯೋಜನೆಯ ವ್ಯಾಪ್ತಿಗೆ ತರಬೇಕು.

ಖಾತೆ ಪರಿವರ್ತನೆಗೆ ಅರ್ಜಿ ಹಾಕಲು ನವೆಂಬರ್ 1ರಿಂದ ನೂರು ದಿನಗಳ ಕಾಲಾವಕಾಶ ನೀಡಲಾಗಿದೆ. ಬೇಕಾದ ದಾಖಲೆಗಳನ್ನು ಹೊಂದಿಸಿಕೊಳ್ಳಲು ಮತ್ತು ಅಗತ್ಯ ಪ್ರಮಾಣದ ಶುಲ್ಕ ಭರಿಸಲು ನಾಗರಿಕರಿಗೆ ಹೆಚ್ಚಿನ ಸಮಯ ಬೇಕಾಗಿರುವುದರಿಂದ ಕೊಟ್ಟ ಕಡಿಮೆ ಕಾಲದ ಮಿತಿ ಕೂಡ ಒಂದು ದೊಡ್ಡ ಸವಾಲು. ಈ ಯೋಜನೆಯನ್ನು ಹಂತ ಹಂತವಾಗಿ ಜಾರಿಗೆ ತಂದಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಭಾರಿ ಪ್ರಮಾಣದ ಶುಲ್ಕವು ಜನರ ಭಾಗವಹಿಸುವಿಕೆಗೆ ಉತ್ತೇಜನ ನೀಡುವುದಿಲ್ಲ. ಅದರಿಂದ ಯೋಜನೆಯ ಉದ್ದೇಶವೇ ವ್ಯರ್ಥವಾದಂತಾಗುತ್ತದೆ. ಅರ್ಜಿ ಸಲ್ಲಿಸುವ ಪ್ರಕ್ರಿಯೆಯನ್ನು ಆನ್‌ಲೈನ್‌ನಲ್ಲಿ ಮಾಡಬಹುದಾದರೂ, ಅದನ್ನು ಕಚೇರಿಗಳಲ್ಲೇ ಪೂರ್ಣಗೊಳಿಸುವಂತಹ ಒತ್ತಡಕ್ಕೆ ಜನ ಸಿಲುಕುತ್ತಾರೆ. ತಮ್ಮ ಕೆಲಸವನ್ನು ಪೂರ್ಣಗೊಳಿಸಲು ಅವರು ಲಂಚ ನೀಡುವ ಪ್ರಮೇಯವೂ ಬರುತ್ತದೆ. ಖಾತಾ ಪರಿವರ್ತನೆಯು ಒಂದು ಒಳ್ಳೆಯ ಹೆಜ್ಜೆಯಾಗಿದ್ದರೂ ಯೋಜನೆಯ ಅನುಷ್ಠಾನದಲ್ಲಿರುವ ಲೋಪಗಳ ಕಡೆಗೆ ಸರ್ಕಾರ ಗಮನಹರಿಸಬೇಕು. ಶುಲ್ಕದ ಹೊರೆ ಕಡಿತ, ಕಾಲಮಿತಿ ಹೆಚ್ಚಳ ಮತ್ತು ಜನರ ಸುಲಿಗೆ ತಪ್ಪಿಸುವಂತಹ ಉಪಕ್ರಮಗಳಿಗೆ ಮುಂದಾಗಬೇಕು.

ಪ್ರಜಾಪ್ರಭುತ್ವ ಮತ್ತು ಸೃಜನಶೀಲತೆ

ಸಂವೇದನಾಶೀಲ ಪ್ರಜಾಪ್ರಭುತ್ವವನ್ನು, ನಾಗರಿಕ ಪ್ರಜ್ಞೆಯ ಜನರುಳ್ಳ, ಮಾನವೀಯತೆ ಮತ್ತು ಸಮಾನತೆಯ ಸಮಾಜವನ್ನು ಕಟ್ಟಿಕೊಳ್ಳುವುದಕ್ಕೂ, ಮಾನವ ಸೃಜನಶೀಲತೆ ಮತ್ತು ಪ್ರತಿಭೆಗಳ ಪ್ರಕಟಣೆಗೂ ಸೂಕ್ಷ್ಮ ಸಂಬಂಧಗಳಿವೆ. ಇದು ಆಯಾ ಸಮಾಜಗಳಿಗೆ ಮನವರಿಕೆಯಾದ ದಿನ, ಬೇರೆಯೇ ಚರಿತ್ರೆ ಆರಂಭವಾಗುತ್ತದೆ. ನಮ್ಮ ದೇಶ ಎಷ್ಟೆಲ್ಲ ಕ್ಷುಲ್ಲಕ ಜಗಳಗಳಲ್ಲಿ ಮುಳುಗಿದೆ ಎಂದು ತಿಳಿದ ದಿನ, ನಾವು ಬೇರೆಯೇ ಮನುಷ್ಯರಾಗುತ್ತೇವೆ.

ರಹಮತ್ ತರೀಕೆರೆ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಜಿಎಸ್‌ಟಿ ಜಾರಿಗೊಳಿಸಿ ಎಂಟು ವರ್ಷಗಳಿಂದಲೂ ಭಾರತೀಯರ ಹಣ ಸುಲಿದಿದ್ದು ಇದೇ ಕೇಂದ್ರ ಸರ್ಕಾರ ಮತ್ತು ಇದೇ ನರೇಂದ್ರ ಮೋದಿ. ಈಗ ಮೋದಿ ಫೋಟೊ ಹಾಕಿ 'ದೀಪಾವಳಿ ಗಿಫ್ಟ್' ಎಂದು ನಾಚಿಕೆ ಇಲ್ಲದೆ ಬೆನ್ನು ತಟ್ಟಿಕೊಳ್ಳುತ್ತಿದ್ದಾರೆ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಭಾನುವಾರ, 22-10-2000

• **ಮಂಗಳೂರು ಬಂದರು: ವಿ.ಪಿ. ಸಿಂಗ್, ದೇವೇಗೌಡ ಪ್ರತಿಭಟನೆ**

ಮಂಗಳೂರು, ಅ. 21– ದೇಶದ ಕೃಷಿ ಮತ್ತು ಕೈಗಾರಿಕಾ ರಂಗದ ಮೇಲೆ ತೀವ್ರ ದುಷ್ಪರಿಣಾಮ ಬೀರುತ್ತಿರುವ ಕೇಂದ್ರದ ಆರ್ಥಿಕ ನೀತಿ ಮತ್ತು ವಿದೇಶಿ ವಸ್ತುಗಳನ್ನು ಆಮದು ಮಾಡಿಕೊಳ್ಳಲು ಮುಕ್ತ ಪರವಾನಗಿ ನೀಡಿರುವ ಕೇಂದ್ರದ ಧೋರಣೆಯನ್ನು ಪ್ರತಿಭಟಿಸಲು ಮಾಜಿ ಪ್ರಧಾನಿಗಳಾದ ವಿ.ಪಿ. ಸಿಂಗ್ ಮತ್ತು ಎಚ್.ಡಿ. ದೇವೇಗೌಡ ಅವರು, ಇಂದು ನವ ಮಂಗಳೂರು ಬಂದರಿನ ಎದುರು ಪ್ರತಿಭಟನೆ ನಡೆಸಿ ಬಂದರು ಮಂಡಳಿಗೆ ಮನವಿ ಸಲ್ಲಿಸಿದರು.

ಮಾಜಿ ಪ್ರಧಾನಿಗಳ ಜೊತೆ ಜನತಾದಳ (ಜಾತ್ಯತೀತ) ಪಕ್ಷದ ರಾಜ್ಯ ಅಧ್ಯಕ್ಷ ಸಿದ್ದರಾಮಯ್ಯ, ಜಿಲ್ಲಾ ಅಧ್ಯಕ್ಷ ವಸಂತ ಬಂಗೇರ, ಐವಾನ್ ಡಿ'ಸೋಜಾ ಉಪಸ್ಥಿತರಿದ್ದರು.

75 ವರ್ಷಗಳ ಹಿಂದೆ

ಭಾನುವಾರ, 22-10-1950

• **ಬ್ರಿಟಿಷ್ ಅಣುವಿಜ್ಞಾನಿ ಮಾಸ್ಕೋಗೆ ಪರಾರಿ**

ರೋಮ್, ಅ. 21– ಇಟಲಿಗೆ ವಿಹಾರಾರ್ಥ ಬಂದಿದ್ದ, ಇಟಲಿಯಲ್ಲಿ ಹುಟ್ಟಿದ, ಆದರೆ ಬ್ರಿಟನ್ನಿನ ಪ್ರಜೆತನವನ್ನು ಗಳಿಸಿ ಅಲ್ಲಿಯ ಪರಮಾಣು ಸಂಶೋಧನಾಲಯವೊಂದರಲ್ಲಿ ವಿಜ್ಞಾನಿಯಾಗಿದ್ದ ಪ್ರೊಫೆಸರ್ ಬ್ರೂನೋ ಪೊಂಟಿಕೊರೊ ಅವರು, ಇದ್ದಕ್ಕಿದ್ದ ಹಾಗೆ ಪತ್ತೆಯಿಲ್ಲದೆ ಹೋಗಿದ್ದಾರೆಂದೂ, ಪ್ರಾಯಶಃ ರಷ್ಯಕ್ಕೆ ಓಡಿಹೋಗಿರಬೇಕೆಂದು ವರದಿಯಾಗಿತ್ತಷ್ಟೆ.

ಇತ್ತೀಚಿನ ಪರಿಶೀಲನೆಗಳಿಂದ ಅವರು ಪೋಲೆಂಡಿನ ರಹದಾರಿಯ ಮೇಲೆ ಅಲ್ಲಿಗೆ ಹಾರಿ ಹೋದರೆಂದೂ, ಬ್ರಿಟಿಷ್ ರಹದಾರಿಯ ಮೇಲೆ ಇಟಲಿಗೆ ಬಂದಿದ್ದುದರಿಂದ ಇಟಲಿಯ ಭದ್ರತಾ ಶಾಖೆಯ ಪೊಲೀಸರಿಗೆ ಅನುಮಾನವೇನೂ ಬರಲಿಲ್ಲವೆಂದೂ, ಆದರೆ, ಬ್ರಿಟಿಷ್ ಗುಪ್ತಶಾಖೆಯವರು ಪರಿಶೀಲನೆ ಆರಂಭಿಸಿದ ಮೇಲೆ ಈ ಅಂಶಗಳೆಲ್ಲವನ್ನು ಅವರು ತಿಳಿಸಿದ್ದಾರೆಂದು ಗೊತ್ತಾಗಿದೆ.

ದ್ವೇಷಕಾಲ: ಮರಳಲಿ ಗಾಂಧಿತತ್ತ್ವ

ವಿಶ್ಲೇಷಣೆ

ಸುದರ್ಶನ್ ಅಯ್ಯಂಗಾರ್

ಇಡೀ ವಿಶ್ವವೇ ಗಾಂಧಿ ಅವರನ್ನು ಶಾಂತಿದೂತ ಎಂದು ಗುರುತಿಸಿದೆ. ಅಹಿಂಸೆ ಹಾಗೂ ಶಾಂತಿಯ ಜಾಗತಿಕ ಪ್ರತಿಪಾದಕ ಎಂದೇ ಗಾಂಧಿ ಒಟ್ಟು 102 ದೇಶಗಳಲ್ಲಿ ಬಣ್ಣನೆಗೆ ಒಳಗಾಗುತ್ತಿದ್ದಾರೆ. ಅಷ್ಟೇ ಅಲ್ಲ, ಆ ದೇಶಗಳಲ್ಲಿ ಗಾಂಧಿ ಪ್ರತಿಮೆಗಳೂ ಇವೆ. ಕಳೆದ ಎರಡು ಸಹಸ್ರಮಾನಗಳಲ್ಲಿ ಜನಿಸಿದ 10 ಶ್ರೇಷ್ಠ ವ್ಯಕ್ತಿಗಳಲ್ಲಿ ಗಾಂಧಿ ಅವರೂ ಒಬ್ಬರಾಗಿದ್ದು, ಈ ದಿಗ್ಗಜನ ಕುರಿತು ಪ್ರಕಟವಾದಷ್ಟು ಬರಹಗಳು ಬೇರೆ ಯಾರ ಬಗೆಗೂ ಬಂದಿಲ್ಲ.

ನಮ್ಮ ದೇಶದ ಪ್ರಧಾನಿ ಕೂಡ 'ಗಾಂಧಿ ಜಾಗತಿಕ ಮೂರ್ತಿ' ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದರು. ಅಹಮದಾಬಾದ್‌ನ ಸಾಬರಮತಿ ಆಶ್ರಮದಲ್ಲಿರುವ ಗಾಂಧಿ ಸ್ಮಾರಕವನ್ನು ವಿಶ್ವದರ್ಜೆಗೆ ಪರಿವರ್ತಿಸುವುದಾಗಿಯೂ ಹೇಳಿದ್ದರು. ₹1,200 ಕೋಟಿಯ ಈ ಮಹತ್ವಾಕಾಂಕ್ಷಿ ಯೋಜನೆಯ ಕಾಮಗಾರಿ ಈಗ ನಡೆಯುತ್ತಿದೆ. ಭಾರತದ ಯಾರೇ ಪ್ರಮುಖ ನಾಯಕರಾಗಲಿ, ಗಾಂಧಿ ಅವರನ್ನು ಕೈಬಿಡುವುದು ಸಾಧ್ಯವೇ ಇಲ್ಲ. ಗಾಂಧಿ ಅವರು ಭಾರತದ ಜಾಗತಿಕ ಚಹರೆ ಎನ್ನುವುದು ಸೂರ್ಯ ಸ್ಪಷ್ಟ. ಹೀಗಾಗಿಯೇ ಅವರ ಸ್ಮರಣೆ ನಿರಂತರ.

2014ರ ನವೆಂಬರ್‌ನಿಂದ 2025ರ ಸೆಪ್ಟೆಂಬರ್‌ವರೆಗೆ ವಿದೇಶಿ ಸಂಸತ್‌ಗಳಲ್ಲಿ ನಮ್ಮ ಪ್ರಧಾನಿ ಮಾಡಿದ 17 ಭಾಷಣಗಳಲ್ಲಿ 6ರಲ್ಲಿ ಗಾಂಧಿ ಕುರಿತು ಪ್ರಸ್ತಾಪಿಸಿದ್ದಾರೆ. ಅನೇಕ ಸಂದರ್ಭಗಳಲ್ಲಿ ಅವರು ಅಂತರರಾಷ್ಟ್ರೀಯ 'ಬ್ರ್ಯಾಂಡಿಂಗ್' ಉದ್ದೇಶದಿಂದ ಗಾಂಧಿ ಹೆಸರನ್ನು ಪರೋಕ್ಷವಾಗಿಯಾದರೂ ಬಳಸಿಕೊಂಡಿದ್ದಾರೆ. ಸುಸ್ಥಿರ ಪ್ರಗತಿ ಹಾಗೂ ಸಮಾನತೆಯ ಬಗ್ಗೆ ಮಾತನಾಡುವಾಗಲೆಲ್ಲ ಅವರು ಗಾಂಧಿ ಮೂಲತತ್ತ್ವಗಳನ್ನು ಉಲ್ಲೇಖಿಸಿದ್ದಾರೆ. ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಮಾತನಾಡುವಾಗ ಗಾಂಧಿ ಅವರ 'ವಸುಧೈವ ಕುಟುಂಬಕಂ' ಸಂದೇಶವನ್ನು ಪದೇ ಪದೇ ಅರುಹಿದ್ದಾರೆ. ರಾಜತಾಂತ್ರಿಕ ಉದ್ದೇಶದ ದೃಷ್ಟಿಯಿಂದ ಇದು ಪ್ರಧಾನಿ ಅವರಿಗೆ ಗಿಟ್ಟುವ ವರಸೆಯೂ ಆಗಿದೆ.

ದೇಶದಲ್ಲಿಯೂ ಅವರು 'ಗಾಂಧಿ' ನಾಮಬಲವನ್ನು ಜಪಿಸುತ್ತಲೇ ಬಂದಿದ್ದಾರೆ. 2014ರ ಅಕ್ಟೋಬರ್ 2ರಂದು 'ಸ್ವಚ್ಛ ಭಾರತ ಅಭಿಯಾನ' ಪ್ರಾರಂಭಿಸಿದ್ದಾಗ, ಇತ್ತೀಚೆಗೆ ಸ್ವದೇಶಿ ಮಂತ್ರ ಪಠಿಸಿದಾಗ ಗಾಂಧಿ ತತ್ತ್ವದ ಸಂಕೇತಗಳು ಅವರ ಮಾತಿನಲ್ಲಿ ಎದ್ದುಕಂಡಿದ್ದವು. ದೆಹಲಿ ವಿಮಾನ ನಿಲ್ದಾಣದ ಮೂರನೇ ಟರ್ಮಿನಲ್‌ನಲ್ಲಿ ಚೆಕ್–ಇನ್ ವಿಭಾಗ ಪ್ರವೇಶಿಸುವಾಗ ಬೃಹತ್ ಚರಕವೊಂದು ಆಕರ್ಷಿಸುತ್ತದೆ. ಜನರು ಅದನ್ನು ನೋಡದೇ ಸಾಗಲು ಸಾಧ್ಯವೇ ಇಲ್ಲ. ಬರ್ಮಾ ಟೀಕ್‌ನಲ್ಲಿ ಮಾಡಿದ ಆ ಚರಕದ ತೂಕ ನಾಲ್ಕು ಟನ್. ಆ ಚರಕವನ್ನು ಅನಾವರಣಗೊಳಿಸಿದ ಸಮಾರಂಭದಲ್ಲಿ ಪ್ರಧಾನಿ ಆಡಿದ ಮಾತಿನಲ್ಲಿ, 'ಸುಸ್ಥಿರತೆ ಹಾಗೂ ಸಾಮರಸ್ಯದ ಮೌಲ್ಯಗಳು ಹಾಗೂ ಕಾಲಾತೀತವಾದ ಪರಂಪರೆಯನ್ನು ಇಂದಿರಾಗಾಂಧಿ ವಿಮಾನ ನಿಲ್ದಾಣದಲ್ಲಿ ಸಾಗುವ ಪ್ರಯಾಣಿಕರಿಗೆಲ್ಲ ಈ ಚರಕ ನೆನಪಿಸಲಿದೆ' ಎಂದಿದ್ದರು. ದೇಶದ ನಾಗರಿಕರು ಖಾದಿಗೆ ಉತ್ತೇಜನ ನೀಡಬೇಕೆಂದು ಕರೆ ನೀಡಿದ್ದರು. ಅಹಮದಾಬಾದ್‌ನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇರುವ 'ಗಾಂಧಿ–ಜಿ ಕೆ ಪದ್ ಚಿಹ್ನಾ' (ಗಾಂಧೀಜಿಯ ಹೆಜ್ಜೆಗುರುತು) ಎಂಬ ಪ್ರದರ್ಶನವೊಂದನ್ನು ನೋಡದೇ ಸಾಗುವ ಪ್ರಯಾಣಿಕರೂ ವಿರಳ.

ಇಷ್ಟೆಲ್ಲ ಇದ್ದರೂ, ಗಾಂಧಿ ತಾವು ಯಾವ ದೇಶಕ್ಕಾಗಿ ಹುಟ್ಟಿ, ಯಾವುದಕ್ಕಾಗಿ ಮೃತಪಟ್ಟರೋ ಅಲ್ಲಿ ಕಳೆದ 25 ವರ್ಷಗಳಿಂದ ಅವರನ್ನು ಕುರಿತ ದ್ವೇಷ ಪ್ರಚಾರವನ್ನು ಹರಿತಗೊಳಿಸಲಾಗುತ್ತಿದೆ. ಮುಸ್ಲಿಂ ಪಕ್ಷಪಾತಿ ಎಂದು ಆರೋಪಿಸಿ ಅವರನ್ನು ಟೀಕಿಸುತ್ತಿದ್ದಾರೆ. ಅಸ್ಪೃಶ್ಯತೆಯನ್ನು ಹೋಗಲಾಡಿಸಲು 15 ವರ್ಷ ಅವರು ಪಟ್ಟುಬಿಡದೆ ಮಾಡಿದ ಹೋರಾಟವನ್ನೂ ಇಂದು ಗೇಲಿ ಮಾಡುವವರಿದ್ದಾರೆ. ಸರ್ದಾರ್ ವಲ್ಲಭಭಾಯಿ ಪಟೇಲ್, ನೇತಾಜಿ ಸುಭಾಷ್ ಚಂದ್ರ ಬೋಸ್ ಇಬ್ಬರನ್ನೂ ನಿರ್ಲಕ್ಷಿಸಿದರು ಎಂಬ ಕಾರಣ ನೀಡಿ, ಗಾಂಧೀಜಿಯನ್ನು ಖಂಡಿಸುತ್ತಿದ್ದಾರೆ. ಭಗತ್ ಸಿಂಗ್ ನೇಣುಹಾಕಿಕೊಳ್ಳಲು ಗಾಂಧಿ ಅವರೇ ಕಾರಣ ಎಂದು ಬಿಂಬಿಸುತ್ತಿದ್ದಾರೆ. ದೇಶದ ಸ್ವಾತಂತ್ರ್ಯ ಚಳವಳಿಗೆ ಅವರು ನೀಡಿದ ಕೊಡುಗೆಯನ್ನು ಮೂಲೆಗುಂಪು ಮಾಡಲಾಗಿದೆ. 'ರಾಷ್ಟ್ರಪಿತ' ಎಂದು ಬೋಸ್ ಅವರೇ ನೀಡಿದ್ದ ಗುಣವಿಶೇಷಣವೇ ಅಪಹಾಸ್ಯಕ್ಕೀಡಾಗುತ್ತಿದೆ. ಸಾಮಾಜಿಕ ಮಾಧ್ಯಮವಂತೂ ಗಾಂಧಿ ಕುರಿತು ಎಷ್ಟೆಲ್ಲ ಸಾಧ್ಯವೋ ಅಷ್ಟೂ ವಿನಾಶಕಾರಿ ಸಂಗತಿಗಳನ್ನು ನಮ್ಮ ಮನಸ್ಸಿಗೆ ತುರುಕುತ್ತಿದೆ.

> ಶಾಂತಿ–ಸೌಹಾರ್ದದ ರಾಯಭಾರಿಯ ರೂಪದಲ್ಲಿ ವಿಶ್ವವೇ ಗೌರವಿಸುವ ಗಾಂಧೀಜಿ ವಿಚಾರಧಾರೆ, ದ್ವೇಷ ಭಾಷಣಗಳಿಂದ ಗಾಸಿಗೊಳ್ಳುತ್ತಿರುವ ಮನಸ್ಸುಗಳನ್ನು ಅರಳಿಸುವ ಅಮೃತಸಿಂಚನ. ಸಮಾಜದ ನ್ಯಾಯಮಾರ್ಗವನ್ನು ಎತ್ತಿಹಿಡಿಯಲು ಹಂಬಲಿಸುವವರಿಗೆ ಗಾಂಧಿಮಾರ್ಗವೇ ಅಮೃತಪಥ.

'ಗಾಂಧಿಯ ಗುಜರಾತ್' ಎಂಬ ಜನಪ್ರಿಯ ನಾಣ್ಣುಡಿಯೊಂದು ಇತ್ತು. ಅದೀಗ ಕಳಪೆ ನುಡಿಗಟ್ಟಾಗಿ ಬದಲಾಗಿದೆ. ಉತ್ಪಾದಿತ ಕ್ರೌರ್ಯವೊಂದನ್ನು ದ್ವೇಷದ ಪೊರೆಯೊಳಗೆ ಇರಿಸಿ, ಜನರ ಮಿದುಳು–ಹೃದಯದೊಳಗೆ ಇಳಿಬಿಡಲಾಗಿದೆ. ಹಿಂದುತ್ವ ತೀವ್ರವಾದಿಗಳು ಕಾನೂನು ಸಂರಕ್ಷಕರ ಅಂಕೆಗೂ ಅಂಜದೆ ಚಟುವಟಿಕೆಗಳಲ್ಲಿ ತಲ್ಲೀನರಾಗಿದ್ದಾರೆ. ನವರಾತ್ರಿಯ ಗರ್ಬಾ ಉತ್ಸವದ ಟಿಕೆಟ್ ಹಾಗೂ ಪಾಸ್‌ಗಳಲ್ಲಿ ಮುಸ್ಲಿಮರಿಗೆ ಎಷ್ಟನ್ನು ನೀಡಲಾಗಿದೆ ಎಂದು ಆಯೋಜಕರನ್ನು ಈ ಹಿಂದುತ್ವದ ತೀವ್ರವಾದಿಗಳು ವಿಚಾರಣೆಗೆ ಒಳಪಡಿಸಿರುವ ಆತಂಕಕಾರಿ ವಿದ್ಯಮಾನವೊಂದನ್ನು ಕಂಡಿದ್ದೇವೆ.

ಈ ವರ್ಷದ ಆರಂಭದಲ್ಲಿ ದ್ವೇಷ ಭಾಷಣಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂಬ ಸಂಗತಿ ವರದಿಯಾಗಿತ್ತು. 2024ರಲ್ಲಿ 1,165 ದ್ವೇಷ ಭಾಷಣಗಳನ್ನು ಮಾಡಿದ್ದರು. ಅದಕ್ಕೂ ಹಿಂದಿನ ವರ್ಷ ವರದಿಯಾಗಿದ್ದ ದ್ವೇಷ ಭಾಷಣಗಳ ಸಂಖ್ಯೆ 668. ರಾಜಕೀಯ ರ್‍ಯಾಲಿಗಳು, ಧಾರ್ಮಿಕ ಮೆರವಣಿಗೆಗಳು, ಪ್ರತಿಭಟನಾ ಮೆರವಣಿಗೆಗಳು, ಸಾಂಸ್ಕೃತಿಕ ಸಮಾರಂಭಗಳಲ್ಲಿ ಇಂತಹ ದ್ವೇಷ ಭಾಷಣಗಳನ್ನು ಕೇಳಿದ್ದೇವೆ. ಕಳೆದ ವರ್ಷ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ದ್ವೇಷ ಭಾಷಣಗಳ ಸಂಖ್ಯೆಯಲ್ಲಿ ವಿಪರೀತ ಏರಿಕೆ ಉಂಟಾಯಿತು.

ಹಗೆತನದ ವಾತಾವರಣ, ಜಾತಿ–ಆಧಾರಿತ ಹಿಂಸೆಯ ವಿರುದ್ಧದ ಹೋರಾಟಕ್ಕೆ ಗಾಂಧಿ ತಮ್ಮ ಜೀವಿತದ ಬಹುಕಾಲವನ್ನು ವ್ಯಯಿಸಿದ್ದರು. ದಲಿತರಿಗೆ ಸಾಂವಿಧಾನಿಕ ಹಕ್ಕು ಒದಗಿಸುವ ಹೋರಾಟದ ನೇತೃತ್ವ ವಹಿಸಿದ್ದ ಬಿ.ಆರ್. ಅಂಬೇಡ್ಕರ್ ಅವರೊಟ್ಟಿಗೆ ಇದ್ದ ತೀಕ್ಷ್ಣ ಭಿನ್ನಾಭಿಪ್ರಾಯದ ಹೊರತಾಗಿಯೂ ಗಾಂಧಿ ಅಸ್ಪೃಶ್ಯತೆ ಹೋಗಲಾಡಿಸುವ ಹೋರಾಟವನ್ನು ಮುಂದುವರಿಸಿದ್ದರು. ನಾವು ಭಾರತೀಯರು ಅಂಬೇಡ್ಕರ್, ಗಾಂಧಿ ಇಬ್ಬರೂ ಪ್ರತಿಪಾದಿಸಿದ ವಿಚಾರಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಸೋತಿದ್ದೇವಲ್ಲವೆ? ತಥಾಕಥಿತ ಪ್ರಬಲ ಜಾತಿಗಳು ದಲಿತರನ್ನು ಅವಮಾನಿಸುವ, ಹೀಗಳೆಯುವ, ಅವರ ಮೇಲೆ ದೌರ್ಜನ್ಯ–ಅತ್ಯಾಚಾರ ಮಾಡುವ ಹಾಗೂ ಕೊಲ್ಲುವ ಯಾವ ಅವಕಾಶಗಳನ್ನೂ ಬಿಟ್ಟಿಲ್ಲವಲ್ಲ.

ದ್ವೇಷ ಭಾಷಣವು ಪೂರ್ವಯೋಜಿತ ಹಾಗೂ ರಾಜಕೀಯ ಪ್ರೇರಿತ. ಇಂತಹ ಆಂದೋಲನವನ್ನು ರೂಪಿಸುವ ಮಿದುಳುಗಳು, ಸಮಾಜದ ಅಂಚಿನಲ್ಲಿ ಇರುವವರು ಸದಾ ಅದೇ ಸ್ಥಿತಿಯಲ್ಲಿ ಇರಬೇಕು ಎಂದೇ ಬಯಸುತ್ತಿರುತ್ತವೆ. ದ್ವೇಷ ಹರಡುವುದು, ನೋಯಿಸುವುದು, ಭೇದ–ಭಾವ ಮಾಡುವುದು, ಹಗೆತನ ಸಾಧಿಸುವುದು... ಇಂತಹ ವಾತಾವರಣದಿಂದ ಆಗಬಹುದಾದ ಪರಿಣಾಮ ಎಂಥದೆಂಬ ಅರಿವು ಭಾರತದ ನಾಗರಿಕರಲ್ಲಿ ಇನ್ನೂ ಮೂಡಿಲ್ಲ. ನಿರ್ದಿಷ್ಟ ಸಮುದಾಯವನ್ನು ಗುರಿಯಾಗಿಸಿ ಜನರು ಹಾಗೂ ನೇರವಾಗಿ ಸರ್ಕಾರವು ವಂಚನೆಯ ಆಟವಾಡಿದರೆ, ಆ ಸಮುದಾಯದವರು ಗೋಡೆಯ ಮೂಲೆಗೆ ಸಿಲುಕಿದ ಸ್ಥಿತಿ ತಲುಪುತ್ತಾರೆ. ಆ ಸಮುದಾಯಗಳಲ್ಲಿ ದುಡಿಯುವ ಕೈಗಳಿಗೆ ಸರಿಯಾದ ಅವಕಾಶ ಸಿಗದಿದ್ದಲ್ಲಿ ಮೊದಲೇ ಹತಾಶೆ ಮನೆಮಾಡಿರುತ್ತದೆ. ಹೀಗಿರುವಾಗ ಮೂಲೆಗುಂಪು ಮಾಡುವ ಹುನ್ನಾರ ನಡೆದರೆ, ಅವರೆಲ್ಲ ದಂಗೆ ಏಳುವ ದಿನ ಬಂದೇ ಬರಲಿದೆ. ದ್ವೇಷ ಹಾಗೂ ಹಿಂಸೆಯ ಚಕ್ರ ಯಾವಾಗ ಬೇಕಾದರೂ ಹೀಗೆ ಮೇಲಿನಿಂದ ಕೆಳಕ್ಕೆ, ಕೆಳಗಿನಿಂದ ಮೇಲಕ್ಕೆ ಬರಬಲ್ಲದು. ಹೀಗಾದಲ್ಲಿ ಇಡೀ ದೇಶವನ್ನೇ ಅದು ನುಂಗಿಹಾಕುತ್ತದೆ.

ಮಹಾತ್ಮ ಗಾಂಧಿ ತಮ್ಮ ಇಡೀ ಬದುಕಿನಲ್ಲಿ ಜಾತಿ ಆಧಾರಿತ ಹಿಂಸೆಯನ್ನು ಕೊನೆಗಾಣಿಸಲು ಅಹಿಂಸಾ ಮಾರ್ಗವನ್ನು ಅನುಸರಿಸಿದರು. ಹಿಂದೂ–ಮುಸ್ಲಿಂ ಏಕತೆಯನ್ನೂ ಪ್ರತಿಪಾದಿಸಿದರು. ಹಾಗಿದ್ದೂ ಅವರ ಶ್ರೇಷ್ಠ ವ್ಯಕ್ತಿತ್ವವನ್ನೇ ಮುಕ್ಕಾಗಿಸುವ ವ್ಯವಸ್ಥಿತ ಪ್ರಚಾರಗಳು ಭಾರತದಲ್ಲಿ ನಡೆಯುತ್ತಿವೆ. ಅಸ್ಪೃಶ್ಯತೆ ಹೋಗಲಾಡಿಸಿ, ಸಮಾನತೆ ಸ್ಥಾಪಿಸಬೇಕು ಎಂದು ಅವರು ಅಷ್ಟೆಲ್ಲ ಪ್ರಯತ್ನಗಳನ್ನು ನಡೆಸಿದ್ದರೂ ಇಂದಿಗೂ ದಲಿತರು, ಮುಸ್ಲಿಮರನ್ನು ಭೇದ–ಭಾವದಿಂದ ನೋಡಲಾಗುತ್ತಿದೆ. 2025ರಲ್ಲೂ ಅವರ ಮೇಲೆ ದೌರ್ಜನ್ಯ–ಹಿಂಸೆ ನಡೆಯುತ್ತಿದೆ. ಗಾಂಧಿ ಹಾಗೂ ಅಂಬೇಡ್ಕರ್ ತತ್ತ್ವಗಳನ್ನು ತುಳಿದುಹಾಕಿದ ನಡೆ ಇದು.

ಸಾಮಾಜಿಕ ಹಾಗೂ ರಾಜಕೀಯ ಶಕ್ತಿಗಳು ಅಲ್ಪಸಂಖ್ಯಾತರನ್ನು ಮೂಲೆಗುಂಪು ಮಾಡುತ್ತಿವೆ. 'ಕೆಳ ಜಾತಿ' ಎನ್ನುತ್ತಾ ಮೂದಲಿಸಿ, ಬಹಿಷ್ಕಾರ ಹಾಕುತ್ತಿವೆ. ಹೀಗೆ ಮಾಡುವುದರಿಂದ, ಘರ್ಷಣೆ, ಪ್ರತೀಕಾರದ ಪೋಷಣೆ ಮಾಡಿದಂತಾಗುತ್ತಿದೆ. ಗಾಂಧಿತತ್ತ್ವಗಳಾದ ಸತ್ಯಾಗ್ರಹ, ಸತ್ಯಾನ್ವೇಷಣೆ, ಅಹಿಂಸೆ, ಜಾಗತಿಕ ಏಕತೆ ವಿಶ್ವದ ಅನೇಕ ಚಳವಳಿಗಳಿಗೆ ಸ್ಫೂರ್ತಿ ನೀಡಿದವು. ಆದರೆ, ಭಾರತದಲ್ಲಿ ಕೆಲವರು ಕ್ಷುಲ್ಲಕ ಅನುಕೂಲಸಿಂಧುತ್ವಕ್ಕಾಗಿ ಇತಿಹಾಸವನ್ನು ತಿರುಚುತ್ತಿರುವುದರಿಂದ ಗಾಂಧಿತತ್ತ್ವಗಳಿಗೇ ಅಪಾಯ ಉಂಟಾಗಿದೆ. ಗಾಂಧಿ ಅವರ 156ನೇ ಜನ್ಮ ದಿನಾಚರಣೆಯ ಸಂದರ್ಭಕ್ಕೆ ಅರ್ಥ ಬರಬೇಕೆಂದರೆ, ಭಾರತವು ದ್ವೇಷವನ್ನು ಬಿಡಬೇಕು. ಪರಸ್ಪರ ಸಂವಾದದಲ್ಲಿ ನಂಬಿಕೆ ಇರಿಸಬೇಕು. ಸಮಾಜದ ಒಡಕನ್ನು ಮುಚ್ಚುವ ನ್ಯಾಯಮಾರ್ಗವನ್ನು ಎತ್ತಿಹಿಡಿಯಬೇಕು. ಆಗಷ್ಟೇ ಶಾಂತಿಯುತ ಭವಿಷ್ಯ ನಮ್ಮದಾದೀತು.

(ಲೇಖಕರು, 1920ರಲ್ಲಿ ಗಾಂಧೀಜಿ ಸ್ಥಾಪಿಸಿದ ಗುಜರಾತ್ ವಿದ್ಯಾಪೀಠದ ಮಾಜಿ ವೈಸ್ ಚಾನ್ಸಲರ್)

ಚುರುಮುರಿ

ಪಟಾಕಿ ಫಜೀತಿ

• ಮಣ್ಣೆ ರಾಜು

ಶಂಕ್ರಿ ಕುಟುಂಬದವರು ಪಟಾಕಿ ಹಚ್ಚುವುದನ್ನು ಆಕ್ಷೇಪಿಸಿ ನೆರೆಹೊರೆಯವರು ಬೀದಿಜಗಳಕ್ಕೆ ಬಂದರು.

'ಪರಿಸರಸ್ನೇಹಿ ಹಸಿರು ಪಟಾಕಿ ಮಾತ್ರ ಹಚ್ಚಬೇಕು, ಅಪಾಯಕಾರಿ ಪಟಾಕಿಗೆ ಬೆಂಕಿ ಇಡಕೂಡದು' ಒಬ್ಬ ಕಿತಾಪತಿ ತೆಗೆದ.

'ಎಲ್ಲವೂ ಹಸಿರು ಪಟಾಕಿಗಳೇ, ಕಲರ್ ನೋಡಿ' ಅಂದಳು ಸುಮಿ.

'ಹಸಿರು ಪಟಾಕಿ ಎಂಬ ಸರ್ಟಿಫೈಡ್ ಕಾಪಿ ಇದೆಯೇನ್ರೀ?'

'ಸಾರ್ವಜನಿಕ ರಸ್ತೆಯಲ್ಲಿ ಪಟಾಕಿ ಹಚ್ಚಲು ಸರ್ಕಾರದ ಪರ್ಮಿಷನ್ ತಗೊಂಡಿದ್ದಿರೇನ್ರೀ?' ಇನ್ನೊಬ್ಬ ಕೇಳಿದ.

'ರಸ್ತೆಯಲ್ಲಿ ಮೆರವಣಿಗೆ, ಪಾದಯಾತ್ರೆ, ಪಥ ಸಂಚಲನ, ಪ್ರಾರ್ಥನೆಗೆ ಅನುಮತಿ ಬೇಕು, ಪಟಾಕಿ ಹಚ್ಚಲು ಬೇಕಾಗಿಲ್ಲ' ಶಂಕ್ರಿ ತಿರುಗೇಟು ಕೊಟ್ಟ.

'ನಮ್ಮ ಮನೆಗಳಲ್ಲಿ ವಯೋವೃದ್ಧರು, ಹಾರ್ಟ್ ಪೇಷೆಂಟ್‌ಗಳು, ಎಳೆಯ ಮಕ್ಕಳಿವೆ. ನಿಮ್ಮ ಪಟಾಕಿ ಸೌಂಡಿನಿಂದ ಅನಾಹುತವಾದರೆ ಯಾರ್ರೀ ಹೊಣೆ?'

ಜಗಳ ದೊಡ್ಡದಾಯ್ತು, ಪೊಲೀಸರು ಬಂದರು.

'ಹೋದ ವರ್ಷ ಇವರು ಹಚ್ಚಿದ ಪಟಾಕಿ ಕಿಡಿ ತಗುಲಿ ನಮ್ಮ ಬೈಕ್ ಸುಟ್ಟುಹೋಯ್ತು. ಈ ಬಾರಿ ಕಾರಿಗೆ ಬೆಂಕಿ ಬಿದ್ದರೆ ಗತಿ ಏನು ಸಾರ್?' ಪೊಲೀಸರಿಗೆ ಕೇಳಿದ.

'ರಸ್ತೆಯಲ್ಲಿ ಕಾರು ನಿಲ್ಲಿಸಲು ಪರ್ಮಿಷನ್ ತಗೊಂಡಿದ್ದಿರೇನ್ರೀ? ಮನೆ ಮುಂದೆ ನಿಲ್ಲಿಸುವ ವಾಹನಗಳಿಗೂ ಸರ್ಕಾರದ ಅನುಮತಿ, ಪಾರ್ಕಿಂಗ್ ಚಾರ್ಜ್ ಕಡ್ಡಾಯ ಮಾಡಬೇಕು' ಸುಮಿ ಸಿಟ್ಟಾದಳು.

'ನೆರೆಹೊರೆಯವರ ವಿರೋಧದ ನಡುವೆ ಪಟಾಕಿ ಹಚ್ಚುವ ಹಟ ಯಾಕ್ರೀ?' ಪೊಲೀಸರ ಪ್ರಶ್ನೆ.

'ಪಟಾಕಿ ಚೀಟಿಗೆ ರೇಷ್ಮೆಸೀರೆ ಗಿಫ್ಟ್ ಆಫರ್ ಇತ್ತು. ಸೀರೆ ಆಸೆಗೆ ನನ್ನ ಹೆಂಡ್ತಿ ಚೀಟಿ ಹಾಕಿದ್ದಳು. ಚೀಟಿಯಲ್ಲಿ ಬಂದ ಪಟಾಕಿಯನ್ನು ಸುಡದೆ ಏನು ಮಾಡೋಣ?' ಅಂದ ಶಂಕ್ರಿ.

'ಪೊಲೀಸರಿಗೆ ಒಪ್ಪಿಸಿ...' ನೆರೆಹೊರೆಯವರು ಒತ್ತಾಯಿಸಿದರು.

'ಸೂಕ್ತ ಕ್ರಮ ಜರುಗಿಸುತ್ತೇವೆ...' ಎಂದು ಹೇಳಿ ಪೊಲೀಸರು ಶಂಕ್ರಿ ಪಟಾಕಿಯನ್ನು ತೆಗೆದುಕೊಂಡು ಹೊರಟರು.

ಸಂಗತ

ಶಿಸ್ತಿನ ಇಲಾಖೆಗೆ ಹೃದಯವಂತಿಕೆಯೂ ಅಗತ್ಯ

ಪೊಲೀಸ್ ಇಲಾಖೆ ಶಿಸ್ತಿಗೆ ಹೆಸರುವಾಸಿ. ಆ ಶಿಸ್ತು ಮಾನವೀಯ ಸಂಬಂಧಗಳನ್ನು ನಿರ್ಲಕ್ಷಿಸಲಿಕ್ಕೆ ಕಾರಣ ಆಗಬಾರದು. ಅತಿಥಿಗಳನ್ನು ಗೌರವದಿಂದ ಕಾಣುವಂತಿರಬೇಕು.

• ಡಾ. ಲಕ್ಷ್ಮಣ ವಿ.ಎ.

ಆ ಬೆಳಗು (ಅ. 15) ಚಿಕ್ಕಮಗಳೂರು ಜಿಲ್ಲೆಯ ಕಡೂರು ಪಟ್ಟಣ ಒಂದು ವಿಶಿಷ್ಟ ಸಂಭ್ರಮಕ್ಕೆ ಸಾಕ್ಷಿಯಾಗಿತ್ತು. ಬಿಳಿ ಕಚ್ಚೆ ಧೋತರ ಮತ್ತು ಗಾಂಧಿ ಟೊಪ್ಪಿಗೆ ಧರಿಸಿದ ಅಪ್ಪಂದಿರು, ಇಳಕಲ್ ಸೀರೆ ತೊಟ್ಟ ಅಪ್ಪಟ ಉತ್ತರ ಕರ್ನಾಟಕದ ದಿರಿಸಿನಲ್ಲಿ ಅವ್ವಂದಿರು– ಅಕ್ಕಂದಿರು ದೂರದ ಕಲಬುರಗಿ, ವಿಜಯಪುರ, ಬೆಳಗಾವಿ, ರಾಯಚೂರು, ಚಾಮರಾಜನಗರ, ಕೊಳ್ಳೇಗಾಲ ಭಾಗಗಳಿಂದ ಬಂದು ಆ ದಿನ ತಮ್ಮ ಮಕ್ಕಳ 'ನಿರ್ಗಮನ ಪಥಸಂಚಲನ'ವನ್ನು ಕಣ್ಣಾರೆ ಕಾಣುವ ತವಕದಲ್ಲಿದ್ದರು.

ಕಡೂರಿನ ಪೊಲೀಸ್ ತರಬೇತಿ ಕೇಂದ್ರದಲ್ಲಿ ನಾಡಿನ ನಾನಾ ಭಾಗದ ಒಟ್ಟು 488 ಭಾವಿ ಪೊಲೀಸರಿಗೆ ಅಂದು ತರಬೇತಿಯ ಅಂತಿಮ ದಿನ. ಪ್ರಶಿಕ್ಷಣಾರ್ಥಿಗಳೆಲ್ಲ ಹತ್ತು ತಿಂಗಳ ಕಠಿಣ ತರಬೇತಿಯನ್ನು ಪೂರೈಸಿ, ಕೊನೆಯ ದಿನದ ಆಕರ್ಷಕ ಪಥಸಂಚಲನದ ಮೂಲಕ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಗೌರವ ಸಲ್ಲಿಸುವ ಕ್ಷಣ. ನಾನೂ ಕೂಡ ಪಥಸಂಚಲನಕ್ಕೆ ಹಾಜರಾಗಲು ಕುಟುಂಬದೊಂದಿಗೆ ಹೋಗಿದ್ದೆ. ಪ್ರತಿಯೊಬ್ಬ ಪ್ರಶಿಕ್ಷಣಾರ್ಥಿಯ ಕಡೆಯಿಂದ ಕನಿಷ್ಠ 10 ಜನರ ಲೆಕ್ಕ ಹಾಕಿದರೆ, ಅಂದಾಜು 5 ಸಾವಿರ ಜನಪ್ರವಾಹ ಆ ಚಿಕ್ಕ ಪಟ್ಟಣದಲ್ಲಿತ್ತು.

ನಗರದ ವಸತಿಗೃಹಗಳು ತುಂಬಿ ತುಳುಕುತ್ತಿದ್ದವು. ಕೆಲವು ಲಾಡ್ಜ್‌ಗಳಲ್ಲಿ ರೂಮುಗಳು ಖಾಲಿ ಇದ್ದರೂ, ಬಡವರ ಕೈಗೆಟುಕದ ದುಬಾರಿ ಬೆಲೆ ಅವುಗಳದು. ಕಡೂರಿಗೆ ಬಂದ ಬಹುತೇಕರು ಹಿಂದುಳಿದ ಜಿಲ್ಲೆಯ ಕಡು ಬಡ ಕುಟುಂಬದವರು. ವಸತಿ ವ್ಯವಸ್ಥೆ ಮಾಡಿಕೊಳ್ಳಲು ಆಗದವರು ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಿ ಗುಂಪಾಗಿ ಕುಳಿತ ದೃಶ್ಯ ಸಾಮಾನ್ಯವಾಗಿತ್ತು. ಅಲ್ಲೂ ಜಾಗ ಸಾಲದೆ ರಾತ್ರಿ ಮುಚ್ಚಿದ ಅಂಗಡಿ ಮುಗ್ಗಟ್ಟುಗಳ ಮುಂದೆ ತಮ್ಮ ಊರಿನಿಂದ ತಂದ ರೊಟ್ಟಿ ಬುತ್ತಿಯನ್ನು ಬಿಚ್ಚಿ ಊಟ ಮಾಡುತ್ತಿದ್ದರು. ಪುಟ್ಟ ಮಕ್ಕಳು ಅವರ ಮಡಿಲಿನಲ್ಲಿಯೇ ನಿದ್ದೆಗೆ ಜಾರಿದ್ದವು. ಕತ್ತಲೆ ಮರೆಯಲ್ಲೇ ಹಸುಗೂಸಿಗೆ ತಾಯಿಯೊಬ್ಬಳು ಮೊಲೆಯೂಡಿಸುತ್ತಿದ್ದಳು.

ಕಡೂರು–ಶಿವಮೊಗ್ಗ ಹೆದ್ದಾರಿ ಬದಿಯ ಪೊಲೀಸ್ ತರಬೇತಿ ಕೇಂದ್ರಕ್ಕೆ ಈ ಪೋಷಕರೆಲ್ಲ ಬೆಳಿಗ್ಗೆಯೇ ಬಂದಿದ್ದರು. ಸಾರ್ವಜನಿಕ ಶೌಚಾಲಯಗಳಲ್ಲಿ ಸ್ನಾನ–ಶೌಚ ಮುಗಿಸಿ, ಗೂಡಂಗಡಿಗಳಲ್ಲಿ ಚಹಾ ಕುಡಿದು, ಹಬ್ಬವೆಂಬಂತೆ ಸಂಭ್ರಮಿಸುತ್ತ ನೆರೆದಿದ್ದರು. ಸರಿಯಾಗಿ ಎಂಟು ಗಂಟೆಗೆ ಶುರುವಾದ ನಿರ್ಗಮನ ಪಥಸಂಚಲನ ಅತಿ ಶಿಸ್ತುಬದ್ಧವಾಗಿ ನಡೆದು ಜನಮನ ಸೂರೆಗೊಂಡಿತು. ಹಿಂದಿನ ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಕವಾಯತು ಮೈದಾನದಲ್ಲಿ ತುಂಬಿಕೊಂಡಿದ್ದ ನೀರನ್ನು, ರಾತ್ರಿಯಿಡೀ ಎಚ್ಚರವಿದ್ದ ಪ್ರಶಿಕ್ಷಣಾರ್ಥಿಗಳೇ ತೆರವುಗೊಳಿಸಿದ್ದರು. ಆದರೂ, ಬೆಳಗಿನ ಕಾರ್ಯಕ್ರಮದಲ್ಲಿ ಕೀ ಕೊಟ್ಟ ಗೊಂಬೆಗಳ ಹಾಗೆ, ಸಾಲಿನ ಶಿಸ್ತು ಒಂದಿಂಚೂ ಕದಲದೇ ನಿಂತ ಯುವಕರ ಕೆಚ್ಚು ಮೆಚ್ಚುವಂತಹದ್ದಾಗಿತ್ತು.

ಮೂರೂವರೆ ಗಂಟೆಗಳ ಪಥಸಂಚಲನ ಕಣ್ತುಂಬಿಕೊಂಡ ಪೋಷಕರಿಗೆ ಬೆಳಗಿನ ಉಪಾಹಾರದ ವ್ಯವಸ್ಥೆಯಿತ್ತು. ಆದರದು ಅಸ್ತವ್ಯಸ್ತವಾಗಿತ್ತು. ಅಲ್ಲಿದ್ದ ಸೀಮಿತ ಊಟದ ಕೌಂಟರ್‌ಗಳಲ್ಲಿ ಊಟ ಬಡಿಸುವವರಿರಲಿಲ್ಲ. ಅತಿಥಿಗಳೆನಿಸಿಕೊಂಡ ಪೋಷಕರೇ ತಟ್ಟೆಗೆ ಅನ್ನ–ಸಾಂಬಾರು ಬಡಿಸಿಕೊಂಡು ಉಂಡರು. ಕುಡಿಯುವ ನೀರು ಪಡೆಯಲು ಬೆವರು ಹರಿಸಿದರು.

ಶಿಸ್ತನ್ನೇ ತಮ್ಮ ಧ್ಯೇಯವಾಗಿಸಿಕೊಂಡ ಮತ್ತು ಅಂತಹದ್ದೇ ಶಿಸ್ತನ್ನು ಸಾರ್ವಜನಿಕರಿಂದಲೂ ನಿರೀಕ್ಷಿಸುವ ಇಲಾಖೆ ಅತಿಥಿಗಳನ್ನು ನಡೆಸಿಕೊಂಡ ಕ್ರಮ ಅದಕ್ಕೆ ಶೋಭೆ ತರುವಂತಿರಲಿಲ್ಲ. ಕಾರ್ಯಕ್ರಮದ ಜವಾಬ್ದಾರಿ ಹೊತ್ತ ಮೇಲಧಿಕಾರಿಗಳು ದೂರದ ಊರುಗಳಿಂದ ಬರುವವರ ಬಗ್ಗೆ ಯೋಚಿಸಬೇಕಾಗಿತ್ತು. ಹಿರಿಯ ಪೊಲೀಸ್ ಅಧಿಕಾರಿಗಳು ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ದೊಡ್ಡವರ ಕಣ್ಣುಗಳಿಗೆ ಸಣ್ಣವರ ಸಂಕಟಗಳು ಕಾಣಿಸಲಿಲ್ಲವೇನೊ? ನಾಡಿನ ಮೂಲೆ ಮೂಲೆಗಳಿಂದ ಬಸ್ಸು–ರೈಲುಗಳ ಮೂಲಕ ಬಂದು, ಎಲ್ಲೋ ರಸ್ತೆ ಬದಿ ಉಂಡು, ಇನ್ನೆಲ್ಲೋ ಮಲಗಿದ ಪೋಷಕರಿಗೆ ಬೆಳಗಿನ ತಿಂಡಿಯೂ ಸರಿಯಾಗಿ ಸಿಗದೆ ಹೋದುದಕ್ಕೆ ಏನು ಹೇಳುವುದು? ಆ ತರಬೇತಿ ಕೇಂದ್ರದ ಸುತ್ತಮುತ್ತ, ದುಡ್ಡು ಕೊಟ್ಟು ಊಟ–ತಿಂಡಿ ಪಡೆಯೋಣವೆಂದರೂ ಒಂದೇ ಒಂದು ಹೋಟೆಲ್ ಕೂಡ ಇರಲಿಲ್ಲ.

ದೂರದೂರುಗಳಿಂದ ಬಂದವರಿಗೆ ಕನಿಷ್ಠ ಕಲ್ಯಾಣ ಮಂಟಪಗಳಲ್ಲಾದರೂ ವಾಸ್ತವ್ಯ ಕಲ್ಪಿಸುವುದು ಪೊಲೀಸ್ ಇಲಾಖೆಗೆ ದೊಡ್ಡ ಸಂಗತಿಯಾಗಿರಲಿಲ್ಲ. ಎಷ್ಟೋ ಕುಟುಂಬಗಳ ಎಷ್ಟೋ ದಿನಗಳ ಕನಸು ಮಕ್ಕಳ ಮೂಲಕ ಸಾಕಾರಗೊಂಡ ಗಳಿಗೆಯನ್ನು ಸ್ಮರಣೀಯಗೊಳಿಸುವ ಅವಕಾಶವನ್ನು ಇಲಾಖೆ ಬಿಟ್ಟುಕೊಟ್ಟಿತು.

ಕಡೂರಿನಲ್ಲಿ ನಡೆದ ಘಟನೆಯನ್ನು ನೆಪವಾಗಿಟ್ಟುಕೊಂಡು ನೋಡಿದರೆ, ಸೇನಾ ನೇಮಕಾತಿ ಸಂದರ್ಭದಲ್ಲೂ ವ್ಯವಸ್ಥೆಯ ಬಗ್ಗೆ ನಿರಾಶೆ ಹುಟ್ಟಿಸುವಂತಹ ಚಿತ್ರಣಗಳನ್ನು ಕಾಣುತ್ತೇವೆ. ದೇಶದ ಭಾವೀ ಯೋಧರ ಮೇಲೆ ಪೊಲೀಸರಿಂದ ಲಾಠಿ ಪ್ರಹಾರ ಎನ್ನುವಂಥ ಸುದ್ದಿಗಳು ಕಳವಳ ಹುಟ್ಟಿಸುತ್ತವೆ. ಇಂತಹ ಪ್ರಕರಣಗಳು ಮರುಕಳಿಸಬಾರದು.

ವಾಚಕರ ವಾಣಿ

ಮೌಲ್ಯಶಿಕ್ಷಣ ಶಾಲಾಪಠ್ಯದ ಭಾಗವಾಗಿರಲಿ

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಮೌಲ್ಯಶಿಕ್ಷಣ ಪರಿಚಯಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಇದಕ್ಕಾಗಿ ಡಿಎಸ್‌ಇಆರ್‌ಟಿಯಿಂದ ಅಭ್ಯಾಸ ಮತ್ತು ಚಟುವಟಿಕೆ ಪುಸ್ತಕಗಳನ್ನು ಹೊರತರುವುದಾಗಿ ಹೇಳಿದೆ. ಆದರೆ, ಮೌಲ್ಯಶಿಕ್ಷಣವನ್ನು ಭಾಷೆ, ಪರಿಸರ ಅಧ್ಯಯನ, ಸಮಾಜ ವಿಜ್ಞಾನ ವಿಷಯಗಳಲ್ಲಿ ಸಮ್ಮಿಳಿತಗೊಳಿಸಿ ಕಲಿಸಬೇಕಿದೆ. ಚಟುವಟಿಕೆಯ ಪುಸ್ತಕದಲ್ಲಿ ಮೌಲ್ಯಶಿಕ್ಷಣ ಕುರಿತು ಹೇಳ ಹೊರಟಿರುವುದು ಸರಿಯಲ್ಲ. ಶಿಕ್ಷಕರು ಹಾಗೂ ಮಕ್ಕಳು ಅಭ್ಯಾಸ ಪುಸ್ತಕಗಳಿಗೆ ನೀಡುತ್ತಿರುವ ಮಹತ್ವ ಕಡಿಮೆ. ಹೀಗಾಗಿ, ಮುಂದಿನ ಶೈಕ್ಷಣಿಕ ವರ್ಷದಿಂದಾದರೂ ಪಠ್ಯವಸ್ತುವಿನಲ್ಲಿಯೇ ಮೌಲ್ಯಶಿಕ್ಷಣ ಅಳವಡಿಸಿ ಜಾರಿಗೊಳಿಸಲಿ.

ಮಲ್ಲಿಕಾರ್ಜುನ ಕುನ್ನೂರ, ಮಾಗಣಗೇರಾ

ಪುರುಷ ಹಿರಿಯ ನಾಗರಿಕರಿಗೆ 'ಶಕ್ತಿ' ನೀಡಿ

ರಾಜ್ಯ ಸರ್ಕಾರ 'ಶಕ್ತಿ' ಯೋಜನೆ ಮೂಲಕ ಮಹಿಳೆಯರಿಗೆ ನಗರ ಸಾರಿಗೆ ಹಾಗೂ ರಾಜ್ಯ ಸಾರಿಗೆ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಿರುವುದು ಸರಿಯಷ್ಟೇ. ಬಾಳಿನ ಮುಸ್ಸಂಜೆಯಲ್ಲಿರುವ ಪುರುಷ ಹಿರಿಯ ನಾಗರಿಕರಿಗೆ ಆದಾಯದ ಮೂಲಗಳು ಕಡಿಮೆ. ಅವರಿಗೆ ವಯಸ್ಸಾಗಿರುವುದರಿಂದ ಅನವಶ್ಯಕವಾಗಿ ಪ್ರಯಾಣ ಮಾಡುವುದಿಲ್ಲ. ಹಾಗಾಗಿ, 'ಶಕ್ತಿ' ಯೋಜನೆಯನ್ನು ಪುರುಷ ಹಿರಿಯ ನಾಗರಿಕರಿಗೂ ವಿಸ್ತರಿಸಬೇಕಿದೆ.

ಚಂದ್ರಕುಮಾರ್ ಡಿ., ಬೆಂಗಳೂರು

ಜಾತೀಯತೆ: ಗುಪ್ತಗಾಮಿನಿ ಬಹಿರಂಗ

ಜಾತಿ ಎಲ್ಲಿದೆ? ನಾವು ಯಾರ ಜಾತಿಯನ್ನೂ ಕೇಳುವುದಿಲ್ಲ; ಕಳೆದ ಒಂದು ದಶಕದಲ್ಲಿ ನಾವೆಲ್ಲರೂ (ಹಿಂದೂಗಳು) ಒಂದೇ ಎನ್ನುವ ರಾಷ್ಟ್ರೀಯತೆಯ ಭಾವನೆ ಮೂಡಿದ್ದು, ಜಾತಿ ತಾರತಮ್ಯವು ಹಿನ್ನೆಲೆಗೆ ಸರಿದಿದೆ ಎಂಬಿತ್ಯಾದಿ ಮಾತುಗಳನ್ನು ನಾವು ಮಾಧ್ಯಮಗಳಲ್ಲಿ ಆಗಾಗ್ಗೆ ಕೇಳುತ್ತಲೇ ಇರುತ್ತೇವೆ. ನಿಜಕ್ಕೂ ಇದು ಸತ್ಯವೇ? ಜಾತಿ, ಧರ್ಮದ ಗೊಡವೆಯೇ ಇಲ್ಲದ ನವ ಸಮ ಸಮಾಜ ನಿರ್ಮಾಣವಾಗಿದೆಯೇ? ಇಂಥ ಪ್ರಶ್ನೆಗಳಿಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯು ಉತ್ತರಿಸಿದೆ. ಒಂದು ಸಮಾಜವಾಗಿ ನಾವು ಕೇಳಲಿಚ್ಛಿಸದ, ಅಸ್ತಿತ್ವದಲ್ಲಿ ಇಲ್ಲವೆಂದು ಪ್ರತಿಪಾದಿಸುವ, ಸಮಾಜದಲ್ಲಿ ಗುಪ್ತಗಾಮಿನಿಯಂತಿರುವ, ವ್ಯಕ್ತಿ ಮತ್ತು ಸಾಮಾಜಿಕ ನೆಲೆಯಲ್ಲಿ ಹಲವು ಸುಳ್ಳಿನ ಪೋಷಾಕು ತೊಟ್ಟಿರುವ ಸತ್ಯಗಳನ್ನು ಸಮೀಕ್ಷೆ ಹೊರಗೆಡವಿದೆ.

ಶರತ್ ಸುಬ್ಬೇಗೌಡ, ಬೆಂಗಳೂರು

ಮತೀಯ ಆಚರಣೆಗೆ ಮೂಗುದಾರ ಹಾಕಿ

ವಿಧಾನಸೌಧ, ಸರ್ಕಾರಿ ಕಚೇರಿ, ಶಾಲಾ–ಕಾಲೇಜು ಸೇರಿ ಹಲವು ಸರ್ಕಾರಿ ಸಂಸ್ಥೆಗಳಲ್ಲಿ ಹಬ್ಬ, ಪೂಜೆ, ಹೋಮ, ಹವನದಂಥ ಮತೀಯ ಚಟುವಟಿಕೆಗಳು ಸದ್ದಿಲ್ಲದೆ ಸಾಗುತ್ತಿವೆ. ಸಾರ್ವಜನಿಕರು, ವಿದ್ಯಾರ್ಥಿಗಳ ಮೇಲೆ ಹೇರಿಕೆ ಅತಿಯಾಗುತ್ತಿದೆ. ಆಯಾ ಧರ್ಮದ ಶೈಕ್ಷಣಿಕ ಸಂಸ್ಥೆಗಳು ಪ್ರಾರ್ಥನೆಯನ್ನು ಪ್ರಾಮುಖ್ಯ ಮಾಡಿಕೊಂಡಿವೆ. ಶೈಕ್ಷಣಿಕ ಸಂಸ್ಥೆಗಳ ಕಟ್ಟಡದ ಬಣ್ಣ ಹಾಗೂ ಸಮವಸ್ತ್ರವೂ ಧಾರ್ಮಿಕತೆಯನ್ನು ಪ್ರತಿಬಿಂಬಿಸುತ್ತದೆ. ಹೀಗಾದರೆ, ಸರ್ಕಾರಿ ಸಂಸ್ಥೆ, ಶಾಲಾ-ಕಾಲೇಜುಗಳ ಕಲಿಕೆ ಕಲುಷಿತಗೊಂಡು ಮತೀಯ, ರಾಜಕೀಯ ವೈಷಮ್ಯ ಹೆಚ್ಚುತ್ತದೆ. ಇದಕ್ಕೆ ಕಡಿವಾಣ ಹಾಕುವುದು ಸರ್ಕಾರದ ಹೊಣೆ.

ಶಿವರಾಜ ಯತಗಲ್, ರಾಯಚೂರು

ಮುಟ್ಟಿನ ರಜೆ: ಹೆಚ್ಚಿನ ಕಾಳಜಿ ಅಗತ್ಯ

ಚಿಕ್ಕ ವಯಸ್ಸಿಗೆ ಹೆಣ್ಣುಮಕ್ಕಳು ಋತುಮತಿಯಾಗುತ್ತಿದ್ದಾರೆ. ಆದ್ದರಿಂದ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾರ್ಥಿನಿಯರಿಗೂ ಮುಟ್ಟಿನ ರಜೆಯ ಅವಶ್ಯಕತೆಯಿದೆ. ವರ್ಷದಲ್ಲಿ ಇಂತಿಷ್ಟು ದಿವಸ ತರಗತಿಗೆ ಹಾಜರಾತಿಯನ್ನು ಕಡ್ಡಾಯಗೊಳಿಸಲಾಗಿದೆ. ವಿದ್ಯಾರ್ಥಿನಿಯರಿಗೆ ಹೆಚ್ಚುವರಿಯಾಗಿ ಕಡ್ಡಾಯ ಹಾಜರಾತಿಯಿಂದ ವಿನಾಯಿತಿ ದಿನಗಳನ್ನು ಒದಗಿಸಿಕೊಡಬೇಕಾಗಿದೆ. ಸಣ್ಣ ವಯಸ್ಸಿನ ಹೆಣ್ಣುಮಕ್ಕಳು ಋತುಚಕ್ರದ ಅವಧಿಯಲ್ಲಿ ಗೊಂದಲ, ಮುಜುಗರ ಎದುರಿಸುತ್ತಾರೆ. ಆದುದರಿಂದ, ಪ್ರತಿ ಶಾಲೆಯಲ್ಲಿ ಶಿಕ್ಷಕಿಯೊಬ್ಬರನ್ನು ನೋಡಲ್ ಶಿಕ್ಷಕಿಯಾಗಿ ಗುರುತಿಸಿ, ಅವರನ್ನು ಋತುಚಕ್ರದ ಅವಧಿಯಲ್ಲಿ ಸಂಪರ್ಕಿಸಲು ಹೆಣ್ಣುಮಕ್ಕಳಿಗೆ ತಿಳಿಸಬೇಕು. ಈ ದಿಸೆಯಲ್ಲಿ ಶಿಕ್ಷಣ ಇಲಾಖೆ ಕ್ರಮವಹಿಸಬೇಕಿದೆ.

ಯಮುನಾ ನಾಗರಾಜು, ಮೈಸೂರು

ನಗುವಿನ ಹಿಂದೆ ಹೂತುಹೋದ ಮೌನ

ಬಾಲಿವುಡ್‌ನ ಅಜರಾಮರ ಹಾಸ್ಯನಟ ಗೋವರ್ಧನ್ ಅಸ್ರಾಣಿ ನಿಧನರಾಗಿದ್ದಾರೆ. 'ನನ್ನ ಸಾವಿನ ಬಗ್ಗೆ ದೊಡ್ಡ ಸುದ್ದಿ ಬೇಡ' ಎಂದು ಅವರೇ ತನ್ನ ಕುಟುಂಬಕ್ಕೆ ಸೂಚಿಸಿದ್ದರಂತೆ. ಹಾಗಾಗಿ, ಅಂತ್ಯಸಂಸ್ಕಾರ ಮುಗಿದ ನಂತರವೇ ಅವರ ನಿಧನದ ಸುದ್ದಿ ಹೊರಬಿದ್ದಿದೆ. ಇದು ಅಸ್ರಾಣಿ ಅವರ ಜೀವನದ ತತ್ತ್ವವನ್ನೇ ಹೇಳುತ್ತದೆ; ನಗಿಸುವವರ ಜೀವನದಲ್ಲಿ ಸಾಕಷ್ಟು ನಿಶ್ಶಬ್ದವೂ ಇರುತ್ತದೆ ಅಲ್ಲವೆ?

ಅಸ್ರಾಣಿ ಅವರ ಮುಖ ಪರದೆಯ ಮೇಲೆ ಕಾಣಿಸಿಕೊಂಡರೆ ಪ್ರೇಕ್ಷಕರ ತುಟಿಗಳ ಮೇಲೆ ನಗು ಹೊಳೆಯುತ್ತಿತ್ತು. ಹಾಸ್ಯ, ಚುಟುಕು, ಮೃದು ವ್ಯಂಗ್ಯ – ಇವುಗಳೆಲ್ಲ ಅವರ ಅಭಿನಯದ ಶಸ್ತ್ರಾಸ್ತ್ರಗಳು. 'ಶೋಲೆ'ಯಲ್ಲಿನ ಜೈಲರ್ ಪಾತ್ರದಿಂದ ಹಿಡಿದು ಹಲವು ಸಿನಿಮಾಗಳಲ್ಲಿ ನೂರಾರು ಹಾಸ್ಯಕ್ಷಣಗಳನ್ನು ಅಮರಗೊಳಿಸಿದ್ದಾರೆ.

ಶಿವಯೋಗಿ ಎಂ.ವಿ., ರಾಂಪುರ

ಆಳುವವರ ಹೊಣೆಗೇಡಿತನಕ್ಕೆ ಮದ್ದೆಲ್ಲಿ?

ಯಾವುದೇ ರಾಜಕೀಯ ಪಕ್ಷ ಅಧಿಕಾರದಲ್ಲಿರಲಿ, ಯಾವುದಾದರೊಂದು ವಿವಾದ ಸೃಷ್ಟಿಸಿ ಜನರ ಗಮನ ಸೆಳೆಯುವ ತಂತ್ರ ಅನುಸರಿಸುವುದು ರೂಢಿಯಾಗಿದೆ. ಜನರ ಭಾವನೆ ಕೆರಳಿಸಿ ರಾಜಕಾರಣ ಮಾಡುವುದೇ ಇವರ ಪಾಲಿನ ಸಂವಿಧಾನ. ಆಡಳಿತ ಪಕ್ಷವಾಗಲಿ, ವಿರೋಧ ಪಕ್ಷವಾಗಲಿ ರೈತರು, ದಲಿತರು, ಸ್ತ್ರೀಯರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಧ್ವನಿ ಎತ್ತುವುದು ಅಪರೂಪ. ಜನರ ಕಲ್ಯಾಣಕ್ಕೆ ನೆರವಾಗದ ವಿಷಯಗಳನ್ನು ಜ್ವಲಂತ ಸಮಸ್ಯೆಗಳೆಂದು ಬಿಂಬಿಸುತ್ತಿರುವ ಹೊಣೆಗೇಡಿತನವು ಜನರ ಪಾಲಿಗೆ ಉರುಳಾಗಿದೆ.

ಭೀಮಾನಂದ ಮೌರ್ಯ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಹಾರ ಚುನಾವಣೆ
ಮೈತ್ರಿ ರಾಜಕಾರಣದ ದಿಕ್ಸೂಚಿ?

ಜನಸಂಖ್ಯೆಯ ದೃಷ್ಟಿಯಿಂದ ಮತ್ತು ರಾಜಕೀಯ ಪ್ರಾಬಲ್ಯದ ದೃಷ್ಟಿಯಿಂದ ಮಹತ್ವ ಪಡೆದಿರುವ ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಆರಂಭವಾಗಿದೆ. ಅಧಿಕಾರ ಹಿಡಿಯಲು ಎನ್‌ಡಿಎ ಮತ್ತು 'ಇಂಡಿಯಾ' ಕೂಟಗಳು ತೀವ್ರ ಪೈಪೋಟಿ ನಡೆಸುತ್ತಿವೆ. ಎನ್‌ಡಿಎ ಕೂಟದಲ್ಲಿ ಬಿಜೆಪಿ ಮತ್ತು ಜೆಡಿಯು ಸಮಾನ ಸಂಖ್ಯೆಯ ಕ್ಷೇತ್ರಗಳಲ್ಲಿ ಕಣಕ್ಕಿಳಿದಿವೆ. ನಿತೀಶ್‌ಕುಮಾರ್ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದು, ಬಿಜೆಪಿ ಲೆಕ್ಕಾಚಾರದಿಂದ ಅಡಿ ಇಡುತ್ತಿದೆ. 'ಇಂಡಿಯಾ'ದಲ್ಲಿ ಆರ್‌ಜೆಡಿ ಪ್ರಮುಖ ಪಕ್ಷವಾಗಿದೆ. ಮಿತ್ರಪಕ್ಷಗಳ ನಡುವಿನ ಹೊಂದಾಣಿಕೆ ಮತ್ತು ಸ್ಥಾನಹಂಚಿಕೆಯ ಕಸರತ್ತು 'ಇಂಡಿಯಾ' ಕೂಟಕ್ಕೆ ತೊಡಕಾಗಬಹುದು ಎನ್ನಲಾಗುತ್ತಿದೆ

ಬಿಹಾರ ವಿಧಾನಸಭಾ ಚುನಾವಣೆ– 2025

7.42 ಕೋಟಿ ಬಿಹಾರದ ಮತದಾರರ ಸಂಖ್ಯೆ | **3.92** ಕೋಟಿ ಪುರುಷ ಮತದಾರರು | **3.49** ಕೋಟಿ ಮಹಿಳಾ ಮತದಾರರು

1,725 ಲಿಂಗತ್ವ ಅಲ್ಪಸಂಖ್ಯಾತ ಮತದಾರರು

243 ಒಟ್ಟು ವಿಧಾನಸಭಾ ಕ್ಷೇತ್ರಗಳು

2 ಚುನಾವಣೆ ನಡೆಯಲಿರುವ ಹಂತಗಳು



121 ಮೊದಲ ಹಂತದಲ್ಲಿ ಚುನಾವಣೆ ನಡೆಯಲಿರುವ ಕ್ಷೇತ್ರಗಳು

ನವೆಂಬರ್ **6** ಮೊದಲ ಹಂತದ ಮತದಾನದ ದಿನಾಂಕ

ನವೆಂಬರ್ **11** ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ದಿನ

122 ಎರಡನೇ ಹಂತದ ಚುನಾವಣೆ ನಡೆಯಲಿರುವ ಕ್ಷೇತ್ರಗಳು

ನವೆಂಬರ್ **14** ಮತ ಎಣಿಕೆ ನಡೆಯಲಿರುವ ದಿನಾಂಕ

ಪ್ರಜಾವಾಣಿ ವಾರ್ತೆ

ನಿತೀಶ್ ಕುಮಾರ್

2020ರ ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಕೂಟ 125 ಸ್ಥಾನಗಳನ್ನು ಗಳಿಸಿದ್ದರೆ, ಮಹಾಘಟಬಂಧನ ಕೂಟವು 110 ಕ್ಷೇತ್ರಗಳಲ್ಲಿ ಗೆಲುವು ದಾಖಲಿಸಿತ್ತು. ಎನ್‌ಡಿಎಯಷ್ಟೇ (ಶೇ 37) ಮತಪ್ರಮಾಣವನ್ನೂ ಪಡೆದಿತ್ತು. ಮುಖ್ಯವಾಗಿ, 144 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ರಾಷ್ಟ್ರೀಯ ಜನತಾ ದಳವು (ಆರ್‌ಜೆಡಿ) 75ರಲ್ಲಿ ಗೆದ್ದು, ಅತಿ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು. ಆದರೆ, 70 ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದ ಕಾಂಗ್ರೆಸ್ 19ರಲ್ಲಿ ಮಾತ್ರ ಗೆದ್ದಿತ್ತು. ಅದರಿಂದ ನಿತೀಶ್ ಕುಮಾರ್ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿಕೂಟ ಅಧಿಕ್ಕಾರಕ್ಕೇರಿತ್ತು.

ಈ ಬಾರಿ ಎರಡೂ ಮೈತ್ರಿಕೂಟಗಳ ಮಟ್ಟಿಗೆ ಪರಿಸ್ಥಿತಿ ಭಿನ್ನವಾಗಿದೆ. ಎನ್‌ಡಿಎ ಕೂಟದಲ್ಲಿ ಬಿಜೆಪಿ ಮತ್ತು ನಿತೀಶ್ ಕುಮಾರ್ ಅವರ ಜನತಾದಳ -ಸಂಯುಕ್ತ (ಜೆಡಿಯು) ತಲಾ 101 ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ. 2020ರ ಚುನಾವಣೆಯಲ್ಲಿ ಕೇವಲ ಒಂದು ಸ್ಥಾನ ಗೆದ್ದಿದ್ದ ಲೋಕಜನಶಕ್ತಿಗೆ (ಎಲ್‌ಜೆಪಿ) ಎನ್‌ಡಿಎ 29 ಸ್ಥಾನ ಬಿಟ್ಟುಕೊಟ್ಟಿದೆ. ಕಳೆದ ಬಾರಿ ಎನ್‌ಡಿಎ ಕೂಟದಲ್ಲಿ ಇಲ್ಲದೇ ಇದ್ದ ಎಲ್‌ಜೆಪಿಯು ಜೆಡಿಯುನ ನಿರ್ಣಾಯಕ ಪ್ರಮಾಣದ ಮತದಾರರನ್ನು ಸೆಳೆದುಕೊಂಡಿತ್ತು. ಈ ಬಾರಿ ಅಂಥ 'ಹಾನಿ' ಮಾಡದಿರಲಿ ಎಂದು ಎಲ್‌ಜೆಪಿಗೆ ಎನ್‌ಡಿಎ ಹೆಚ್ಚು ಸ್ಥಾನಗಳನ್ನು ನೀಡಿದೆ ಎನ್ನಲಾಗುತ್ತಿದೆ. ಜತೆಗೆ, ತೇಜಸ್ವಿ ಯಾದವ್ ವಿರುದ್ಧ ಚಿರಾಗ್ ಪಾಸ್ವಾನ್ ಅವರಂಥ ಯುವ ಮುಖಂಡನನ್ನು ಮುಖಾಮುಖಿಯಾಗಿಸುವುದು ಎನ್‌ಡಿಎ ಉದ್ದೇಶವಾಗಿದೆ. ನಿತೀಶ್ ಸರ್ಕಾರದ ಆಡಳಿತ ವಿರೋಧಿ ಅಲೆಯನ್ನು ಎದುರಿಸಲೂ ಚಿರಾಗ್ ಅವರೇ ಎನ್‌ಡಿಎಗೆ ದಾಳವಾಗಿದ್ದಾರೆ. ಎನ್‌ಡಿಎ ಉಳಿದ ಮಿತ್ರಪಕ್ಷಗಳಾದ ರಾಷ್ಟ್ರೀಯ ಲೋಕಮೋರ್ಚಾ (ಆರ್‌ಎಲ್‌ಎಂ) ಮತ್ತು ಹಿಂದೂಸ್ಥಾನಿ ಅವಾಮಿ ಮೋರ್ಚಾ (ಎಚ್‌ಎಎಂ) ತಲಾ ಆರು ಕ್ಷೇತ್ರಗಳಲ್ಲಿ ಸ್ಪರ್ಧಿಸಿವೆ.

ಮುಖ್ಯಮಂತ್ರಿ ಯಾರು?: ತಮ್ಮ ಮೈತ್ರಿಕೂಟ ಗೆದ್ದರೆ ಯಾರು ಮುಖ್ಯಮಂತ್ರಿಯಾಗಬೇಕು ಎನ್ನುವ ವಿಚಾರವು ಚುನಾವಣಾಪೂರ್ವದಲ್ಲೇ ಎನ್‌ಡಿಎಗೆ ತೊಡಕಾಗಿದೆ. ಸುಮಾರು 19 ವರ್ಷ ಬಿಹಾರದ ಮುಖ್ಯಮಂತ್ರಿಯಾಗಿ ಅಧಿಕಾರ ಅನುಭವಿಸಿರುವ ನಿತೀಶ್ ಅವರಿಗೆ ವಯಸ್ಸಾಗಿದೆ. ಆದರೆ, ಅವರ ರಾಜಕೀಯ ಮಹತ್ವಾಕಾಂಕ್ಷೆ ಕಡಿಮೆಯಾಗಿಲ್ಲ. ನಿತೀಶ್ ಅವರ ನೇತೃತ್ವದಲ್ಲಿ ಚುನಾವಣೆ ಎದುರಿಸುತ್ತೇವೆ, ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಗೆದ್ದ ನಂತರ ಮಿತ್ರಪಕ್ಷಗಳು ತೀರ್ಮಾನಿಸುತ್ತವೆ ಎಂದು ಅಮಿತ್ ಶಾ ಹೇಳಿರುವುದು ನಿತೀಶ್ ಅವರ ಆಸೆ ಈಡೇರುವುದು ಅಷ್ಟು ಸುಲಭವಿಲ್ಲ ಎನ್ನುವುದನ್ನು ತೋರಿಸುತ್ತಿದೆ. ಆಡಳಿತ ವಿರೋಧಿ ಅಲೆಯನ್ನು ಅವರು ಎದುರಿಸುತ್ತಿದ್ದಾರೆ. ಆದರೆ, ಬಿಹಾರದಲ್ಲಿ ಜಾತಿ ಗಣತಿ ನಡೆಸಿರುವ, ಅದಕ್ಕೂ ಹಿಂದೆಯೇ ಅತಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಹೆಚ್ಚಿಸಿರುವ ನಿತೀಶ್ ಅವರು ಅತಿ ಹಿಂದುಳಿದ ಜಾತಿಗಳಲ್ಲಿ ಜನಪ್ರಿಯತೆಯನ್ನು ಪಡೆದಿದ್ದಾರೆ. 2013ರಿಂದ ನಾಲ್ಕು ಬಾರಿ ಮಿತ್ರಕೂಟಗಳನ್ನು ಬದಲಿಸಿರುವ ನಿತೀಶ್ ಅವರನ್ನು ನಿಭಾಯಿಸುವುದು ಬಿಜೆಪಿಗೆ ಸವಾಲಾಗಿದೆ.

'ಇಂಡಿಯಾ'ದಲ್ಲಿ ಹಲವು ಸಮಸ್ಯೆ: ಇಂಡಿಯಾ ಕೂಟದಲ್ಲಿ ಪ್ರಬಲ ಪಕ್ಷವಾಗಿರುವ ತೇಜಸ್ವಿ ಯಾದವ್ ನೇತೃತ್ವದ ಆರ್‌ಜೆಡಿ 143 ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಕಳೆದ ಬಾರಿಯ ಕಳಪೆ ಸಾಧನೆ ನಡುವೆಯೂ ಕಾಂಗ್ರೆಸ್‌ಗೆ 61 ಸ್ಥಾನಗಳನ್ನು ಬಿಟ್ಟುಕೊಡಲಾಗಿದೆ. ಸಿಪಿಐ ಎಂಎಲ್, ಸಿಪಿಎಂ, ಸಿಪಿಐ 30 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿವೆ. ಕಳೆದ ಚುನಾವಣೆಯಲ್ಲಿ ಎನ್‌ಡಿಎ ಭಾಗವಾಗಿದ್ದ ವಿಕಾಸಶೀಲ ಇನ್‌ಸಾನ್ ಪಾರ್ಟಿ (ವಿಐಪಿ) 15 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಘೋಷಿಸಿದೆ. ಆದರೆ, ಸ್ಥಾನ ಹೊಂದಾಣಿಕೆಯಲ್ಲಿ ಇಂಡಿಯಾ ಕೂಟವು ಎಡವಿದ್ದು, ಕೆಲವು ಕ್ಷೇತ್ರಗಳಲ್ಲಿ ಮಿತ್ರಪಕ್ಷಗಳೇ ಪರಸ್ಪರರ ವಿರುದ್ಧ ಸ್ಪರ್ಧಿಸಿವೆ. ಇದರಿಂದ ಆರ್‌ಜೆಡಿ ಮತ್ತು ಎಡಪಕ್ಷಗಳ ಅಭ್ಯರ್ಥಿಗಳ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಗಳು ಪೈಪೋಟಿ ನಡೆಸುವಂತಾಗಿದೆ. ಕಳೆದ ಚುನಾವಣೆಯಲ್ಲಿ 19 ಕ್ಷೇತ್ರಗಳಲ್ಲಿ ಸ್ಪರ್ಧಿಸಿ, ಐದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದ್ದ ಎಐಎಂಐಎಂ (ನಂತರ ನಾಲ್ವರು ಆರ್‌ಜೆಡಿ ಸೇರಿದ್ದರು) ಈ ಬಾರಿ ಇಂಡಿಯಾ ಕೂಟದ ಭಾಗವಾಗಲು ಪ್ರಯತ್ನಿಸಿತ್ತು. ಆದರೆ, ಅದು ಸಾಧ್ಯವಾಗದೇ ಸ್ವತಂತ್ರವಾಗಿ 25 ಕ್ಷೇತ್ರಗಳಲ್ಲಿ ಸ್ಪರ್ಧಿಗಳನ್ನು ಕಣಕ್ಕಿಳಿಸಿದೆ. ಅಭ್ಯರ್ಥಿಗಳ ಪೈಕಿ ಇಬ್ಬರು ಹಿಂದೂಗಳು ಎಂಬುದು ಗಮನಾರ್ಹ.

ಜೆಎಂಎಂ ಕೂಡ ಇಂಡಿಯಾ ಕೂಟದ ಭಾಗವಾಗಲು ಯತ್ನಿಸಿ ವಿಫಲವಾಗಿದೆ. ತಮ್ಮ ಮನವಿಗೆ ಆರ್‌ಜೆಡಿ ಕಿವಿಗೊಟ್ಟಿಲ್ಲ, ಕಾಂಗ್ರೆಸ್ ಮಧ್ಯಪ್ರವೇಶ ಮಾಡಿ ತಮಗೆ ನ್ಯಾಯ ದೊರಕಿಸಿಕೊಟ್ಟಿಲ್ಲ ಎಂದು ಜೆಎಂಎಂ ಸಿಟ್ಟಾಗಿದೆ. ಬಿಹಾರ ಚುನಾವಣೆಯಿಂದ ದೂರ ಸರಿಯುವುದಾಗಿ ಜೆಎಂಎಂ ಘೋಷಿಸಿದೆ. ಇದರಿಂದ ಜಾರ್ಖಂಡ್‌ನಲ್ಲಿ ಇಂಡಿಯಾ ಕೂಟದಲ್ಲಿ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇದೆ. ಎಐಎಂಐಎಂ ಮತ್ತು ಜೆಎಂಎಂ ಪಕ್ಷಗಳಿಂದಾಗಿ ಮುಸ್ಲಿಂ ಪ್ರಭಾವ ಮತ್ತು ಬುಡಕಟ್ಟು ಪ್ರಭಾವದ ಕೆಲವು ಕ್ಷೇತ್ರಗಳಲ್ಲಿ ಇಂಡಿಯಾ ಕೂಟಕ್ಕೆ ಹಿನ್ನಡೆಯಾಗಬಹುದು ಎನ್ನಲಾಗುತ್ತಿದೆ.

ಬಿಹಾರದಲ್ಲಿ 1995ರಿಂದ ಯಾವುದೇ ಪಕ್ಷ ಬಹುಮತ ಪಡೆದೇ ಇಲ್ಲ. ಎರಡು ದಶಕಗಳಿಂದ ಯಾವುದೇ ಪಕ್ಷ ಶೇ 25ರಷ್ಟು ಮತಗಳಿಸಿಲ್ಲ. ಮೈತ್ರಿ ರಾಜಕಾರಣದ ಹಲವು ಪಲ್ಲಟಗಳಿಗೆ ಬಿಹಾರದ ಚುನಾವಣೆ ಸಾಕ್ಷಿಯಾಗಿದ್ದು, ಅದರ ಫಲಿತಾಂಶವು ಮುಂದಿನ ದಿನಗಳಲ್ಲಿ ದೇಶದ ರಾಜಕಾರಣದಲ್ಲಿ ದಿಕ್ಸೂಚಿಯಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

2020ರ ವಿಧಾನಸಭಾ ಚುನಾವಣಾ ಫಲಿತಾಂಶ





ಜಾತಿ ಲೆಕ್ಕಾಚಾರ

ತೇಜಸ್ವಿ ಯಾದವ್

ರಾಜಕೀಯ ಪಕ್ಷಗಳು ಜಾತಿ ಸಮೀಕರಣದ ಲೆಕ್ಕಾಚಾರದ ಆಧಾರದಲ್ಲೇ ಟಿಕೆಟ್ ಹಂಚಿಕೆ ಮಾಡಿವೆ. ದೇಶದಲ್ಲಿ ಮೊದಲ ಬಾರಿ ಜಾತಿ ಸಮೀಕ್ಷೆ ನಡೆಸಿರುವ ರಾಜ್ಯ ಬಿಹಾರ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಇತರ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಅತಿ ಹಿಂದುಳಿದ ವರ್ಗಗಳಿಗೆ (ಇಬಿಸಿ) ಸೇರಿದವರು. ಇಬಿಸಿಗಳು ಶೇ 36ರಷ್ಟಿದ್ದರೆ, ಒಬಿಸಿಗಳು ಶೇ 27ರಷ್ಟು ಇದ್ದಾರೆ. ಹಾಗಾಗಿ, ಪಕ್ಷಗಳು ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಈ ವರ್ಗಗಳಿಗೆ ಸೇರಿದ ಸಮುದಾಯಗಳ ಮುಖಂಡರನ್ನು ಪರಿಗಣಿಸಿವೆ.

ತೀವ್ರ ಹಣಾಹಣಿ ನಡೆಯಲಿದೆ ಎಂದು ನಿರೀಕ್ಷಿಸಲಾದ ಕ್ಷೇತ್ರಗಳಲ್ಲಿ ಅತಿ ಹಿಂದುಳಿದ ವರ್ಗಗಳಿಗೆ ಸೇರಿದ ಮತದಾರರು ನಿರ್ಣಾಯಕ ಪಾತ್ರ ವಹಿಸಲಿದ್ದಾರೆ ಎಂದು ಹೇಳಲಾಗುತ್ತಿದೆ. ಇಬಿಸಿಗಳಲ್ಲಿ 130 ಉಪಜಾತಿಗಳಿವೆ. ಈ ಪೈಕಿ 120ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ನಿಶಾದ, ತೆಲೀ, ಲೋಹಾರ್ ಮತ್ತು ಕುಮ್ಹಾರ್ ಜಾತಿಗಳಿಗೆ ಸೇರಿದವರು ನಿರ್ಣಾಯಕರಾಗಿದ್ದಾರೆ.

ಒಬಿಸಿ, ಇಬಿಸಿಗಳ ಜೊತೆಗೆ ಮೇಲ್ವರ್ಗದ ಅಭ್ಯರ್ಥಿಗಳಿಗೆ ಆದ್ಯತೆ ನೀಡಿರುವ ಎನ್‌ಡಿಎ ಮೈತ್ರಿಕೂಟವು ಮುಸ್ಲಿಂ ಅಭ್ಯರ್ಥಿಗಳಿಗೆ ಹೆಚ್ಚು ಮಣೆ ಹಾಕಿಲ್ಲ. ಇಂಡಿಯಾ ಕೂಟವು ಮುಸ್ಲಿಮರು ಮತ್ತು ಯಾದವ ಸಮುದಾಯದವರಿಗೆ ಹೆಚ್ಚು ಒತ್ತು ನೀಡಿದೆ. ಇದರೊಂದಿಗೆ ಶೇ 19.65ರಷ್ಟಿರುವ ದಲಿತ ಸಮುದಾಯದ ಮತಗಳ ಮೇಲೆ ಎರಡೂ ಮೈತ್ರಿಕೂಟಗಳು ದೃಷ್ಟಿ ನೆಟ್ಟಿವೆ.

ಎಸ್‌ಐಆರ್, ಮತಕಳವು ವಿವಾದ

ಚುನಾವಣೆ ದಿನಾಂಕ ಘೋಷಣೆಯಾಗುವುದಕ್ಕೂ ಮೊದಲು ಚುನಾವಣಾ ಆಯೋಗವು ಬಿಹಾರದಲ್ಲಿ ಕೈಗೊಂಡ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ವಿವಾದ ಹುಟ್ಟುಹಾಕಿತ್ತು. ಇದರ ಜೊತೆಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಾಡಿದ್ದ ಮತ ಕಳವು ಆರೋಪ ಕೂಡ ತೀವ್ರ ಚರ್ಚೆಗೆ ಕಾರಣವಾಗಿತ್ತು. ಎಸ್‌ಐಆರ್ ವಿಚಾರ ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿದೆ. ಚುನಾವಣೆಯ ಬಿಸಿಯ ನಡುವೆ ಮತ ಕಳವು ವಿಷಯ ಹೆಚ್ಚು ಚರ್ಚೆಗೆ ಬರುತ್ತಿಲ್ಲ. ಈ ಎರಡು ವಿಚಾರಗಳು ಚುನಾವಣಾ ಫಲಿತಾಂಶದ ಮೇಲೆ ಪರಿಣಾಮ ಬೀರಲಿವೆಯೇ ಎಂಬುದನ್ನು ಕಾದು ನೋಡಬೇಕಿದೆ.

ನಡೆಯುತ್ತಾ 'ಪಿಕೆ' ಮ್ಯಾಜಿಕ್?

ಪ್ರಧಾನಿ ನರೇಂದ್ರ ಮೋದಿ, ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಸೇರಿದಂತೆ ವಿವಿಧ ಚುನಾವಣೆಗಳಲ್ಲಿ ಹಲವು ಮುಖಂಡರು ಹಾಗೂ ಪಕ್ಷಗಳ ಗೆಲುವಿಗೆ ಶ್ರಮಿಸಿದ್ದ ಚುನಾವಣಾ ಕಾರ್ಯತಂತ್ರ ನಿಪುಣ ಪ್ರಶಾಂತ್ ಕಿಶೋರ್ (ಪಿಕೆ) ಅವರು ಸ್ಥಾಪಿಸಿರುವ ಜನ ಸುರಾಜ್ ಪಕ್ಷವು 243 ಕ್ಷೇತ್ರಗಳಲ್ಲೂ ಸ್ಪರ್ಧಿಸಿದೆ. (ಮೂರು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ನಾಮಪತ್ರ ವಾಪಸ್ ಪಡೆದಿದ್ದಾರೆ). ಆದರೆ ಪ್ರಶಾಂತ್ ಕಿಶೋರ್ ಸ್ಪರ್ಧಿಸಿಲ್ಲ. ಅವರ ಪಕ್ಷವು ಮೊದಲ ಬಾರಿ ಚುನಾವಣೆ ಎದುರಿಸುತ್ತಿದ್ದು ಯಾವ ರೀತಿಯ ಪ್ರದರ್ಶನ ನೀಡಲಿದೆ ಎಂಬ ಕುತೂಹಲ ಮೂಡಿದೆ.

2015ರಲ್ಲಿ ನಿತೀಶ್‌ಕುಮಾರ್ ನೇತೃತ್ವದ ಮಹಾಘಟಬಂಧನ ಮೈತ್ರಿಕೂಟವು ಬಿಹಾರದಲ್ಲಿ ಗೆಲುವು ಸಾಧಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಪ್ರಶಾಂತ್ ಕಿಶೋರ್ ಅವರು 2018ರಲ್ಲಿ ಜೆಡಿಯುಗೆ ಸೇರ್ಪಡೆಗೊಂಡು ಅದರ ಉಪಾಧ್ಯಕ್ಷರಾಗಿಯೂ ನೇಮಕಗೊಂಡಿದ್ದರು. 2020ರ ಚುನಾವಣೆಯಲ್ಲೂ ನಿತೀಶ್ ಪರವಾಗಿ ಅವರು ಕೆಲಸ ಮಾಡಿದ್ದರು. 2021ರಲ್ಲಿ ನಡೆದಿದ್ದ ಪಶ್ಚಿಮ ಬಂಗಾಳ ಮತ್ತು ತಮಿಳುನಾಡು ವಿಧಾನಸಭಾ ಚುನಾವಣೆಗಳಲ್ಲಿ ಟಿಎಂಸಿಯ ಮಮತಾ ಬ್ಯಾನರ್ಜಿ ಮತ್ತು ಡಿಎಂಕೆಯ ಎಂ.ಕೆ.ಸ್ಟಾಲಿನ್ ಅವರ ಪರವಾಗಿ ಕೆಲಸ ಮಾಡಿದ್ದರು. ಆ ಬಳಿಕ ಚುನಾವಣಾ ತಂತ್ರಗಾರಿಕೆಯಿಂದ ದೂರ ಉಳಿದಿದ್ದ ಅವರು 2022ರಲ್ಲಿ ತಮ್ಮದೇ ಆದ ಜನ ಸುರಾಜ್ ಪಕ್ಷವನ್ನು ಸ್ಥಾಪಿಸಿದ್ದರು. ಈ ಚುನಾವಣೆಯನ್ನೇ ಗುರಿಯಾಗಿಸಿಕೊಂಡು ಮೂರು ವರ್ಷಗಳಿಂದ ಬಿಹಾರದಲ್ಲಿ ಪಕ್ಷವನ್ನು ಸಂಘಟಿಸಿರುವ ಅವರು, ಪಕ್ಷ ಉತ್ತಮ ಪ್ರದರ್ಶನ ನೀಡುವ ವಿಶ್ವಾಸವನ್ನು ಇಟ್ಟುಕೊಂಡಿದ್ದಾರೆ.

ಈ ಬಾರಿ, ಎನ್‌ಡಿಎ ಮತ್ತು ಮಹಾಘಟಬಂಧನದ ನಡುವೆ ಜಿದ್ದಾಜಿದ್ದಿನ ಪೈಪೋಟಿ ಕಂಡು ಬರುತ್ತಿರುವ ಸಂದರ್ಭದಲ್ಲಿ ಪ್ರಶಾಂತ್ ಕಿಶೋರ್ ಅವರ ಪಕ್ಷ ದೊಡ್ಡ ಸಾಧನೆ ಮಾಡಲಾರದು ಎಂಬ ಅಭಿಪ್ರಾಯವನ್ನು ರಾಜಕೀಯ ಪಂಡಿತರು ವ್ಯಕ್ತಪಡಿಸುತ್ತಿದ್ದಾರೆ. ಸ್ವತಃ ಪ್ರಶಾಂತ್ ಅವರು ಸ್ಪರ್ಧಿಸಿದ್ದರೆ ಅದು ರಾಜಕೀಯವಾಗಿ ಪ್ರಬಲವಾದ ಸಂದೇಶವನ್ನು ನೀಡುತ್ತಿತ್ತು. ಆದರೆ, ಅವರು ಚುನಾವಣೆಯಿಂದ ದೂರ ಉಳಿದಿರುವುದು ಉತ್ತಮ ನಿರ್ಧಾರವಲ್ಲ ಎಂದು ತಜ್ಞರು ವಿಶ್ಲೇಷಿಸುತ್ತಿದ್ದಾರೆ.

2020ರ ಚುನಾವಣೆಯಲ್ಲಿ ಚಿರಾಗ್ ಪಾಸ್ವಾನ್ ನೇತೃತ್ವದ ಎಲ್‌ಜೆಪಿಯು ಹಲವು ಕ್ಷೇತ್ರಗಳಲ್ಲಿ ಜೆಡಿಯು ಮತಗಳನ್ನು ಕಸಿದು, ಅದರ ಅಭ್ಯರ್ಥಿಗಳ ಸೋಲಿಗೆ ಕಾರಣವಾಗಿತ್ತು. ಈ ಬಾರಿ ಚಿರಾಗ್ ಅವರು ಎನ್‌ಡಿಎ ಜೊತೆ ಗುರುತಿಸಿಕೊಂಡಿದ್ದಾರೆ. ಕಳೆದ ಚುನಾವಣೆಯಲ್ಲಿ ಎಲ್‌ಜೆಪಿ ಮಾಡಿದ ಕೆಲಸವನ್ನು ಈ ಬಾರಿ ಜನ ಸುರಾಜ್ ಪಕ್ಷ ಮಾಡಬಹುದು ಎಂದು ಹೇಳಲಾಗುತ್ತಿದೆ.

ಆಧಾರ: ಪಿಟಿಐ, ಪಿಆರ್‌ಎಸ್ ಇಂಡಿಯಾ. ಒಆರ್‌ಜಿ, ಬಿಹಾರ ಚುನಾವಣಾ ಆಯೋಗ, ಇನ್‌ಸ್ಟಿಟ್ಯೂಟ್ ಆಫ್ ಸೌತ್ ಏಷ್ಯನ್ ಸ್ಟಡೀಸ್

ರಾಷ್ಟ್ರೀಯ

ಲೋಕಪಾಲ: 7 ಐಷಾರಾಮಿ ಬಿಎಂಡಬ್ಲ್ಯು ಕಾರಿಗೆ ಟೆಂಡರ್

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ/ ಮುಂಬೈ: ಭ್ರಷ್ಟಾಚಾರ ನಿಗ್ರಹ ಸಂಸ್ಥೆ 'ಲೋಕಪಾಲ' ಅಂದಾಜು ₹5 ಕೋಟಿ ಮೌಲ್ಯದ ಏಳು ಐಷಾರಾಮಿ ಬಿಎಂಡಬ್ಲ್ಯು ಕಾರುಗಳನ್ನು ಖರೀದಿಸಲು ಟೆಂಡರ್ ಆಹ್ವಾನಿಸಿದೆ.

'ಬಿಎಂಡಬ್ಲ್ಯು 3 ಸರಣಿಯ 330ಎಲ್ಐ ಮಾದರಿಯ ಕಾರುಗಳನ್ನು ಪೂರೈಸಲು ಪ್ರತಿಷ್ಠಿತ ಕಂಪನಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ' ಎಂದು ಸಂಸ್ಥೆ ಟೆಂಡರ್‌ನಲ್ಲಿ ಹೇಳಿದೆ.

ಬಿಎಂಡಬ್ಲ್ಯು ವೆಬ್‌ಸೈಟ್ ಪ್ರಕಾರ, 3 ಸರಣಿಯ ಉದ್ದನೆಯ ವೀಲ್‌ಬೇಸ್ ಕಾರು ಈ ವಿಭಾಗದಲ್ಲಿ ಅತ್ಯಂತ ಉದ್ದ ಮತ್ತು ಹೆಚ್ಚು ವಿಶಾಲವಾಗಿದೆ. ಐಷಾರಾಮಿ ಕ್ಯಾಬಿನ್ ಇದ್ದು, ಅತ್ಯುತ್ತಮ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಈ ಕಾರಿನ ಬೆಲೆ ನವದೆಹಲಿಯಲ್ಲಿ ₹69.5 ಲಕ್ಷ ಇದೆ.

ಲೋಕಪಾಲದಲ್ಲಿ 8 ಮಂಜೂರಾದ ಹುದ್ದೆಗಳಿವೆ. ಪ್ರಸ್ತುತ ಒಬ್ಬರು ಅಧ್ಯಕ್ಷರು ಮತ್ತು ಆರು ಸದಸ್ಯರು ಇದ್ದಾರೆ.

'ರಾಷ್ಟ್ರಪತಿ ಪ್ರಶ್ನಿಸಲಿ'

'ಬಿಎಂಡಬ್ಲ್ಯು ಕಾರು ಖರೀದಿಗೆ ಟೆಂಡರ್ ಆಹ್ವಾನಿಸಿರುವ ಲೋಕಪಾಲ ಸಂಸ್ಥೆಯ ನಡೆಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶ್ನಿಸಬೇಕು' ಎಂದು ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) ಒತ್ತಾಯಿಸಿದೆ.

'ಜನಪ್ರತಿನಿಧಿಗಳು ಹಾಗೂ ಸರ್ಕಾರಿ ಅಧಿಕಾರಿಗಳ ಮೇಲಿನ ಭ್ರಷ್ಟಾಚಾರ ಆರೋಪಗಳ ತನಿಖೆ ನಡೆಸಲು ಸ್ಥಾಪಿಸಲಾದ ಸಂಸ್ಥೆ ಲೋಕಪಾಲ. ಇಂತಹ ಭ್ರಷ್ಟಾಚಾರ ನಿಗ್ರಹ ಸಂಸ್ಥೆಯು ತನ್ನ ಸದಸ್ಯರಿಗೆ ಐಷಾರಾಮಿಯಾದ 7 ಬಿಎಂಡಬ್ಲ್ಯು ಕಾರುಗಳನ್ನು ಬಯಸುತ್ತಿದೆ. ಇದು ಪ್ರಾಮಾಣಿಕ ತೆರಿಗೆದಾರರ ಹಣವನ್ನು ಲೂಟಿ ಮಾಡುವುದಾಗಿದೆ' ಎಂದು ಪಕ್ಷದ ರಾಷ್ಟ್ರೀಯ ವಕ್ತಾರ ಕ್ಲೈಡ್ ಕ್ರಾಸ್ಟೊ ಆರೋಪಿಸಿದ್ದಾರೆ.

ದಲಿತ ವ್ಯಕ್ತಿಗೆ ಥಳಿಸಿ, ಮೂತ್ರ ಕುಡಿಸಿದ ಆರೋಪ; ಮೂವರ ಸೆರೆ

ಭಿಂಡ್ (ಮಧ್ಯಪ್ರದೇಶ)(ಪಿಟಿಐ): ಜಿಲ್ಲೆಯಲ್ಲಿ ದಲಿತ ವ್ಯಕ್ತಿಯೊಬ್ಬರನ್ನು ಥಳಿಸಿ, ಬಲವಂತದಿಂದ ಅವರಿಗೆ ಎರಡು ಬಾರಿ ಮೂತ್ರ ಕುಡಿಸಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಸೋನು ಬರುವಾ, ಅಲೋಕ್ ಶರ್ಮಾ ಹಾಗೂ ಛೋಟು ಓಝಾ ಬಂಧಿತರು. ಎಸ್‌ಸಿ,ಎಸ್‌ಟಿ ವಿರುದ್ಧ ದೌರ್ಜನ್ಯ ತಡೆ ಕಾಯ್ದೆ, ಬಿಎನ್‌ಎಸ್ ಅಡಿ ಪ್ರಕರಣ ದಾಖಲಿಸಲಾಗಿದೆ ಎಂದು ಹೆಚ್ಚುವರಿ ಎಸ್‌ಪಿ ಸಂಜೀವ್ ಪಾಠಕ್ ತಿಳಿಸಿದ್ದಾರೆ.

'ಸಂತ್ರಸ್ತ ವ್ಯಕ್ತಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಸಂತ್ರಸ್ತ ವ್ಯಕ್ತಿಯು ಮುಖ್ಯ ಆರೋಪಿಯ ವಾಹನ ಚಾಲಕನಾಗಿದ್ದ. ಕೆಲಸ ಬಿಟ್ಟಿದ್ದಕ್ಕಾಗಿ ಆತನನ್ನು ಗುರಿಯಾಗಿಸಿ ಹಲ್ಲೆ ಮಾಡಿರುವುದು ಮೇಲ್ನೋಟಕ್ಕೆ ತಿಳಿದುಬಂದಿದೆ' ಎಂದು ತಿಳಿಸಿದ್ದಾರೆ.

'ಗ್ವಾಲಿಯರ್‌ನಲ್ಲಿನ ನನ್ನ ಮಾವನ ಮನೆಯಿಂದ ಅಪಹರಣ ಮಾಡಿ, ಭಿಂಡ್‌ಗೆ ಕರೆತಂದರು. ನನ್ನನ್ನು ಪ್ಲಾಸ್ಟಿಕ್ ಪೈಪ್‌ನಿಂದ ಥಳಿಸಿದ ಆರೋಪಿಗಳು, ದಾರಿ ಮಧ್ಯೆ ವಾಹನ ನಿಲ್ಲಿಸಿದರು. ನಂತರ, ಬಾಟಲಿಯೊಂದರಲ್ಲಿದ್ದ ಮೂತ್ರವನ್ನು ಬಲವಂತದಿಂದ ಕುಡಿಸಿದರು' ಎಂದು ಸಂತ್ರಸ್ತ ತಿಳಿಸಿದ್ದಾರೆ.

'ಬಳಿಕ, ನನ್ನನ್ನು ಅಕುತ್ಪುರ ಗ್ರಾಮಕ್ಕೆ ಕರೆದೊಯ್ದು, ಕಬ್ಬಿಣದ ಸರಪಳಿಯಿಂದ ಕಟ್ಟಿ ಹಾಕಿ, ಮತ್ತೊಮ್ಮೆ ಮೂತ್ರ ಕುಡಿಸಿದರು' ಎಂದು ಹೇಳಿದ್ದಾರೆ.

'ಹೆಚ್ಚುತ್ತಿರುವ ಸೈದ್ಧಾಂತಿಕ ಯುದ್ಧಗಳು'

ನವದೆಹಲಿ (ಪಿಟಿಐ): ದೇಶವು ಗಡಿಯಲ್ಲಿ ಅಸ್ಥಿರತೆಯೊಂದಿಗೆ ಹೋರಾಡುತ್ತಿರುವಾಗ, ಸಮಾಜದೊಳಗೆ ಹೊಸ ರೀತಿಯ ಅಪರಾಧಗಳು, ಭಯೋತ್ಪಾದನೆ ಮತ್ತು ಸೈದ್ಧಾಂತಿಕ ಯುದ್ಧಗಳು ಉಲ್ಬಣಿಸುತ್ತಿವೆ ಎಂದು ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಮಂಗಳವಾರ ಎಚ್ಚರಿಸಿದರು.

ಆಧುನಿಕ ಆಂತರಿಕ ಅಪರಾಧಗಳು ಮತ್ತು ಬೆದರಿಕೆಗಳು ಹೆಚ್ಚು ಸಂಘಟಿತ, ಅದೃಶ್ಯವಾಗಿದ್ದು ಸಂಕೀರ್ಣ ಸ್ವರೂಪದವಾಗಿವೆ. ಅವು ಸಮಾಜದಲ್ಲಿ ಅವ್ಯವಸ್ಥೆಯನ್ನು ಸೃಷ್ಟಿಸಿ, ನಂಬಿಕೆಯನ್ನು ದುರ್ಬಲಗೊಳಿಸುವ ಹಾಗೂ ರಾಷ್ಟ್ರದ ಸ್ಥಿರತೆಗೆ ಸವಾಲೊಡ್ಡುವ ಉದ್ದೇಶವನ್ನು ಹೊಂದಿವೆ ಎಂದು ಅವರು ದೂರಿದರು.

ಪೊಲೀಸ್ ಸ್ಮರಣಾ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2047ರ ವೇಳೆಗೆ ವಿಕಸಿತ ಭಾರತದ ದೃಷ್ಟಿಕೋನವನ್ನು ಸಾಧಿಸಲು ಬಾಹ್ಯ ಮತ್ತು ಆಂತರಿಕ ಭದ್ರತೆಯನ್ನು ಸಮತೋಲನಗೊಳಿಸುವ ಅಗತ್ಯವಿದೆ ಎಂದು ಪ್ರತಿಪಾದಿಸಿದರು.

ಹಿಂದೆ 'ಕೆಂಪು ಕಾರಿಡಾರ್' ಎಂದು ಕರೆಯಲಾಗುತ್ತಿದ್ದ ಪ್ರದೇಶಗಳು ಈಗ ಪ್ರಗತಿಯ ಕಾರಿಡಾರ್‌ಗಳಾಗಿ ಬದಲಾಗಿವೆ ಎಂದ ರಕ್ಷಣಾ ಸಚಿವರು, ಇದು ನಕ್ಸಲ್ ಸಮಸ್ಯೆ ವಿರುದ್ಧ ಸಾಧಿಸಿದ ಗಮನಾರ್ಹ ಪ್ರಗತಿ ಎಂದು ಹೇಳಿದರು.

ಇಟ್ಟಾಂಗ ಇರಬೇಕು ಚೊಕ್ಕ

ವಾಸುದೇವ ನಾಡಿಗ್

ಪ್ರತಿ ದಿನ ಒರಟು ಬೆಟ್ಟ ಕಲ್ಲುಗಳ ಕುಟ್ಟುತ್ತಾ ದುಡಿಮೆ ಮಾಡುತ್ತ ಬೆವರು ಸುರಿಸುವ ಕಲ್ಲು ಕುಟಿಗನ ಕನಸೂ ನಮ್ಮದು. ಅವನಿಗೂ ಹಾಗೇ ಅನಿಸಿತು. ಎಷ್ಟು ದಿನ ಅಂತ ಹೀಗೇ ಕಲ್ಲು ಕುಟ್ಟುತ್ತಾ ಕಷ್ಟ ಪಡೋದು? ಬೇಕಾದ ಹಾಗೆ ಸುಖವಾದ ಜೀವನ ನಡೆಸಲು ಸಾಧ್ಯವಿಲ್ಲವೇ ಎಂಬುದು ಅವನ ಅಳಲು. ಈ ಅಳಲು ವರವಾಗಿಯೂ ಪರಿಣಮಿಸಿ ಅವನು ಏನನ್ನು, ಯಾರ ಹಾಗೆ ಆಗಬೇಕು ಅಂತ ಬಯಸುವನೋ ಹಾಗೆ ಆಗುವ ಶಕ್ತಿಯನ್ನೂ ಪಡೆದೇ ಬಿಟ್ಟನು.

ಹೀಗೆ ಬಿಸಿಲಲ್ಲಿ ಕೂತು ಕಲ್ಲು ಒಡೆಯುವಾಗ ಎದುರು ಅತ್ಯುತ್ತಮ ಪೋಷಾಕು ಧರಿಸಿ ಕುದುರೆಯೇರಿ ಹೊರಟ ವರ್ತಕನೊಬ್ಬನನ್ನು ಕಂಡ. ತಾನೂ ಹೀಗೆ ಆಗಬೇಕು ಅಂತ ಅಂದುಕೊಂಡ ಕೂಡಲೇ ವರ್ತಕನಾದ. ಹಾಗೇ ಕಾಲ ಕಳೆವಾಗ ಆ ರಾಜ್ಯದ ಮಂತ್ರಿಯ ಆಮಂತ್ರಣದ ಮೇರೆಗೆ ಸಭೆಯಲ್ಲಿ ಭಾಗವಹಿಸುವಾಗ ತಾನೂ ಮಂತ್ರಿಯಾಗಬೇಕು ಎಂದು ಬಯಸಿ ಕೂಡಲೇ ಮಂತ್ರಿಯಾದ. ಕೆಲಕಾಲ ಅರಮನೆಯಲ್ಲಿ ಕೆಲಸ ಮಾಡಿ ರಾಜನ ವೈಭವವನ್ನು ಕಂಡು ರಾಜನಾಗಲು ಬಯಸಿ ರಾಜನಾಗೇ ಬಿಟ್ಟ. ಒಮ್ಮೆ ರಾಜ ಬೇಟೆ ಆಡಲು ಹೋದಾಗ ಸೂರ್ಯನ ಝಳದಿಂದ ಸುಸ್ತಾಗಿ ಬಳಲಿ ಹಿಂತಿರುಗಿದ. ಇಷ್ಟು ಬಲಾಢ್ಯ ಶೂರನಾದ ರಾಜನನ್ನೇ ಮಣಿಸಿದ ಸೂರ್ಯನಾಗಲು ಬಯಸಿ ಸೂರ್ಯನೂ ಆದ. ಎಷ್ಟೇ ಪ್ರಖರನಾಗಿದ್ದರೂ ಸರಿ ಒಮ್ಮೆ ದಟ್ಟವಾದ ಮೋಡವೊಂದು ಸೂರ್ಯನನ್ನು ಆವರಿಸಿದಾಗ ದಟ್ಟವಾದ ಮೋಡವಾಗಲು ಬಯಸಿ ಮೋಡವಾಗಿ ಮಳೆಸುರಿಸುತ್ತ ನಡೆದ. ಎಷ್ಟು ರಭಸವಾಗಿ ಸುರಿದರೂ ಅಲುಕದೆ ನಿಂತ ಬೆಟ್ಟವನ್ನು ನೋಡಿ ಬೆಟ್ಟವಾಗಲು ಹಂಬಲಿಸಿ ಬೆಟ್ಟವಾದ. ಒಮ್ಮೆ ದೈತ್ಯಾಕಾರದ ಬೆಟ್ಟವನ್ನೂ ಕತ್ತರಿಸಲು ಒಬ್ಬ ಕಲ್ಲು ಕುಟಿಗ ಬಂದ. ಬೆಟ್ಟವನ್ನೂ ಕುಟ್ಟಿ ಚೂರು ಮಾಡಬಲ್ಲ ಕಲ್ಲು ಕುಟಿಗನಾಗ ಬಯಸಿದ. ಕಲ್ಲು ಕುಟಿಗನೇ ಅದ. ಕಾಲ ಚಕ್ರ ಮತ್ತೆ ಅವನನ್ನು ಇಟ್ಟಲ್ಲಿಯೇ ತಂದು ಬಿಟ್ಟಿತ್ತು.

ಈಗ ನಮ್ಮ ಸರದಿ. ಸದಾ ಬೇರೆಯವರನ್ನು ನೋಡುತ್ತಲೇ ಅಸಮಾಧಾನದಿಂದ ತತ್ತರಿಸುವ ನಮಗೆ ದೊರೆತ ಪಾತ್ರ ವೊಂದನ್ನು ಪ್ರೀತಿಸುತ್ತಾ ಬೆಳೆಯುವ ಬಗೆಯೇ ಅಲರ್ಜಿಯಾಗಿದೆ. ದಕ್ಕಿದ ಪಾತ್ರ ಸಿಕ್ಕ ಹೊಣೆಯನ್ನು ಗೌರವಿಸುವ ಅಪ್ಪಿಕೊಳ್ಳುವ ಮತ್ತು ಅದರ ಮೂಲಕವೇ ತೃಪ್ತಿ ಪಡುವ ಹಿತ ನೆಮ್ಮದಿ ಕಾಡು ಪಾಲಾಗಿದೆ. ಪಾತ್ರಗಳನ್ನು ಗೌರವಯುತವಾಗಿ ನಿಭಾಯಿಸುತ್ತಾ ಅದರಲ್ಲೇ ಇನ್ನಷ್ಟು ಪರಿಪಕ್ವತೆ ಪಡೆದುಕೊಳ್ಳದೆ ಹಲುಬುವ ಗುಣ ರಕ್ತಗತವಾಗಿದೆ. ಹಾಗಾಗಿಯೇ ನಿತ್ಯ ನಿರಂತರ ಅತೃಪ್ತಿ ಮತ್ತು ನಿಟ್ಟುಸಿರು. ಜನ ಅವರವರ ಪಾಡಿಗೆ ಇದ್ದಂಗೆ ಇದ್ದಲ್ಲೇ ನೆಮ್ಮದಿ ಕಂಡುಕೊಳ್ಳುವಂತೆ ಆದಾಗ ಮತ್ತು ಅದರ ಮೂಲಕವೇ ಗೆಲ್ಲುವಂತೆ ಆದಾಗ ಲೋಕದಲ್ಲಿ ಯಾವ ವಿಕಾರಗಳೂ ಸಂಭವಿಸುತ್ತಿರಲಿಲ್ಲವೇನೋ. ❖

ಪದಬಂಧ 6201

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1. ಕಸುವು ತೋರಿಸಿದ್ದು ಸ್ವಪ್ನದಲ್ಲೇ? (3)
3. ಧಾನ್ಯ ಸಂಗ್ರಹಿಸುವ ಸ್ಥಳ (3)
5. ಸ್ವಾಗತದಲ್ಲೇ ರುಚಿಯನ್ನು ಹುಡುಕಿ! (2)
6. ಗಮನಿಸಿದರೆ ಪುತ್ರ ಕಾಣುತ್ತಾನೆ! (2)
8. ಚಾಂದ್ರಮಾನ ಪಕ್ಷದ ಒಂಬತ್ತನೆಯ ತಿಥಿ (3)
9. ದೇಶೀಯವಾದುದು ಇಲ್ಲಿ ಉಲ್ಟಾ ಪಲ್ಟಾ ಆಗಿದೆ (3)
10. ಉದಾಹರಿಸುವಾಗ ಕೇಳಿದ ಸಾಲ! (3)
11. ನಿಯಮಿತವಾಗಿ ಕಾಣಿಸಿಕೊಳ್ಳುವ ಹೆಂಗಸು (3)
12. ತಿರುಗಿ ನಿಂತು ದಾಯಾದಿಗಳ ಬೀಳ್ಕೊಡುವಿಕೆ (3)
14. ತರುವಾಯ ಎಂದು ಹೀಗೆ ಹೇಳಿ (3)
15. ಹೊಸದಾದುದನ್ನು ತಿರುಗಿಸಿದರೆ ಕಾಡಾದೀತು! (2)
17. ಮುನಿದವನಲ್ಲಿ ಆನಂದವನ್ನು ನೋಡಿ! (2)
18. ವಿಸ್ತಾರವಾದ ಹೇಳಿಕೆ (3)
19. ಇರುಳಿಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ
1. ಕಲಾವಿದನು ತೆರೆದ ಬಾಗಿಲು! (2)
2. ಸುಗಮವಾಗಿ ಕಿತ್ತಿರುವ ಹೂವು (2)
3. ಕತ್ತರಿಸುವ ಸಾಧನ (3)
4. ಮಂದಿಗೆಲ್ಲ ತಿಳಿದಿರುವಂಥದ್ದು (5)
5. ಈ ಹಿಂದೂ ಸನ್ಯಾಸಿ ಶ್ರೀ ರಾಮಕೃಷ್ಣಪರಮಹಂಸರ ಶಿಷ್ಯ (7)
7. ದೊಡ್ಡ ಹಾರೆ ಇಲ್ಲಿದೆ (3)
10. ಮೂಡುತ್ತಿರುವ ಸೂರ್ಯ (5)
11. ವನದಲ್ಲಿ ಅಭಿವೃದ್ಧಿ (3)
13. ಚಾರ ಹೇಳಿದ ಸುದ್ದಿ (3)
16. ವರಾರದಲ್ಲಿರುವ ಮದುವೆ ಗಂಡು! (2)
17. ಕೋಪಗೊಳ್ಳುವಾಗ ತಪಸ್ವಿ ಬಂದನಲ್ಲಾ! (2)

6200ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆತುರ 6.ತಾರಾತಿಗಡಿ 7.ನಿರಾಳ 9.ಕಸಬುಗಾರ 13.ಹಗರು 15.ನಾಮಕರಣ 16.ರಸನ

ಮೇಲಿಂದ ಕೆಳಕ್ಕೆ: 1.ಆಭರಣ 2.ರದನಿ 3.ಪಾತಾಳ 4.ಗಡಿಗೆ 6.ತಿರಸ್ಕಾರ 8.ರಾಯಸ 9.ಕರ್ನಾಟಕ 10.ಗಾಣಿಗ 11.ಮನೆತನ 12.ಬುನಾದಿ 13.ಹಣತೆ 14.ರುಧಿರ

ಸುಡೊಕು 6585

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

9	6		8				1	
2							7	
		4	9		2	8	3	6
3		6				5		9
	7		3	2	4			
		1				3		7
4			6		1		9	
	3				5			
6		8	2				5	

6584 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

22 ಅಕ್ಟೋಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಪ್ರತಿಪದ್ ಗಂ. 20-17 **ನಕ್ಷತ್ರ:** ಸ್ವಾತಿ ಗಂ. 25-52, **ಯೋಗ:** ಪ್ರೀತಿ ಗಂ. 28-06 **ಕರಣ:** ಕಿಂಸ್ತುಘ್ನ ಗಂ. 7-05 ತುಲಾ ಮಾಸದ 05 ನೇ ದಿನ. **ಮಳೆ ನಕ್ಷತ್ರ:** ಚಿತ್ತಾ 4 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 01-30, **ಸೂರ್ಯೋದಯ:** 06-26 ಸೂರ್ಯಾಸ್ತ: 06-04, ಮುಸ್ಲಿಂ ದಿನಾಂಕ : 29 ರಬಿಯುಸ್ಸಾನಿ , **ದಿನ ವಿಶೇಷ:** ಕಾರ್ತಿಕ ಶುಕ್ಲಾದಿ, ಗೋವರ್ಧನ ಪೂಜಾ, ಬಲಿ ಪೂಜಾ, ಅನ್ನಕೂಟ, **ಅದೃಷ್ಟ ಸಂಖ್ಯೆ:** 6, 8

ಮೇಷ: ಆಶ್ವಾಸನೀಯ ವರ್ತನೆಯಿಂದ ಸಂತಸ ಉಂಟಾಗುವುದು. ಪ್ರವಾಸಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿವೆ. ಅಭಿಪ್ರಾಯಗಳಿಗೆ ಕುಟುಂಬದವರು ಸಮ್ಮತಿ ಕೊಡಲಿದ್ದಾರೆ.

ವೃಷಭ: ಎಲ್ಲಾ ಪ್ರಯತ್ನಗಳು ಯಶಸ್ಸು ಕಾಣುವ ಹಾದಿಯಲ್ಲಿರುವುದು. ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮದ ಫಲವನ್ನು ಅನುಭವಿಸುವಿರಿ. ಹಣದ ಪರಿಸ್ಥಿತಿ ಸುಧಾರಿಸಿ ನೆಮ್ಮದಿ. ಕಟ್ಟಡ ನಿರ್ಮಾಣದ ಬಗ್ಗೆ ಸಲಹೆ ಸಿಗುವುದು.

ಮಿಥುನ: ಕೆಲಸ ಕಾರ್ಯಗಳ ಬಗ್ಗೆ ನಿಗಾ ಕೊಡುವಂತೆ ತಂದೆ-ತಾಯಿಯಿಂದ ತೀವ್ರ ಸಂದೇಶ ಬರಲಿದೆ. ಮೇಲಧಿಕಾರಿಗಳು ಮೇಲಿಟ್ಟಿದ್ದ ಭರವಸೆ ಹುಸಿಯಾಗದಂತೆ ಕಾರ್ಯನಿರ್ವಹಿಸಲು ಅಶಕ್ತರಾಗುವ ಸಂಭವವಿದೆ.

ಕರ್ಕಾಟಕ: ಬಹಳ ದಿನಗಳ ನಂತರ ಮನಸ್ಸಿಗೆ ಹಿತವಾದ ಅನುಭವ ಸಿಗಲಿದೆ. ಹೆಂಡತಿಯ ಆರೈಕೆ ವಿಷಯವಾಗಿ ತಾಯಿ ಅಥವಾ ಅತ್ತೆಯವರನ್ನು ಕರೆ ತರುವಂತೆ ಆಗುವುದು. ಪರಿಶ್ರಮದ ಜೊತೆ ಅಧಿಕ ಸಮಯ ಮೀಸಲಿಡಿ.

ಸಿಂಹ: ಹಾಸ್ಯಪ್ರಜ್ಞೆ ಹೆಚ್ಚುವುದು ಆದರೆ ಹಾಸ್ಯದಿಂದ ಬೇರೆಯವರ ಮನಸ್ಸಿಗೆ ನೋವು ಉಂಟಾಗದಂತೆ ನೋಡಿಕೊಳ್ಳಿ. ಮದುವೆಯ ವಿಷಯಕ್ಕೆ ಸಂಬಂಧಪಟ್ಟಂತೆ ತಾಯಿಯ ಮತ್ತು ಅಣ್ಣಂದಿರ ಮನವೊಲಿಸುವಲ್ಲಿ ಯಶಸ್ವಿಯಾಗುವಿರಿ.

ಕನ್ಯಾ: ಅಗಾಧ ಜ್ಞಾನ ಶಕ್ತಿ ಹೊರ ಹೊಮ್ಮಿ ಬರಲು ಸೂಕ್ತ ಕಾಲವಿದು. ವಾದ-ವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ. ವಿವೇಕರಹಿತ ಕೆಲಸದಲ್ಲಿ ತೊಡಗಿಸಿಕೊಳ್ಳದಿರಿ. ವೃತ್ತಿಪರ ಗಮನಹರಿಸಿ.

ತುಲಾ: ಸಿಟ್ಟು ಅಥವಾ ಯೋಚನಾರಹಿತ ನಿರ್ಧಾರಗಳು ಏಕಾಂಗಿತನಕ್ಕೆ ಕಾರಣವಾಗಲಿವೆ. ನೆಂಟರಿಷ್ಟರ ಸಲಹೆಸೂಚನೆಗಳನ್ನು ಆಲಿಸಿ ನಂತರದಲ್ಲಿ ಸನ್ಮಾರ್ಗದಲ್ಲಿ ನಡೆಯಿರಿ. ದೈವಬಲ ಒದಗಿ ಬಂದು ಅಭಿವೃದ್ಧಿಗೊಳ್ಳುವಿರಿ.

ವೃಶ್ಚಿಕ: ಪ್ರಾಪ್ತ ವಯಸ್ಸಿನ ಮಕ್ಕಳಿಗೆ ವಿವಾಹ ಯೋಗ ಕೂಡಿ ಬರುವುದು. ನಿರುದ್ಯೋಗಿಗಳಿಗೆ ಸಾಮಾಜಿಕ ಬದುಕಿನಲ್ಲಿ ಹೊಸ ತಿರುವು ಮೂಡುತ್ತದೆ. ಗೃಹನಿರ್ಮಾಣದಂತಹ ಕಾರ್ಯ ಕೈಗೊಂಡವರಿಗೆ ತೊಂದರೆ ಸೃಷ್ಟಿ ಮಾಡುವುದು.

ಧನು: ಸಂಶೋಧನಾ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿಯಾಗುವುದು ಅಥವಾ ಸಂಶೋಧನಾ ವೃತ್ತಿಯಲ್ಲಿರುವವರಿಗೆ ಅಧ್ಯಯನಕ್ಕೆ ಸುಸಮಯ. ದೇಹದಲ್ಲಿ ಪಿತ್ತದ ಅಂಶ ಅಧಿಕವಾಗುವುದರಿಂದ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ಮಕರ: ಸಹೋದ್ಯೋಗಿಗಳೊಂದಿಗೆ ಆತ್ಮೀಯ ನಡೆ ಮತ್ತು ನುಡಿ ಮನಸ್ತಾಪಗಳನ್ನು ದೂರಮಾಡಲಿದೆ. ಸಮಾಜಸೇವೆಯಲ್ಲಿ ತೊಡಗಿ ಕೊಳ್ಳುವಿರಿ. ನಿರೀಕ್ಷಿತ ಕಡೆಗಳಿಂದ ಧನ ಒದಗಿ ಬರುವುದು .

ಕುಂಭ: ವಾಹನ ವಹಿವಾಟುಗಳಿಂದ ಲಾಭವಿದೆ. ಶುಭಕಾರ್ಯಗಳಿಗೆ ಹಣ ವಿನಿಯೋಗಿಸುವಿರಿ. ರಾಜಕೀಯ ಸೇರ್ಪಡೆಗೆ ಆಹ್ವಾನ ಬರಲಿದೆ. ದೂರ ಉಳಿಯುವುದು ಕ್ಷೇಮವುಂಟುಮಾಡುತ್ತದೆ.

ಮೀನ: ಮನೋಬಲದಿಂದ ಕೆಲಸ ಕಾರ್ಯಗಳು ಚುರುಕಾಗಿ ಮತ್ತು ಅಚ್ಚುಕಟ್ಟಾಗಿ ನಡೆಯಲಿವೆ. ಹಣದ ಅಡಚಣೆ ಇರುವುದಿಲ್ಲ. ತಂದೆ-ತಾಯಿ ಆರೋಗ್ಯ ಸ್ಥಿತಿ ಉತ್ತಮ. ಮನರಂಜನೆಗಾಗಿ ಅಲ್ಪಕಾಲ ಮೀಸಲಿಡಿ

ಗುಂಡಣ್ಣ

ಕಾಸರಗೋಡು ಚಿನ್ನಾಗೆ ಕಲಾಕಾರ್ ಪುರಸ್ಕಾರ

ಮಂಗಳೂರು: ಕುಂದಾಪುರದ ಕಾರ್ವಾಲ್ ಮನೆತನ ಹಾಗೂ ಮಾಂಡ್ ಸೊಭಾಣ್ ಜಂಟಿಯಾಗಿ ನೀಡುವ 21ನೇ ವರ್ಷದ ಕಲಾಕಾರ್ ಪುರಸ್ಕಾರಕ್ಕೆ ಕಾಸರಗೋಡು ಚಿನ್ನಾ (ಶ್ರೀನಿವಾಸ ರಾವ್ ಎಸ್.) ಅವರನ್ನು ಆಯ್ಕೆ ಮಾಡಲಾಗಿದೆ.


ಕಾಸರಗೋಡು ಚಿನ್ನಾ

ಪುರಸ್ಕಾರ ₹50 ಸಾವಿರ ನಗದು ಒಳಗೊಂಡಿದೆ. ನ.2ರಂದು ನಗರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಾಂಡ್ ಸೊಭಾಣ್ ಅಧ್ಯಕ್ಷ ಲುವಿ ಜೆ. ಪಿಂಟೊ ತಿಳಿಸಿದ್ದಾರೆ.

ತೆಂಗಿಗೆ ರೋಗಬಾಧೆ: ಸಮೀಕ್ಷೆ ಅಪೂರ್ಣ

ತುರ್ತು ನಿಯಂತ್ರಣ ಕ್ರಮ ಕೈಗೊಳ್ಳದ ಇಲಾಖೆ: ರೈತರ ಆರೋಪ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಕಪ್ಪುತಲೆ ಹುಳು, ಬಿಳಿನೊಣ ಬಾಧೆಗೆ ತುತ್ತಾಗಿರುವ ತೆಂಗಿನ ಬೆಳೆಯ ಸಮೀಕ್ಷೆ ರಾಜ್ಯದಲ್ಲಿ ಅಪೂರ್ಣಗೊಂಡಿದ್ದು, ತೋಟಗಾರಿಕೆ ಇಲಾಖೆಯಿಂದ ಪರಿಹಾರ ಸಿಗದೇ ರೈತರು ಕಂಗಾಲಾಗಿದ್ದಾರೆ.

ಸಸ್ಯ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳಲು, ರೋಗಬಾಧಿತ ಪ್ರದೇಶಗಳಲ್ಲಿ 'ಪೆಸ್ಟ್ ಸರ್ವೆಯರ್' (ಪಿ.ಎಸ್) ಮೂಲಕ ವೈಜ್ಞಾನಿಕ ಸಮೀಕ್ಷೆ ನಡೆಸಿ ಸೆ.5ರೊಳಗೆ ಮಾಹಿತಿ ಸಲ್ಲಿಸಲು ಇಲಾಖೆ ಸೂಚಿಸಿತ್ತು.

ತೆಂಗು ಬೆಳೆಯುವ ಪ್ರಮುಖ 15 ಜಿಲ್ಲೆಗಳಲ್ಲಿ ಒಟ್ಟು 18.65 ಲಕ್ಷ ತಾಕುಗಳಿದ್ದು, ಇವುಗಳಲ್ಲಿ ಇದುವರೆಗೆ 5.93 ಲಕ್ಷ ತಾಕುಗಳ (ಶೇ 32) ಸಮೀಕ್ಷೆ ಮಾತ್ರ ಪೂರ್ಣಗೊಂಡಿದೆ. ಇದರಿಂದ ಇಲಾಖೆಗೆ ರೋಗ ಬಾಧಿತ ಪ್ರದೇಶದ ನಿಖರ ಮತ್ತು ಸಮಗ್ರ ಅಂಕಿಅಂಶವೇ ದೊರೆತಿಲ್ಲ ಎನ್ನಲಾಗಿದೆ.

> ರೋಗ ನಿಯಂತ್ರಿಸಲು ರೈತರಿಗೆ ಸಲಹೆ ನೀಡಲಾಗುತ್ತಿದೆ. ಸಮೀಕ್ಷೆ ವರದಿ ಆಧರಿಸಿ, ರೈತರಿಗೆ ನೆರವು ನೀಡಲು ಸರ್ಕಾರಕ್ಕೆ ವರದಿ ಸಲ್ಲಿಸಲಾಗಿದೆ
> **ಆರ್. ನಿಖಿಲ್**, ತೋಟಗಾರಿಕೆ ನಿರ್ದೇಶಕ, ಬೆಂಗಳೂರು

> ರೋಗಬಾಧೆಯಿಂದ ತೆಂಗು ಇಳುವರಿ ಕಡಿಮೆಯಾಗಿದೆ. ರೋಗ ನಿಯಂತ್ರಿಸಲು ತೋಟಗಾರಿಕೆ ಇಲಾಖೆಯಿಂದ ನಿಯಂತ್ರಣ ಕ್ರಮವೂ ಇಲ್ಲ, ಪರಿಹಾರವೂ ಸಿಕ್ಕಿಲ್ಲ
> **ಎಂ.ಎನ್.ಮಹೇಶ್ ಕುಮಾರ್**, ಸಾವಯವ ಕೃಷಿಕ, ಮಳವಳ್ಳಿ

ಕಾರಣಗಳೇನು?: 'ಒಂದು ತಿಂಗಳಲ್ಲಿ 18 ಲಕ್ಷ ತಾಕುಗಳ ಸಮೀಕ್ಷೆ ಅಸಾಧ್ಯ. ಜತೆಗೆ ಇಲಾಖೆಯಲ್ಲಿ ಅಗತ್ಯ ಸಿಬ್ಬಂದಿ ಇಲ್ಲ ಮತ್ತು ಸಮೀಕ್ಷೆಗೆ ಅಗತ್ಯ ವಿದ್ಯಾರ್ಹ ಪಿ.ಎಸ್.ಗಳನ್ನು ನಿಯೋಜಿಸಿಲ್ಲ. ಕೆಲವು ಕಡೆ ನೆಟ್‌ವರ್ಕ್ ಸಮಸ್ಯೆಯಿಂದ 'ಕ್ರಾಪ್ ಇನ್‌ಸ್ಪೆಕ್ಷನ್ ಬಿಎಚ್‌ಸಿ ಆ್ಯಪ್' ಕಾರ್ಯನಿರ್ವಹಿಸುತ್ತಿರಲಿಲ್ಲ. ಈ ಎಲ್ಲ ಕಾರಣಗಳಿಂದ ಸಮೀಕ್ಷೆ ಕಾರ್ಯ ಅಪೂರ್ಣಗೊಂಡಿದೆ' ಎಂದು ಪೆಸ್ಟ್ ಸರ್ವೆಯರ್‌ಗಳು ತಿಳಿಸಿದ್ದಾರೆ.

ರೋಗಬಾಧೆ ಸಮೀಕ್ಷೆಯ ವಿವರ

18,65,245 15 ಜಿಲ್ಲೆಗಳಲ್ಲಿಯ ತೆಂಗು ಬೆಳೆಯ ಒಟ್ಟು ತಾಕುಗಳು

5,93,831 ಸಮೀಕ್ಷೆ ಮಾಡಿದ ತಾಕುಗಳ ಸಂಖ್ಯೆ

5.87 ಕೋಟಿ ತೆಂಗಿನ ಮರಗಳ ಒಟ್ಟು ಸಂಖ್ಯೆ

39.27 ಲಕ್ಷ ಮರಗಳಲ್ಲಿ ಕಪ್ಪು ತಲೆ ಹುಳು ಬಾಧೆ

1.74 ಕೋಟಿ ಮರಗಳಲ್ಲಿ ಬಿಳಿ ನೊಣ ಬಾಧೆ

2.13 ಕೋಟಿ ರೋಗಕ್ಕೆ ತುತ್ತಾದ ಒಟ್ಟು ಮರಗಳು

7 ಲಕ್ಷ ಹೆಕ್ಟೇರ್ ವಿಸ್ತೀರ್ಣ: ರಾಜ್ಯದಲ್ಲಿ ತೆಂಗು ಕೃಷಿ ಸುಮಾರು 7.04 ಲಕ್ಷ ಹೆಕ್ಟೇರ್ ವಿಸ್ತೀರ್ಣ ಹೊಂದಿದೆ. 34.79 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆ ಇದೆ. ತುಮಕೂರು, ಹಾಸನ, ಮಂಡ್ಯ, ಉತ್ತರಕನ್ನಡ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಕೋಲಾರ, ಬೆಂಗಳೂರು ನಗರ ಮತ್ತು ಗ್ರಾಮಾಂತರ, ದಕ್ಷಿಣ ಕನ್ನಡ, ಮೈಸೂರು, ಚಾಮರಾಜ ನಗರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಅತ್ಯಧಿಕವಾಗಿ ತೆಂಗು ಬೆಳೆಯಲಾಗುತ್ತಿದೆ.

'ಅಪೂರ್ಣ ಸಮೀಕ್ಷೆಯಿಂದ ರೈತರಿಗೆ ನ್ಯಾಯ ಸಿಗುವುದಿಲ್ಲ. ರೈತರು ಸಾಲದ ಸುಳಿಗೆ ಸಿಲುಕುತ್ತಿದ್ದಾರೆ. ರೋಗ ನಿಯಂತ್ರಿಸಲು ತುರ್ತುಕ್ರಮ ಕೈಗೊಳ್ಳಬೇಕು ಮತ್ತು ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ನೀಡಬೇಕು' ಎಂದು ಮಂಡ್ಯ ರೈತ ಮುಖಂಡ ಕೆ.ಬೋರಯ್ಯ ಒತ್ತಾಯಿಸಿದ್ದಾರೆ.

ಸುದ್ದಿ 2 ನಿಮಿಷ

24ರಂದು ಹೆಗ್ಗಡೆ ಪಟ್ಟಾಭಿಷೇಕದ 58ನೇ ವರ್ಧಂತ್ಯುತ್ಸವ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರ ಪಟ್ಟಾಭಿಷೇಕದ 58ನೇ ವರ್ಧಂತ್ಯುತ್ಸವ ಅ.24ರಂದು ಧರ್ಮಸ್ಥಳದಲ್ಲಿ ನಡೆಯಲಿದೆ.

ಭಗವಾನ್ ಚಂದ್ರನಾಥಸ್ವಾಮಿ ಬಸದಿ, ಮಂಜುನಾಥಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು ನಡೆಯಲಿವೆ. ನಾಗರಿಕರು, ಭಕ್ತರು, ಅಭಿಮಾನಿಗಳು ಗೌರವಾರ್ಪಣೆ ಮಾಡುವರು.

ಸಂಜೆ 4ಕ್ಕೆ ನಡೆಯುವ ಸಮಾರಂಭದಲ್ಲಿ ತುಮಕೂರಿನ ಸಿದ್ಧಗಂಗಾ ಮಠದ ಸಿದ್ಧಲಿಂಗಸ್ವಾಮೀಜಿ ಆಶೀರ್ವಚನ ನೀಡುವರು. ಶಾಸಕರಾದ ಹರೀಶ್ ಪೂಂಜ, ಕೆ.ಪ್ರತಾಪಸಿಂಹ ನಾಯಕ್, ಮಸ್ಕಾಂ ಅಧ್ಯಕ್ಷ ಕೆ.ಹರೀಶ್ ಕುಮಾರ್ ಭಾಗವಹಿಸುವರು. ಹೆಗ್ಗಡೆ ಅವರು ಹೊಸ ಯೋಜನೆಗಳನ್ನು ಪ್ರಕಟಿಸುವರು.



ಧರ್ಮಸ್ಥಳದ 21ನೇ ಧರ್ಮಾಧಿಕಾರಿಯಾಗಿ 1968ರ ಅ. 24ರಂದು ನೆಲ್ಯಾಡಿ ಬೀಡಿನಲ್ಲಿ ವೀರೇಂದ್ರ ಕುಮಾರ್ ಅವರಿಗೆ ಹೆಗ್ಗಡೆಯಾಗಿ ಪಟ್ಟಾಭಿಷೇಕವಾಗಿತ್ತು.

ಸರ್ಕಾರಿ ಯೋಜನೆಗೆ ಬಂಗಾರಪ್ಪ ಹೆಸರಿಡಿ: ಈಡಿಗರ ಸಂಘ ಮನವಿ

ಶಿವಮೊಗ್ಗ: 'ಮಾಜಿ ಮುಖ್ಯಮಂತ್ರಿ, ದಿವಂಗತ ಎಸ್.ಬಂಗಾರಪ್ಪ ಅವರ ಹೆಸರನ್ನು ಸರ್ಕಾರದ ಯಾವುದಾದರೂ ಯೋಜನೆಗೆ ಇಡಬೇಕು' ಎಂದು ಶಿವಮೊಗ್ಗ ಜಿಲ್ಲಾ ಆರ್ಯ ಈಡಿಗರ ಸಂಘ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಮಾಡಿದೆ.

ಈ ಸಂಬಂಧ ಮನವಿ ಸಲ್ಲಿಸಿರುವ ಸಂಘದ ಅಧ್ಯಕ್ಷ ಶ್ರೀಧರ್ ಆರ್. ಹುಲ್ತಿಕೊಪ್ಪ ಅವರು, ಯೋಜನೆಗೆ ಹೆಸರಿಡುವ ಮೂಲಕ ಹಿಂದುಳಿದ ವರ್ಗದ ನೇತಾರರಾಗಿದ್ದ ಬಂಗಾರಪ್ಪ ಅವರ ಹೆಸರು ಅಜರಾಮರವಾಗಿಸಬೇಕು ಎಂದು ಕೋರಿದ್ದಾರೆ.

'ಅ.26 ರಂದು ಬಂಗಾರಪ್ಪ ಅವರ 93ನೇ ಜನ್ಮದಿನ. ಈ ಸಂದರ್ಭದಲ್ಲಿ ರಾಜ್ಯದ ಒಂದು ಸರ್ಕಾರಿ ಯೋಜನೆಗೆ ಅವರ ಹೆಸರು ಇಟ್ಟರೆ ಅವರಿಗೆ ಹಾಗೂ ಆ ಮೂಲಕ ಇಡೀ ಹಿಂದುಳಿದ ಸಮುದಾಯಕ್ಕೆ ಗೌರವವನ್ನು ಸಲ್ಲಿಸಿದಂತಾಗುತ್ತಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

ಬಂಗಾರಪ್ಪ ಅವರು ಜಾರಿಗೆ ತಂದಿದ್ದ 'ಆಶ್ರಯ', 'ಆರಾಧನಾ', 'ವಿಶ್ವ' ಯೋಜನೆಗಳ ಮೂಲಕ ಜನರು ಅವರನ್ನು ಸದಾ ಸ್ಮರಿಸುತ್ತಿದ್ದಾರೆ. ಹಿಂದೆ ಆಡಳಿತ ನಡೆಸಿದ ಸರ್ಕಾರಗಳು ಬಂಗಾರಪ್ಪ ಅವರನ್ನು ನಿರ್ಲಕ್ಷಿಸಿವೆ' ಎಂದು ವಿಷಾದ ವ್ಯಕ್ತಪಡಿಸಿದ್ದಾರೆ.

'ಕಲ್ಯಾಣ'ದಲ್ಲಿ ಮಳೆ: 3 ಜಾನುವಾರು ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲ್ಯಾಣ ಕರ್ನಾಟಕದ ರಾಯಚೂರು, ಕೊಪ್ಪಳ, ಯಾದಗಿರಿ ಜಿಲ್ಲೆಯ ಹಲವೆಡೆ, ಕಲಬುರಗಿ ಜಿಲ್ಲೆ ಕಮಲಾಪುರ ತಾಲ್ಲೂಕಿನ ಕೆಲವೆಡೆ ಮಂಗಳವಾರ ಉತ್ತಮ ಮಳೆಯಾಗಿದೆ.

ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ನಾಗರಾಳ ಜಲಾಶಯದಿಂದ ನದಿಗೆ ನೀರು ಬಿಡಲಾಗಿದ್ದು, ಇದರಿಂದ ಉಂಟಾದ ಪ್ರವಾಹದಲ್ಲಿ ಮಂಗಳವಾರ ಬೆಳಿಗ್ಗೆ ಕನಕಪುರ ಗ್ರಾಮದ ಎರಡು ಎತ್ತುಗಳು, ಒಂದು ಹಸು ಕೊಚ್ಚಿಕೊಂಡು ಹೋಗಿ ಮೃತಪಟ್ಟಿವೆ.

ರಾಯಚೂರು ನಗರ, ಜಿಲ್ಲೆಯ ಮಾನ್ವಿ, ಸಿಂಧನೂರು, ಕವಿತಾಳ ಸೇರಿದಂತೆ ಹಲವೆಡೆ ಮಧ್ಯಾಹ್ನ ಮಳೆಯಾಗಿದ್ದು, ಹಬ್ಬಕ್ಕೆ ಮಾರಲು ತಂದಿದ್ದ ಕುಂಬಳಕಾಯಿ, ಹೂವು, ಬಾಳೆದಿಂಡು ಹಾನಿಗೊಳಗಾದವು.

ಕೊಪ್ಪಳದಲ್ಲಿ ಅರ್ಧಗಂಟೆ ಬಿರುಸಿನ ಮಳೆಯಾಗಿದ್ದು, ನೆಂದುಕೊಂಡೇ ದೀಪಾವಳಿ ಹಬ್ಬದ ಸಾಮಗ್ರಿಗಳನ್ನು ವ್ಯಾಪಾರಿಗಳು ಮಾರಾಟ ಮಾಡಿದರು.

ಯಾದಗಿರಿ ನಗರವೂ ಸೇರಿದಂತೆ ಜಿಲ್ಲೆಯಾದ್ಯಂತ ಜೋರು ಮಳೆಯಾಗಿದೆ. ಗುರುಮಠಕಲ್, ಸುರಪುರ, ಶಹಾಪುರ ತಾಲ್ಲೂಕಿನಲ್ಲಿ ತುಂತುರು ಮಳೆಯಾಗಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.78	17,515	17,258
ಹಾರಂಗಿ	2,859	2,857.34	989	1,000
ಕಬಿನಿ	2,284.00	2,283.71	3,631	1,650
ಹೇಮಾವತಿ	2,922	2,919.65	12,552	4,560
ಲಿಂಗನಮಕ್ಕಿ	1,819	1,815.40	8,620	7,198
ಸೂಪಾ (ಮೀ)	564	558.58	1,316.37	4,508.62
ಮಾಣಿ	595	593.68	1,416	534
ತುಂಗಭದ್ರಾ	1,633	1,625.41	9,139	10,807
ಮಲಪ್ರಭಾ	2,079.5	2,079.50	394	394
ಘಟಪ್ರಭಾ	2,175	2,174.85	349	185
ಭದ್ರಾ *	186	184.2	3,685	3,384
ಆಲಮಟ್ಟಿ (ಮೀ)	519.60	519.60	2,468	2,468
ನಾರಾಯಣಪುರ (ಮೀ)	492.25	491.92	200	7,200

* ನೆಲಮಟ್ಟದಿಂದ

ಕಾರವಾರ, ಬಳ್ಳಾರಿಯಲ್ಲಿ ಮಳೆ

ಹುಬ್ಬಳ್ಳಿ ವರದಿ: ಬಳ್ಳಾರಿ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಮಂಗಳವಾರ ಗುಡುಗು, ಸಹಿತ ಮಳೆಯಾಯಿತು. ಮಧ್ಯಾಹ್ನ ಆರಂಭವಾದ ಮಳೆ ಸಂಜೆಯವರೆಗೂ ಮುಂದುವರಿಯಿತು. ಬಳ್ಳಾರಿ ಜಿಲ್ಲೆಯ ತೆಕ್ಕಲಕೋಟೆ ಪಟ್ಟಣ ಸೇರಿ ಹೋಬಳಿಯಾದ್ಯಂತ ಗುಡುಗು ಸಹಿತ ಧಾರಾಕಾರವಾಗಿ ಮಳೆಯಾಗಿದೆ.

ತೆಕ್ಕಲಕೋಟೆ, ಕರೂರು ಹೋಬಳಿ ವ್ಯಾಪ್ತಿಯ ಭೈರಾಪುರ, ದರೂರು, ಬಲಕುಂದಿ, ಉಪ್ಪಾರ ಹೊಸಳ್ಳಿ, ಹಳೇಕೋಟೆ ಗ್ರಾಮದ ಭತ್ತದ ಬೆಳೆ ನೆಲಕಚ್ಚಿದೆ.

ಉತ್ತರ ಕನ್ನಡದ ಕಾರವಾರ, ಹೊನ್ನಾವರ ಹಾಗೂ ಬೆಳಗಾವಿಯಲ್ಲಿ ಉತ್ತಮ ಮಳೆಯಾಗಿದೆ.

ಕೊಚ್ಚಿ ಹೋದ ಬಂಡಿ

ಚಿಕ್ಕಮಗಳೂರು: ಜಿಲ್ಲೆಯ ಹಲವೆಡೆ ಮಂಗಳವಾರ ಧಾರಾಕಾರ ಮಳೆ ಸುರಿಯಿತು. ಕಡೂರು ತಾಲ್ಲೂಕಿನ ತುರುವನಹಳ್ಳಿಯಲ್ಲಿ ಎತ್ತಿನಗಾಡಿ ಕೊಚ್ಚಿ ಹೋಗಿ, ಎತ್ತುಗಳು ಮೃತಪಟ್ಟಿವೆ.

ಕಡೂರು, ತರೀಕೆರೆ ಸೇರಿ ಬಯಲು ಸೀಮೆಯಲ್ಲಿ ಗುಡುಗು ಸಹಿತ ಭಾರಿ ಮಳೆ ಸುರಿಯಿತು. ವೇದಾನದಿ ತುಂಬಿ ಹರಿಯುತ್ತಿದ್ದು, ಎಸ್.ಮಾದಾಪುರದ ಕೆರೆ ತುಂಬಿ ಕೋಡಿ ಬಿದ್ದಿದೆ.

ಹುಲ್ಲೇಹಳ್ಳಿಯ ರೈತ ಲಕ್ಷ್ಮಣ ಅಡಿಕೆ ಸಸಿ ಖರೀದಿಸಲು ಕಡೂರಿಗೆ ಹೊರಟಿದ್ದು, ಮಣ್ಣುಹೊಳೆ ರಸ್ತೆಯಲ್ಲಿ ಹಳ್ಳದ ಸೆಳವಿಗೆ ಗಾಡಿ, ಎತ್ತುಗಳು ಕೊಚ್ಚಿಹೋಗಿವೆ. ಸಮೀಪದ ತೋಟದಲ್ಲಿ ಎತ್ತುಗಳ ಕಳೇಬರ ಪತ್ತೆಯಾಗಿದ್ದು, ಗಾಡಿ ಸಿಕ್ಕಿಲ್ಲ. ಲಕ್ಷ್ಮಣ ಈಜಿ ಪಾರಾಗಿದ್ದು, ಅವರ ಮಾಹಿತಿ ಆಧರಿಸಿ ಪೊಲೀಸರು, ಅಗ್ನಿಶಾಮಕ ಸಿಬ್ಬಂದಿ ಕಳೇಬರ ಪತ್ತೆಮಾಡಿದ್ದಾರೆ.

ಕುಂತಿಹೊಳೆ ಮೈದುಂಬಿ ಹರಿಯುತ್ತಿದೆ. ಬೀರೂರು ಮುದ್ದಾಪುರ ಎರೆ ಬಯಲಿನಲ್ಲಿ ಕೊಯಿಲು ಮಾಡಿದ್ದ ಈರುಳ್ಳಿ ಬೆಳೆ ಕೊಳೆಯುವ ಭೀತಿ ಉಂಟಾಗಿದೆ. ತರೀಕೆರೆ ತಾಲ್ಲೂಕಿನಲ್ಲೂ ಹಲವು ಕೆರೆಗಳು ಕೋಡಿ ಬಿದ್ದಿವೆ.

ಮಂಗಳೂರು ನಗರ ಮತ್ತು ಉಡುಪಿ ಜಿಲ್ಲೆಯ ವಿವಿಧೆಡೆ ಸಿಡಿಲು ಸಹಿತ ಬಿರುಸಿನ ಮಳೆಯಾಗಿದೆ. ಬ್ರಹ್ಮಾವರ, ಉಡುಪಿ ನಗರ ಮತ್ತು ಜಿಲ್ಲೆಯ ಕಾಪು, ಪಡುಬಿದ್ರಿ ವ್ಯಾಪ್ತಿಯಲ್ಲೂ ಗುಡುಗು ಸಹಿತ ಮಳೆಯಾಗಿದೆ.

ರಬಕವಿ ಬನಹಟ್ಟಿ ಸಮೀಪದ ಹಳಿಂಗಳಿ ಗ್ರಾಮದ ಭದ್ರಗಿರಿ ಬೆಟ್ಟ ಪ್ರದೇಶದಲ್ಲಿ ಆರಿಕಾ ದರ್ಶನಭೂಷಣಮತಿ ಮಾತಾಜಿ ಅಂತ್ಯಕ್ರಿಯೆ ಮಂಗಳವಾರ ಜರುಗಿತು

ಆರಿಕಾ ಮಾತಾಜಿ ಅಂತ್ಯಕ್ರಿಯೆ

ರಬಕವಿ ಬನಹಟ್ಟಿ (ಬಾಗಲಕೋಟೆ): ಸಮೀಪದ ಹಳಿಂಗಳಿ ಭದ್ರಗಿರಿ ಬೆಟ್ಟದಲ್ಲಿ 124 ದಿನದ ಹಿಂದೆ ಸಲ್ಲೇಖನ ವ್ರತ ಕೈಗೊಂಡು, ಸೋಮವಾರ ದೇಹತ್ಯಾಗ ಮಾಡಿದ ಜೈನ ಸನ್ಯಾಸಿನಿ ಆರಿಕಾ ದರ್ಶನಭೂಷಣಮತಿ ಮಾತಾಜಿ (103) ಅಂತ್ಯಕ್ರಿಯೆ ಮಂಗಳವಾರ ಜರುಗಿತು.

ಬೆಳಿಗ್ಗೆ 9 ಗಂಟೆಗೆ ಭದ್ರಗಿರಿಬೆಟ್ಟ ಪ್ರದೇಶದಲ್ಲಿ ಅಸಂಖ್ಯ ಭಕ್ತರ ಸಮ್ಮುಖದಲ್ಲಿ ಜೈನ ಧರ್ಮದ ವಿಧಿ ವಿಧಾನದಂತೆ ಅಂತ್ಯಕ್ರಿಯೆ ನಡೆಯಿತು.

'ಶನಿವಾರ ಅವರ ಉಸಿರಾಟದಲ್ಲಿ ತೊಂದರೆಯಾಗಿತ್ತು. ಭಾನುವಾರ ಕುಲರತ್ನ ಭೂಷಣ ಮಹಾರಾಜರಿಂದ ಯಮ ಸಲ್ಲೇಖನ ವ್ರತ ಸ್ವೀಕರಿಸಿದರು. ಸೋಮವಾರ ಕುಲರತ್ನಭೂಷಣ ಮಹಾರಾಜರಿಂದ ಉಪದೇಶ ಆಲಿಸುತ್ತ, ಭಕ್ತರ ಸಮ್ಮುಖದಲ್ಲಿ ದೇಹತ್ಯಾಗ ಮಾಡಿದರು.

ನೂರಾರು ಮಂದಿ ಶ್ರಾವಕ ಮತ್ತು ಶ್ರಾವಕಿಯರು, ಜನಪ್ರತಿನಿಧಿಗಳು, ರಬಕವಿ ಬನಹಟ್ಟಿ, ಹಳಿಂಗಳಿ, ಮದನ ಮಟ್ಟಿ, ತಮದಡ್ಡಿ, ತೇರದಾಳ ಸೇರಿ ದಂತೆ ಸುತ್ತಲಿನ ನಗರ ಮತ್ತು ಗ್ರಾಮೀಣ ಪ್ರದೇಶದ ಜೈನ ಧರ್ಮೀಯರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡರು.

ಹಾಸನಾಂಬೆ ಇಂದು ಕಡೇ ದಿನ

ಹಾಸನ: ಇಲ್ಲಿನ ಹಾಸನಾಂಬೆ ದೇವಿಯ ದರ್ಶನಕ್ಕೆ ಒಂದು ದಿನವಷ್ಟೆ ಬಾಕಿ ಉಳಿದಿದೆ. ಮಂಗಳವಾರ ಬೆಳಿಗ್ಗೆಯವರೆಗೆ ಒಟ್ಟು 23 ಲಕ್ಷ ಮಂದಿ ದೇವಿಯ ದರ್ಶನ ಪಡೆದಿದ್ದಾರೆ.

'ಟಿಕೆಟ್, ಲಡ್ಡು ಪ್ರಸಾದ ಮಾರಾಟದಿಂದ ಇಲ್ಲಿಯವರೆಗೆ ₹20 ಕೋಟಿ ಆದಾಯ ಬಂದಿದೆ' ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ದೇಗುಲದಲ್ಲಿ ಮಂಗಳವಾರದಿಂದ ಶಿಷ್ಟಾಚಾರದ ದರ್ಶನಕ್ಕೆ ಕಡಿವಾಣ ಹಾಕಲಾಗಿತ್ತು. ಮಂಗಳವಾರ ಗಣ್ಯರು ಟಿಕೆಟ್ ಪಡೆದುಕೊಂಡೇ ದೇವಿಯ ದರ್ಶನ ಪಡೆದರು.

'ಬುಧವಾರ (ಅ.22) ಸಂಜೆ 7ರವರೆಗೆ ದೇವಿಯ ದರ್ಶನಕ್ಕೆ ಅವಕಾಶ ನೀಡಲಾಗಿದೆ. ಗುರುವಾರ ಮಧ್ಯಾಹ್ನ 12.30ಕ್ಕೆ ಶಾಸ್ತ್ರೋಕ್ತವಾಗಿ ಗರ್ಭಗುಡಿ ಬಾಗಿಲು ಬಂದ್ ಮಾಡಲಾಗುವುದು' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ಪಥಸಂಚಲನಕ್ಕೆ 'ತ್ರಿಕೋನ ಸ್ಪರ್ಧೆ'

ಒಂದನೇ ಪುಟದಿಂದ...

ಇದರ ಬೆನ್ನಲ್ಲೇ ಪ್ರಿಯಾಂಕ್ ತವರು ಕ್ಷೇತ್ರ ಚಿತ್ತಾಪುರದಲ್ಲಿ ಅ.19ರಂದು ಆರ್‌ಎಸ್‌ಎಸ್ ಪಥಸಂಚಲನ ನಡೆಸಲು ಮುಂದಾಗಿದ್ದು, ಅನುಮತಿ ಕೋರಿ ತಾಲ್ಲೂಕು ಆಡಳಿತಕ್ಕೆ ಮನವಿ ಸಲ್ಲಿಸಿತ್ತು.

ಅದೇ ದಿನ ಮೆರವಣಿಗೆ ನಡೆಸಲು ಭೀಮ ಆರ್ಮಿ ಮತ್ತು ದಲಿತ ಪ್ಯಾಂಥರ್ ಸಂಘಟನೆಗಳೂ ಅವಕಾಶ ಕೋರಿದ್ದವು. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಲಿದೆ ಎಂಬ ಕಾರಣ ನೀಡಿ, ತಹಶೀಲ್ದಾರರು ಮೂರೂ ಸಂಘಟನೆಗಳಿಗೆ ಅ.18ರಂದು ಅನುಮತಿ ನಿರಾಕರಿಸಿದ್ದರು.

ಅನುಮತಿ ನಿರಾಕರಣೆ ಪ್ರಶ್ನಿಸಿ ಆರ್‌ಎಸ್‌ಎಸ್ ಮುಖಂಡ ಅಶೋಕ ಪಾಟೀಲ ಹೈಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಕಲಬುರಗಿ ಪೀಠವು, ನ.2ರಂದು ಪಥಸಂಚಲನ ನಡೆಸುವುದಾದರೆ ಹೊಸದಾಗಿ ಅರ್ಜಿ ಸಲ್ಲಿಸಲು ಸೂಚಿಸಿತ್ತು. ಈ ಕುರಿತ ವರದಿ ಸಲ್ಲಿಸಲು ಜಿಲ್ಲಾಡಳಿತಕ್ಕೆ ನಿರ್ದೇಶಿಸಿ, ವಿಚಾರಣೆಯನ್ನು ಅ.24ಕ್ಕೆ ಮುಂದೂಡಿತ್ತು.

ಹೈಕೋರ್ಟ್ ಸೂಚನೆಯಂತೆ ಆರ್‌ಎಸ್‌ಎಸ್ ಮುಖಂಡರು ನ.2ರ ಪಥಸಂಚಲನಕ್ಕೆ ಅನುಮತಿ ಕೋರಿ ಅ.19ರಂದೇ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲು ಮುಂದಾಗಿದ್ದರು. ಜಿಲ್ಲಾಧಿಕಾರಿ ಲಭ್ಯವಾಗದೇ ವಾಟ್ಸ್‌ಆ್ಯಪ್ ಹಾಗೂ ಇ-ಮೇಲ್ ಮೂಲಕ ಅರ್ಜಿ ಸಲ್ಲಿಸಿದ್ದರು. ಅದೇ ಮನವಿಯನ್ನು ಆರ್‌ಎಸ್‌ಎಸ್ ಮುಖಂಡರು ಮಂಗಳವಾರ ಲಿಖಿತವಾಗಿ ಜಿಲ್ಲಾಧಿಕಾರಿ ಕಚೇರಿಗೆ ಸಲ್ಲಿಸಿದ್ದಾರೆ. ಸುಮಾರು 600 ಸ್ವಯಂ ಸೇವಕರು ಲಾಠಿಯೊಂದಿಗೆ ಪಥಸಂಚಲನದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂಬ ಮಾಹಿತಿಯನ್ನು ನೀಡಿದ್ದಾರೆ.

ದಲಿತ ಪ್ಯಾಂಥರ್ ಮನವಿ: 'ಚಿತ್ತಾಪುರದಲ್ಲಿ ನ.2ರಂದು ಸಂವಿಧಾನದ ಪೀಠಿಕೆ ಹಾಗೂ ನೀಲಿ ಧ್ವಜದೊಂದಿಗೆ ಪಥ ಸಂಚಲನ ನಡೆಸಲು ಅನುಮತಿ ನೀಡಬೇಕು' ಎಂದು ಕೋರಿ ಭಾರತೀಯ ದಲಿತ ಪ್ಯಾಂಥರ್ ರಾಜ್ಯ ಸಮಿತಿ ಮುಖಂಡರೂ ಮಂಗಳವಾರ ಡಿಸಿಗೆ ಮನವಿ ಸಲ್ಲಿಸಿದ್ದಾರೆ.

'ಆರ್‌ಎಸ್‌ಎಸ್ ಕೈಯಲ್ಲಿ ಲಾಠಿ ಹಿಡಿದು ನಡೆಸುವ ಆಕ್ರಮಣಕಾರಿ ಪ್ರದರ್ಶನದ ಮೂಲಕ ಯುವಜನರು, ಮುಗ್ಧ ಮಕ್ಕಳ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆಗಳಿವೆ. ಆರ್‌ಎಸ್‌ಎಸ್ ಪಥಸಂಚಲನಕ್ಕೆ ಅನುಮತಿ ನೀಡಿದರೆ, ನಾವೂ ಸಂವಿಧಾನ ಪ್ರತಿ ಹಾಗೂ ಲಾಠಿ ಹಿಡಿದು ಪಥಸಂಚಲನ ನಡೆಸುತ್ತೇವೆ' ಎಂದು ಮನವಿಯಲ್ಲಿ ಹೇಳಲಾಗಿದೆ.

ಭೀಮ ಆರ್ಮಿ ಮನವಿ

ಮತ್ತೊಂದೆಡೆ 'ಭೀಮ ಆರ್ಮಿ' ಭಾರತ ಏಕತಾ ಮಿಷನ್‌ನ ರಾಜ್ಯ ಯುವ ಘಟಕವೂ ನ.2ರಂದು ಭೀಮ ಪಥ ಸಂಚಲನ ಜಾಥಾಕ್ಕೆ ಅವಕಾಶ ನೀಡುವಂತೆ ಮನವಿ ಸಲ್ಲಿಸಿದೆ.

'ಜಾಥಾದಲ್ಲಿ ಬಿದಿರಿನ ಕೋಲು, ರಾಷ್ಟ್ರ ಧ್ವಜದೊಂದಿಗೆ ಬೌದ್ಧಧರ್ಮದ ಪಂಚಶೀಲ ಧ್ವಜ ಹಾಗೂ ಸಂವಿಧಾನ ಪೀಠಿಕೆಯೊಂದಿಗೆ ಮೆರವಣಿಗೆ ನಡೆಸಲಾಗುವುದು' ಎಂದು ಹೇಳಲಾಗಿದೆ.


ಕೇಂದ್ರ ಸಚಿವ ಎಚ್‌ಡಿ.ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ ದೀಪಾವಳಿ ಶುಭಾಶಯ ಕೋರಿದ ಬಿ.ವೈ.ವಿಜಯೇಂದ್ರ, ಛಲವಾದಿ ನಾರಾಯಣ ಸ್ವಾಮಿ. ನಿಖಿಲ್ ಕುಮಾರಸ್ವಾಮಿ, ಎಂ. ಕೃಷ್ಣಪ್ಪ, ಎ.ಮಂಜುನಾಥ್ ಉಪಸ್ಥಿತರಿದ್ದರು

ಬಿಜೆಪಿ–ಜೆಡಿಎಸ್ ಸಮನ್ವಯಕ್ಕೆ ಸಮಿತಿ

ಒಂದನೇ ಪುಟದಿಂದ...

'ರಾಜ್ಯದ ಆಡಳಿತ ಸಂಪೂರ್ಣ ಹದಗೆಟ್ಟಿದೆ. ಬೆಂಗಳೂರಿನ ಜನರ ಗೋಳು ಕೇಳುವವರಿಲ್ಲ. ಸಮಸ್ಯೆ ಕುರಿತು ಧ್ವನಿ ಎತ್ತಿದ ಉದ್ಯಮಿಗಳಾದ ಮೋಹನ್ ದಾಸ್ ಪೈ, ಕಿರಣ್ ಮಜುಂದಾರ್ ಷಾ ಅವರನ್ನು ಸಚಿವರೇ ಟೀಕಿಸುತ್ತಾರೆ. ಹಿಂದೆ ಬಿಜೆಪಿ ಅವಧಿಯಲ್ಲೂ ಇಂತಹ ಟೀಕೆ ಬಂದಾಗ ಅಂದು ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಅವರು ಮೋಹನ್‌ದಾಸ್ ಪೈ ಅವರನ್ನು ಕರೆದು ಸಲಹೆ ಪಡೆದಿದ್ದರು. ಈಗಿನ ಸರ್ಕಾರ ಅಹಂಕಾರ ತೋರುತ್ತಿದೆ' ಎಂದು ದೂರಿದರು.

'ನೀರಾವರಿ ಇಲಾಖೆಯಲ್ಲಿ ಶೇ 60 ರಿಂದ 70ರಷ್ಟು ಕಮಿಷನ್ ಕೇಳುವ ಕುರಿತು ಗುತ್ತಿಗೆದಾರರ ಸಂಘ ಪತ್ರ ಬರೆದಿದೆ. ಅಧಿಕೃತ ದೂರು ನೀಡಲಿ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳುತ್ತಾರೆ. ಅಧಿಕೃತವಾಗಿ ಪತ್ರ ಬರೆದಿರುವಾಗ ದೂರು ಏಕೆ? ಕಾಂಗ್ರೆಸ್‌ನ ಕೆಲ ನಾಯಕರೇ ಭ್ರಷ್ಟಾಚಾರದ ಬಗ್ಗೆ ಧ್ವನಿ ಎತ್ತಿದ್ದಾರೆ. ಇದಕ್ಕೆಲ್ಲ ಸಾಕ್ಷಿ ಬೇಕಾ' ಎಂದು ಪ್ರಶ್ನಿಸಿದರು.

'ಪ್ರಿಯಾಂಕ್ ಖರ್ಗೆ ಅವರಿಗೆ ದುರ್ಬುದ್ಧಿ ಬಂದಿದೆ. ವಿನಾಕಾರಣ ಆರ್‌ಎಸ್‌ಎಸ್ ಟೀಕಿಸುತ್ತಿದ್ದಾರೆ. ಇದು ಪ್ರಚಾರ ಗಿಟ್ಟಿಸಿಕೊಳ್ಳುವ ತಂತ್ರ ಅಥವಾ ಮುಖ್ಯಮಂತ್ರಿ ಕುರ್ಚಿಗೆ ಟವೆಲ್ ಹಾಕುವ ತಂತ್ರ ಇರಬಹುದು. ನ.2ರಂದು ಚಿತ್ತಾಪುರದಲ್ಲಿ ಯಶಸ್ವಿಯಾಗಿ ಪಥಸಂಚಲನ ಆಗಲಿದೆ. ಆ ವಿಷಯದಲ್ಲಿ ಗೊಂದಲವಿಲ್ಲ' ಎಂದರು.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಎಂ. ಕೃಷ್ಣಪ್ಪ, ಸಿ.ಕೆ. ರಾಮಮೂರ್ತಿ, ಮಾಜಿ ಶಾಸಕ ಎ.ಮಂಜುನಾಥ್ ಉಪಸ್ಥಿತರಿದ್ದರು.

ಸೀಟ್ ಬ್ಲಾಕಿಂಗ್: ಕೆಇಎ ಹದ್ದಿನ ಕಣ್ಣು

ಒಂದನೇ ಪುಟದಿಂದ...

ಸಿಇಟಿಯಲ್ಲಿ ಉನ್ನತ ರ್‍ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಕಾಲೇಜುಗಳಿಗೆ ಪ್ರವೇಶ ಪಡೆಯದೆ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದರು ಎಂದು ಕೆಇಎ ಆರೋಪಿಸಿತ್ತು. ಅಂತಹ 2,348 ವಿದ್ಯಾರ್ಥಿಗಳಿಗೆ ಕೆಇಎ ನೋಟಿಸ್ ನೀಡಿತ್ತು. ಉತ್ತರ ನೀಡದ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಬಾರಿಯೂ ಸಿಇಟಿ ಬರೆದಿದ್ದರು. ಅಂಥವರ ಶ್ರೇಯಾಂಕವನ್ನು ತಡೆಹಿಡಿಯಲಾಗಿತ್ತು. ಪರಿಶೀಲನೆಯ ನಂತರ, ಸಕಾರಣ ನೀಡಿದ ಕೆಲವರಿಗೆ ಸೀಟು ಹಂಚಿಕೆ ಮಾಡಲಾಗಿತ್ತು.

ಬಹುಬೇಡಿಕೆ ಇರುವ ಕಂಪ್ಯೂಟರ್ ಸೈನ್ಸ್‌ನ 30,573 ಸೀಟುಗಳು, ಕೃತಕ ಬುದ್ಧಿಮತ್ತೆ 7,209, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಷನ್ 19,407, ಮಾಹಿತಿ ವಿಜ್ಞಾನದ 10,473 ಸೀಟುಗಳೂ ಸೇರಿ 2025–26ನೇ ಸಾಲಿನಲ್ಲಿ 1.41 ಲಕ್ಷ ಎಂಜಿನಿಯರಿಂಗ್ ಸೀಟುಗಳು ಲಭ್ಯವಾಗಿದ್ದವು. ಸಿಇಟಿಯಲ್ಲಿ ಪಡೆದ ಅರ್ಹತೆ ಆಧಾರದಲ್ಲಿ ಕೋರ್ಸ್, ಕಾಲೇಜುಗಳನ್ನು ಹಂಚಿಕೆ ಮಾಡಲಾಗಿತ್ತು. ಆದರೆ, ಕೆಲವರು ಕೊನೆಯ ಸುತ್ತಿನ ಸೀಟು ಹಂಚಿಕೆಯ ನಂತರವೂ ಕಾಲೇಜುಗಳಿಗೆ ಪ್ರವೇಶ ಪಡೆದಿಲ್ಲ. ಅಂತಹ ವಿದ್ಯಾರ್ಥಿಗಳ ಮೇಲೆ ನಿಗಾ ವಹಿಸುವಂತೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಕ್ಕೆ (ವಿಟಿಯು) ಕೆಇಎ ಪತ್ರ ಬರೆದಿತ್ತು. ಈಗ ವಿದ್ಯಾರ್ಥಿಗಳಿಗೇ ನೇರವಾಗಿ ನೋಟಿಸ್ ಜಾರಿ ಮಾಡಿದ್ದು, ಪ್ರವೇಶ ಪಡೆಯದೆ ಇರಲು ಕಾರಣಗಳೇನು ಎನ್ನುವ ಕುರಿತು ದಾಖಲೆ ಸಹಿತ ವಿವರ ನೀಡುವಂತೆ ಸೂಚಿಸಿದೆ.

ಅಂಕಿ ಅಂಶಗಳು

1.41 ಲಕ್ಷ 2025–26ನೇ ಸಾಲಿನಲ್ಲಿ ಲಭ್ಯವಿದ್ದ ಎಂಜಿನಿಯರಿಂಗ್ ಸೀಟು

15,353 ಅಂತಿಮ ಸುತ್ತಿನ ನಂತರ ಉಳಿಕೆ ಸೀಟು

667 ಸೀಟು ಹಂಚಿಕೆಯಾದರೂ ಪ್ರವೇಶ ಪಡೆಯದ ವಿದ್ಯಾರ್ಥಿಗಳು

342 ಶುಲ್ಕ ಪಾವತಿಸಿದರೂ ಪ್ರವೇಶ ಪಡೆಯದವರು

325 ಖಾತ್ರಿ ಠೇವಣಿ ಕಟ್ಟಿ ಪ್ರವೇಶ ಪಡೆಯದವರು

ಖಾತ್ರಿ ಠೇವಣಿಗೂ ಸಿಗದ ಹಿಡಿತ

ಸಿಇಟಿ ಕೋರ್ಸ್‌ಗಳ ಪ್ರವೇಶಕ್ಕೆ ಮೂರನೇ ಸುತ್ತಿನಲ್ಲಿ ಭಾಗವಹಿಸುವ ಎಲ್ಲ ವರ್ಗದ ಅರ್ಹ ಅಭ್ಯರ್ಥಿಗಳಿಗೂ ಈ ಬಾರಿ ತಲಾ ₹10 ಸಾವಿರ ಖಾತ್ರಿ ಠೇವಣಿ ಕಡ್ಡಾಯಗೊಳಿಸಲಾಗಿತ್ತು. ಹಣ ಜಮೆ ಮಾಡಿದ ನಂತರವೇ ಕಾಲೇಜು, ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಲಾಗಿತ್ತು. ಖಾತ್ರಿ ಠೇವಣಿ ಪಾವತಿಸಿದರೂ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಕಾಲೇಜುಗಳಿಗೆ ಪ್ರವೇಶ ಪಡೆದಿಲ್ಲ.

ಪರೀಕ್ಷೆಗೆ ನೀಡಿದ್ದ ಪ್ರವೇಶ ಪತ್ರದ ಜತೆಗಿನ ಫೋಟೊಗೆ ಹೋಲಿಕೆ ಮಾಡಿ ಅದೇ ವಿದ್ಯಾರ್ಥಿ ಎಂದು ಪತ್ತೆ ಹಚ್ಚಲು ಪೋರ್ಟಲ್ ಅಭಿವೃದ್ಧಿಪಡಿಸಲಾಗಿತ್ತು. ಒಂದು ಮೊಬೈಲ್‌ನಿಂದ ಒಂದು ಅರ್ಜಿ ಸಲ್ಲಿಕೆಗಷ್ಟೇ ಅವಕಾಶ ನೀಡಲಾಗಿತ್ತು. ಒಟಿಪಿ ಕಡ್ಡಾಯಗೊಳಿಸಲಾಗಿತ್ತು. ಮೊದಲ ಹಾಗೂ ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಕಾಲೇಜುಗಳಿಗೆ ಪ್ರವೇಶ ಪಡೆಯದ ವಿದ್ಯಾರ್ಥಿಗಳ ಮಾಹಿತಿಯನ್ನು ಪೋರ್ಟಲ್ ಮೂಲಕ ಪಡೆದು, ಅಂತಹ ಎಲ್ಲ ಸೀಟುಗಳನ್ನೂ ಮೂರನೇ ಸುತ್ತಿಗೆ ಪರಿಗಣಿಸಲಾಗಿತ್ತು. ನಕಲಿ ವಿದ್ಯಾರ್ಥಿಗಳ ಪ್ರವೇಶಕ್ಕೂ ಕಡಿವಾಣ ಹಾಕಲಾಗಿತ್ತು. ಆದರೆ, ಅಂತಿಮ ಸುತ್ತಿನ ಸೀಟು ಉಳಿಕೆಯಾದರೆ ಮತ್ತೆ ಹಂಚಿಕೆ ಮಾಡಲು ನಿಯಮದಲ್ಲಿ ಅವಕಾಶವಿಲ್ಲ. ಹಾಗಾಗಿ, ಪ್ರವೇಶ ಪಡೆಯದ ವಿದ್ಯಾರ್ಥಿಗಳ ವಿರುದ್ಧ ಕೆಇಎ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಿದೆ.

ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.
ಆಕಾಶವಾಣಿ ರಸ್ತೆ, ಸಿ.ಕೆ. ಪುರ, ಚಿತ್ರದುರ್ಗ.
e-mail:cuda.cta@rediffmail.com, ದೂರವಾಣಿ ಸಂಖ್ಯೆ: 08194–222984
ಕ್ರ.ಸಂ.ಚಿನಪ್ರಾ/ಸಕಾಅ/ಟೆಂಡರ್/2025–2026 ದಿನಾಂಕ:21–10–2025
ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಚಿತ್ರದುರ್ಗ ನಗರಾಭಿವೃದ್ಧಿ ಪ್ರಾಧಿಕಾರವು ಅಲಂಕಾರಿಕ ದೀಪಗಳನ್ನು ಅಳವಡಿಸಲು ದರ ನಮೂದಿಸಲು PQ ಮರು ಟೆಂಡರ್ (2ನೇ ಕರೆ) (Prequalification Tender) ಆಹ್ವಾನಿಸಿದ್ದು, ಅರ್ಹ ವ್ಯಕ್ತಿ/ಸಂಸ್ಥೆಗಳು ಟೆಂಡರ್‌ನಲ್ಲಿ ಭಾಗವಹಿಸಬಹುದು. ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:04–11–2025 ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟ್ https://kppp.karnataka.gov.in ಮುಖಾಂತರ ನೋಡಬಹುದು.
DIPR/CTA/KSMCA/434/2025-26
ಸಹಿ/– ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಚಿತ್ರದುರ್ಗ.

ನಮ್ಮ ಮೆಟ್ರೋ namma metro
ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ
(ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ಸಹಭಾಗಿತ್ವದಲ್ಲಿ)
ನೋಂದಾಯಿತ ಕಛೇರಿ: 3ನೇ ಮಹಡಿ, ಬಿಎಂಟಿಸಿ ಕಾಂಪ್ಲೆಕ್ಸ್, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027.
ಟೆಂಡರ್ ಸಂಖ್ಯೆ:BMRCL/2025-26/SE0027 ದಿನಾಂಕ:21.10.2025
ಟೆಂಡರ್ ಪ್ರಕಟಣೆ
ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತವು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ, ಟೆಂಡರ್ ಸಂಖ್ಯೆ:BMRCL/2025-26/SE0027 ರನ್ವಯ **"ಬಿಎಂಆರ್‌ಸಿಎಲ್‌ನ ಆವರಣದಲ್ಲಿ ಐಟಿ ಮತ್ತು ಸಿಸಿಟಿವಿ ನೆಟ್‌ವರ್ಕ್ ಭದ್ರತಾ ನಿರ್ವಹಣೆ ಕೇಂದ್ರವನ್ನು (ಎಸ್‌ಓಸಿ) ಸ್ಥಾಪಿಸುವುದು, ಸಮನ್ವಯಗೊಳಿಸುವುದು ಮತ್ತು ಕಾರ್ಯಾರಂಭಗೊಳಿಸುವುದು ಹಾಗೂ ಕಾರ್ಯಾರಂಭ ಪೂರ್ಣಗೊಂಡ ನಂತರ 03 ವರ್ಷಗಳ ಅವಧಿಗೆ ಎಸ್‌ಓಸಿಯ ಕಾರ್ಯಾಚರಣೆ ಮತ್ತು ನಿರ್ವಹಣೆಗೆ"** ಟೆಂಡರ್ ಅನ್ನು ಆಹ್ವಾನಿಸಿದೆ. ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್:https://kppp.karnataka.gov.in ನಿಂದ ದಿನಾಂಕ:21.10.2025 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:24.11.2025, 15.00 ಗಂಟೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಭೇಟಿ ನೀಡಿ.
ಸಹಿ/– ಅಪರ ಪ್ರಧಾನ ವ್ಯವಸ್ಥಾಪಕರು(ಐಟಿ)

:ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಬಾಗಲಕೋಟೆ:
ಕಾರ್ಯನಿರ್ವಾಹಕ ಇಂಜಿನೀಯರವರ ಕಾರ್ಯಾಲಯ, ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ, ವಿಭಾಗ ನಂ:01, ಬಾಗಲಕೋಟೆ–587102. ದೂರವಾಣಿ ಸಂಖ್ಯೆ:08354–295372
ಸಂಖ್ಯೆ:ಕಾನಿಇಂ/ಬಾ.ಪ.ಅ.ಪ್ರಾ/ವಿ–1/ಪಿಬಿ–01/ಟೆಂಡರ್ ಪ್ರಕಟಣೆ ಸಂಖ್ಯೆ–04/2025–26/1563 ದಿನಾಂಕ:21.10.2025
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–04
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ಅಡಿಯಲ್ಲಿ ಬರುವ ಮುಖ್ಯ ಲೆಕ್ಕಾಧಿಕಾರಿಗಳು, ಬಾ.ಪ.ಅ.ಪ್ರಾ, ಬಾಗಲಕೋಟೆ ಕಚೇರಿಯ ಖಾತೆಯಿಂದ ಮುದ್ದತ ಠೇವಣಿ (Fixed Deposit) ಯನ್ನು ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಇಡಲು ಹಾಗೂ ಸದರಿ ಮುದ್ದತ ಠೇವಣಿಗಳಿಗೆ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಡ್ಡಿದರ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಬಿಡ್‌ದಾರರು ಟೆಂಡರ ಪ್ರಕಟಣೆ, ವಿವರಣೆ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್ https://kppp.karnataka.gov.in ಮೂಲಕ ಪಡೆದುಕೊಂಡು ಟೆಂಡರನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ದೂರವಾಣಿ ಸಂಖ್ಯೆ. 08354–295372.
ಟೆಂಡರನ ಘಟನಾವಳಿಗಳು (ವೇಳಾಪಟ್ಟಿ)

1	ಟೆಂಡರ ಅಂಶಗಳ ಸ್ಪಷ್ಟೀಕರಣಕ್ಕಾಗಿ ಕೊನೆಯ ದಿನಾಂಕ	29.10.2025	ಬೆಳಿಗ್ಗೆ 11.00 ಘಂಟೆವರೆಗೆ
2	ಟೆಂಡರ ಸಲ್ಲಿಸುವ ಕೊನೆಯ ದಿನಾಂಕ	07.11.2025	ಸಂಜೆ 05.00 ಘಂಟೆವರೆಗೆ
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	10.11.2025	ಸಂಜೆ 05.01 ಘಂಟೆಗೆ
4	ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಸಾಧ್ಯವಾದಲ್ಲಿ)	12.11.2025	ಬೆಳಿಗ್ಗೆ 11.00 ಘಂಟೆಗೆ

ಸೂಚನೆಗಳು:1) ಟೆಂಡರ್‌ಗೆ ಸಂಬಂಧಿಸಿದಂತೆ "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವ ದಿನಾಂಕಗಳು ಅಂತಿಮವಾಗಿರುವುದು.2) ಟೆಂಡರ್‌ಗೆ ಸಂಬಂಧಿಸಿದ ದಿನಾಂಕಗಳಲ್ಲಿ ಬದಲಾವಣೆ ಕುರಿತು ಮತ್ತು ಇನ್ನಿತರೆ ತಿದ್ದುಪಡೆಗಳು/ ಮಾರ್ಪಾಡುಗಳನ್ನು "ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್" ವೇದಿಕೆಯಲ್ಲಿ ಪ್ರಕಟಿಸಲಾಗುವುದು. ಮತ್ತು ಸದರಿ ವಿಷಯ ಕುರಿತು ದಿನ ಪತ್ರಿಕೆಗಳಲ್ಲಿ ಪ್ರಕಟಿಸುವುದಿಲ್ಲ. 3)ಬಿಡ್‌ದಾರರು https://kppp.karnataka.gov.in ಕಾಲಕಾಲಕ್ಕೆ ಭೇಟಿ ನೀಡಿ ಯಾವುದಾದರೂ ತಿದ್ದುಪಡಿ corrigendum / addendum ಬಗ್ಗೆ ಮಾಹಿತಿ ಪಡೆಯಬೇಕು.
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಬಾ.ಪ.ಅ.ಪ್ರಾ., ವಿಭಾಗ ನಂ: 01, ಬಾಗಲಕೋಟೆ
DIPR/BGK/RO-NO-/348/KSMCA/2025-26

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಕಾರ್ಯಪಾಲಕ ಅಭಿಯಂತರರು, ಸಿವಿಲ್ ವಿಭಾಗ, ಸಯ್ಯಾಜಿರಾವ್ ರಸ್ತೆ, ಮೈಸೂರು
ಇ–ಮೇಲ್: eewmccmys@gmail.com
ಸಂಖ್ಯೆ: ಮೈನಪಾ/ಕಾ.ಇಂ.(ಪೂ&ಪ)/ಸಾ.ಟೆಂ.ಪ್ರ–18/2025–26 ದಿನಾಂಕ: 18–10–2025
ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ
ಮೈಸೂರು ಮಹಾನಗರ ಪಾಲಿಕೆಯ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ–ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಮೈನಪಾ/ಕಾ.ಅ.(ಪೂ)/ಟಿ.ಎನ್–44/ 2025–26, ದಿನಾಂಕ: 17–10–2025	5	524.10	ಬೆಳಿಗ್ಗೆ 11.00 ರ ನಂತರ 18–10–2025	ಸಂಜೆ 5.30 ವರೆಗೆ 28–10–2025	ಬೆಳಿಗ್ಗೆ 10.30 ರ ನಂತರ 30–10–2025
2	ಮೈನಪಾ/ಕಾ.ಅ.(ಪೂ)/ಟಿ.ಎನ್–45/ 2025–26, ದಿನಾಂಕ: 17–10–2025	2	16.40	18–10–2025	28–10–2025	29–10–2025 ಸಂಜೆ 5.26 ರ ನಂತರ
	ಸರ್ವಿಸ್ & ಗೂಡ್ಸ್ ಕಾಮಗಾರಿಗಳು					
3	ಹೆಚ್1/ಪವಿ/101/2025–26, ದಿನಾಂಕ: 16–10–2025	1	99.47	ಬೆಳಿಗ್ಗೆ 11.00 ರ ನಂತರ 21–10–2025	ಸಂಜೆ 5.25 ವರೆಗೆ 11–11–2025	ಸಂಜೆ 5.26 ನಂತರ 12–11–2025
4	ಹೆಚ್1/ಪವಿ/102/2025–26, ದಿನಾಂಕ: 16–10–2025	1	60.00	24–10–2025	13–11–2025	15–11–2025
5	ಹೆಚ್1/ಪವಿ/103/2025–26, ದಿನಾಂಕ: 16–10–2025	1	51.00	21–10–2025	03–11–2025	04–11–2025
6	ಹೆಚ್1/ಪವಿ/103/2025–26, ದಿನಾಂಕ: 16–10–2025	1	34.81	21–10–2025	05–11–2025	06–11–2025
	EOI					
7	ಮೈನಪಾ/ಕಾ.ಅ.(ಪ)/2025–26, ದಿನಾಂಕ: 18–10–2025	1	–	23–10–2025	06–11–2025	07–11–2025

ಅರ್ಹ ಗುತ್ತಿಗೆದಾರರು **(https://kppp.karnataka.gov.in)** ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಚೇರಿ ಸಮಯದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಸಿವಿಲ್ ಕಾರ್ಯಪಾಲಕ ಅಭಿಯಂತರರು (ಪೂರ್ವ ಮತ್ತು ಪಶ್ಚಿಮ) ರವರ ಕಚೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು.
ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ / ಬದಲಾವಣೆ / ತಿದ್ದುಪಡಿಗಳಿದ್ದಲ್ಲಿ **(https://kppp.karnataka.gov.in)** ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ ಮೈಸೂರು
ವಾಸಾಸಂಇ/ಮೈಸೂರು/1119/ಎಸ್‌ಎಸ್‌ಸಿ/2025–26

‘₹1,800 ಕೋಟಿ ಕಪ್ಪ ಮರೆತಿರಾ’

ಬಿಜೆಪಿಗೆ ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಜೆಪಿ ಹೈಕಮಾಂಡ್‌ಗೆ ₹1,800 ಕೋಟಿ ಕಪ್ಪ ನೀಡಿದ್ದು ಯಡಿಯೂರಪ್ಪ ಹಾಗೂ ಅನಂತಕುಮಾರ್ ಅವರ ಸಂಭಾಷಣೆಯಲ್ಲಿ ಬಹಿರಂಗ ಆಗಿದ್ದನ್ನು ರಾಜ್ಯ ಬಿಜೆಪಿ ನಾಯಕರು ಮರೆತಿದ್ದಾರೆಯೇ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ಪ್ರಿಯಾಂಕ್ ಖರ್ಗೆ

‘ಬಿಹಾರ ಚುನಾವಣೆಗೆ ಕರ್ನಾಟಕದಿಂದ ಹಣ ಹೋಗುತ್ತಿದೆ’ ಎಂಬ ಬಿಜೆಪಿ ಸಂಸದ ಬಿ.ವೈ. ರಾಘವೇಂದ್ರ ಅವರ ಆರೋಪಕ್ಕೆ ಎಕ್ಸ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ರಾಘವೇಂದ್ರ ಅವರು ತಮ್ಮ ತಂದೆಯವರ ಮಾತುಗಳನ್ನು ಒಮ್ಮೆ ಕಿವಿಗೊಟ್ಟು ಕೇಳಿಸಿಕೊಂಡು ನಂತರ ಮಾತನಾಡಿದರೆ ಉತ್ತಮ’ ಎಂದಿದ್ದಾರೆ.

‘ಬಿಜೆಪಿಯಲ್ಲಿ ಮುಖ್ಯಮಂತ್ರಿ ಹುದ್ದೆಗೆ ₹2,500 ಕೋಟಿ ಕೊಡಬೇಕು ಎಂದಿದ್ದವರೂ ಬಿಜೆಪಿಯವರೇ, ಮಂತ್ರಿಗಿರಿಗೆ ₹ 60 ಕೋಟಿ– ₹70 ಕೋಟಿ ಕೊಡಬೇಕು ಎಂದಿದ್ದವರೂ ಬಿಜೆಪಿಯವರೇ. ಬಿಜೆಪಿ ಹೈಕಮಾಂಡ್ ಹುದ್ದೆಗಳನ್ನು ಮಾರಾಟಕ್ಕಿಟ್ಟು ವ್ಯಾಪಾರಕ್ಕೆ ಕುಳಿತಿತ್ತು ಎನ್ನುವುದನ್ನು ಬಿಜೆಪಿಯವರೇ ಬಹಿರಂಗಪಡಿಸಿದ್ದರು’ ಎಂದು ಹೇಳಿದ್ದಾರೆ.

‘ಕರ್ನಾಟಕದ ಸಂಪನ್ಮೂಲವನ್ನು ಹೈಕಮಾಂಡ್ ಸಮರ್ಪಣಾಮಸ್ತು ಮಾಡಿದ ಕೀರ್ತಿ ಬಿಜೆಪಿಯದ್ದೇ ಹೊರತು ಕಾಂಗ್ರೆಸ್ಸಿನದ್ದಲ್ಲ’ ಎಂದೂ ಹೇಳಿದ್ದಾರೆ.

‘ಗುಂಡಿ ಮುಚ್ಚಲು ಪತ್ರ ಬರೆಯಿರಿ ಪ್ರಿಯಾಂಕ್’

‘ಗಾಢ ನಿದ್ದೆಯಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬೆಂಗಳೂರಿನಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ತಕ್ಷಣ ಪತ್ರ ಬರೆಯಿರಿ’ ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಅವರು ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಕುಟುಕಿದ್ದಾರೆ.

‘ನೀವು ಹೇಳಿದರೆ ಮುಖ್ಯಮಂತ್ರಿಯವರು ತಕ್ಷಣ ಪಾಲನೆ ಮಾಡುತ್ತಾರೆ. ನಿಮ್ಮ ಸರ್ಕಾರಕ್ಕೆ ರಸ್ತೆ ರಿಪೇರಿ ಮಾಡಿ ಅಂತ ಹೇಳಿ ಹೇಳಿ ಬೇಸತ್ತಿರುವ ಬೆಂಗಳೂರಿನ ಜನತೆಗೆ ಒಂದು ಉಪಕಾರ ಮಾಡಿ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ರಾಜ್ಯದಲ್ಲಿ ಭ್ರಷ್ಟಾಚಾರ ಕೊಳೆತು ನಾರುತ್ತಿದೆ: ಬಿ.ವೈ.ವಿಜಯೇಂದ್ರ

‘ಇವರ ಸರ್ಕಾರದಲ್ಲೇ ಭ್ರಷ್ಟಾಚಾರ ಕೊಳೆತು ನಾರುತ್ತಿದೆ. ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಈ ಕುರಿತು ಪತ್ರ ಬರೆದಿದ್ದಾರೆ. ಅದಕ್ಕಿಂತ ಸಾಕ್ಷ್ಯ ಬೇಕಾ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

ಯಡಿಯೂರಪ್ಪ–ಅನಂತಕುಮಾರ್ ಅವರ ಮಾತುಗಳ ವಿಡಿಯೊ ದೃಶ್ಯಾವಳಿ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, ‘ಯಡಿಯೂರಪ್ಪ ಮತ್ತು ಅನಂತಕುಮಾರ್ ಮಾತನಾಡಿರುವ ಹಿನ್ನೆಲೆ ಅರ್ಥ ಮಾಡಿಕೊಳ್ಳದೇ ಸುಮ್ಮನೆ ಮಾತನಾಡುತ್ತಿದ್ದಾರೆ’ ಎಂದು ಕಿಡಿ ಕಾರಿದರು.

‘ಮರಳು ಮಾಫಿಯಾದಿಂದ ಸರ್ಕಾರದ ಬೊಕ್ಕಸಕ್ಕೆ ₹400 ಕೋಟಿ ನಷ್ಟವಾಗುತ್ತಿದೆ ಎಂದು ರಾಯರಡ್ಡಿ ಪತ್ರ ಬರೆದು ಹೇಳಿದ್ದಾರೆ. ಇದೊಂದು ದೊಡ್ಡ ಹಗರಣ’ ಎಂದು ವಿಜಯೇಂದ್ರ ಹೇಳಿದರು.

‘ಎಲ್‌ಒಸಿ ಬಿಡುಗಡೆಗೆ ಗುತ್ತಿಗೆದಾರರಿಂದ ಶೇ 60 ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ. ಈ ವಿಚಾರ ಮಾತನಾಡಲಿ’ ಎಂದು ಅವರು ಹೇಳಿದರು.

‘ಕಾಂಗ್ರೆಸ್ ಹೈಕಮಾಂಡ್ ಮತ್ತು ರಾಹುಲ್‌ಗಾಂಧಿಗೆ ಕರ್ನಾಟಕ ಎಟಿಎಂ ಆಗಿದೆ. ಇದೇ ಸಿದ್ದರಾಮಯ್ಯ ಸರ್ಕಾರದ ಎರಡೂವರೆ ವರ್ಷಗಳ ಸಾಧನೆ’ ಎಂದು ಅವರು ಹೇಳಿದರು.

‘ಕರ್ನಾಟಕದ ಹಣಕಾಸು ಪರಿಸ್ಥಿತಿ ಹದಗೆಟ್ಟಿದೆ. ಒಂದು ಕಡೆ ಅಭಿವೃದ್ಧಿಗೆ ಕೊಡಲು ಹಣವಿಲ್ಲ. ನೌಕರರಿಗೆ ವೇತನ ಸರಿಯಾಗಿ ಪಾವತಿ ಆಗುತ್ತಿಲ್ಲ. ಮಂಡ್ಯದಲ್ಲಿ ವಿಆರ್‌ಎಸ್ ಹಣ ಬಂದಿಲ್ಲ ಎಂದು ನಿವೃತ್ತ ನೌಕರರೊಬ್ಬರು ಆತ್ಮಹತ್ಯೆ ಮಾಡಿಕೊಂಡರು. ಕಲಬುರಗಿಯಲ್ಲಿ 6 ತಿಂಗಳು ಸಂಬಳ ಬಂದಿಲ್ಲ ಎಂದು ಗ್ರಂಥಪಾಲಕಿ ಆತ್ಮಹತ್ಯೆ ಮಾಡಿಕೊಂಡರು. ಎಷ್ಟೋ ನೌಕರರು ಸಂಬಳ ಇಲ್ಲದೆ ಸಂಕಷ್ಟ ಅನುಭವಿಸುತ್ತಿದ್ದಾರೆ’ ಎಂದು ದೂರಿದರು.

‘ಸುಳ್ಳಿನ ಸರಮಾಲೆಗೆ ಕೊನೆಯೇ ಇಲ್ಲವೇ’

ರಾಮಲಿಂಗಾರೆಡ್ಡಿ

‘ರಾಜ್ಯ ಬಿಜೆಪಿಯ ಸುಳ್ಳಿನ ಕಾರ್ಖಾನೆ ಮತ್ತೆ ಓವರ್‌ಟೈಮ್ ಕೆಲಸ ಮಾಡುತ್ತಿದೆ. ಬಿಹಾರ ಚುನಾವಣೆಗೆ ಕಾಂಗ್ರೆಸ್ ಸರ್ಕಾರ ಹಣ ನೀಡುತ್ತಿದೆ ಎಂಬ ನಿಮ್ಮ ಕಪೋಲಕಲ್ಪಿತ ಆರೋಪ ಹಾಸ್ಯಾಸ್ಪದ. ನಿಮ್ಮ ಸುಳ್ಳಿನ ಸರಮಾಲೆಗೆ ಕೊನೆಯೇ ಇಲ್ಲವೇ’ ಎಂದು ಬಿಜೆಪಿ ನಾಯಕರನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರಶ್ನಿಸಿದ್ದಾರೆ.

‘ಚುನಾವಣೆಗೆ ಅಕ್ರಮ ಭ್ರಷ್ಟಾಚಾರದ ಹಣವನ್ನು ಬಳಸುವುದು ನಿಮ್ಮ ಜಾಯಮಾನ, ಕಾಂಗ್ರೆಸ್‌ನದ್ದಲ್ಲ. 2008-2013 ಮತ್ತು 2019-2023ರ ಅವಧಿಗಳಲ್ಲಿ ಮುಖ್ಯಮಂತ್ರಿಗಳಾಗಿದ್ದ ಬಿ.ಎಸ್. ಯಡಿಯೂರಪ್ಪ, ಡಿ.ವಿ. ಸದಾನಂದ ಗೌಡ, ಜಗದೀಶ ಶೆಟ್ಟರ್ ಮತ್ತು ಬಸವರಾಜ ಬೊಮ್ಮಾಯಿ ಅವರ ಕಾಲದಲ್ಲಿ ಮಹಾರಾಷ್ಟ್ರ, ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್ ರಾಜ್ಯಗಳಲ್ಲಿ ಚುನಾವಣೆಗಳು ನಡೆದವು. ಆಗ ಕರ್ನಾಟಕದ ಸಂಪತ್ತನ್ನು ಆ ಚುನಾವಣೆಗಳಿಗೆ ಕಳುಹಿಸಿರುವ ನಿಮಗೆ, ಜನತೆಯ ಮುಂದೆ ಉತ್ತರಿಸುವ ಧೈರ್ಯ ಇದೆಯೇ’ ಎಂದೂ ಕೇಳಿದ್ದಾರೆ. ‘ಹಣದ ಹೊಳೆ ಹರಿಸಿ, ಶಾಸಕರನ್ನು ಕುದುರೆಗಳಂತೆ ಖರೀದಿಸಿ ಪ್ರಜಾಪ್ರಭುತ್ವವನ್ನೇ ಕಗ್ಗೊಲೆ ಮಾಡಿದ ‘ಆಪರೇಷನ್ ಕಮಲ’ದ ಪಿತಾಮಹರು ನೀವು. ಇಂದು ಶುದ್ಧ ಹಸ್ತರೆಂದು ಬಿಂಬಿಸಿಕೊಳ್ಳಲು ಹೊರಟಿರುವುದು ಅತಿದೊಡ್ಡ ಜೋಕ್. ಅಧಿಕಾರಕ್ಕಾಗಿ ನೀವು ಖರೀದಿಸಿದ ಕ್ರಿಮಿನಲ್ ಹಿನ್ನೆಲೆಯ ಶಾಸಕರನ್ನು ಕರ್ನಾಟಕ ಎಂದಿಗೂ ಮರೆಯುವುದಿಲ್ಲ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಚಿಟಿಕೆ ಸುದ್ದಿ

ಮುಜರಾಯಿ ದೇಗುಲಗಳಲ್ಲಿ ಇಂದು ಗೋಪೂಜೆ

ಬೆಂಗಳೂರು: ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ಎಲ್ಲ ದೇವಸ್ಥಾನಗಳಲ್ಲಿ ಬಲಿಪಾಡ್ಯಮಿ ದಿನದಂದು (ಅ. 22) ಕಡ್ಡಾಯವಾಗಿ ಶಾಸ್ತ್ರೋಕ್ತ ಗೋಪೂಜೆ ನೆರವೇರಿಸುವಂತೆ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಆಯುಕ್ತರು ಸೂಚಿಸಿದ್ದಾರೆ.

ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ ಅವರ ಟಿಪ್ಪಣಿ ಆಧರಿಸಿ ಮಂಗಳವಾರ ಈ ಸಂಬಂಧ ಸುತ್ತೋಲೆ ಹೊರಡಿಸಲಾಗಿದೆ. ಹಿಂದೂ ಧರ್ಮದಲ್ಲಿ ಗೋವಿಗೆ ‘ಗೋಮಾತೆ’ ಎಂಬ ವಿಶೇಷ ಸ್ಥಾನಮಾನ ನೀಡಿ ಪೂಜಿಸಲಾಗುತ್ತಿದೆ. ನಮ್ಮ ಧಾರ್ಮಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಅವಿಭಾಜ್ಯ ಅಂಗವಾಗಿರುವ ಗೋವುಗಳ ಮಹತ್ವ ಮತ್ತು ಸಂರಕ್ಷಣೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಅಗತ್ಯವಿದೆ’ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

‘ಆರ್‌ಎಸ್‌ಎಸ್ ನಿಷೇಧ ಎಂದು ಹೇಳಿಲ್ಲ’

ಹುಕ್ಕೇರಿ: ‘ನಿರ್ಬಂಧ ಆರ್‌ಎಸ್‌ಎಸ್‌ಗೆ ಸೀಮಿತವಲ್ಲ. ಯಾವುದೇ ಸಂಘಟನೆ ಆಗಿದ್ದರೂ ನಿಯಮ ಪಾಲಿಸಬೇಕು ಎಂಬುದನ್ನು ಸರ್ಕಾರ ಪ್ರಸ್ತಾಪಿಸಿದೆ ಹೊರತು ಆರ್‌ಎಸ್‌ಎಸ್‌ಗೆ ನಿಷೇಧ ಎಂದು ಎಲ್ಲೂ ಹೇಳಿಲ್ಲ’ ಎಂದು ಸಚಿವ ಸತೀಶ ಜಾರಕಿಹೊಳಿ ಇಲ್ಲಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಂಘಟನೆಗಳು ನಿಯಮ ಪಾಲಿಸುವುದು ಮುಖ್ಯ’ ಎಂದು ಪ್ರತಿಪಾದಿಸಿದರು.

ವಾಯುಗುಣಮಟ್ಟ ಕುಸಿತ

ನವದೆಹಲಿ: ದೀಪಾವಳಿ ಹಬ್ಬದ ಪ್ರಯುಕ್ತ ಭಾರಿ ಪ್ರಮಾಣದಲ್ಲಿ ಪಟಾಕಿಗಳನ್ನು ಸಿಡಿಸಿದ ಪರಿಣಾಮ ದೆಹಲಿ– ಎನ್‌ಸಿಆರ್ ಪ್ರದೇಶ ವ್ಯಾಪ್ತಿಯಲ್ಲಿ ಮಸುಕಿನ ವಾತಾವರಣ ನಿರ್ಮಾಣವಾಗಿದೆ. ಸುಪ್ರೀಂ ಕೋರ್ಟ್‌ನ ಮಾನದಂಡಗಳನ್ನು ಉಲ್ಲಂಘಿಸಿ, ಸೋಮವಾರ ಮಧ್ಯರಾತ್ರಿವರೆಗೂ ಜನರು ಪಟಾಕಿಗಳನ್ನು ಸಿಡಿಸಿದ ಪರಿಣಾಮ ವಾಯು ಗುಣಮಟ್ಟ ಕಳಪೆ ಮಟ್ಟಕ್ಕೆ ಇಳಿದಿತ್ತು.

ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಕಾರ ಮಂಗಳವಾರ ಸಂಜೆ 6 ಗಂಟೆಗೆ ದೆಹಲಿ ವಾಯು ಗುಣಮಟ್ಟ ಸೂಚ್ಯಂಕವು 351ರಷ್ಟಿತ್ತು. ಅದು ಅತ್ಯಂತ ಕಳಪೆ ಗುಣಮಟ್ಟದ ಸೂಚಕವಾಗಿದ್ದು, ಜನರ ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಅಧಿಕಾರಿ, ಸಿಬ್ಬಂದಿಯ ವೈದ್ಯಕೀಯ ಮರು ಪಾವತಿ ವೆಚ್ಚ ಹೆಚ್ಚಳ: ಸಿ.ಎಂ

‘ಮತೀಯ ಗೂಂಡಾಗಿರಿ’ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಕಾರ್ಯಪಡೆ ರಚನೆಯಾದ ಬಳಿಕ ದಕ್ಷಿಣ ಕನ್ನಡ, ಉಡುಪಿ ಮತ್ತು ಶಿವಮೊಗ್ಗದಲ್ಲಿ ಮತೀಯ ಗೂಂಡಾಗಿರಿ ಪ್ರಕರಣಗಳಿಗೆ ಕಡಿವಾಣ ಬಿದ್ದಿದೆ. ಅದೇ ರೀತಿ ಮಾದಕ ವಸ್ತುಗಳ ಬಳಕೆ ಮತ್ತು ಮಾರಾಟಕ್ಕೆ ಸಂಪೂರ್ಣ ಕಡಿವಾಣ ಹಾಕಲು ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದರು.

ನಗರದಲ್ಲಿ ಮಂಗಳವಾರ ಪೊಲೀಸ್ ಸಂಸ್ಮರಣಾ ದಿನಾಚರಣೆಯಲ್ಲಿ ಹುತಾತ್ಮ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗೆ ನಮನ ಸಲ್ಲಿಸಿ ಮಾತನಾಡಿದ ಅವರು, ‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸುಧಾರಣೆ ಆಗಿರುವುದು ಎರಡು ದಿನಗಳ ಹಿಂದೆ ನಾನು ಅಲ್ಲಿಗೆ ಭೇಟಿ ನೀಡಿದಾಗ ಕಂಡುಬಂತು. ಜಿಲ್ಲೆಯಲ್ಲಿ ಈಗ ಮೊದಲಿದ್ದ ವಾತಾವರಣ ಇಲ್ಲ’ ಎಂದು ಹೇಳಿದರು.

ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ವರ್ಗದವರ ಮೇಲಿನ ದೌರ್ಜನ್ಯ ತಡೆಗೆ ಡಿಸಿಆರ್‌ಇ ಪೊಲೀಸ್ ಠಾಣೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ. ಇವು ಪರಿಣಾಮಕಾರಿಯಾಗಿ ಕೆಲಸ ಮಾಡುವ ಮೂಲಕ ಸಾಂವಿಧಾನಿಕ ಹಕ್ಕು ಮತ್ತು ಮೌಲ್ಯಗಳನ್ನು ಕಾಪಾಡುವ ಕೆಲಸ ಆಗಬೇಕಿದೆ ಎಂದರು.

> ಪೊಲೀಸ್ ಇಲಾಖೆ ಶಾಂತಿ-ಸುವ್ಯವಸ್ಥೆ ಕಾಪಾಡಿದರೆ ಅಭಿವೃದ್ಧಿ ಸಾಧ್ಯವಾಗುತ್ತದೆ. ಬಂಡವಾಳ ಹರಿದು ಬಂದು, ಉದ್ಯೋಗ ಸೃಷ್ಟಿಯಾಗುತ್ತದೆ
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಒಂದು ವರ್ಷದಲ್ಲಿ ರಾಜ್ಯದ ಎಂಟು ಮಂದಿ ಸೇರಿ ದೇಶದಲ್ಲಿ 191 ಮಂದಿ ಕರ್ತವ್ಯ ನಿರ್ವಹಣೆ ವೇಳೆ ಪ್ರಾಣ ತ್ಯಾಗ ಮಾಡಿ ಹುತಾತ್ಮರಾಗಿದ್ದಾರೆ. ಇವರ ತ್ಯಾಗ, ಬಲಿದಾನಕ್ಕೆ ಬೆಲೆ ಕಟ್ಟಲಾಗದು. ಇವರನ್ನು ಸ್ಮರಿಸಿ, ವಂದಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದರು.

ಹುತಾತ್ಮ ಪೊಲೀಸರ ಕುಟುಂಬ ಸದಸ್ಯರೊಂದಿಗೆ ಸಿದ್ದರಾಮಯ್ಯ ಅವರು ಮಾತುಕತೆ ನಡೆಸಿದರು. ಜಿ.ಪರಮೇಶ್ವರ, ಎಂ.ಎ.ಸಲೀಂ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

116 ಮಂದಿಗೆ ಅನುಕಂಪದ ಕೆಲಸ ನೀಡಿ ಆದೇಶ ಹೊರಡಿಸಲಾಗಿದೆ. ನಿವೃತ್ತ ಪೊಲೀಸ್ ಆರೋಗ್ಯ ಯೋಜನೆಯ ವೈದ್ಯಕೀಯ ಮರುಪಾವತಿ ವೆಚ್ಚವನ್ನು ವಾರ್ಷಿಕ ₹1 ಲಕ್ಷಗಳಿಂದ ₹1.50 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಎಲ್ಲಾ ಪೊಲೀಸ್ ಸಿಬ್ಬಂದಿಯ ಆರೋಗ್ಯ ತಪಾಸಣಾ ವೆಚ್ಚವನ್ನು ₹1,000ಗಳಿಂದ ₹1,500ಕ್ಕೆ ಹೆಚ್ಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ಗೃಹ ಸಚಿವ ಜಿ.ಪರಮೇಶ್ವರ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಡಾ. ಎಂ.ಎ.ಸಲೀಂ ಅವರು ಉಪಸ್ಥಿತರಿದ್ದರು.

ಹೈಕೋರ್ಟ್‌ಗೆ ಎಸ್‌ಐಟಿ ವರದಿ ಸಲ್ಲಿಕೆ

ಕೊಚ್ಚಿ (ಪಿಟಿಐ): ಶಬರಿಮಲೆ ದೇವಸ್ಥಾನದ ಚಿನ್ನ ಕಳವು ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು (ಎಸ್‌ಐಟಿ) ತನ್ನ ಮೊದಲ ಪ್ರಗತಿ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಕೇರಳ ಹೈಕೋರ್ಟ್‌ಗೆ ಮಂಗಳವಾರ ಸಲ್ಲಿಸಿದೆ.

ನ್ಯಾಯಮೂರ್ತಿಗಳಾದ ರಾಜ ವಿಜಯರಾಘವನ್ ಹಾಗೂ ಕೆ.ವಿ. ಜಯಕುಮಾರ್ ಅವರನ್ನೊಳಗೊಂಡ ಪೀಠದ ಮುಂದೆ ವರದಿಯನ್ನು ಸಲ್ಲಿಸಲಾಯಿತು.

ಈ ಪ್ರಕರಣವನ್ನು ಎಸ್‌ಐಟಿಗೆ ವಹಿಸಿದ್ದ ಹೈಕೋರ್ಟ್, ಎರಡು ವಾರದೊಳಗೆ ಪ್ರಗತಿ ವರದಿ ಸಲ್ಲಿಸಬೇಕು. ಆರು ವಾರಗಳೊಳಗೆ ತನಿಖೆಯನ್ನು ಪೂರ್ಣಗೊಳಿಸಬೇಕು ಎಂದು ನಿರ್ದೇಶನ ನೀಡಿತ್ತು.

ಎಸ್‌ಐಟಿಯು ಎರಡು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ಬೆಂಗಳೂರು ಉದ್ಯಮಿ ಉನ್ನಿಕೃಷ್ಣನ್ ಪೋಟಿ ಹಾಗೂ ದೇವಸ್ವಂ ಮಂಡಳಿಯ ಕೆಲ ಅಧಿಕಾರಿಗಳು ಸೇರಿದಂತೆ 10 ಮಂದಿ ಆರೋಪಿಗಳನ್ನಾಗಿ ಮಾಡಲಾಗಿದೆ.



ಹಾಲರವಿ ಉತ್ಸವ

ಚಿತ್ರ: ಸಂಜಯ್ ಎಸ್. ತಿಪ್ಪಣ್ಣನವರ್

ದೀಪಾವಳಿ ಅಂಗವಾಗಿ ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನಮಲೆ ಮಹದೇಶ್ವರ ದೇವಸ್ಥಾನ ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದು, ಮಂಗಳವಾರ ಹಾಲರವಿ ಉತ್ಸವದಲ್ಲಿ ಅಪಾರ ಭಕ್ತರು ಪಾಲ್ಗೊಂಡಿದ್ದರು

ವಿದ್ಯಾರ್ಥಿಯ ಥಳಿಸಿದ್ದ ಶಿಕ್ಷಕನ ಸೆರೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ವಿದ್ಯಾರ್ಥಿಯನ್ನು ಅಮಾನುಷವಾಗಿ ಥಳಿಸಿದ್ದ ನಾಯಕನ ಹಟ್ಟಿಯ ಶ್ರೀಗುರು ತಿಪ್ಪೇರುದ್ರಸ್ವಾಮಿ ದೇವಾಲಯದ ವೀರಶೈವ ಆಗಮ ವೇದ ಸಂಸ್ಕೃತ ಪಾಠಶಾಲೆಯ ಶಿಕ್ಷಕ ವೀರೇಶ್ ಹಿರೇಮಠ ಅವರನ್ನು ಪೊಲೀಸರು ಮಂಗಳವಾರ ಬಂಧಿಸಿದ್ದಾರೆ.

ವೀರೇಶ್

ವಿದ್ಯಾರ್ಥಿಗೆ ಥಳಿಸುವ ವಿಡಿಯೊ ಎರಡು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತ್ತು. ದೇವಾಲಯದ ಹೊರಗಿರುವ ಅಂಗಡಿಯೊಂದರ ಮಾಲೀಕರೊಬ್ಬರಿಂದ ಮೊಬೈಲ್ ಪಡೆದಿದ್ದ ವಿದ್ಯಾರ್ಥಿ ತನ್ನ ಅಜ್ಜಿಗೆ ಕರೆ ಮಾಡಿದ್ದ ಎಂಬ ಕಾರಣಕ್ಕೆ ಕೋಪಗೊಂಡಿದ್ದ ಶಿಕ್ಷಕ ವಿದ್ಯಾರ್ಥಿಗೆ ಮನಬಂದಂತೆ ಥಳಿಸಿದ್ದ.

‘ಬೇಡ ಗುರೂಜಿ ಹೊಡೆಯಬೇಡಿ’ ಎಂದು ಬೇಡಿಕೊಂಡರೂ ಶಿಕ್ಷಕ ಹಲವು ಬಾರಿ ಬಡಿದು, ಒದ್ದು ಹಲ್ಲೆ ಮಾಡಿದ್ದ. ಎಂಟು ತಿಂಗಳ ಹಿಂದೆ ಫೆ.11ರಂದು ನಡೆದಿತ್ತು. ವಿಡಿಯೊ ಈಗ ಜಾಲತಾಣಗಳಲ್ಲಿ ಹರಿದಾಡಿದ್ದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

‘ಪೊಲೀಸರು ಹಾಗೂ ದೇವಸ್ಥಾನದ ಕಾರ್ಯನಿವಾಹಕ ಅಧಿಕಾರಿಗಳಿಂದ ಮಾಹಿತಿ ಪಡೆದ ತಹಶೀಲ್ದಾರ್, ಶಿಕ್ಷಕನನ್ನು ಅಮಾನತುಗೊಳಿಸಿದ್ದಾರೆ. ಜೊತೆಗೆ ನಾಯಕನಹಟ್ಟಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ’ ಎಂದು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ತಿಳಿಸಿದ್ದಾರೆ.

ಈ ದೇವಾಲಯ ‘ಎ’ ಗ್ರೇಡ್ ಮಾನ್ಯತೆ ಹೊಂದಿದೆ. ದೇಗುಲ ಆಡಳಿತ ಮಂಡಳಿಯು ಆಗಮ ವೇದ ಸಂಸ್ಕೃತ ಪಾಠಶಾಲೆ ನಡೆಸುತ್ತಿದೆ. ಸದ್ಯ ಪಾಠಶಾಲೆಯಲ್ಲಿ ನಾಲ್ವರು ವಿದ್ಯಾರ್ಥಿಗಳಿದ್ದು ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಒಪ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.

ಆರ್‌ಎಸ್‌ಎಸ್ ಅವಹೇಳನ: ಪ್ರಕರಣ

ಲಿಂಗಸುಗೂರು (ರಾಯಚೂರು ಜಿಲ್ಲೆ): ಆರ್‌ಎಸ್‌ಎಸ್, ಸರಸಂಘ ಚಾಲಕ ಮೋಹನ ಭಾಗವತ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಾಕಿದ್ದ ಆರೋಪದ ಮೇಲೆ ಅಮೀರ್ ಹುಸೇನ್ (36) ಎಂಬಾತನ ವಿರುದ್ಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಂಗಿರಾಂಪುರ ತಾಂಡಾದ ಹನುಮಂತ ಅವರು ದೂರು ನೀಡಿದ್ದರು.

ನವೋದಯ ವಿದ್ಯಾಲಯ ಸಮಿತಿ

ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ, ಭಾರತ ಸರ್ಕಾರ.

2026 ರ ಲ್ಯಾಟರಲ್ ಎಂಟ್ರಿ ಆಯ್ಕೆ ಪರೀಕ್ಷೆಯ ಮೂಲಕ IX ಮತ್ತು XI ನೇ ತರಗತಿಗಳಿಗೆ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕದ ವಿಸ್ತರಣೆಯ ಅಧಿಸೂಚನೆ

ಆಯ್ಕೆ ಪರೀಕ್ಷೆಯ ಮೂಲಕ ಜವಾಹರ ನವೋದಯ ವಿದ್ಯಾಲಯಗಳಲ್ಲಿ IX ಮತ್ತು XI ನೇ ತರಗತಿಯ (2026–27) ನೇ ಸಾಲಿಗೆ ದಾಖಲಾತಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವನ್ನು 23 ನೇ ಅಕ್ಟೋಬರ್ 2025 ರವರೆಗೆ ವಿಸ್ತರಿಸಲಾಗಿದೆ. ಅಭ್ಯರ್ಥಿಗಳು ಕೆಳಗೆ ನೀಡಿರುವ ಲಿಂಕ್‌ಗೆ ಭೇಟಿ ನೀಡುವ ಮೂಲಕ ಉಚಿತವಾಗಿ ಅರ್ಜಿ ಸಲ್ಲಿಸಬಹುದಾಗಿದೆ.

IX ತರಗತಿಗಾಗಿ LEST 2026: https://cbseitms.nic.in/2025/nvsix_9/

XI ತರಗತಿಗಾಗಿ LEST 2026: https://cbseitms.nic.in/2025/nvsxi_11/

ನವೋದಯ ವಿದ್ಯಾಲಯ ಸಮಿತಿಯ ಪ್ರಕಟಣೆ

ಮಹಿಳಾ ಅಭ್ಯರ್ಥಿಗೆ ಹಾರ ಹಾಕಿದ ನಿತೀಶ್

ಮುಜಫ್ಫರ್‌ಪುರ (ಪಿಟಿಐ): ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಂಗಳವಾರ ಎನ್‌ಡಿಎಯ ಮಹಿಳಾ ಅಭ್ಯರ್ಥಿಗೆ ಹಾರ ಹಾಕಿದ್ದು, ಅವರ ಮಾನಸಿಕ ಆರೋಗ್ಯದ ಬಗ್ಗೆ ಹೊಸ ಊಹಾಪೋಹ ಏಳುವಂತೆ ಮಾಡಿದೆ ಎಂದು ವಿರೋಧ ಪಕ್ಷಗಳು ಟೀಕಿಸಿವೆ.

ಮುಜಫ್ಫರ್‌ಪುರ ಜಿಲ್ಲೆಯ ಮೀನಾಪುರ ಕ್ಷೇತ್ರದಲ್ಲಿ ಮಂಗಳವಾರ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಈ ಘಟನೆ ನಡೆದಿದೆ. ನಿತೀಶ್ ಅವರು ವೇದಿಕೆಯಲ್ಲಿದ್ದ ಔರಾಯಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮಾ ನಿಶಾದ್ ಅವರಿಗೆ ಹಾರ ಹಾಕಲು ಮುಂದಾದರು. ಈ ವೇಳೆ ಅಲ್ಲೇ ಇದ್ದ ಜೆಡಿಯು ಕಾರ್ಯಾಧ್ಯಕ್ಷ ಸಂಜಯ್ ಕುಮಾರ್ ಝಾ ಅವರು ನಿತೀಶ್ ಅವರ ಕೈಹಿಡಿದು ಹಾರ ಹಾಕುವುದನ್ನು ತಡೆಯಲು ಪ್ರಯತ್ನಿಸಿದರು.

ಆದರೆ ಝಾ ಅವರ ಕೈಯನ್ನು ದೂರಕ್ಕೆ ತಳ್ಳಿದ ನಿತೀಶ್ ಅವರು ರಮಾ ಅವರಿಗೆ ಹಾರ ಹಾಕಿದರು. ಸ್ಥಳೀಯ ಹಿಂದೂ ಸಂಪ್ರದಾಯದ ಪ್ರಕಾರ ಒಬ್ಬ ಮಹಿಳೆ ಗಂಡನನ್ನು ಹೊರತುಪಡಿಸಿ ಬೇರೆ ಯಾರಿಂದಲೂ ಹಾರ ಹಾಕಿಸಿಕೊಳ್ಳುವಂತಿಲ್ಲ. ನಿತೀಶ್ ಅವರು ಹಾರ ಹಾಕಿದ ಘಟನೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಈ ವಿಡಿಯೊ ಹಂಚಿಕೊಂಡಿರುವ ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು, ‘ಅವರು ಉತ್ತಮ ಮಾನಸಿಕ ಆರೋಗ್ಯ ಹೊಂದಿದ್ದರೆ, ಈ ರೀತಿಯ ನಡವಳಿಕೆಯನ್ನು ಏಕೆ ತೋರುತ್ತಿದ್ದರು’ ಎಂದು ಪ್ರಶ್ನಿಸಿದ್ದಾರೆ.

₹46 ಕೋಟಿ ಮೌಲ್ಯದ 1,100 ಟನ್ ಸಿಹಿ ಉತ್ಪನ್ನ: ಸಚಿವ ಕೆ.ವೆಂಕಟೇಶ್

ಸಿಹಿ ಉತ್ಪನ್ನ ಮಾರಾಟ: ಕೆಎಂಎಫ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ವರ್ಷದ ದಸರಾ ಮತ್ತು ದೀಪಾವಳಿ ಹಬ್ಬದ ಅವಧಿಯಲ್ಲಿ ಕೆಎಂಎಫ್ ಮತ್ತು ಸದಸ್ಯ ಹಾಲು ಒಕ್ಕೂಟಗಳು ಒಟ್ಟಾಗಿ 1,100 ಟನ್ ಸಿಹಿ ಉತ್ಪನ್ನಗಳನ್ನು ಮಾರಾಟ ಮಾಡಿದ್ದು, ₹46 ಕೋಟಿ ದಾಖಲೆಯ ವಹಿವಾಟು ನಡೆಸಿವೆ ಎಂದು ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ತಿಳಿಸಿದರು.

2024 ರ ದಸರಾ ಮತ್ತು ದೀಪಾವಳಿ ಹಬ್ಬದ ಅವಧಿಯಲ್ಲಿ ಒಟ್ಟು 725 ಟನ್ ಸಿಹಿ ಉತ್ಪನ್ನಗಳನ್ನು ಮಾರಾಟ ಮಾಡಿ ₹33.48 ಕೋಟಿ ವಹಿವಾಟು ನಡೆಸಲಾಗಿತ್ತು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

> ನಂದಿನಿ ಹಾಲಿನ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿದೆ. ಸದ್ಯಕ್ಕೆ ನಂದಿನಿ ಹಾಲು ಮತ್ತು ಉತ್ಪನ್ನಗಳ ಬೆಲೆ ಏರಿಕೆ ಪ್ರಸ್ತಾವನೆ ಇಲ್ಲ
> **ಕೆ.ವೆಂಕಟೇಶ್**, ಪಶುಸಂಗೋಪನೆ ಸಚಿವ

ಹಿಂದಿನ ಸಾಲಿನ ವಹಿವಾಟಿಗೆ ಹೋಲಿಸಿದರೆ ಈ ಸಾಲಿನಲ್ಲಿ ಶೇ 38 ರಷ್ಟು ಹೆಚ್ಚು ಪ್ರಗತಿ ಸಾಧಿಸಿದ್ದು, ಇದು ಕೆಎಂಎಫ್ ಇತಿಹಾಸದಲ್ಲಿಯೇ ಸಾರ್ವಕಾಲಿಕ ದಾಖಲೆ. ಈ ಬಾರಿ 2025 ರ ಹಬ್ಬದ ಅವಧಿಗೆ ಹೆಚ್ಚುವರಿ ಬೇಡಿಕೆಯನ್ನು ಪರಿಗಣಿಸಲಾಗಿತ್ತು. ಸುಮಾರು ಎರಡು ತಿಂಗಳು ಮುಂಚಿತವಾಗಿ ಎಲ್ಲ ಸದಸ್ಯ ಹಾಲು ಒಕ್ಕೂಟಗಳ ಸಹಕಾರದೊಂದಿಗೆ ನಿಖರ ಯೋಜನೆ ರೂಪಿಸಿ 1,000 ಟನ್ ಮಾರಾಟ ಗುರಿ ನಿಗದಿಪಡಿಸಲಾಗಿತ್ತು ಎಂದು ವೆಂಕಟೇಶ್ ತಿಳಿಸಿದರು.

ರಾಜ್ಯದಲ್ಲಿ ಸರಾಸರಿ 1 ಕೋಟಿ ಲೀಟರ್ ಹಾಲು ಸಂಗ್ರಹಿಸಲಾಗುತ್ತಿದೆ. ಅದರಲ್ಲಿ 65 ಲಕ್ಷ ಲೀಟರ್ ಹಾಲು, ಮೊಸರು ಮತ್ತು ಯುಎಚ್‌ಟಿ ಹಾಲು ಉತ್ಪನ್ನಗಳನ್ನು ರಾಜ್ಯ ಮತ್ತು ಹೊರ ರಾಜ್ಯ ಮಾರುಕಟ್ಟೆಗಳಲ್ಲಿ ಗ್ರಾಹಕರಿಗೆ ತಲುಪಿಸಲಾಗುತ್ತಿದೆ. ನಂದಿನಿ ಉತ್ಪನ್ನಗಳು ದೇಶದ ವಿವಿಧ ರಾಜ್ಯಗಳು ಹಾಗೂ ವಿದೇಶಗಳಲ್ಲೂ ಮಾರಾಟವಾಗುತ್ತವೆ ಎಂದರು.

ಉತ್ಪನ್ನಗಳ ಮೇಲೆ ಕ್ಯೂಆರ್ ಕೋಡ್

ಕೆಎಂಎಫ್‌ನ ಎಲ್ಲ ಉತ್ಪನ್ನಗಳ ಮೇಲೂ ಕ್ಯೂಆರ್ ಕೋಡ್ ಅಂಟಿಸಲಾಗುವುದು. ಅದರಲ್ಲಿ ಉತ್ಪನ್ನಗಳ ಸಂಪೂರ್ಣ ಮಾಹಿತಿ ಇರುತ್ತದೆ. ಇದರಿಂದ ಅಸಲಿ ಯಾವುದು ನಕಲಿ ಯಾವುದು ಎಂಬುದನ್ನು ಗ್ರಾಹಕರು ತಿಳಿದುಕೊಳ್ಳಬಹುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ತಿಳಿಸಿದರು. ನಕಲಿ ಮತ್ತು ಕಲಬೆರಕೆ ಮಾಡುವವರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಅವರು ಹೇಳಿದರು.

ಲಾಲ್‌ಗಂಜ್: ಹಿಂದೆ ಸರಿದ ‘ಕೈ’ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಬಿಹಾರ ವಿಧಾನಸಭಾ ಚುನಾವಣೆಯಲ್ಲಿ ‘ಫ್ರೆಂಡ್ಲಿ ಫೈಟ್’ಅನ್ನು ಕಡಿಮೆ ಮಾಡಲು ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಮಾತುಕತೆ ಮುಂದುವರಿಸಿವೆ.

ಹಲವು ಸುತ್ತುಗಳ ಮಾತುಕತೆ ನಡೆದರೂ ವಿಪಕ್ಷಗಳ ಮೈತ್ರಿಕೂಟದಲ್ಲಿ ಅಧಿಕೃತವಾಗಿ ಸೀಟು ಹಂಚಿಕೆ ಒಪ್ಪಂದ ಏರ್ಪಟ್ಟಿಲ್ಲ. ಇದರಿಂದ ಕನಿಷ್ಠ ಒಂಬತ್ತು ಕ್ಷೇತ್ರಗಳಲ್ಲಿ ಮೈತ್ರಿ ಕೂಟದ ಪಕ್ಷಗಳು ಪರಸ್ಪರ ಸ್ಪರ್ಧೆಗೆ ಇಳಿದಿವೆ. ಇದೀಗ, ಪರಸ್ಪರ ಪೈಪೋಟಿಯನ್ನು ಇನ್ನಷ್ಟು ತಗ್ಗಿಸುವ ಪ್ರಯತ್ನ ನಡೆಯುತ್ತಿದ್ದು, ಅಲ್ಪ ಯಶಸ್ಸು ಲಭಿಸಿದೆ.

ಲಾಲ್‌ಗಂಜ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆದಿತ್ಯ ರಾಜ ನಾಮಪತ್ರ ಹಿಂದೆಗೆದುಕೊಂಡಿದ್ದಾರೆ. ಇಲ್ಲಿ ‘ಇಂಡಿಯಾ’ ಅಭ್ಯರ್ಥಿಯಾಗಿ ಆರ್‌ಜೆಡಿಯ ಶಿವಾನಿ ಶುಕ್ಲಾ ಕಣದಲ್ಲಿದ್ದಾರೆ. ಇದರಿಂದ ಕಾಂಗ್ರೆಸ್–ಆರ್‌ಜೆಡಿ ಪರಸ್ಪರ ಪೈಪೋಟಿ ನಡೆಸುವ ಕ್ಷೇತ್ರಗಳ ಸಂಖ್ಯೆ ನಾಲ್ಕಕ್ಕೆ ಇಳಿಕೆಯಾಗಿದೆ. ಕಾಂಗ್ರೆಸ್ ಮತ್ತು ಎಡಪಕ್ಷಗಳು ನಾಲ್ಕು ಕ್ಷೇತ್ರಗಳಲ್ಲಿ ಎದುರಾಗುತ್ತಿವೆ. ಇದರಲ್ಲಿ ಕಾಂಗ್ರೆಸ್ ಕನಿಷ್ಠ ಒಂದು ಕ್ಷೇತ್ರದಲ್ಲಿ ಸ್ಪರ್ಧೆಯಿಂದ ಹಿಂದೆ ಸರಿಯಬಹುದು ಎಂದು ಸಿಪಿಐ ನಿರೀಕ್ಷಿಸುತ್ತಿದೆ.

ಗೌರ ಬೌರಂ ವಿಧಾನಸಭಾ ಕ್ಷೇತ್ರ: ಮಹಾಘಟಬಂಧನ್‌ನಲ್ಲಿ ತಂದ ಗೊಂದಲ

ಆರ್‌ಜೆಡಿ ಅಭ್ಯರ್ಥಿ ವಿರುದ್ಧವೇ ತೇಜಸ್ವಿ ಪ್ರಚಾರ

ಪ್ರಜಾವಾಣಿ ವಾರ್ತೆ

ಪ್ರಜಾಮತ
ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನವದೆಹಲಿ: ಚುನಾವಣಾ ಕಣದಲ್ಲಿ ಪಕ್ಷದ ಅಭ್ಯರ್ಥಿಯ ವಿರುದ್ಧ ಪಕ್ಷದ ದಂಡನಾಯಕರೇ ಪ್ರಚಾರ ನಡೆಸುವ ಪ್ರಸಂಗ ಅತಿ ಅಪರೂಪ. ಬಿಹಾರ ವಿಧಾನಸಭಾ ಚುನಾವಣಾ ಕಣದಲ್ಲಿ ಇಂತಹುದೇ ಒಂದು ಸನ್ನಿವೇಶ ಸೃಷ್ಟಿಯಾಗಿದೆ. ಆರ್‌ಜೆಡಿಯ ಅಧಿಕೃತ ಅಭ್ಯರ್ಥಿಯ ವಿರುದ್ಧವೇ ಪಕ್ಷದ ಮಹಾನಾಯಕರು ಮತ ಕೇಳಲಿದ್ದಾರೆ.

‘ಮಹಾಘಟಬಂಧನ್’ನೊಳಗಿನ ಗೊಂದಲ ಮತ್ತು ಭಿನ್ನಾಭಿಪ್ರಾಯಗಳು ದರ್ಭಾಂಗಾ ಜಿಲ್ಲೆಯ ಗೌರ ಬೌರಂ ಕ್ಷೇತ್ರದಲ್ಲಿ ವಿಚಿತ್ರ ಪರಿಸ್ಥಿತಿಗೆ ಕಾರಣವಾಗಿದೆ. ‘ಮಹಾಘಟಬಂಧನ್’ ಪಾಲುದಾರರು ಸೀಟು ಹಂಚಿಕೆಯ ಸಮಯದಲ್ಲಿ ಒಮ್ಮತಕ್ಕೆ ಬರಲು ಹೆಣಗಾಡಿದರು ಮತ್ತು ಕೆಲವೊಂದು ಭಿನ್ನಾಭಿಪ್ರಾಯಗಳನ್ನು ಕೊನೆಯವರೆಗೂ ಪರಿಹರಿಸಲು ಸಾಧ್ಯವಾಗಲಿಲ್ಲ. ಈ ಕಾರಣದಿಂದಾಗಿ, ಒಂಬತ್ತು ಕ್ಷೇತ್ರಗಳಲ್ಲಿ ಮಿತ್ರಪಕ್ಷಗಳು ಪರಸ್ಪರ ಸೆಣಸುತ್ತಿವೆ. ಗೌರ ಬೌರಂ ಕ್ಷೇತ್ರದಲ್ಲಿ ‘ಮಿತ್ರರ ಕಾದಾಟ’ ಅಂಕೆ ಮೀರಿ ಹೋಗಿದೆ.

ಏನಿದು ವಿವಾದ: ಮಿತ್ರ ಪಕ್ಷಗಳ ಜತೆಗೆ ಸೀಟು ಹಂಚಿಕೆ ಅಂತಿಮಗೊಳ್ಳುವ ಮುನ್ನವೇ ಈ ಕ್ಷೇತ್ರದಲ್ಲಿ ಅಫ್ಜಲ್ ಅಲಿ ಖಾನ್ ಅವರನ್ನು ಕಣಕ್ಕಿಳಿಸಲು ಆರ್‌ಜೆಡಿ ತೀರ್ಮಾನಿಸಿತು.ಪಕ್ಷದ ನಾಯಕತ್ವವು ಅಫ್ಜಲ್‌ಗೆ ಬಿ–ಫಾರಂ ನೀಡಿತು. ಅಫ್ಜಲ್ ಅವರು ಟಿಕೆಟ್ ಸಿಕ್ಕ ಖುಷಿಯನ್ನು ಆಪ್ತರೊಂದಿಗೆ ಹಂಚಿಕೊಂಡು ಪ್ರಚಾರಕ್ಕೆ ಸಜ್ಜಾಗುವಂತೆ ಸೂಚಿಸಿದರು.

ಪಟ್ನಾದಿಂದ ಅವರ ಕ್ಷೇತ್ರಕ್ಕೆ ಸುಮಾರು ನಾಲ್ಕು ಗಂಟೆಗಳ ಪ್ರಯಾಣ. ಅವರು ಕ್ಷೇತ್ರ ತಲುಪುವ ಮೊದಲೇ ಆರ್‌ಜೆಡಿ ಹಾಗೂ ಮುಕೇಶ್ ಸಹಾನಿ ಅವರ ವಿಕಾಸ್‌ಶೀಲ ಇನ್ಸಾನ್ ಪಾರ್ಟಿ (ವಿಐಪಿ) ನಡುವೆ ಒಪ್ಪಂದ ಏರ್ಪಟಿತು. ಈ ಕ್ಷೇತ್ರವನ್ನು ವಿಐಪಿಗೆ ಬಿಟ್ಟುಕೊಡಲು ಆರ್‌ಜೆಡಿ ಒಪ್ಪಿಗೆ ಮುದ್ರೆ ಒತ್ತಿತ್ತು. 2020ರಲ್ಲಿ ತಮ್ಮ ಪಕ್ಷ ಗೆದ್ದಿದ್ದ ಈ ಕ್ಷೇತ್ರದಲ್ಲಿ ಕಿರಿಯ ಸಹೋದರ ಸಂತೋಷ್ ಸಹಾನಿ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದರು. ಸಹೋದರನನ್ನು ಗೆಲ್ಲಿಸಿಕೊಂಡು ಬರಲು ಆರ್‌ಜೆಡಿ ನಾಯಕರು ಸಂಪೂರ್ಣ ಸಹಕಾರ ನೀಡಬೇಕು ಎಂದೂ ಷರತ್ತು ಒಡ್ಡಿದ್ದರು. ಇದಕ್ಕೆ ಆರ್‌ಜೆಡಿ ನಾಯಕರು ತಲೆಯಾಡಿಸಿದರು.

ಅಫ್ಜಲ್ ಅವರನ್ನು ಆರ್‌ಜೆಡಿ ನಾಯಕರು ಸಂಪರ್ಕಿಸಿ ಬಿ–ಫಾರಂ ಹಿಂತಿರುಗಿಸುವಂತೆ ಕೋರಿದರು. ಅದಕ್ಕೆ ಅವರು ಒಪ್ಪಲಿಲ್ಲ. ಪಕ್ಷದ ಅಧಿಕೃತ ಅಭ್ಯರ್ಥಿಯಾಗಿ ನಾಮಪತ್ರವನ್ನೂ ಸಲ್ಲಿಸಿದರು. ಅಫ್ಜಲ್ ಅವರ ಉಮೇದುವಾರಿಕೆಯನ್ನು ಪಕ್ಷವು ಅನುಮೋದಿಸುವುದಿಲ್ಲ ಎಂದು ಆರ್‌ಜೆಡಿ ನಾಯಕರು ಚುನಾವಣಾ ಅಧಿಕಾರಿಗಳಿಗೆ ಪತ್ರ ನೀಡಿದರು. ಅಫ್ಜಲ್ ಸೂಕ್ತ ದಾಖಲೆಗಳೊಂದಿಗೆ ನಾಮಪತ್ರ ಸಲ್ಲಿಸಿರುವುದರಿಂದ ಅವರ ಅಭ್ಯರ್ಥಿತನವನ್ನು ಅಸಿಂಧುಗೊಳಿಸಲು ಸಾಧ್ಯವಿಲ್ಲ ಎಂದು ಚುನಾವಣಾ ಅಧಿಕಾರಿಗಳು ಸ್ಪಷ್ಟಪಡಿಸಿದರು. ಇದರಿಂದಾಗಿ, ಕ್ಷೇತ್ರದಲ್ಲಿ ಆರ್‌ಜೆಡಿ–ವಿಐಪಿ ಹೋರಾಟಕ್ಕೆ ವೇದಿಕೆ ಅಣಿಯಾಗಿದೆ. ಕೊಟ್ಟ ಮಾತಿನಂತೆ ಆರ್‌ಜೆಡಿ ದಂಡನಾಯಕ ತೇಜಸ್ವಿ ಯಾದವ್ ಅವರು ಪಕ್ಷದ ಅಭ್ಯರ್ಥಿ ವಿರುದ್ಧ ಪ್ರಚಾರ ಮಾಡಬೇಕಿದೆ.

ಅಫ್ಜಲ್ ನಾಮಪತ್ರ ವಜಾಗೊಳಿಸದ ಕ್ಷೇತ್ರದ ಚುನಾವಣಾ ಅಧಿಕಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್‌ಗೆ ಮೊರೆ ಹೋಗುವುದಾಗಿ ಸಂತೋಷ್ ಸಹಾನಿ ಘೋಷಿಸಿದ್ದಾರೆ.

‘ಇಂಡಿಯಾ’ ಮೈತ್ರಿಗೆ ಹೊಸದಲ್ಲ

2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ರಾಜಸ್ಥಾನದ ಬನ್ಸ್ವಾರದಲ್ಲೂ ಇದೇ ರೀತಿಯ ಸನ್ನಿವೇಶ ಸೃಷ್ಟಿಯಾಗಿತ್ತು. ಕಾಂಗ್ರೆಸ್ ಪಕ್ಷವು ಆರಂಭದಲ್ಲಿ ಅರವಿಂದ ದಾಮೋರ್ ಅವರನ್ನು ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಿತ್ತು.

ಆ ಬಳಿಕ ಭಾರತ್ ಆದಿವಾಸಿ ಪಕ್ಷದ ಜತೆಗೆ ಸೀಟು ಹಂಚಿಕೆ ಒಪ್ಪಂದ ಏರ್ಪಟ್ಟಿತ್ತು. ಈ ಕ್ಷೇತ್ರವನ್ನು ಮಿತ್ರ ಪಕ್ಷಕ್ಕೆ ಕಾಂಗ್ರೆಸ್ ಬಿಟ್ಟುಕೊಟ್ಟಿತ್ತು. ರಾಜ್‌ಕುಮಾರ್ ರೋಟ್ ಅವರಿಗೆ ಆದಿವಾಸಿ ಪಕ್ಷ ಟಿಕೆಟ್ ಕೊಟ್ಟಿತ್ತು. ಬಿ–ಫಾರಂ ಹಿಂತಿರುಗಿಸುವಂತೆ ದಾಮೋರ್ ಅವರಿಗೆ ಕಾಂಗ್ರೆಸ್ ತಾಕೀತು ಮಾಡಿತ್ತು. ಅವರು ಕೆಲ ದಿನ ಪಕ್ಷದ ನಾಯಕರ ಕೈಗೇ ಸಿಕ್ಕಿರಲಿಲ್ಲ. ನಾಮಪತ್ರ ಸಲ್ಲಿಕೆಯ ಎಲ್ಲ ಪ್ರಕ್ರಿಯೆ ಪೂರ್ಣಗೊಂಡ ಬಳಿಕವೇ ಕ್ಷೇತ್ರಕ್ಕೆ ಹಿಂತಿರುಗಿದ್ದರು. ದಾಮೋರ್ ವಿರುದ್ಧವೇ ಪಕ್ಷದ ನಾಯಕರು ಪ್ರಚಾರ ನಡೆಸಿದ್ದರು. ನಿಕಟ ಸ್ಪರ್ಧೆ ಇದ್ದ ಈ ಕ್ಷೇತ್ರದಲ್ಲಿ ರೋಟ್ ಗೆದ್ದಿದ್ದರು. ಇದರ ನಡುವೆಯೂ, ದಾಮೋರ್ 60 ಸಾವಿರ ಮತಗಳನ್ನು ಪಡೆದಿದ್ದರು.

ಉದ್ಯೋಗ ವಾಣಿ

BANGALORE TURF CLUB LTD.
Post Box No. 5038, Race Course Road, Bangalore-560001
EPABX : 22262391/2/3 Extn: 225, 480, Email: hr@btcraces.com
GST No:29AABCB6217G1ZT CIN: U99999KA1962PLC001449

APPOINTMENTS

SECRETARY
Minimum Qualification : Company Secretary (CS)
Experience: Minimum 10 years in relevant field

CHIEF FINANCE OFFICER
Minimum Qualification : Charted Accountant (CA)
Experience : Minimum 5 years in relevant field

CHIEF STIPENDIARY STEWARD
Minimum Qualification : Graduate
Experience : Minimum 15 Years experience in horse racing industry

Interested candidates visit our Website https://www.bangaloreraces.com

By order of the Managing Committee
SD/-
Acting Secretary

Date : 17-10-2025
Bengaluru

Government of India – Ministry of Finance, Department of Revenue, CBIC,
Office of the Principal Chief Commissioner of Central Tax, Bengaluru Zone
Email: bzpcco-legal@gov.in Ph: 080 22867468 Ext: 263

Applications for Appointment of Senior/Junior Standing Counsels for Indirect Taxation Matters.

Applications are invited from eligible advocates practicing in the High Court of Karnataka for appointment as **Senior Standing Counsel** and **Junior Standing Counsel** to handle indirect taxation litigation before the **High Court of Karnataka – Bengaluru Bench.**

Eligibility, qualifications, and terms of appointment are detailed in the CBIC guidelines dated 05.12.2007 and 14.09.2012 available on

https://gstkarnataka.gov.in/media/pdf/notifications/public-notices/2012-09-14_Appointment_of_Standing_Counsels_20251014_094607.pdf

or can be obtained **from any CGST or Customs Commissionerate of Bengaluru Zone.**

Last date to apply: 14.11.2025

Applications (3 copies) must be submitted in the prescribed format (Proforma-A or A1), along with enclosures, contact number and email ID.

Superscribe the envelope:

"Application for appointment of Senior Standing Counsel / Junior Standing Counsel / Both"

Send to: The Assistant Commissioner (Legal), Office of the Principal Chief Commissioner of Central Tax, C.R. Buildings, Queen's Road, Bengaluru – 560001.

Incomplete applications will be rejected.

Digitally signed by
Indira Priyadarshini A
Additional Commissioner,
PCCO, Bengaluru Zone

Date: 17.10.2025
17:28:43

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,843
ಇಂದಿನ ಅಂತ್ಯ:	25,868
ದಿನದ ಗರಿಷ್ಠ:	25,934
	25

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹580
	12 ಕ್ಕೆ	₹80
ಮೈಸೂರು:	100 ಕ್ಕೆ	₹583

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹183
ಆರ್‌ಎಸ್‌ಎಸ್-5	₹178
ಗುಡ್ ಲಾಟ್	₹165

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1400 (1405)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1470 (1475)
ಪಾಮೋಲಿನ್	₹1285 (1290)

ದೀಪಾವಳಿ: ₹6 ಲಕ್ಷ ಕೋಟಿ ವಹಿವಾಟು

ಖರೀದಿಗೆ ಉತ್ತೇಜನ ನೀಡಿದ ಜಿಎಸ್‌ಟಿ ಇಳಿಕೆ: ಸಿಎಐಟಿ ಸಮೀಕ್ಷೆ

ನವದೆಹಲಿ (ಪಿಟಿಐ): ದೀಪಾವಳಿ ಹಬ್ಬದ ಅಂಗವಾಗಿ ದೇಶದಲ್ಲಿ ₹6.05 ಲಕ್ಷ ಕೋಟಿಯಷ್ಟು ದಾಖಲೆಯ ವಹಿವಾಟು ನಡೆದಿದೆ ಎಂದು ಅಖಿಲ ಭಾರತ ವರ್ತಕರ ಸಂಘದ (ಸಿಎಐಟಿ) ಸಮೀಕ್ಷೆ ಮಂಗಳವಾರ ತಿಳಿಸಿದೆ.

ಈ ಒಟ್ಟು ವಹಿವಾಟು ಪೈಕಿ ₹5.40 ಲಕ್ಷ ಕೋಟಿಯಷ್ಟು ಮೌಲ್ಯದ ಸರಕುಗಳು ಮಾರಾಟವಾಗಿದ್ದರೆ, ₹65 ಸಾವಿರ ಕೋಟಿಯಷ್ಟು ಸೇವಾ ವಲಯಕ್ಕೆ ಸಂಬಂಧಿಸಿದ ವಹಿವಾಟು ನಡೆದಿದೆ. ಜಿಎಸ್‌ಟಿ ಇಳಿಕೆ ಮತ್ತು ಗ್ರಾಹಕರಲ್ಲಿ ಹೆಚ್ಚಳವಾದ ಖರೀದಿ ಸಾಮರ್ಥ್ಯದಿಂದ ಮಾರಾಟದ ಪ್ರಮಾಣ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಕಳೆದ ವರ್ಷದ ದೀಪಾವಳಿ ವೇಳೆ ₹4.25 ಲಕ್ಷ ಕೋಟಿಯಷ್ಟು ಮಾರಾಟ ನಡೆದಿತ್ತು.

ಈ ಬಾರಿ ನಡೆದ ವಹಿವಾಟಿನಲ್ಲಿ ಎಫ್‌ಎಂಸಿಜಿ ವಲಯದ ಸರಕುಗಳ ಮಾರಾಟವು ಒಟ್ಟು ಮಾರಾಟದಲ್ಲಿ ಶೇ 12ರಷ್ಟು ಪಾಲು ಹೊಂದಿದೆ. ಚಿನ್ನ ಮತ್ತು ಆಭರಣಗಳು ಶೇ 10, ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರಿಕಲ್ಸ್ ವಸ್ತುಗಳು ಶೇ 8, ಸಿದ್ಧ ಉಡುಪುಗಳು ಶೇ 7, ಉಡುಗೊರೆಗಳು ಶೇ 7, ಗೃಹಾಲಂಕಾರ ವಸ್ತುಗಳು ಶೇ 5, ಪೀಠೋಪಕರಣಗಳು ಶೇ 5, ಸಿಹಿತಿಂಡಿಗಳು ಶೇ 5, ಪೂಜಾ ಸಾಮಗ್ರಿಗಳು ಶೇ 3, ಹಣ್ಣುಗಳು ಶೇ 3ರಷ್ಟು ಇದೆ.

'ಪ್ಯಾಕೇಜಿಂಗ್, ಆತಿಥ್ಯ, ಕ್ಯಾಬ್‌ಸೇವೆಗಳು, ಪ್ರಯಾಣ, ಈವೆಂಟ್ ಮ್ಯಾನೇಜ್‌ಮೆಂಟ್, ಅಲಂಕಾರಿಕ, ವಿತರಣೆಯಂತಹ ವಲಯಗಳಿಂದ ಸೇವಾ ವಲಯವು ಈ ಬಾರಿ ₹65 ಸಾವಿರ ಕೋಟಿ ವಹಿವಾಟು ಕಂಡಿದೆ' ಎಂದು ಸಿಎಐಟಿ ರಾಷ್ಟ್ರೀಯ ಅಧ್ಯಕ್ಷ ಬಿ.ಸಿ.ಭಾರ್ತಿಯಾ ಹೇಳಿದ್ದಾರೆ.

ದಿನನಿತ್ಯ ಬಳಸುವ ವಸ್ತುಗಳಾದ ಉಡುಪುಗಳು, ಪಾದರಕ್ಷೆ, ಗೃಹಾಲಂಕಾರ ಸೇರಿ ಇತರೆ ವಸ್ತುಗಳ ಮೇಲಿನ ಜಿಎಸ್‌ಟಿ ಕಡಿಮೆ ಆಗಿದೆ. ಇದೇ ಮಾರಾಟದ ಹೆಚ್ಚಳಕ್ಕೆ ನೇರ ಕಾರಣ ಎಂದು ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಶೇ 72ರಷ್ಟು ವರ್ತಕರು ಹೇಳಿದ್ದಾರೆ.

ಸ್ಥಿರವಾದ ಬೆಲೆಯಿಂದ ಗ್ರಾಹಕರು ಹೆಚ್ಚು ಸಂತೃಪ್ತರಾಗಿದ್ದು, ಇದು ಹಬ್ಬದ ವೇಳೆ ಜನರು ಹೆಚ್ಚು ಖರೀದಿಸಲು ಉತ್ತೇಜನ ನೀಡಿತು. ಮದುವೆಯ ಋತು, ಮುಂಬರುವ ಹಬ್ಬಗಳಿಂದ ಈ ಮಾರಾಟ ಹೆಚ್ಚಳವು ಇದೇ ರೀತಿ ಮುಂದುವರಿಯಲಿದೆ ಎಂದು ಹೇಳಿದೆ.

ಲಾಜಿಸ್ಟಿಕ್ಸ್, ಪ್ಯಾಕೇಜಿಂಗ್, ಸಾರಿಗೆ ಮತ್ತು ರಿಟೇಲ್ ಸೇವೆಗಳಲ್ಲಿ 50 ಲಕ್ಷ ತಾತ್ಕಾಲಿಕ ಉದ್ಯೋಗಗಳು ಈ ದೀಪಾವಳಿ ಹಬ್ಬದಲ್ಲಿ ಸೃಷ್ಟಿಯಾಗಿವೆ. ಗ್ರಾಮೀಣ ಮತ್ತು ಅರೆನಗರ ಪ್ರದೇಶವು ದೇಶದಲ್ಲಿ ನಡೆದ ಒಟ್ಟು ವಹಿವಾಟಿನಲ್ಲಿ ಶೇ 28ರಷ್ಟು ಪಾಲು ಹೊಂದಿದೆ ಎಂದು ತಿಳಿಸಿದೆ.

1 ಲಕ್ಷ ವಾಹನ ಮಾರಾಟ: ಟಾಟಾ

ನವರಾತ್ರಿಯಿಂದ ದೀಪಾವಳಿಯವರೆಗಿನ ಅವಧಿಯಲ್ಲಿ 1 ಲಕ್ಷಕ್ಕೂ ಅಧಿಕ ಪ್ರಯಾಣಿಕ ವಾಹನಗಳನ್ನು ಗ್ರಾಹಕರಿಗೆ ವಿತರಣೆ ಮಾಡಲಾಗಿದೆ ಎಂದು ಟಾಟಾ ಮೋಟರ್ಸ್ ತಿಳಿಸಿದೆ.

ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಮಾರಾಟ ಪ್ರಮಾಣದಲ್ಲಿ ಶೇ 33ರಷ್ಟು ಹೆಚ್ಚಳವಾಗಿದೆ ಎಂದು ಮಂಗಳವಾರ ತಿಳಿಸಿದೆ.

'ಎಸ್‌ಯುವಿ ಮತ್ತು ವಿದ್ಯುತ್‌ಚಾಲಿತ ವಾಹನಗಳ ಮಾರಾಟದ ಹೆಚ್ಚಳದಿಂದ ಒಟ್ಟಾರೆ ಮಾರಾಟದ ಪ್ರಮಾಣ ಏರಿಕೆ ಆಗಿದೆ' ಎಂದು ಟಾಟಾ ಮೋಟರ್ಸ್‌ನ ಪ್ರಯಾಣಿಕ ವಾಹನದ (ಟಿಎಂಪಿವಿ) ಸಿಇಒ ಮತ್ತು ವ್ಯವಸ್ಥಾಪಕ ನಿರ್ದೇಶಕ ಶೈಲೇಶ್ ಚಂದ್ರ ಹೇಳಿದ್ದಾರೆ. 30 ದಿನದ ಅವಧಿಯಲ್ಲಿ 1 ಲಕ್ಷಕ್ಕೂ ಹೆಚ್ಚು ವಾಹನಗಳು ಮಾರಾಟವಾಗಿವೆ. ಇದು ಮಹತ್ವದ ಮೈಲಿಗಲ್ಲು ಎಂದು ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಉತ್ತರ ಕ್ರಿಯಾದಿ ಭೂ ಶಾಂತಿ ಆಹ್ವಾನ ಪತ್ರಿಕೆ

ಶ್ರೀಮಾನ್ ನರಸಿಂಹಯ್ಯನವರು
ಕುರುವೇಲ್ ತಿಮ್ಮನಹಳ್ಳಿ, ಸೋಂಪುರ ಹೋ||, ನೆಲಮಂಗಲ ತಾ||, ಬೆಂಗಳೂರು ಗ್ರಾಂ.ಜಿಲ್ಲೆ
ದಿನಾಂಕ: 14-10-2025ನೇ ಮಂಗಳವಾರ ನನ್ನ ಪೂಜ್ಯ ಪತಿಯವರಾದ ಶ್ರೀಮಾನ್ ನರಸಿಂಹಯ್ಯನವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಉತ್ತರ ಕ್ರಿಯಾದಿ ಭೂ ಶಾಂತಿ ಕಾರ್ಯವನ್ನು ದಿನಾಂಕ: 24-10-2025ನೇ ಶುಕ್ರವಾರ ಬೆಳಗ್ಗೆ 9-30 ಘಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಿರುತ್ತೇವೆ. ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿಸುತ್ತೇವೆ.
ಇಂತಿ ದುಃಖತಪ್ತರು
ಮೃತರ ಪತ್ನಿ ಶ್ರೀಮತಿ ರಂಗಮ್ಮ,
ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ದಿ|| ವೆಂಕಟರಮಣಪ್ಪನವರು ಅಪಾರ ಕುಟುಂಬವರ್ಗ
ವಿಶೇಷ ಸೂಚನೆ: ಇದನ್ನೇ ಆಹ್ವಾನ ಪತ್ರಿಕೆಯೆಂದು ಭಾವಿಸಿ ಆಗಮಿಸಬೇಕಾಗಿ ಕೋರಿಕೆ.

ವೇಣು ಶ್ರೀನಿವಾಸನ್ ಮರುನೇಮಕ

ನವದೆಹಲಿ (ಪಿಟಿಐ): ಸರ್ ದೊರಾಬ್ಜಿ ಟಾಟಾ ಟ್ರಸ್ಟ್ ಮತ್ತು ಸರ್ ರತನ್ ಟಾಟಾ ಟ್ರಸ್ಟ್‌ನ ಆಜೀವ ಉಪಾಧ್ಯಕ್ಷರಾಗಿ ವೇಣು ಶ್ರೀನಿವಾಸನ್ ಮರುನೇಮಕ ಆಗಿದ್ದಾರೆ. ಸರ್ವಾನುಮತದಿಂದ ಶ್ರೀನಿವಾಸನ್ ಅವರನ್ನು ಟಾಟಾ ಟ್ರಸ್ಟ್ಸ್ ಮರುನೇಮಕ ಮಾಡಿದೆ.

ಇದೀಗ ಮೆಹ್ಲಿ ಮಿಸ್ತ್ರಿ ಅವರ ಮರುನೇಮಕದತ್ತ ಎಲ್ಲರ ಚಿತ್ತ ನೆಟ್ಟಿದೆ. ಟ್ರಸ್ಟ್‌ನಲ್ಲಿ ಇತ್ತೀಚೆಗೆ ಉಂಟಾದ ಆಂತರಿಕ ಸಂಘರ್ಷದ ನಡುವೆಯೇ ಈ ನೇಮಕ ನಡೆದಿದೆ.

ಅಕ್ಟೋಬರ್ 23ರಂದು ವೇಣು ಶ್ರೀನಿವಾಸನ್ ಅವರ ಅವಧಿ ಮುಕ್ತಾಯಗೊಳ್ಳುತ್ತಿತ್ತು. ಹೀಗಾಗಿ ಅದಕ್ಕೂ ಮೊದಲೇ ಅವರನ್ನು ನೇಮಕ ಮಾಡಲಾಗಿದೆ.

ಟಿವಿಎಸ್ ಸಮೂಹದ ಗೌರವಾಧ್ಯಕ್ಷ ವೇಣು ಶ್ರೀನಿವಾಸನ್ ಅವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಆದರೆ, ಟಾಟಾ ಟ್ರಸ್ಟ್ಸ್ ಈ ಬಗ್ಗೆ ಪ್ರತಿಕ್ರಿಯಿಸಲು ನಿರಾಕರಿಸಿದೆ.

ಅಕ್ಟೋಬರ್ 28ರಂದು ಮೆಹ್ಲಿ ಮಿಸ್ತ್ರಿ ಅವರ ಅವಧಿ ಕೊನೆಗೊಳ್ಳಲಿದೆ. ಮಿಸ್ತ್ರಿ ಅವರ ಅವಧಿ ಮುಂದುವರಿಕೆ ಸ್ವಯಂಚಾಲಿತವಾಗಿ ನಡೆಯುತ್ತದೆಯೇ ಅಥವಾ ಆಜೀವ ಅವಧಿಗೆ ಟ್ರಸ್ಟಿಗಳಿಂದ ಸರ್ವಾನುಮತದ ಅನುಮೋದನೆ ಅಗತ್ಯವಿದೆಯೇ ಎಂಬ ಬಗ್ಗೆ ಚರ್ಚೆ ನಡೆಯುತ್ತಿದೆ.

2024ರ ಅಕ್ಟೋಬರ್‌ನಲ್ಲಿ ಅಂಗೀಕರಿಸಿದ ನಿರ್ಣಯದ ಅನ್ವಯ, ಟ್ರಸ್ಟಿಗಳ ಅಧಿಕಾರಾವಧಿ ಮುಗಿದ ನಂತರ ಅವರನ್ನು ಆಜೀವ ಅವಧಿಗೆ ಮರುನೇಮಕ ಮಾಡಲಾಗುತ್ತದೆ.

ಮುಂಬೈ ಧಾರಣೆ (ಶೇಂಗಾ) 21-10-2025	
ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1410 (1415)
ಒಂದು ವಾರದ ಡೆಲಿವರಿ	1405 (1405)
ಪಾಮ್ ವಾರದ ಡೆಲಿವರಿ	1283 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1415 (1420)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,26,600 (1,29,500)
ಬೆಳ್ಳಿ ಕೆ.ಜಿಗೆ	1,57,000 (1,64,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹409-618
ದ್ವಿತಳಿ (ಬಿ.ವಿ)	₹500-820

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೀಪಾವಳಿ ಹಬ್ಬದ ಅಂಗವಾಗಿ ದೇಶದ ಷೇರುಪೇಟೆಯಲ್ಲಿ ಮಂಗಳವಾರ ನಡೆದ ಮುಹೂರ್ತ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡಿವೆ.

ಮಂಗಳವಾರ ಮಧ್ಯಾಹ್ನ 1.45ರಿಂದ 2.45ರವರೆಗೆ ಈ ವಹಿವಾಟು ನಡೆಯಿತು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 62 ಅಂಶ ಏರಿಕೆಯಾಗಿ, 84,426 ಅಂಶಕ್ಕೆ ವಹಿವಾಟು ಕೊನೆಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 25 ಅಂಶ ಹೆಚ್ಚಳವಾಗಿ, 25,868ಕ್ಕೆ ಅಂತ್ಯಗೊಂಡಿತು.

ರೂಪಾಯಿ ಮೌಲ್ಯ ಕುಸಿತ ತಡೆಯಲು 7.7 ಬಿಲಿಯನ್ ಡಾಲರ್ ಮಾರಾಟ

ಮುಂಬೈ (ಪಿಟಿಐ): ವಿನಿಮಯ ದರದ ಏರಿಳಿತವನ್ನು ನಿಯಂತ್ರಿಸಲು ಹಾಗೂ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತವನ್ನು ತಡೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಆಗಸ್ಟ್ ತಿಂಗಳಿನಲ್ಲಿ 7.7 ಬಿಲಿಯನ್ ಡಾಲರ್‌ಗಳನ್ನು ಮಾರಾಟ ಮಾಡಿದೆ. ಇದು ರೂಪಾಯಿ ಲೆಕ್ಕದಲ್ಲಿ ₹67,751 ಕೋಟಿ ಆಗುತ್ತದೆ.

ಈ ಡಾಲರ್ ಮಾರಾಟವು ಜುಲೈ ತಿಂಗಳಿಗೆ ಹೋಲಿಸಿದರೆ ಮೂರು ಪಟ್ಟು ಅಧಿಕ ಎಂದು ಆರ್‌ಬಿಐ ಬುಲೆಟಿನ್ ತಿಳಿಸಿದೆ. ಜುಲೈ ಮತ್ತು ಆಗಸ್ಟ್‌ನಲ್ಲಿ ಆರ್‌ಬಿಐ ಡಾಲರ್‌ಗಳನ್ನು ಖರೀದಿಸಿಲ್ಲ ಎಂದು ಸಹ ತಿಳಿಸಿದೆ. ಆಗಸ್ಟ್‌ನಲ್ಲಿ, ಡಾಲರ್ ಎದುರು ರೂಪಾಯಿ ಮೌಲ್ಯ ಶೇ 1.6ರಷ್ಟು ಕುಸಿದಿತ್ತು.

ಹೆಚ್ಚಿದ ವ್ಯಾಪಾರ ಬಿಕ್ಕಟ್ಟು, ಜಾಗತಿಕ ಅನಿಶ್ಚಿತತೆ ಮತ್ತು ವಿದೇಶಿ ಬಂಡವಾಳದ ನಿರಂತರ ಹೊರಹರಿವಿನಿಂದ ರೂಪಾಯಿ ಮೌಲ್ಯ ಇಳಿಕೆಯಾಗಿದೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರಾಜೇಂದ್ರ ಕುಮಾರ್, ಬೆಂಗಳೂರು

• **ಪ್ರಶ್ನೆ: ನಾನು ಬ್ಯಾಂಕ್ ಒಂದರಲ್ಲಿ ಐದು ವರ್ಷಗಳ ಅವಧಿಗೆ ಚಕ್ರ ಬಡ್ಡಿಯ ಲಾಭ ನೀಡುವ ನಿಶ್ಚಿತ ಠೇವಣಿ (ಕ್ಯೂಮ್ಯುಲೇಟಿವ್ ಫಿಕ್ಸೆಡ್ ಡೆಪಾಸಿಟ್) ಮಾಡಿದ್ದೇನೆ. ಇದರ ಬಡ್ಡಿ ಮೊತ್ತವನ್ನು ಐದು ವರ್ಷಗಳ ನಂತರ ಮಾತ್ರ ಪಾವತಿಸಲಾಗುತ್ತದೆ. ಆದರೆ ಪ್ರತಿ ವರ್ಷ ಇದರ ಮೊತ್ತ ಅಸಲಿಗೆ ಸೇರಿಸಲಾಗುತ್ತದೆ. ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುವಾಗ, ನಾನು ಪ್ರತಿ ವರ್ಷ ಸಂಚಿತವಾದ ಬಡ್ಡಿಯನ್ನು ವರದಿ ಮಾಡಬೇಕೇ? ಅಥವಾ ಮೆಚ್ಯುರಿಟಿಯ ಸಮಯದಲ್ಲಿ ಸಂಪೂರ್ಣ ಬಡ್ಡಿಯನ್ನು ಒಟ್ಟಾಗಿ ವರದಿ ಮಾಡಬೇಕೇ? ತೆರಿಗೆ ಕಡಿತ ತಡೆಯಲು ಯಾವುದಾದರೂ ಅವಕಾಶ ಇದೆಯೇ?**

ಉತ್ತರ: ನಿಮಗೆ ಸಿಗುವ ಬಡ್ಡಿ ಆದಾಯ 'ಇತರ ಆದಾಯ' ವರ್ಗದಲ್ಲಿ ತೆರಿಗೆಗೊಳಪಡುತ್ತದೆ. ತೆರಿಗೆ ಕಾಯ್ದೆಯ ಸೆಕ್ಷನ್ 145 ಪ್ರಕಾರ, ತೆರಿಗೆದಾರರು ನಗದು ಪದ್ಧತಿ ಅಥವಾ ಮರ್ಕಂಟೈಲ್ ಪದ್ಧತಿ ಎಂಬ ಎರಡು ವಿಧಾನಗಳಲ್ಲಿ ಯಾವುದನ್ನಾದರೂ ಅನುಸರಿಸಬಹುದು. ಆದರೆ ನೀವು ಮಾಡಿಕೊಂಡಿರುವಂತಹ ಚಕ್ರ ಬಡ್ಡಿಯ ಲಾಭ ನೀಡುವ ನಿಶ್ಚಿತ ಠೇವಣಿಯಲ್ಲಿ ಬಡ್ಡಿ ಮೊತ್ತವನ್ನು ಪ್ರತಿ ವರ್ಷ ಸಂಚಯಿಸಿ ಮೂಲಧನಕ್ಕೆ ಸೇರಿಸಲಾಗುತ್ತದೆ. ಅಂದರೆ, ಬಡ್ಡಿ ಪ್ರತಿ ವರ್ಷ ವಾಸ್ತವವಾಗಿ ನಿಮಗೆ ಪಾವತಿ-ಸುತ್ತಿಲ್ಲವಾದರೂ ನಿಮ್ಮ ನಿಶ್ಚಿತ ಠೇವಣಿ (ಎಫ್.ಡಿ) ಖಾತೆಗೆ ಜಮಾ ಮಾಡಿ ಮುಂದಿನ ವರ್ಷಕ್ಕೆ ಅದನ್ನು ಅಸಲು ಎಂದು ಪರಿಗಣಿಸಲಾಗುತ್ತದೆ.

ಸಾಮಾನ್ಯವಾಗಿ ಬ್ಯಾಂಕ್‌ಗಳು ಮರ್ಕಂಟೈಲ್ ಪದ್ಧತಿ ಅನುಸರಿಸಿ ಅವರ ಲೆಕ್ಕ ಪತ್ರಗಳನ್ನು ನಿರ್ವಹಿಸಬೇಕಾ-ಗುತ್ತದೆ. ಹೀಗಾಗಿ ಬಡ್ಡಿಯನ್ನು ಪ್ರತಿ ವರ್ಷಕ್ಕೆ ಲೆಕ್ಕ ಹಾಕಿ, ಅಗತ್ಯವಿದ್ದಲ್ಲಿ ತೆರಿಗೆ ಕಟಾಯಿಸುತ್ತವೆ. ಇದರ ಮಾಹಿತಿ ನಿಮ್ಮ ವಾರ್ಷಿಕ ಮಾಹಿತಿಪತ್ರ (ಎಐಎಸ್) ಮತ್ತು ಫಾರ್ಮ್ 26ಎ ಎಸ್‌ನಲ್ಲಿ ಪ್ರತಿ ವರ್ಷ ದಾಖಲಾಗುತ್ತದೆ. ನೀವು ಬಡ್ಡಿಯನ್ನು ಐದನೆಯ ವರ್ಷ ಒಟ್ಟಾರೆ ವರದಿ ಮಾಡಿದರೆ, ಈ ದಾಖಲೆಗಳೊಂದಿಗೆ ತಾಳೆ ಆಗಲಾರದು ಮತ್ತು ತೆರಿಗೆ ಕಡಿತ ಮಾಡಿದ ಮೊತ್ತ ತಡವಾಗಿ ಉಪಯೋಗಿಸಲು ಸಾಧ್ಯ-ವಾಗಲಾರದು.

ಹೀಗಾಗಿ, ಎರಡೂ ವಿಧಾನಗಳು (ನಗದು ಅಥವಾ ಮರ್ಕಂಟೈಲ್) ಕಾನೂನಾತ್ಮಕವಾಗಿ ಮಾನ್ಯವಾದರೂ, ಪ್ರತಿ ವರ್ಷ ಸಂಚಿತ ಬಡ್ಡಿಯನ್ನು ವರದಿ ಮಾಡುವುದು ಸೂಕ್ತವಾಗಿದೆ. ಇದರಿಂದ ಬ್ಯಾಂಕ್ ದಾಖಲೆಗಳೊಂದಿಗೆ ಹೊಂದಾಣಿಕೆ ಆಗುತ್ತದೆ ಮತ್ತು ತೆರಿಗೆ ಪರಿಶೀಲನೆ ವೇಳೆ ತೊಂದರೆ ತಪ್ಪುತ್ತದೆ. ಕೊನೆಯ ವರ್ಷದಲ್ಲಿ ಕೇವಲ ನಿವ್ವಳ ಬಡ್ಡಿ ಮೊತ್ತದ ವಾಸ್ತವ ಸ್ವೀಕೃತಿ ಮಾತ್ರ ಸಂಭವಿಸುತ್ತದೆ. ಆದರೆ ತೆರಿಗೆ ದೃಷ್ಟಿಯಿಂದ ಬಡ್ಡಿ ಪ್ರತಿ ವರ್ಷವೇ ಘೋಷಿಸುವುದು ಒಳಿತು. ಇನ್ನು ತೆರಿಗೆ ಕಡಿತ ನಿವಾರಿಸಲು, ನಿಮ್ಮ ಒಟ್ಟಾರೆ ಆದಾಯ ತೆರಿಗೆಗೊಳಪಡದಿದ್ದರೆ ಹಾಗೂ ನೀವು ಫಾರಂ 15 ಜಿ/ಎಚ್ ಅನ್ನು ಸಮರ್ಪಕವಾಗಿ ಭರಿಸಿ ಬ್ಯಾಂಕಿಗೆ ಕೊಟ್ಟರೆ, ತೆರಿಗೆ ಕಡಿತವಾಗುವುದನ್ನು ನಿವಾರಿಸಬಹುದು.

ಶಂಕರ್ ಎಸ್., ತುಮಕೂರು

• **ಪ್ರಶ್ನೆ: ನಾನು ನಿವೃತ್ತ ಬ್ಯಾಂಕ್ ಉದ್ಯೋಗಿ. ನನಗೆ ಸಿಗುವ ಪೆನ್ಷನ್ ಹಾಗೂ ನನ್ನ ನಿವೃತ್ತಿಯ ಸಮಯದಲ್ಲಿ ಸಿಕ್ಕ ಮೊತ್ತವನ್ನು ಕಳೆದ ಕೆಲವು ವರ್ಷಗಳಿಂದ ನಾನು ಹೂಡಿಕೆ ಮಾಡಿದ್ದೇನೆ. ಕಳೆದ ಕೆಲವು ವರ್ಷಗಳ ಹಿಂದೆ ಬ್ಯಾಂಕ್‌ಗಳು ವಿಲೀನವಾದ ಕಾರಣ ನನ್ನ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಇತ್ಯಾದಿ ಕಂಪನಿಯ ದಾಖಲೆಯಲ್ಲಿ ಸರಿಯಾಗಿ ನೋಂದಣಿ ಆಗದೆ, ಕೆಲವು ಬಾರಿ ಡಿವಿಡೆಂಡ್ ನನಗೆ ಬಂದಿಲ್ಲ. ಈ ಅವಧಿಯಲ್ಲಿ ಷೇರು ಹೊಂದಿದ ದಾಖಲೆ ನನ್ನಲ್ಲಿ ಇದೆ. ನಾನು ಇದನ್ನು ತಿಳಿದುಕೊಳ್ಳಲು ಏನು ಮಾಡಬೇಕು. ಹಾಗೂ ಯಾವುದಾದರೂ ಡಿವಿಡೆಂಡ್ ಮೊತ್ತ ನನಗೆ ಬರುವುದಿದ್ದರೆ ಯಾವ ರೀತಿ ನಗದೀಕರಿಸಬಹುದು.**

ಉತ್ತರ: ನೀವು ಪ್ರಶ್ನೆಯಲ್ಲಿ ತಿಳಿಸಿರುವಂತೆ ನಿಮ್ಮ ಬ್ಯಾಂಕಿನ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಸರಿಯಾಗಿ ನೋಂದಣಿ ಆಗದೆ ಇರುವ ಕಾರಣ ನಿಮ್ಮ ಖಾತೆಗೆ ಡಿವಿಡೆಂಡ್ ಜಮಾ ಆಗಿಲ್ಲ ಎನ್ನುವ ಕಾರಣ ಹೇಳಿದ್ದೀರಿ. ಪ್ರಸ್ತುತ ನಿಮ್ಮ ಬಳಿ ಇರುವ ಮಾಹಿತಿಯಂತೆ, ಆಯಾ ವರ್ಷಗಳಲ್ಲಿ ಡಿವಿಡೆಂಡ್ ಘೋಷಿಸಿದ ಸಂದರ್ಭದಲ್ಲಿ ನೀವು ಷೇರು ಹೊಂದಿರುವ ಮಾಹಿತಿಯನ್ನು ನಿಮ್ಮ ಡಿಮ್ಯಾಟ್ ದಾಖಲೆಗಳಿಂದ ನಿಗದಿಪಡಿಸಿಕೊಳ್ಳಿ.

ನೀವು ಮೇಲಿನ ಹಂತದ ನಂತರ, ಮೊದಲು ಆಯಾ ಕಂಪನಿ ಅಥವಾ ಅದರ ಷೇರು ರಿಜಿಸ್ಟ್ರಾರ್ ಅವರನ್ನು ಸಂಪರ್ಕಿಸಿ. ಯಾವ ಯಾವ ವರ್ಷಗಳ ಡಿವಿಡೆಂಡ್ ನಿಮಗೆ ಪಾವತಿ ಆಗದೆ ಉಳಿದಿವೆ ಹಾಗೂ ಇದು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರಕ್ಕೆ (ಐಇಪಿಎಫ್) ವರ್ಗಾಯಿಸಲ್ಪ-ಟ್ಟಿದೆ ಎಂಬ ವಿವರ ಪಡೆಯಬೇಕು. ಸಾಮಾನ್ಯವಾಗಿ ಡಿವಿಡೆಂಡ್ ಘೋಷಣೆ ಆಗಿ 7 ವರ್ಷದೊಳಗೆ ಷೇರುದಾರ ಡಿವಿಡೆಂಡ್ ಜಮಾ ಪಡೆಯದಿದ್ದರೆ, ಅಂತಹ ಮೊತ್ತವನ್ನು ಐಇಪಿಎಫ್‌ಗೆ ಕಾನೂನು ಪ್ರಕಾರ ವರ್ಗಾಯಿಸಬೇಕಾಗುತ್ತದೆ. ಈ ಮಾಹಿತಿ ಪಡೆದು ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ (www.iepf.gov.in) ಲಭ್ಯವಿರುವ ಫಾರಂ -5 ನ್ನು ಆನ್‌ಲೈನ್‌ನಲ್ಲಿ ಭರ್ತಿ ಮಾಡಿ ಅಪ್‌ಲೋಡ್ ಮಾಡಬೇಕು.

ನಂತರ ಅದರ ಮುದ್ರಿತ ಪ್ರತಿ ಸಹಿತ ಅಗತ್ಯ ದಾಖಲೆಗಳೊಂದಿಗೆ ಸಹಿ ಮಾಡಿ ಕಂಪನಿಯ ನೋಂದಾಯಿತ ಕಚೇರಿಯ ಸಂಬಂಧಿತ ಅಧಿಕಾರಿಗಳಿಗೆ ಸಲ್ಲಿಸಬೇಕು. ಇದರಂತೆ, ಕಂಪನಿಯೂ ತನ್ನ ಪ್ರಕಾರ ಪಾವತಿಯಾಗದೆ ಇರುವ ಡಿವಿಡೆಂಡ್ ಅದಾಗಲೇ ಪ್ರಾಧಿಕಾರಕ್ಕೆ ವರ್ಗಾವಣೆ ಆಗಿದ್ದರೆ, ತಮ್ಮ ದೃಢೀಕರಣದೊಂದಿಗೆ, ಪ್ರಾಧಿಕಾರಕ್ಕೆ ಕಳುಹಿಸುತ್ತಾರೆ. ಅಂತಿಮವಾಗಿ, ಪರಿಶೀಲನೆ ಪೂರ್ಣಗೊಂಡ ಬಳಿಕ ಬಾಕಿ ಇರುವ ಡಿವಿಡೆಂಡ್ ಅಥವಾ ಷೇರುಗಳನ್ನು ಹಕ್ಕುದಾರರ ಹೆಸರಿಗೆ ವರ್ಗಾಯಿಸಲಾಗುತ್ತದೆ. ಒಂದು ವೇಳೆ, 7 ವರ್ಷ ಇನ್ನೂ ಆಗದೆ ಯಾವುದೇ ಮೊತ್ತ ಪ್ರಾಧಿಕಾರಕ್ಕೆ ವರ್ಗಾಯಿಸಲ್ಪಟ್ಟರದಿದ್ದರೆ, ಕಂಪನಿಯೇ ತನ್ನ ದಾಖಲೆಗಳನ್ನು ಪರಿಶೀಲಿಸಿ ಡಿವಿಡೆಂಡ್ ಪಾವತಿಸುತ್ತದೆ. ಈ ಬಗ್ಗೆ ಹೆಚ್ಚಿನ ನೆರವನ್ನು ನಿಮ್ಮ ಷೇರು ಬ್ರೋಕರ್ ಮೂಲಕವೂ ಪಡೆಯಬಹುದು.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಬಲಿಪಾಡ್ಯಮಿ: ಬಲಿಯಾಗಲಿ ಅಹಂಕಾರ

• ಎಸ್. ಸೂರ್ಯಪ್ರಕಾಶ ಪಂಡಿತ್

ದೀಪಾವಳಿ ಎಂಬ ಸಾಲುಹಬ್ಬದ ಕೊನೆಯ ದಿನವನ್ನು ಬಲಿಪಾಡ್ಯಮಿ ಎಂದು ಆಚರಿಸಲಾಗುತ್ತದೆ.

ನಾಡಿನ ಹಲವು ಕಡೆ ಬಲೀಂದ್ರ ಚಕ್ರವರ್ತಿಯ ಪೂಜೆಯನ್ನು ತುಂಬ ವಿಶಿಷ್ಟವಾಗಿ ಮಾಡಲಾಗುತ್ತದೆ. ಬಲೀಂದ್ರನ 'ಕೋಟೆ'ಯನ್ನು ಕಟ್ಟಿ, ಅವನನ್ನು ಆಹ್ವಾನಿಸಿ, ಅವನ ರಾಜ್ಯವನ್ನೆಲ್ಲ ಅವನಿಗೆ ತೋರಿಸಿ, ರಾಜ್ಯದ ಸಮೃದ್ಧಿಯ ಬಗ್ಗೆ ವರದಿಯನ್ನು ಒಪ್ಪಿಸಿ, ಅವನಿಗೆ ಆದರಾತಿಥ್ಯಗಳನ್ನು ನಿವೇದಿಸಿ, ಕೊನೆಯಲ್ಲಿ ಜಯಕಾರಗಳೊಂದಿಗೆ ಅವನನ್ನು ಮತ್ತೆ ಅವನ ತಾಣಕ್ಕೆ ಕಳುಹಿಸಿಕೊಡಲಾಗುತ್ತದೆ.



ಗೋಮಯದಿಂದ ಬಲೀಂದ್ರನ ಕೋಟೆಯನ್ನು ಕಟ್ಟುವುದು ಸಂಪ್ರದಾಯ. ಹೀಗೆ ನಿರ್ಮಿಸಿದ ಕೋಟೆಯನ್ನು ತೋಟ-ಹೊಲಗಳಿಂದ ಕಿತ್ತುತಂದ ಹುಚ್ಚೆಳ್ಳಿನ ಹೂವು ಅಥವಾ ಚಂಡುಹೂವಿನಿಂದ ಅಲಂಕರಿಸಲಾಗುತ್ತದೆ. ರಾಗಿ, ಜೋಳ, ನವಣೆ, ಸಜ್ಜೆ ಮುಂತಾದ ಬೆಳೆಗಳ ತೆನೆಗಳನ್ನೂ ಅಲ್ಲಿ ನೆಡಲಾಗುತ್ತದೆ. ಇದು ಬಲೀಂದ್ರನ ನಾಡಿನ ಸಮೃದ್ಧಿಗೆ ಸಂಕೇತ.

ನಮ್ಮ ಹಬ್ಬಗಳಿಗೂ ಪೌರಾಣಿಕ ಪ್ರತಿಮೆಗಳಿಗೂ ಅವಿನಾಭಾವ ಸಂಬಂಧ ಇರುವುದು ನಮಗೆ ಗೊತ್ತಿದೆ. ಶಾಶ್ವ-ತವಾಗಿರುವ ಜೀವನಸತ್ಯಗಳನ್ನು ನಮ್ಮ ಹಬ್ಬಗಳ ಕಲಾಪಗಳು ಸಾಂಕೇತಿಕವಾಗಿ ಪ್ರತಿನಿಧಿಸುತ್ತಿರುತ್ತವೆ. ಬಲೀಂದ್ರನ ಕಥೆ ನಮಗೆಲ್ಲರಿಗೂ ತಿಳಿದೇ ಇದೆ. ಈ ಕಥೆ ಎಂದೋ ನಡೆದುಹೋದ ಕಥೆಯಲ್ಲ; ಅದು ಇಂದಿಗೂ ನಡೆಯುತ್ತಲೇ ಇರುವ ಕಥೆ. ಈ ಕಥೆಯ ಹಿಂದಿರುವ 'ಮಿಥ್' ನಮಗೆ ಅರ್ಥವಾದರೆ ಮಾತ್ರವೇ ಅದರ ಸ್ವಾರಸ್ಯವೂ ಶಕ್ತಿಯೂ ನಮಗೆ ಗೊತ್ತಾಗುವುದು.

ಬಲಿ ಚಕ್ರವರ್ತಿ ಎಂದು ಇದ್ದ? ಎಂದೋ ಇದ್ದವನು ಇಂದಿಗೂ ಇದ್ದಾನೆ ಎಂದರೆ ಏನು ಇದರ ಮರ್ಮ? ಹೀಗೆ ಕಥೆಯನ್ನು ಬಿಡಿಸುತ್ತಹೋದರೆ ಅದರ ಶಾಶ್ವತಸತ್ಯಗಳು ಪ್ರಕಟವಾಗುತ್ತಹೋಗುತ್ತವೆ.

ಏಳು ಚಿರಂಜೀವಿಗಳಲ್ಲಿ ಬಲಿಯೂ ಒಬ್ಬ. ಅವನೊಬ್ಬ ರಾಕ್ಷಸರಾಜ. ಇಂದ್ರನ ಪದವಿಯನ್ನು ಕಿತ್ತುಕೊಂಡ ಅವನು ಚಕ್ರವರ್ತಿಯಾಗಿ ಮೆರೆಯತೊಡಗಿದ; ಅಹಂಕಾರವೂ ಅವನ ಜೊತೆಗೂಡಿತು; ಅವನ ತಲೆ ಕೆಟ್ಟಿತು! ಕೇಳಿದವರೆ-ಲ್ಲರ ಬಯಕೆಗಳೆಲ್ಲವನ್ನೂ ಪೂರೈಸಬಲ್ಲೆ ಎಂಬ ಗರ್ವವೂ ಅವನಲ್ಲಿ ನೆಲೆಗೊಂಡಿತು. ಇಂಥವನನ್ನು ನಿಗ್ರಹಿಸುವುದು ವಿಷ್ಣುವಿಗೆ ಅನಿವಾರ್ಯವಾಯಿತು. ಅವನು ವಾಮನನಾಗಿ ಅವತರಿಸಿ ಬಲಿಯನ್ನು ಮೂರು ಹೆಜ್ಜೆಗಳಷ್ಟು ನೆಲೆಯ ದಾನವನ್ನು ಕೇಳಿದ. 'ಅಷ್ಟೇ ತಾನೆ' ಎಂದುಕೊಂಡ ಬಲಿಯ ಅರಿವಿನ ಅಳತೆಯನ್ನು ಮೀರಿ ವಾಮನನು ತ್ರಿವಿಕ್ರಮನಾಗಿ ಬೆಳೆದ; ಒಂದು ಹೆಜ್ಜೆಯಿಂದ ಇಡಿಯ ಭೂಮಂಡಲವನ್ನೂ, ಮತ್ತೊಂದು ಹೆಜ್ಜೆಯಿಂದ ಇಡಿಯ ಆಕಾಶವನ್ನೂ ಅಳೆದ; ಮೂರನೆಯ ಹೆಜ್ಜೆಗೆ ಬಲಿಯ ತಲೆಯೇ ನೆಲೆಯಾಯಿತು. 'ತಲೆ' ಎಂಬುದು ಅಹಂಕಾರದ ಚಿಹ್ನೆ. ಅದನ್ನು ವಿಷ್ಣು ಮೆಟ್ಟಿದ ಎಂಬುದು ಇಲ್ಲಿರುವ ಸಂಕೇತ. 'ತಲೆ' ನಮ್ಮ ಬುದ್ಧಿಶಕ್ತಿಗೂ ಸಂಕೇತ ತಾನೆ?

ಇಂದು ನಮ್ಮಲ್ಲೂ ಅಹಂಕಾರ ತುಂಬಿಕೊಂಡಿದೆ; ತಲೆಯೂ ಕೆಟ್ಟಿದೆ. ನಮ್ಮ ಅಹಂಕಾರದ ದಮನಕ್ಕೆ ತಕ್ಕ ಔಷಧವೂ ಬೇಕಿದೆ. ಈ ಔಷಧದ ದಾರಿಯನ್ನು ಬಲಿಪಾಡ್ಯಮಿಯ ಆಚರಣೆ ಸಂಕೇತಿಸುತ್ತಿದೆ. ಎಲ್ಲೆಲ್ಲೂ ಎಲ್ಲ ಕಾಲದಲ್ಲೂ ಇರುವ ತತ್ತ್ವದ ಕಾಣ್ಕೆ ನಮಗೆ ಒದಗಬೇಕಿದೆ; ಅದರ ಅನುಸಂಧಾನದಲ್ಲಿಯೇ ನಮ್ಮ ಜೀವನದ ನೆಮ್ಮದಿ ಅಡಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

CAREER OPPORTUNITY, part-time there is no age limit. WA: 7019246661.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

General

ಗದಗ,ಹುಬ್ಬಳ್ಳಿ ದಲ್ಲಿ ವಾಸಿಸಲು ಸೂಕ್ತವಾದ ಕೃಷಿ ಭೂಮಿಯನ್ನು ಮಾರಾಟ ಮಾಡಲು/ JV ಮಾಡಲು ಸಂಪರ್ಕಿಸಿ WhatsApp: 8296752815

ವೈಯಕ್ತಿಕ

Change of Name

ಹೆಸರು ಬದಲಾವಣೆ
ಜಿ.ಆರ್. ಜ್ಯೋತಿ ಉ: ಜ್ಯೋತಿ ಕುಮಾರ್ ಕೋಂ. ಬಿ.ಕೆ. ಕುಮಾರ್ ನಂ. 90, 3ನೇ ಮೇನ್, 3ನೇ ಕ್ರಾಸ್, 4ನೇ ಬ್ಲಾಕ್, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಆದ ನಾನು ನನ್ನ ಹೆಸರನ್ನು ಜಿ.ಆರ್. ಜ್ಯೋತಿ ಇಂದ ಜ್ಯೋತಿ ಕುಮಾರ್ ಎಂದು ಕೆ.ಎಸ್. ಚಂದ್ರಶೇಖರ್, ವಕೀಲರು, ನೋಟರಿ ಬನಶಂಕರಿ, ಬೆಂಗಳೂರು ರವರ ಸಮಕ್ಷಮ ಬದಲಾಯಿಸಿ ಕೊಂಡಿದ್ದು, ಜಿ.ಆರ್. ಜ್ಯೋತಿ ಮತ್ತು ಜ್ಯೋತಿ ಕುಮಾರ್ ಎರಡೂ ಒಂದೇ ಎಂದು ಪ್ರಮಾಣೀಕರಿಸುತ್ತೇನೆ.
ಸಹಿ/- ಜ್ಯೋತಿ ಕುಮಾರ್

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರವಾಸ

Travel Agencies

4 ಜ್ಯೋತಿರ್ಲಿಂಗದೊಂದಿಗೆ ಗುಜರಾತ್ ಹಾಗೂ ಮಧ್ಯಪ್ರದೇಶ ಪ್ರವಾಸ ನಾಗೇಶ್ವರ ಸೋಮನಾಥ್ ಓಂಕಾರೇಶ್ವರ್ ಮಹಾಕಾಳೇಶ್ವರ ನಿಷ್ಕಳಂಕ ಮಹಾದೇವ ಗಂಗೇಶ್ವರ ಮಹಾದೇವ್ ಇತರೆ ಸ್ಥಳಗಳು: 9480843945/ 9019462508

Travel

ತಾ 25.10.2025 ರಿಂದ 6 ದಿನಗಳ ರಾಮೇಶ್ವರ, ಕನ್ಯಾಕುಮಾರಿ, ತ್ರಿವೇಂಡ್ರಂ, ಅಲಪಿಬೋಟಿಂಗ್, ಗುರುವಾಯೂರು, ಶ್ರೀರಂಗ. ತಾ 31.10.2025 ರಿಂದ 5 ದಿನಗಳ ಕಾಶಿ, ಅಯೋಧ್ಯೆ, ಗಯಾ, ಪ್ರಯಾಗರಾಜ್, ಬುದ್ಧಗಯಾ.ತಾ 01.11.2025 ರಿಂದ 4 ದಿನಗಳ ಧರ್ಮಸ್ಥಳ, ಮುರಡೇಶ್ವರ, ಸಿಗಂದೂರು, ಕೊಲ್ಲೂರು, ಹೊರನಾಡು, ಶೃಂಗೇರಿ.ತಾ 16.11.2025 ರಿಂದ 8 ದಿನಗಳ ಓಂಕಾರೇಶ್ವರ, ಶಿರಡಿ, ಉಜ್ಜಯಿನಿ, ಭೀಮಾಶಂಕರ, ತುಳಜಾಪುರ, ಎಲ್ಲೋರ.ಶ್ರೀ ಗುರುರಾಜ ಟ್ರಾವೆಲ್ಸ್. ಕೋಲಾರ- 9611082432, 9449652555, 8123099913

ಹೆಸರಾಂತ ಏಷ್ಯನ್ ಟ್ರಾವೆಲ್ಸ್ ಏಜೆನ್ಸಿ ಇಂದ ವಿಮಾನ/ಎಸಿ ಬಸ್ಸಿನಲ್ಲಿ 05.11.2025 ದ್ವಾರಕಾ ಸೋಮನಾಥ್ ನಾಗೇಶ್ವರ ಮಹಾಕಾಳೇಶ್ವರ ಓಂಕಾರೇಶ್ವರ, 14.11.2025 ಕಾಶಿ,ಅಯೋಧ್ಯ ಅಲಹಾಬಾದ್ ಬುದ್ಧಗಯಾ, 22.12.2025 ರಾಮೇಶ್ವರ ಮಧುರೈ,ಕನ್ಯಾಕುಮಾರಿ ನವಗ್ರಹಗಳು, 25.12.2025 ಶಿರಡಿ ಪಂಡರಾಪುರದ ತ್ರ್ಯಂಬಕೇಶ್ವರ ಕೊಲ್ಹಾಪುರ. 26574131 8431888138 8317446683 9686708171

ವೈದ್ಯರ ಸಮಾನತೆ: ವಿಸ್ತೃತ ಪೀಠಕ್ಕೆ

ನವದೆಹಲಿ: ಎಂಬಿಬಿಎಸ್ ಹಾಗೂ ಆಯುಷ್ ಪದ್ಧತಿ ವೈದ್ಯರಿಗೆ ನೀಡುವ ವೇತನ, ಭತ್ಯೆಗಳು ಹಾಗೂ ನಿವೃತ್ತಿ ವಯಸ್ಸು ಸೇರಿದಂತೆ ವಿವಿಧ ವಿಚಾರಗಳಿಗೆ ಸಂಬಂಧಿಸಿ ಸಮಾನತೆ ಇರಬೇಕು ಎಂಬ ಬಗ್ಗೆ ವಿಸ್ತೃತ ಪೀಠವೇ ಸ್ಪಷ್ಟ ಆದೇಶ ಹೊರಡಿಸುವುದು ಸೂಕ್ತ ಎಂದು ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠ ಹೇಳಿದೆ.

ಎರಡೂ ಪದ್ಧತಿಯ ವೈದ್ಯರು ಹೊಂದಿರುವ ಶೈಕ್ಷಣಿಕ ಅರ್ಹತೆ, ಅವರು ಅನುಸರಿಸುವ ಚಿಕಿತ್ಸಾ ವಿಧಾನ, ಕಾರ್ಯವೈಖರಿಯಂತಹ ಅಂಶಗಳ ಆಧಾರದ ಮೇಲೆ ಅವರಿಗೆ ನೀಡುವ ಸೌಲಭ್ಯಗಳಲ್ಲಿ ಸಮಾನತೆ ಇರಬೇಕೇ ಬೇಡವೇ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಹೀಗಾಗಿ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ಶಿಫಾರಸು ಮಾಡಲಾಗುವುದು ಎಂದು ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ಹಾಗೂ ನ್ಯಾಯಮೂರ್ತಿ ಕೆ.ವಿನೋದಚಂದ್ರನ್ ಅವರು ಇದ್ದ ಪೀಠ ಹೇಳಿದೆ.

ಈ ವಿಚಾರವಾಗಿ ರಾಜಸ್ಥಾನ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಗಳ ವಿಚಾರಣೆ ನಡೆಸಿದ ಪೀಠವು, ಈ ಎರಡೂ ವೈದ್ಯಕೀಯ ಪದ್ಧತಿಗಳ ಸೇವಾ ನಿಯಮಗಳಿಗೆ ಸಂಬಂಧಿಸಿ ಈ ಹಿಂದೆ ಹಲವು ತೀರ್ಪುಗಳನ್ನು ನೀಡಿರುವ ಸುಪ್ರೀಂ ಕೋರ್ಟ್, ಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ ಎಂದಿದೆ.

ನಿಧನ ವಾರ್ತೆ

ಹಿಂದೂಸ್ತಾನಿ ಗಾಯಕ ಸಂಜೀವ ಜಹಾಗೀರದಾರ

ವಿಜಯಪುರ: ಹಿಂದುಸ್ಥಾನಿ ಗಾಯಕ ಸಂಜೀವ ಜಹಾಗೀರದಾರ (65) ಸೋಮವಾರ ಮಹಾರಾಷ್ಟ್ರದ ಪುಣೆಯಲ್ಲಿ ನಿಧನರಾದರು. ಅವರಿಗೆ ಪತ್ನಿ, ಪುತ್ರ ಮತ್ತು ಪುತ್ರಿ ಇದ್ದಾರೆ. ಪುಣೆಯಲ್ಲೇ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ ನೆರವೇರಿತು.

ಅವರು ಅವಿಭಜಿತ ವಿಜಯಪುರ ಜಿಲ್ಲೆಯ ಇಳಕಲ್ ಸಮೀಪದ ಬಲಕುಂದಿ ಗ್ರಾಮದವರು. ಅವರ ಮನೆಯಲ್ಲಿ ಪ್ರತಿ ಗುರುವಾರ ಭಜನೆ ಕಾರ್ಯಕ್ರಮ ನಡೆಯುತ್ತಿತ್ತು. ಹೀಗಾಗಿ ಅವರ ಮನೆತನಕ್ಕೆ ಭಜನಿ ಜಹಾಗೀರದಾರ ಹೆಸರು ಬಂತು.

ವಿಜಯಪುರದ ಸಂಗೀತ ಶಿಕ್ಷಕ ಕೇಶವರಾವ ಥಿಟೆ ಅವರ ಬಳಿ ಪ್ರಾಥಮಿಕ ಹಂತದ ಸಂಗೀತವನ್ನು ಕಲಿತರು.

ಶಿಕ್ಷಣ ಪೂರೈಸಿದ ಬಳಿಕ ಪಂಡಿತ ಭೀಮಸೇನ ಜೋಶಿ ಅವರ ಮನೆಯಲ್ಲಿ 12 ವರ್ಷ ಇದ್ದು, ಗುರುಶಿಷ್ಯ ಪರಂಪರೆ ಮುಂದುವರೆಸಿದರು. ದೇಶದ ವಿವಿಧೆಡೆ ಕಾರ್ಯಕ್ರಮ ನೀಡಿದ್ದರು.

ಸಂಕ್ಷಿಪ್ತ ಸುದ್ದಿ

ಸಿಡಿಲು ಬೆಟ್ಟ 3,108 ಮೆಟ್ಟಿಲು ಏರಿದ ಯದುವೀರ್

ಬೆಟ್ಟದಪುರ (ಮೈಸೂರು ಜಿಲ್ಲೆ): ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಮಂಗಳವಾರ ಇಲ್ಲಿನ ಸಿಡಿಲು (ಶಿಡ್ಲು) ಮಲ್ಲಿಕಾರ್ಜುನಸ್ವಾಮಿ ಬೆಟ್ಟವನ್ನು ಕಾಲ್ನಡಿಗೆಯಲ್ಲಿ ಏರಿ ದೇವರ ದರ್ಶನ ಪಡೆದರು.

3,108 ಮೆಟ್ಟಿಲುಗಳಿರುವ ಈ ಬೆಟ್ಟವನ್ನು ಅವರು ಇದೇ ಮೊದಲ ಬಾರಿಗೆ ಹತ್ತಿದರು. ಬೆಳಿಗ್ಗೆಯೇ ಬಂದ ಅವರು, 'ದೀಪಾವಳಿ ಅಮಾವಾಸ್ಯೆ' ನಿಮಿತ್ತ ಭಕ್ತರೊಂದಿಗೆ ಚುಮುಚುಮು ಚಳಿ, ಮಂಜಿನ ನಡುವೆ ಬೆಟ್ಟ ಏರಿ, ಇಳಿದರು.

ರಾಜಮುಡಿಯಂದೇ 'ಅಷ್ಟತೀರ್ಥೋತ್ಸವ'

ಮೇಲುಕೋಟೆ (ಮಂಡ್ಯ): ಇಲ್ಲಿನ ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ರಾಜಮುಡಿ ಉತ್ಸವ, ಅಷ್ಟತೀರ್ಥೋತ್ಸವ (ತೊಟ್ಟಿಲಮಡು ಜಾತ್ರೆ) ದಶಕಗಳ ಬಳಿಕ ಮೊದಲ ಬಾರಿಗೆ ಒಟ್ಟಿಗೇ ನಡೆಯಲಿದೆ.

ಅ.31ರಂದು ಈ ದೇಗುಲ ಅಪರೂಪದ ಕ್ಷಣಕ್ಕೆ ಸಾಕ್ಷಿಯಾಗಲಿದೆ.

ಪ್ರತಿ ವರ್ಷ ಅಷ್ಟ ತೀರ್ಥೋತ್ಸವಕ್ಕೂ ಮೊದಲು ರಾಜಮುಡಿ ಉತ್ಸವ ನಡೆಯುತ್ತಿತ್ತು. ನಂತರ 6ನೇ ತಿರುನಾಳ್ ದಿವಸ ಅಷ್ಟ ತೀರ್ಥೋತ್ಸವ ನೆರವೇರುತ್ತಿತ್ತು. ಈ ಬಾರಿ ವಿಶೇಷ ನಕ್ಷತ್ರ ಬಂದಿದ್ದು, ಕಾರಣದಿಂದ ಎರಡೂ ವಿಶೇಷ ಉತ್ಸವಗಳು ಒಂದೇ ದಿನ ಜರುಗಲಿದೆ.

ತೆರಿಗೆ ಪಾಲು: ಜಗಳ ಜೋರು

ಒಂದನೇ ಪುಟದಿಂದ...

'ಅಮಾವಾಸ್ಯೆ ಸೂರ್ಯ ಪ್ರಶ್ನಿಸಲಿ'

'ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಸಂಸದ ಪಿ.ಸಿ.ಮೋಹನ್ ಅವರು ಪ್ರಧಾನಿ ಅವರನ್ನು ಗಟ್ಟಿಯಾಗಿ ಕೇಳುತ್ತಿಲ್ಲ. ಬೆಂಗಳೂರು ದಕ್ಷಿಣ ಸಂಸದ ಅಮಾವಾಸ್ಯೆ ಸೂರ್ಯ ಕೂಡ ಪ್ರಶ್ನಿಸುತ್ತಿಲ್ಲ' ಎಂದು ಸಿದ್ದರಾಮಯ್ಯ ಹೇಳಿದರು.

'ಮೆಟ್ರೊ ಹಳದಿ ಮಾರ್ಗ ಉದ್ಘಾಟನೆಗೆ ಬಂದಿದ್ದ ಮೋದಿ ಅವರು ಕೆರೆ ಅಭಿವೃದ್ಧಿಗೆ ₹3 ಸಾವಿರ ಕೋಟಿ, ಹೊರ ವರ್ತುಲ ರಸ್ತೆಗೆ ₹3 ಸಾವಿರ ಕೋಟಿ ಹಾಗೂ 15ನೇ ಹಣಕಾಸು ಯೋಜನೆಯಡಿ ಕಡಿಮೆಯಾದ ₹5,495 ಕೋಟಿ ಸೇರಿ ₹11,495 ಕೋಟಿ ನೀಡುವ ಭರವಸೆ ನೀಡಿದರೂ ಈವರೆಗೂ ಒಂದು ಪೈಸೆಯನ್ನೂ ನೀಡಿಲ್ಲ. ಬೆಂಗಳೂರು ಅಭಿವೃದ್ಧಿಗೆ ನೆರವು ಕೋರಿದರೂ ಸ್ಪಂದಿಸಲಿಲ್ಲ' ಎಂದು ಸಿದ್ದರಾಮಯ್ಯ ಆರೋಪಿಸಿದರು.

'ತೆರಿಗೆ ಹಣ ಲೂಟಿ'

ಒಂದನೇ ಪುಟದಿಂದ...

'ಕರ್ನಾಟಕದ ಗ್ಯಾರಂಟಿ ಇಡೀ ದೇಶಕ್ಕೆ ಮಾದರಿ ಎಂದು ಕೊಚ್ಚಿಕೊಳ್ಳುತ್ತಾರೆ. ಇವರ ಮಾದರಿ ನೆಚ್ಚಿಕೊಂಡ ಹಿಮಾಚಲ ಪ್ರದೇಶದ ಕಾಂಗ್ರೆಸ್ ಸರ್ಕಾರ 'ಗ್ಯಾರಂಟಿ' ಜಾರಿ ಮಾಡಿತು. ಆದರೆ, ಅಲ್ಲಿನ ಮುಖ್ಯಮಂತ್ರಿ ಈಗ ದೇವಸ್ಥಾನಗಳಿಗೆ ಪತ್ರ ಬರೆದು ನೌಕರರಿಗೆ ಸಂಬಳ ಕೊಡಲು ಹಣವಿಲ್ಲ, ದೇವಸ್ಥಾನದ ಹಣ ಕೊಡಿ ಎಂದು ಬೇಡಿಕೊಳ್ಳುತ್ತಿದ್ದಾರೆ. ತೆಲಂಗಾಣದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಅನುಷ್ಠಾನ ಮಾಡಿತು. ಗ್ಯಾರಂಟಿಯಿಂದ ಹಣಕಾಸು ಸ್ಥಿತಿ ಹದಗೆಟ್ಟು ಹೋಗಿದೆ ಎಂದು ಅಲ್ಲಿನ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇದು ಕರ್ನಾಟಕ ಕಾಂಗ್ರೆಸ್‌ನ ಗ್ಯಾರಂಟಿ ಮಾದರಿ' ಎಂದು ವ್ಯಂಗ್ಯವಾಡಿದರು.

ನೀತಿ ಆಯೋಗದ ನಡೆಗೆ ಆಕ್ಷೇಪ • ಮಧ್ಯಪ್ರವೇಶಿಸಿದ ಪಿಎಂಒ • ಪರಿಸರ ಸಚಿವಾಲಯಕ್ಕೆ ಶಿಫಾರಸು

ಸಿಆರ್‌ಜೆಡ್ ಮಿತಿ ಕಡಿತ ಪ್ರಸ್ತಾವಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಮುಂಬೈ: ದೇಶದ 'ಕರಾವಳಿ ನಿಯಂತ್ರಣ ವಲಯ'ದ(ಸಿಆರ್‌ಜೆಡ್) ಮಿತಿಯನ್ನು ಕಡಿತಗೊಳಿಸುವ ನೀತಿ ಆಯೋಗದ ಪ್ರಸ್ತಾವಕ್ಕೆ ಪರಿಸರ ಪರ ಗುಂಪುಗಳಿಂದ ತೀವ್ರ ಆಕ್ಷೇಪ ವ್ಯಕ್ತವಾಗಿದೆ. ಇದರ ಬೆನ್ನಲ್ಲೇ, ಪ್ರಧಾನಮಂತ್ರಿ ಕಚೇರಿಯು (ಪಿಎಂಒ) ಮಧ್ಯಪ್ರವೇಶಿಸಿದ್ದು, ಪರಿಸರ ಪರ ಸಂಘಟನೆಗಳು ಎತ್ತಿರುವ ಆಕ್ಷೇಪಗಳ ಕುರಿತು ಗಮನ ಹರಿಸುವಂತೆ ಕೇಂದ್ರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯಕ್ಕೆ ಸೂಚಿಸಿದೆ.

ಈ ವಿಚಾರವನ್ನು ಸಚಿವಾಲಯದ ಸಿಆರ್‌ಜೆಡ್ ಪರಿಣಾಮ ಮೌಲ್ಯಮಾಪನ ವಿಭಾಗಕ್ಕೆ ಶಿಫಾರಸು ಮಾಡಿರುವುದು ಪಿಎಂಒ ಪೋರ್ಟಲ್‌ನಿಂದ ತಿಳಿದುಬರುತ್ತದೆ.

ಕರಾವಳಿ ನಿಯಂತ್ರಣ ವಲಯದ ಮಿತಿಯನ್ನು ಈಗಿನ 500 ಮೀಟರ್‌ನಿಂದ 200 ಮೀಟರ್‌ಗೆ ಕಡಿತ-ಗೊಳಿಸುವಂತೆ ನೀತಿ ಆಯೋಗ ಪ್ರಸ್ತಾವ ಮುಂದಿಟ್ಟಿದೆ. ಮುಂಬೈ ಮೂಲದ ಪರಿಸರ ಸಂರಕ್ಷಣೆಗೆ ಹೋರಾಡುವ ಸಂಘಟನೆಗಳಾದ 'ನ್ಯಾಟ್‌ಕನೆಕ್ಟ್ ಫೌಂಡೇಷನ್' ಹಾಗೂ 'ಸಾಗರ ಶಕ್ತಿ', ಈ ಪ್ರಸ್ತಾವಕ್ಕೆ ಭಾರಿ ವಿರೋಧ ವ್ಯಕ್ತಪಡಿಸಿವೆ.

'ನೀತಿ ಆಯೋಗದ ಈ ಶಿಫಾರಸು ದೇಶದ ಕರಾವಳಿಗಳ ಪರಿಸರಕ್ಕೆ ಮಾರಕ' ಎಂದು ಹೇಳಿರುವ ಈ ಸಂಘಟನೆಗಳು, ಈ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿ ಕೂಡಲೇ ಮಧ್ಯಪ್ರವೇಶಿಸಬೇಕು ಹಾಗೂ ಆಯೋಗದ ಶಿಫಾರಸನ್ನು ತಿರಸ್ಕರಿಸಬೇಕು ಎಂದು ಆಗ್ರಹಿಸಿವೆ.

'ಕರಾವಳಿ ನಿಯಂತ್ರಣ ವಲಯದ ಮಿತಿಯು ಸದ್ಯ 'ಹೈ ಟೈಡ್ ಲೈನ್'(ಎಚ್‌ಟಿಎಲ್)ನಿಂದ 500 ಮೀಟರ್ ಇದೆ. ಇದನ್ನು 200 ಮೀಟರ್‌ಗೆ ಕಡಿತಗೊಳಿಸಬೇಕು' ಎಂದು ನೀತಿ ಆಯೋಗದ ಸದಸ್ಯ ರಾಜೀವ್ ಗೌಬಾ ನೇತೃತ್ವದ ಉನ್ನತಾಧಿಕಾರ ಸಮಿತಿಯು ಸಲಹೆ ನೀಡಿತ್ತು.

'ಈಗ ಇರುವ ಸಿಆರ್‌ಜೆಡ್ ಮಿತಿಯು ಅಗತ್ಯಕ್ಕಿಂತ ಹೆಚ್ಚು ನಿರ್ಬಂಧ ಹೇರುತ್ತದೆ. ಸಣ್ಣ ಪ್ರಮಾಣದ ಪ್ರವಾಸೋದ್ಯಮ, ಮೀನುಗಾರಿಕೆ, ಹೋಂ ಸ್ಟೇಗಳ ಕಾರ್ಯಾಚರಣೆ ಹಾಗೂ ಕರಾವಳಿ ಉದ್ದಕ್ಕೂ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಕೈಗೆತ್ತಿಕೊಳ್ಳುವುದಕ್ಕೆ ಇದರಿಂದ ಅಡ್ಡಿ ಉಂಟಾಗಿದೆ' ಎಂದು ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ.

ನ್ಯಾಟ್‌ಕನೆಕ್ಟ್ ಫೌಂಡೇಷನ್ ವಾದವೇನು?

ಸಿಆರ್‌ಜೆಡ್ ಮಿತಿಯನ್ನು ಕಡಿತ ಮಾಡುವುದರಿಂದ ಸಮುದ್ರತೀರದ ಸಮೀಪ ಅಪಾಯಕಾರಿ ಎನಿಸುವಷ್ಟು ವಿಪರೀತ ನಿರ್ಮಾಣ ಕಾರ್ಯಕ್ಕೆ ಅವಕಾಶ ನೀಡಿದಂತಾಗಲಿದೆ ಎಂದು ನ್ಯಾಟ್‌ಕನೆಕ್ಟ್ ಫೌಂಡೇಷನ್ ನಿರ್ದೇಶಕ ಬಿ.ಎನ್. ಕುಮಾರ್ ಹೇಳುತ್ತಾರೆ.

'ಕರ್ನಾಟಕದ ಕರಾವಳಿ ಪೈಕಿ ಶೇ 23.7ರಷ್ಟು ಪ್ರದೇಶ ಸವೆಯುತ್ತಿದೆ. ದೇಶದ ಕರಾವಳಿಯ ಶೇ33.6ರ-ಷ್ಟು ಪ್ರದೇಶ ಸವೆಯುವ ಅಪಾಯ ಎದುರಿಸುತ್ತಿದೆ ಎಂಬುದಾಗಿ ಸಂಸತ್‌ನಲ್ಲಿ ಕಳೆದ ವರ್ಷ ಜೂನ್‌ನಲ್ಲಿ ಮಂಡಿಸಿದ ವರದಿಯಲ್ಲಿ ಹೇಳಲಾಗಿದೆ' ಎನ್ನುತ್ತಾರೆ.

‘ಫ್ಲರ್ಟ್’ಗೆ ನಟ ಸುದೀಪ್ ಸಾಥ್

ನಟ ಚಂದನ್ ಕುಮಾರ್ ನಿರ್ದೇಶಿಸಿ, ನಟಿಸಿರುವ ‘ಫ್ಲರ್ಟ್’ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ನಟ ಸುದೀಪ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಎವರೆಸ್ಟ್ ಪಿಕ್ಚರ್ಸ್ ಮೂಲಕ ನಿರ್ಮಾಣದಲ್ಲೂ ಚಂದನ್ ಕೈಜೋಡಿಸಿದ್ದಾರೆ. ‘ಎ ಪ್ಯೂರ್ ಡವ್ ಸ್ಟೋರಿ’ ಎಂಬ ಅಡಿಬರಹವಿರುವ ಈ ಸಿನಿಮಾದಲ್ಲಿ ನಿಮಿಕಾ ರತ್ನಾಕರ್, ಅಕ್ಷತಾ ಬೋಪಣ್ಣ ನಾಯಕಿಯರಾಗಿ ನಟಿಸಿದ್ದಾರೆ.

ಇತ್ತೀಚೆಗಷ್ಟೇ ಚಿತ್ರದ ‘ನೀ ನನ್ನ ಜೀವ’ ಎಂಬ ಫ್ರೆಂಡ್ ಶಿಪ್ ಹಾಡು ಬಿಡುಗಡೆಯಾಗಿತ್ತು. ಇದಕ್ಕೂ ಸುದೀಪ್ ದನಿಯಾಗಿದ್ದರು. ನವೆಂಬರ್ 7ರಂದು ತೆರೆಗೆ ಬರಲು ಈ ಚಿತ್ರ ಸಿದ್ಧವಾಗಿದೆ.

ಈ ಸಂದರ್ಭದಲ್ಲಿ ಸಿನಿಮಾ ಬಗ್ಗೆ ಮಾತನಾಡಿದ ನಿರ್ದೇಶಕ ಚಂದನ್, ‘ಸಿನಿಮಾಗೆ ಆರಂಭದಿಂದಲೂ ಸುದೀಪ್ ಅವರು ಬೆಂಬಲ ನೀಡುತ್ತಲೇ ಬಂದಿದ್ದಾರೆ. ಇದೊಂದು ರೋಮ್ ಕಾಮ್ ಸಿನಿಮಾ ಆದರೂ ಸ್ನೇಹ, ಪ್ರೀತಿ ಹೀಗೆ ಎಲ್ಲಾ ಮನರಂಜನಾತ್ಮಕ ಅಂಶಗಳು ಸಿನಿಮಾದಲ್ಲಿವೆ. ಫ್ಲರ್ಟ್ ಎಂದರೆ ಬರೀ ಚುಡಾಯಿಸುವುದು ಎಂದರ್ಥವಲ್ಲ. ಗಾಢವಾದ ಪ್ರೀತಿಯನ್ನೂ ಫ್ಲರ್ಟ್ ಎಂದೇ ಕರೆಯುತ್ತಾರೆ. ಎಲ್ಲರ ಡವ್‌ನಲ್ಲೂ ಒಂದೊಂದು ಲವ್ ಇರುತ್ತದೆ. ಚಿತ್ರದಲ್ಲಿ ರೋಮ್ ಕಾಮ್ ಜೊತೆಗೆ ಸೈಕೋ ಪಾತ್ರವೂ ಇದೆ’ ಎಂದರು.

‘ಚಂದನ್ ನಮ್ಮನೆ ಹುಡುಗ. ತಾನು ನಿರ್ದೇಶನ ಮಾಡುತ್ತೇನೆ ಎಂದಾಗ ಖುಷಿಯಾಗಿತ್ತು. ನಾನು ಸಿನಿಮಾವನ್ನು ನೋಡಿದ್ದೇನೆ. ತುಂಬಾ ಚೆನ್ನಾಗಿ ಮೂಡಿಬಂದಿದೆ. ಕಥೆ ಚೆನ್ನಾಗಿದೆ’ ಎನ್ನುತ್ತಾರೆ ಸುದೀಪ್.

ಚಿತ್ರದಲ್ಲಿ ನ್ಯಾಯಾಧೀಶರಾಗಿ ನಟ ಅವಿನಾಶ್ ನಟಿಸಿದ್ದು, ಶ್ರುತಿ, ಸಾಧು ಕೋಕಿಲ, ಗಿರೀಶ್ ಶಿವಣ್ಣ, ವಿನಯ್ ಗೌಡ ತಾರಾಬಳಗದಲ್ಲಿದ್ದಾರೆ. ಸುದೀಪ್ ಅವರು ಹಾಡಿರುವ ಹಾಡಿಗೆ ನಕುಲ್ ಅಭಯಂಕರ್ ಸಂಗೀತ ನೀಡಿದ್ದು, ಜಸ್ಸಿ ಗಿಫ್ಟ್ ಉಳಿದ ಮೂರು ಹಾಡುಗಳ ಜೊತೆಗೆ ಹಿನ್ನೆಲೆ ಸಂಗೀತ ನೀಡಿದ್ದಾರೆ. ಎಚ್.ಸಿ.ವೇಣು ಛಾಯಾಚಿತ್ರಗ್ರಹಣ ಸಿನಿಮಾಗಿದೆ. ❖

ಚಂದನ್, ಸುದೀಪ್, ಅವಿನಾಶ್

ರಿಷಬ್ ಶೆಟ್ಟಿ

ಕೇರಳದಲ್ಲಿ ‘ಕಾಂತಾರ’ ದಾಖಲೆ

ವಿಶ್ವದಾದ್ಯಂತ ಈಗಾಗಲೇ ₹750 ಕೋಟಿಗೂ ಅಧಿಕ ಗಳಿಕೆ ಮಾಡಿರುವ ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ‘ಕಾಂತಾರ: ಒಂದು ದಂತಕಥೆ, ಚಾಪ್ಟರ್–1’ ಸಿನಿಮಾ ಕೇರಳದಲ್ಲಿ ಹೊಸ ದಾಖಲೆ ಬರೆದಿದೆ.

ಈ ಸಿನಿಮಾ ಕೇರಳದಲ್ಲಿ ₹55 ಕೋಟಿಗೂ ಅಧಿಕ ಹಣ ಬಾಚಿದ್ದು, ಬೇರೆ ಭಾಷೆಯ ಸಿನಿಮಾವೊಂದು ಕೇರಳದಲ್ಲಿ ಇಷ್ಟು ಗಳಿಕೆ ಮಾಡಿದ್ದು ದಾಖಲೆಯಾಗಿದೆ ಎಂದು ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ. ಪೃಥ್ವಿರಾಜ್ ಪ್ರೊಡಕ್ಷನ್ಸ್‌ನಡಿ ಈ ಸಿನಿಮಾವನ್ನು ನಟ ಪೃಥ್ವಿರಾಜ್ ಸುಕುಮಾರನ್ ಕೇರಳದಲ್ಲಿ ವಿತರಣೆ ಮಾಡಿದ್ದರು.

ಆಸ್ಟ್ರೇಲಿಯಾದಲ್ಲೂ ಭರ್ಜರಿ ಗಳಿಕೆ: ಆಸ್ಟ್ರೇಲಿಯಾದಲ್ಲಿ 2025ರಲ್ಲಿ ತೆರೆಕಂಡ ಭಾರತದ ಸಿನಿಮಾಗಳ ಪೈಕಿ ಅತ್ಯಧಿಕ ಗಳಿಕೆ ಮಾಡಿದ ದಾಖಲೆಯನ್ನು ‘ಕಾಂತಾರ’ ಬರೆದಿದೆ. ಆಸ್ಟ್ರೇಲಿಯಾದಲ್ಲಿ ಸುಮಾರು ₹17 ಕೋಟಿಯನ್ನು ಸಿನಿಮಾ ಗಳಿಸಿದೆ ಎಂದು ಹೊಂಬಾಳೆ ಫಿಲ್ಮ್ಸ್ ತಿಳಿಸಿದೆ. ❖

ಶಿವರಾಜ್‌ಕುಮಾರ್, ಬೇಬಿ ನಕ್ಷತ್ರ

‘ಡ್ಯಾಡ್’ ಚಿತ್ರದ ಹೊಸ ಪೋಸ್ಟರ್

ಶಿವರಾಜ್‌ಕುಮಾರ್ ನಾಯಕರಾಗಿ ನಟಿಸುತ್ತಿರುವ ಬಹು ನಿರೀಕ್ಷಿತ ‘ಡ್ಯಾಡ್’ ಚಿತ್ರದ ಹೊಸ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ತೆಲುಗಿನ ಖ್ಯಾತ ನಿರ್ದೇಶಕ ಅನಿಲ್ ಕನ್ನೆಗಂಟಿ ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಕನ್ನಡ, ತೆಲುಗು ಮತ್ತು ಮಲಯಾಳದಲ್ಲಿ ಚಿತ್ರ ಸಿದ್ಧಗೊಳ್ಳುತ್ತಿದೆ.

‘ಈಗಾಗಲೇ ಎರಡು ಹಂತಗಳ ಚಿತ್ರೀಕರಣ ಮುಕ್ತಾಯವಾಗಿದೆ. ಮೈಸೂರು, ನಂದಿ ಬೆಟ್ಟಗಳಲ್ಲಿ ಚಿತ್ರೀಕರಣ ನಡೆದಿದೆ. ಶೀಘ್ರದಲ್ಲಿ ಮುಂದಿನ ಹಂತದ ಚಿತ್ರೀಕರಣ ಪ್ರಾರಂಭಿಸುತ್ತೇವೆ’ ಎಂದಿದೆ ಚಿತ್ರತಂಡ.

ಹರೀಶ್ ಪೆದ್ದಿ ಮೈರಾ ಕ್ರಿಯೇಷನ್ಸ್ ಲಾಂಛನದಡಿ ಈ ಚಿತ್ರವನ್ನು ನಿರ್ಮಿಸುತ್ತಿದ್ದಾರೆ. ಶಿವರಾಜ್‌ಕುಮಾರ್ ಅವರು ಅನೇಕ ವರ್ಷಗಳ ನಂತರ ಈ ಚಿತ್ರದಲ್ಲಿ ವೈದ್ಯನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಶರ್ಮಿಳಾ ಮಾಂಡ್ರೆ, ಬೇಬಿ ನಕ್ಷತ್ರ, ಬಾಬು, ಮಲಯಾಳದ ನಟ ಸೂರಜ್ ವೆಂಜರಮೂಡು ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಹಾಗೂ ಬಿ.ರಾಜಶೇಖರ್ ಛಾಯಾಚಿತ್ರಗ್ರಹಣವಿದೆ.

ನಾಗರಾಜ ಸೋಮಯಾಜಿ ದೇವಿ ಮಹಾತ್ಮೆ

ನಿರ್ದೇಶಕ ನಾಗರಾಜ ಸೋಮಯಾಜಿ ‘ದೇವಿ ಮಹಾತ್ಮೆ’ ಚಿತ್ರ ಘೋಷಿಸಿದ್ದಾರೆ. ಚಿತ್ರದ ಫಸ್ಟ್‌ಲುಕ್ ಪೋಸ್ಟರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಇವರು ಈ ಹಿಂದೆ ‘ಮರ್ಯಾದೆ ಪ್ರಶ್ನೆ’ ಎಂಬ ಸಿನಿಮಾ ನಿರ್ದೇಶಿಸಿದ್ದರು. ಕಡಲ ಕಿನಾರೆಯ ಹಳ್ಳಿ ಬದುಕು, ಕರಾವಳಿ ತೀರ, ಯಕ್ಷಗಾನ ಮೊದಲಾದ ಅಂಶಗಳಿಂದ ಕೂಡಿದ ಕಥೆ ಎಂಬುದು ಪೋಸ್ಟರ್‌ನಿಂದ ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಚಿತ್ರದ ಶೀರ್ಷಿಕೆ ತಲೆಕೆಳಗಾಗಿದ್ದು ಗಮನ ಸೆಳೆಯುತ್ತಿದೆ.

‘ದೇವಿ ಮಹಾತ್ಮೆ’ ಶೀರ್ಷಿಕೆ ಕೇಳಿದ ತಕ್ಷಣ ದೇವರ ಸಿನಿಮಾ ಅಂದುಕೊಳ್ಳುವುದು ಸಹಜ. ಆದರೆ ಇದೊಂದು ಕಾಮಿಡಿ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ವಾದಿರಾಜ ಶೆಟ್ಟಿ, ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ ಹಾಗೂ ಬಿ. ಕಿರಣ್ ಬರವಣಿಗೆಯಲ್ಲಿ ಸಾಥ್ ಕೊಟ್ಟಿದ್ದಾರೆ’ ಎಂದಿದೆ ಚಿತ್ರತಂಡ. ಯುವಿಜಿ ಸ್ಟುಡಿಯೋ ಬ್ಯಾನರ್‌ನಡಿ ವಿದ್ಯಾ ಗಾಂಧಿರಾಜನ್ ಸಿನಿಮಾಗೆ ಬಂಡವಾಳ ಹೂಡಲಿದ್ದಾರೆ. ಎಸ್.ಕೆ. ರಾವ್ ಛಾಯಾಚಿತ್ರಗ್ರಹಣ, ಪ್ರಸಾದ್ ಕೆ. ಶೆಟ್ಟಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

‘ವಾಸ್ತವ್ಯ ಅವಧಿ ವಿಸ್ತರಣೆ ಪ್ರಕರಣಗಳಿಗೆ ಅನ್ವಯಿಸದು’

ಎಚ್–1ಬಿ ವೀಸಾ ಶುಲ್ಕ ಹೆಚ್ಚಳ

ನ್ಯೂಯಾರ್ಕ್(ಪಿಟಿಐ): ಎಚ್–1ಬಿ ವೀಸಾಕ್ಕೆ ಹೊಸದಾಗಿ ಸಲ್ಲಿಕೆಯಾಗುವ ಅರ್ಜಿಗಳಿಗೆ ಸಂಬಂಧಿಸಿ ಮಾಡಲಾಗಿರುವ ಶುಲ್ಕ ಹೆಚ್ಚಳವು ‘ಸ್ಥಾನ ಬದಲಾವಣೆ’ ಅಥವಾ ‘ವಾಸ್ತವ್ಯದ ಅವಧಿಯ ವಿಸ್ತರಣೆ’ ಕೋರಿದ ಅರ್ಜಿಗಳಿಗೆ ಅನ್ವಯಿಸುವುದಿಲ್ಲ ಎಂದು ಅಮೆರಿಕ ಹೇಳಿದೆ.

ಅಮೆರಿಕ ಪೌರತ್ವ ಹಾಗೂ ವಲಸೆ ಸೇವೆಗಳ (ಯುಎಸ್‌ಸಿಐಎಸ್) ಇಲಾಖೆಯು ಸೋಮವಾರ ಬಿಡುಗಡೆ ಮಾಡಿರುವ ಹೊಸ ಮಾರ್ಗಸೂಚಿಗಳು ಇಂತಹ ಹಲವಾರು ಅಂಶಗಳನ್ನು ಒಳಗೊಂಡಿದೆ.

ಎಚ್–1ಬಿ ವೀಸಾಕ್ಕಾಗಿ ಹೊಸದಾಗಿ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿದ ಶುಲ್ಕವನ್ನು 1 ಲಕ್ಷ ಡಾಲರ್‌ಗೆ (ಅಂದಾಜು ₹88 ಲಕ್ಷ) ಹೆಚ್ಚಿಸಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸೆಪ್ಟೆಂಬರ್ 19ರಂದು ಆದೇಶ ಹೊರಡಿಸಿದ್ದರು.

‘ವೀಸಾ ಅರ್ಜಿ ಶುಲ್ಕ ಹೆಚ್ಚಳ ಕುರಿತ ಆದೇಶವು ಈ ಮೊದಲು ನೀಡಲಾಗಿರುವ ಎಚ್–1ಬಿ ವೀಸಾಗಳು ಅಥವಾ ವೀಸಾ ಕೋರಿ ಅಮೆರಿಕ ಕಾಲಮಾನ ಪ್ರಕಾರ ಸೆಪ್ಟೆಂಬರ್ 21ರ ತಡರಾತ್ರಿ 12.01ಕ್ಕೂ ಮೊದಲು ಸಲ್ಲಿಸಿರುವ ಅರ್ಜಿಗಳಿಗೆ ಅನ್ವಯವಾಗುವುದಿಲ್ಲ’ ಎಂದು ಯುಎಸ್‌ಸಿಐಎಸ್ ಹೇಳಿದೆ.

ಎಚ್–1ಬಿ ವೀಸಾ ಹೊಂದಿರುವವರು ಅಮೆರಿಕಕ್ಕೆ ಬರಲು ಇಲ್ಲವೇ ಅಮೆರಿಕದಿಂದ ಇತರ ದೇಶಗಳಿಗೆ ಸಂಚರಿಸುವುದಕ್ಕೆ ಕೂಡ ಈ ಆದೇಶ ನಿರ್ಬಂಧ ಹೇರುವುದಿಲ್ಲ ಎಂದೂ ತಿಳಿಸಿದೆ.

ಹೊಸ ಶುಲ್ಕ ನೀತಿ ಪ್ರಶ್ನಿಸಿ ಅಮೆರಿಕ ವಾಣಿಜ್ಯ ಮಂಡಳಿ ಅಕ್ಟೋಬರ್ 16ರಂದು ನ್ಯಾಯಾಲಯದ ಮೆಟ್ಟಿಲೇರಿತ್ತು. ಇದರ ಬೆನ್ನಲ್ಲೇ, ಈ ಹೊಸ ಮಾರ್ಗಸೂಚಿಗಳನ್ನು ಯುಎಸ್‌ಸಿಐಎಸ್ ಬಿಡುಗಡೆ ಮಾಡಿದೆ.

ಜಪಾನ್: ಸನೇ ತಕೈಚಿ ಮೊದಲ ಮಹಿಳಾ ಪ್ರಧಾನಿ

ಸನೇ ತಕೈಚಿ

ಟೋಕಿಯೊ (ಎಪಿ): ಜಪಾನ್ ದೇಶದ ಮೊದಲ ಮಹಿಳಾ ಪ್ರಧಾನಿಯಾಗಿ, ಲಿಬರಲ್ ಡೆಮಾಕ್ರಟಿಕ್ ಪಕ್ಷದ ಕಟ್ಟಾ ಸಂಪ್ರದಾಯವಾದಿ ಸನೇ ತಕೈಚಿ (64) ಅವರನ್ನು ಸಂಸತ್ತು ಮಂಗಳವಾರ ಆಯ್ಕೆ ಮಾಡಿತು.

ಪ್ರಧಾನಿಯಾಗಿ ಕೇವಲ ಒಂದು ವರ್ಷ ಸೇವೆ ಸಲ್ಲಿಸಿದ ಶಿಗೇರು ಇಶಿಬಾ ಅವರ ನೇತೃತ್ವದಲ್ಲಿ ಲಿಬರಲ್ ಡೆಮಾಕ್ರಟಿಕ್ ಪಕ್ಷ ನಿರಂತರ ಸೋಲುಗಳನ್ನು ಕಂಡಿತು. ಈ ಕಾರಣದಿಂದ ಬೇಸತ್ತ ಅವರು ಸಂಪುಟಕ್ಕೆ ಬೆಳಿಗ್ಗೆ ರಾಜೀನಾಮೆ ನೀಡಿ, ತಮ್ಮ ಉತ್ತರಾಧಿಕಾರಿ ಆಯ್ಕೆಗೆ ದಾರಿ ಮಾಡಿಕೊಟ್ಟರು.

ಇತರ ಪಾಲುದಾರರ ಜತೆ ಲಿಬರಲ್ ಡೆಮಾಕ್ರಟಿಕ್ ಪಕ್ಷವು ಮೈತ್ರಿ ಒಪ್ಪಂದವನ್ನು ಮಾಡಿಕೊಂಡ ಬಳಿಕ ಸನೇ ತಕೈಚಿ ಅವರ ಆಯ್ಕೆಯಾಗಿದೆ.

ಜಪಾನಿನ ಕೆಳಮನೆಯಲ್ಲಿ ತಕೈಚಿ ಅವರು 237 ಮತಗಳನ್ನು ಪಡೆದರೆ, ಅವರ ವಿರುದ್ಧ ಸ್ಪರ್ಧಿಸಿದ್ದ ವಿರೋಧ ಪಕ್ಷ ‘ಕಾನ್‌ಸ್ಟಿಟ್ಯೂಷನಲ್ ಡೆಮಾಕ್ರಟಿಕ್ ಪಕ್ಷ’ದ ಮುಖ್ಯಸ್ಥ ಯೋಶಿಕೊಕೊ ನೋಡಾ ಅವರು 149 ಮತ ಪಡೆದರು.

ವಿರೋಧ ಪಕ್ಷಗಳಲ್ಲಿ ಒಗ್ಗಟ್ಟು ಇಲ್ಲದೇ ಇದ್ದದ್ದು ತಕೈಚಿ ಆಯ್ಕೆಗೆ ವರದಾನವಾಯಿತು. ಎಲ್‌ಡಿಪಿಯು ‘ಜಪಾನ್ ಇನ್ನೋವೇಷನ್ ಪಾರ್ಟಿ’ (ಜೆಐಪಿ) ಜತೆ ಮೈತ್ರಿ ಮಾಡಿಕೊಂಡು, ಪ್ರಧಾನಿ ಆಯ್ಕೆ ಖಚಿತಪಡಿಸಿಕೊಂಡಿತು.

ಸಕುಟುಂಬಕ್ಕೆ ಸವಿಯೂಟ ಸಂಭ್ರಮ!

ಹಬ್ಬದ ಸೀಸನ್‌ನಲ್ಲಿ ವಿವಿಧ ಖಾದ್ಯಗಳನ್ನು ಸಿದ್ಧಪಡಿಸಬೇಕೆನ್ನುವ ನಿರೀಕ್ಷೆಗೆ ಮತ್ತೊಮ್ಮೆ ‘ಕರುನಾಡ ಸವಿಯೂಟ‘ ಕಾರ್ಯಕ್ರಮ ಆರಂಭಗೊಂಡಿದ್ದು, ಕನ್ನಡಿಗರ ಮನೆಗಳಿಗೆ ರಾಜ್ಯದ ನಾನಾ ಮೂಲೆಗಳ ರಸವತ್ತಾದ ಅಡುಗೆ ರೆಸಿಪಿಗಳನ್ನು ಸಿದ್ಧಪಡಿಸುವ ಬಗೆ ಸುಲಭವಾಗಲಿದೆ. ಫ್ರೀಡಂ ಹೆಲ್ದೀ ಕುಕ್ಕಿಂಗ್ ಆಯಿಲ್ ಅರ್ಪಿಸುವ ಈ ಬಾರಿಯ ‘ಕರುನಾಡ ಸವಿಯೂಟ ಸೀಸನ್–4‘ರ ಎಲ್‌ಪಿಜಿ ಪಾರ್ಟ್‌ನರ್ ಇಂಡೇನ್, ಕಿಚನ್ ಪಾರ್ಟ್‌ನರ್ ಪ್ರೆಸ್ಟೀಜ್, ಸ್ಪೆಷಲ್ ಪಾರ್ಟ್‌ನರ್ ಭೀಮಾ ಮತ್ತು ಲೇಸ್, ಅಸೋಸಿಯೇಟ್ ಪಾರ್ಟ್‌ನರ್ ಎಸ್‌ಬಿಐ ಕಾರ್ಡ್, ವೆಂಕಾಬ್, ಎಕೋ ಕ್ರಿಸ್ಟಲ್ ಸಹಯೋಗದಲ್ಲಿ ಆರಂಭಗೊಳ್ಳುತ್ತಿದೆ. ಜತೆಗೆ, ಬಾಯಿಯಲ್ಲಿ ನೀರೂರಿಸುವ ವಿವಿಧ ಖಾದ್ಯಗಳ ವಿವರಣೆಯನ್ನು ನೀಡಬಲ್ಲ ಖ್ಯಾತ ಪಾಕಪ್ರವೀಣರಾದ ಸಿಹಿ ಕಹಿ ಚಂದ್ರು, ಆದರ್ಶ್ ತಟ್ಪತಿ, ಒಗ್ಗರಣೆ ಡಬ್ಬಿ ಮುರಳಿಯವರ ನಿರೂಪಣೆಯಿರಲಿದೆ. ರಾಜ್ಯದ ವಿವಿಧ ಜಿಲ್ಲೆಗಳ ರಸವತ್ತಾದ ಸವಿಯೂಟಗಳನ್ನು ಸರಳ ಭಾಷೆಯಲ್ಲಿ ಎಲ್ಲರಿಗೂ ವಿವರಿಸಲಿದ್ದಾರೆ. ಕಾರ್ಯಕ್ರಮಗಳನ್ನು ಮಿಸ್ ಮಾಡದೇ, ಕನ್ನಡ ನಾಡಿನ ನಾನಾ ಸವಿರುಚಿಗಳ ಸ್ವಾದವನ್ನು ಸಂಭ್ರಮಿಸಿ.

ಏನೇನಿದೆ ಗೊತ್ತಾ?

ಹಲಸಿನ ಮುಲ್ಕ, ಹುರಿಗಡಲೆ ನಿಪ್ಪಟ್ಟು, ಸೌತೆಕಾಯಿ ಮುದ್ದಿಪಲ್ಯ, ಹಿತ್ಕಿದ ಅವರೆಬೇಳೆ ಮೇಲೋಗರ, ಬೋಂಡಾಸೂಪ್, ರಾಯಚೂರು ರಗಡ್ ತುಂಟಾಪುರ ಶೈಲಿ ಕೋಳಿ ಕಡ್ಡಿ, ಬಟಾಣಿ ಕುರ್ಮಾ, ಮನೋಲಿ ಕಡಲೇ ಸುಕ್ಕಾ ಮಸಾಲಾ ರೆಸಿಪಿ ವಿವರಣೆ ಕುರಿತ ವಿಡಿಯೋಗಳು ಈಗಾಗಲೇ ಅಪ್ಲೋಡ್ ಆಗಿವೆ.

ಏನೆಲ್ಲಾ ರೆಸಿಪಿ ಬರಲಿವೆ?

ಕೊಳ್ಳೇಗಾಲ ಮಟನ್–ನಲ್ಲಿ ಪಲಾವ್, ಕನಕಪುರ ಶೈಲಿಯ ಹೊಳೆ ಮೀನು ಸಾರು, ಚಿಕ್ಕಪೇಟೆ ಕಾಲುಸೂಪ್, ಮೈಸೂರು ಶೈಲಿಯ ಖೀಮಾ ವಡೆ, ಬ್ಯಾಚಲರ್ ಕ್ವಿಕ್ ಮಟನ್ ಫ್ರೈ, ಮಳವಳ್ಳಿ ವೈಟ್ ಚಿಕನ್ ಪಲಾವ್ ಮತ್ತು ನಾಟಿ ಕೋಳಿ ಬಸ್ಸಾರು ಮಾಡುವ ಬಗೆಯ ಕಾರ್ಯಕ್ರಮಗಳು ಪ್ರಸಾರಗೊಳ್ಳಲಿವೆ.

ಮನೆಯಲ್ಲೇ ಟ್ರೈ ಮಾಡಿ!

ವಿಭಿನ್ನ ರುಚಿಗಳ ಅಡುಗೆ ಖಾದ್ಯಗಳನ್ನು ಸಿದ್ಧಪಡಿಸಬೇಕೆನ್ನುವ ನಿರೀಕ್ಷೆಗೆ ಪರಿಹಾರೋಪಾಯವಾಗಿ ‘ಕರುನಾಡ ಸವಿಯೂಟ ಸೀಸನ್–4‘ ಶುರುವಾಗಿದ್ದು, ಮನೆಯಲ್ಲಿಯೇ ಕುಳಿತು ಪ್ರಜಾವಾಣಿ ಯೂಟ್ಯೂಬ್ ಚಾನೆಲ್‌ನ ವಿಡಿಯೋಗಳ ಮೂಲಕ ಮಾರ್ಗದರ್ಶನ ಪಡೆಯಬಹುದಾಗಿದೆ. ಕಳೆದ 3 ಸೀಸನ್‌ಗಳಲ್ಲಿ ಸಿಕ್ಕ ಅಭೂತಪೂರ್ವ ಯಶಸ್ಸಿನಿಂದ ಮತ್ತೊಮ್ಮೆ ಕರುನಾಡ ಖಾದ್ಯಪ್ರಿಯರಿಗೆ ಮತ್ತಷ್ಟು ಅಡುಗೆ ರೆಸಿಪಿಗಳನ್ನು ಈ ಸೀಸನ್‌ನಲ್ಲಿ ನೀಡಲಾಗುತ್ತಿದೆ. ಖಾದ್ಯಪ್ರಿಯರು, ಅಡುಗೆ ಕಲಿಕೆಯಲ್ಲಿರುವವರು ಸೀಸನ್‌ನಲ್ಲಿ ವಿವರಿಸಲ್ಪಡುವ ರೆಸಿಪಿಗಳನ್ನು ಕಲಿತು, ಮನೆಮಂದಿಯ ಮೆಚ್ಚುಗೆ ಗಳಿಸಿಕೊಳ್ಳಬಹುದು.



ಸಿಹಿ ಕಹಿ ಚಂದ್ರು

ಕರುನಾಡಿನಲ್ಲಿ ‘ಸಿಹಿ ಕಹಿ ಚಂದ್ರು‘ರವರ ಬಗ್ಗೆ ತಿಳಿಯದವರು ಇರಲಿಕ್ಕಿಲ್ಲ. ಆ ಪ್ರಮಾಣದಲ್ಲಿ ಕನ್ನಡಿಗರಿಗೆ ಚಿರಪರಿಚಿತರು. ಕೇವಲ ನಟರಾಗಿ ಮಾತ್ರವಲ್ಲದೇ ನಿರ್ದೇಶಕರಾಗಿ, ನಿರ್ಮಾಪಕರಾಗಿ, ರಂಗಭೂಮಿ ಕಲಾವಿದರಾಗಿಯೂ ಕೀರ್ತಿ ಗಳಿಸಿದವರು ಸಿಹಿ ಕಹಿ ಚಂದ್ರು. ಅವರ ಹೆಸರಿನೊಂದಿಗೆ ಸದಾ ಜೊತೆಯಾಗಿರುವ ರುಚಿಗಳಂತೆ ಚಂದ್ರುರವರ ಕೈರುಚಿ ಸಹ ಕನ್ನಡಿಗರ ಗಮನ ಸೆಳೆದಿದೆ. ಚಂದ್ರು ಮಾಡುವ ಪಾಕ ಪಾಠದಿಂದ ನಾನಾ ಖಾದ್ಯಗಳನ್ನು ಸಿದ್ಧಪಡಿಸಿ, ಅಡುಗೆ ಮನೆಯಲ್ಲಿ ಸೈ ಎನಿಸಿಕೊಂಡ ದೊಡ್ಡ ಪಡೆಯೇ ಇದೆ. ಇಂಥಹಾ ಚಂದ್ರುರವರ ಅಡುಗೆ ರುಚಿ ‘ಕರುನಾಡ ಸವಿಯೂಟ‘ದಲ್ಲಿ ಗಮನ ಸೆಳೆಯುತ್ತಿದೆ. ಹಲಸಿನ ಮುಲ್ಕಿ, ಹಿತ್ಕಿದ ಅವರೇಬೇಳೆ ಮೇಲೋಗರ ಸೇರಿ ನಾನಾ ಖಾದ್ಯಗಳ ಸಂಭ್ರಮವನ್ನು ನೀವು ನೋಡಿ ಕಲಿಯಲು ಇಲ್ಲಿದೆ ಅವಕಾಶ.

Freedom Healthy Cooking Oils presents ಕರುನಾಡ ಸವಿಯೂಟ ಆವೃತ್ತಿ 4

ಆದರ್ಶ್ ತಟ್ಪತಿ

ಸದಾ ಒಂದಿಲ್ಲೊಂದು ಅಡುಗೆ ಖಾದ್ಯಗಳ ವಿವರಣೆ ನೀಡುವ ಕಾರ್ಯಕ್ರಮಗಳಲ್ಲಿ ಬ್ಯುಸಿ ಇರುವ, ಆ ಮೂಲಕ ರಾಜ್ಯಾದ್ಯಂತ ಅಭಿಮಾನಿಗಳನ್ನು ಸಂಪಾದಿಸಿಕೊಂಡಿರುವ ನಿರೂಪಕರು ಆದರ್ಶ್ ತಟ್ಪತಿ. ಸಾಮಾನ್ಯರಿಗೆ ಅರ್ಥವಾಗುವ ಅತ್ಯಂತ ಸರಳ ಭಾಷೆಯಲ್ಲಿಯೇ ಅಡುಗೆ ವಿವರಣೆ ನೀಡುವುದು ಇವರ ಆಕರ್ಷಣೆ. ವಿಶೇಷವಾಗಿ ನಾನ್‌ವೆಜ್ ಪ್ರಿಯರನ್ನು ಸೆಳೆಯುವ ವಿವಿಧ ಖಾದ್ಯಗಳು ಸೇರಿ ವೆಜ್ ರೆಸಿಪಿಗಳನ್ನು ರುಚಿಭರಿತವಾಗಿ ಮಾಡುವುದು ಹೇಗೆನ್ನುವ ಪಾಠ ಇವರಿಂದ ಕಲಿಯಬಹುದು. ಕರುನಾಡ ಸವಿಯೂಟ ಸೀಸನ್–4ನಲ್ಲಿ ಈಗಾಗಲೇ ರಾಯಚೂರು ತುಂಟಾಪುರ ಕೋಳಿ ಕಡ್ಡಿ, ಬಟಾಣಿ ಕುರ್ಮಾ, ಮಂಗಳೂರು ಶೈಲಿಯ ಕಡಲೇ ಸುಕ್ಕಾ ಮಸಾಲಾ ಖಾದ್ಯಗಳ ವಿವರಣೆ ಸಿದ್ಧವಾಗಿದೆ.

ಒಗ್ಗರಣೆ ಡಬ್ಬಿ ಮುರಳಿ

ಖ್ಯಾತ ಟಿವಿ ನಿರೂಪಕರಾಗಿ ಕನ್ನಡಿಗರ ಮನೆಮಾತಾಗಿರುವ ಒಗ್ಗರಣೆ ಡಬ್ಬಿ ಮುರಳಿ ತಮ್ಮ ವಿಭಿನ್ನ ನಿರೂಪಣೆಯ ಮೂಲಕವೇ ಪ್ರಸಿದ್ಧರು. ಪಾಕಶಾಲೆಯ ಯಾವುದೇ ಅಡುಗೆ ಕುರಿತು ರಸವತ್ತಾಗಿ ವಿವರಣೆ ನೀಡಬಲ್ಲ ಖ್ಯಾತ ನಿರೂಪಕರಾದ ಮುರಳಿ, ಒಗ್ಗರಣೆ ಡಬ್ಬಿ ಕಾರ್ಯಕ್ರಮದಿಂದ ಎಲ್ಲರ ಅಡುಗೆ ಮನೆಗೆ ಪ್ರವೇಶ ಪಡೆದರು. ವಿಶೇಷವೆಂದರೆ, ಪ್ರಸ್ತುತ ಮುರಳಿ ತಮ್ಮ ಪತ್ನಿ ಸುಚಿತ್ರರೊಂದಿಗೆ ‘ಕರುನಾಡ ಸವಿಯೂಟ ಸೀಸನ್–4‘ರಲ್ಲಿ ಕಾಣಿಸಿಕೊಳ್ಳುತ್ತಿದ್ದು, ಕನ್ನಡಿಗರಿಗೆ ಮತ್ತಷ್ಟು ಸವಿರುಚಿಗಳನ್ನು ಉಣಬಡಿಸಲಿದ್ದಾರೆ. ಮಳವಳ್ಳಿ ವೈಟ್ ಚಿಕನ್ ಪಲಾವ್, ನಾಟಿ ಕೋಳಿ ಬಸ್ಸಾರು ಸೇರಿದಂತೆ ನಾನಾ ನಾನ್‌ವೆಜ್ ರೆಸಿಪಿಗಳನ್ನು ಮಾಡುವುದು ಹೇಗೆನ್ನುವ ಪಾಠವನ್ನು ಒಗ್ಗರಣೆ ಡಬ್ಬಿ ಮುರಳಿ ವಿವರಿಸಲಿದ್ದಾರೆ.

ಅಡುಗೆಯ ವಿಧಾನಗಳ ವೀಕ್ಷಣೆಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

LPG Partner: Indane | Kitchen Partner: Prestige | Special Partner: BHIMA | Snacks Partner: Lay's | Associate Sponsors: SBI card, Vencobb, eco crystal Water Treatment

ಆದೀಶ್ವರ್®
ಎಲೆಕ್ಟ್ರೋ ವರ್ಲ್ಡ್
gadget for every budget!
ಬೃಹತ್ ದೀಪಾವಳಿ ಸೇಲ್
GET UPTO ₹15,000/- UPI MONEY BACK
ON BAJAJ FINSERV PURCHASE
BANK TRANSFER
PAY
DEEPAVALI BIGGEST CELEBRATION OFFERS
SIDE BY SIDE REFRIGERATORS
LG Life's Good 650 Ltr. GET INSTANT CASH BACK UPTO ₹15,000/- ON CC & DC EMI ₹3,999/-
Haier 3 DOOR REFRIGERATOR 598 Ltr. HOTTEST DEAL GET INSTANT CASH BACK UPTO ₹10,000/- ON CC & DC SPECIAL PRICE ₹74,990/-
Godrej 600 Ltr. GET INSTANT CASH BACK UPTO ₹6,000/- ON CC & DC EMI ₹2,525/-
PREMIUM FROST FREE REFRIGERATORS
LG Life's Good 506Ltr. GET INSTANT CASH BACK UPTO ₹7,000/- ON CC & DC EMI ₹2,499/-
Haier 328 Ltr. GET INSTANT CASH BACK UPTO ₹3,000/- ON CC & DC EMI ₹2,299/-
Whirlpool 411 Ltr. GET INSTANT CASH BACK UPTO ₹3,000/- ON CC & DC EMI ₹2,990/-
FROST FREE REFRIGERATORS
LG Life's Good 242 Ltr. GET INSTANT CASH BACK UPTO ₹2,000/- ON CC & DC EMI ₹2,490/-
Whirlpool INTELLI FRESH PRO 327 Ltr. GET INSTANT CASH BACK UPTO ₹2,000/- ON CC & DC EMI ₹2,990/-
Godrej 234 Ltr. GET INSTANT CASH BACK UPTO ₹2,000/- ON CC & DC EMI ₹2,290/-
BOTTOM MOUNTED REFRIGERATORS
Haier 445 Ltr. BIGGER Capacity GET INSTANT CASH BACK UPTO ₹10,000/- ON CC & DC EMI ₹1,994/-
DIRECT COOL REFRIGERATORS
LG Life's Good 190 Ltr. FESTIVAL PRICE ₹17,490/-
Haier 190 Ltr. FESTIVAL PRICE ₹14,490/-
LOWEST EMI | DEBIT & CREDIT CARD EMI | LOWEST DOWNPAYMENT | LONG TENURE EMI
FRONT LOAD & TOP LOAD WASHING MACHINES
LG Life's Good FRONT LOAD WASHING MACHINE UPTO ₹7,000/- CASH BACK ON YOUR CREDIT CARD EMI 12 / 7 Kg EMI ₹2,999/-
Haier FRONT LOAD WASHING MACHINE (WI-FI) UPTO ₹8,000/- CASH BACK ON YOUR CREDIT CARD EMI 11 Kg EMI ₹1,994/-
Whirlpool FRONT LOAD WASHING MACHINE UPTO ₹6,500/- CASH BACK ON YOUR CREDIT CARD EMI 9 Kg EMI ₹2,990/-
TOP LOAD WASHING MACHINE LG Haier Whirlpool Godrej IFB UPTO ₹2,000/- CASH BACK ON YOUR CREDIT CARD EMI EMI ₹999/- ONWARDS
DISH WASHER
LG IFB UPTO ₹3,000/- CASH BACK ON YOUR CREDIT CARD EMI EMI ₹3,290/- ONWARDS
Pigeon MIXER GRINDER 750 WATTS SPECIAL PRICE ₹2,490/-
Pigeon Preethi Butterfly FABER LPG GAS STOVE 3 BURNER ₹3,490/- 4 BURNER ₹4,290/-
VL VIJAYALAKSHMI WET GRINDER 2 Ltrs. SPECIAL PRICE ₹3,490/-
Pigeon CHIMNEY COMBO 55% DISCOUNT NEBULA CHIMNEY 60 CM + AYUSH 4 BR MRP ₹22,089/- SPECIAL PRICE ₹9,990/-
EUREKA FORBES AO Smith HAVELLS LG pureit Livpure RO WATER PURIFIER SPECIAL PRICE ₹9,990/- ONWARDS
Haier AO Smith HAVELLS V-GUARD WATER HEATER FREE INSTALLATION 3 LITRES ₹3,290/- 15 LITRES ₹6,990/- 25 LITRES ₹7,790/-
ಬೆಂಗಳೂರು
ಉಲ್ಲಾಳ್ ಮುಖ್ಯ ರಸ್ತೆ | ಬಾಗಲೂರು | ಬಿಡದಿ | ಕೋಣನಕುಂಟೆ | ಬೇಗೂರು | ಆರ್.ಟಿ. ನಗರ | ಹೊಸಕೋಟೆ | ಹೆಣ್ಣೂರು ಮುಖ್ಯ ರಸ್ತೆ | ಮಹದೇವಪುರ | ಉತ್ತರಹಳ್ಳಿ | ವೈಟ್ ಫೀಲ್ಡ್
ಯಲಹಂಕ | ಹೆಬ್ಬಗೋಡಿ | ರಾಜರಾಜೇಶ್ವರಿನಗರ ಪ್ರೀಮಿಯಮ್ ಸ್ಟೋರ್ | ತನಿಸಂದ್ರ | ವಿಜಯನಗರ | ಪೀಣ್ಯ ಬಿ-ದಾಸರಹಳ್ಳಿ | ಮತ್ತಿಕೆರೆ | ಹೆಚ್.ಎಸ್.ಆರ್. ಲೇಔಟ್ | ಬನಶಂಕರಿ | ಜಯನಗರ | ಚಂದ್ರ ಲೇಔಟ್ | ನಾಗರಭಾವಿ | ಮಾರತಹಳ್ಳಿ
ಕೆಂಗೇರಿ | ಚನ್ನಸಂದ್ರ | ಸುಂಕದಕಟ್ಟೆ | ರಾಜಾಜಿನಗರ | ವಿದ್ಯಾರಣ್ಯಪುರ | ಹೆಗ್ಗನಹಳ್ಳಿ | ಹೆಚ್.ಆರ್.ಬಿ.ಆರ್. ಲೇಔಟ್ | ರಾಮಮೂರ್ತಿನಗರ | ಪುಟ್ಟೇನಹಳ್ಳಿ | ಹುಳಿಮಾವು | LG SHOPPE ಮಾರತಹಳ್ಳಿ | LG SHOPPE ರಾಜಾಜಿನಗರ | LG SHOPPE ರಾಜರಾಜೇಶ್ವರಿನಗರ
Regd. Off: M/s ADISHWAR INDIA LIMITED, #85, 59th Cross, 4th Block, Rajaji Nagar, Bangalore - 560010 Tel: 080-40733999, CIN: U51909KA1997PLC021681
• 0% Interest • Free Delivery • Exchange Offers • Spot Finance • Major Credit Cards Accepted • Home Delivery only within City Limits • 0% Interest, Offers, are subject to evaluation • Offers valid till stocks last • Products available without the offers also • Spot finance is available from Bajaj Finance • Terms &

ಆದೀಶ್ವರ್
ಎಲೆಕ್ಟ್ರೋ ವರ್ಲ್ಡ್
gadget for every budget!
GET INSTANT
CASH BACK
UPTO
₹ 25,000/-
ON CREDIT & DEBIT CARD EMI
ಬೃಹತ್ ದೀಪಾವಳಿ ಸೇಲ್
ದೀಪಾವಳಿ ಹಬ್ಬದ ಹಾರ್ದಿಕ ಶುಭಾಶಯಗಳು
LOWEST DOWNPAYMENT & SMALLEST EMI FINANCE OFFERS
1 EMI FREE ON LG SONY Haier UPTO ₹25,000/-
AVAIL UPTO 36 MONTHS LONG TENURE EMI
EMI CARD EASY FINANCE
JUST SHOW AADHAAR CARD FOR EASY FINANCE OFFERS & TAKE HOME YOUR FAVOURITE PRODUCTS
0% INTEREST FREE FINANCE
MINI LED 85 inch FESTIVAL PRICE ₹1,64,990/-
QLED 75 inch FESTIVAL PRICE ₹79,990/-
QLED 65 inch FESTIVAL PRICE ₹57,990/-
QLED 55 inch FESTIVAL PRICE ₹38,990/-
SONY LG Haier Panasonic BPL Hisense
BIG SCREEN
ENJOY NEXT LEVEL VIEWING WITH
Amazing Festival Offers
MINI LED 100 inch
NETFLIX prime video YouTube hotstar SONY liv Z5
FESTIVAL PRICE | ₹2,99,990/-
SONY BRAVIA 2 | 4K ULTRA HD 75 EMI ₹2,490/- UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
LG QNED AI TV 75 EMI ₹1,994/- UPTO ₹7,500/- INSTANT CASH BACK ON YOUR CREDIT CARD EMI LOW DOWNPAYMENT LOW EMI
Haier 4K ULTRA HD 75 EMI ₹2,994/- UPTO ₹8,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
Panasonic UHD 4K 55 EMI ₹3,499/- UPTO ₹5,000/- INSTANT CASH BACK ON YOUR CREDIT CARD EMI LOW DOWNPAYMENT LOW EMI
iphone17 Get OG adapter FREE JUST PAY | ₹2,599*/-
ONEPLUS Nord 5 5G Get OG Neck band FREE JUST PAY | ₹999*/-
SAMSUNG S25 Ultra Get OG Neck band FREE JUST PAY | ₹3,699*/-
realme 15X 5G Get OG Neck band FREE JUST PAY | ₹999*/-
Redmi 15 5G Get OG Neck band FREE JUST PAY | ₹999*/-
ASSURED GIFT ON EVERY PURCHASE*
SAMSUNG ONEPLUS realme mi vivo oppo
Price Inclusive of Bank Offers*
BAJAJ FINSERV IDFC FIRST Bank Pine Labs
*T&C apply
ಚನ್ನಪಟ್ಟಣ PH : 9036593446 / 9036593447
ಶಿರಸಿ PH : 9591997260, 9731306569
ಕೋಲಾರ 9731306635/9731306574 08152-467397
ಬೆಳಗಾವಿ 0831 4215241 / 42, 9731306717 / 9731306713
ಬಳ್ಳಾರಿ Ph : 08392-242330 / 337, 9731306742 / 9731331684
ಚಿತ್ರದುರ್ಗ 08194-224224, 9686446883
ದಾವಣಗೆರೆ 08192-233626/27, 9731306633 / 6712
ತಿಪಟೂರು Ph : 08134-250104/304, 9686680758 / 9731306552
ತುಮಕೂರು Ph : 0816-4021031, 9731306549 / 9591997270
ಯಾದಗಿರಿ Ph : 08173/251779/759 8861002260
ಗೋಣಿಕೊಪ್ಪ 7702770314/7702770353
ಕೊಪ್ಪಳ 08539 221931/32 9731306645
ಬೀದರ್ 08482 226800/01 9513499863
ಕಲಬುರ್ಗಿ Ph 08472 227556 9108023816
ಕೆ.ಆರ್. ನಗರ 08223295855/66 9731306715
ಚನ್ನರಾಯಪಟ್ಟಣ 08176253312 / 295256, 9513499855
ವಿಜಯಪುರ 9353907691 / 9606865996
ಸಿಂಧನೂರ್ 08535-222254, 9731306673 / 9731306672
ಕುಶಾಲನಗರ 9591997262/9591997263
ಮಂಡ್ಯ 08232406100/08232406200 9513599861/7349609274
ಚಿಕ್ಕಮಗಳೂರು Ph : 08262 - 239944 / 45, 9963998358, 9963998365
ಶಹಾಪೂರ 9513499858 08479-240565,244565
ತೊಕ್ಕೊಟ್ಟು 0824-2956565 9731306621
ಮೈಸೂರು 5 ಸ್ಟೋರ್ಸ್
ಕುವೆಂಪುನಗರ ಅಕ್ಷಯ ಭಂಡಾರ Ph : 0821-2343705/6, 9731306587
ಹಿನ್‌ಕಲ್ ಹುಣಸೂರು ಮುಖ್ಯ ರಸ್ತೆ, ಫ್ಲೈ ಓವರ್ ಕೆಳಗೆ Ph. 0821-4852733 / 4851773, 8861007297
ಉದಯಗಿರಿ ಮಹದೇವಪುರ ಮುಖ್ಯ ರಸ್ತೆ, BSNL ಕಛೇರಿ ಸಿಗ್ನಲ್ ಹತ್ತಿರ Ph : 0821-2457860/50, 8861007304/9731306653
ಜೆ.ಪಿ ನಗರ 8861007309 / 886107306
ಡಾ. ರಾಜ್‌ಕುಮಾರ್ ರಸ್ತೆ 8861002262/8861002263
Free Gifts depends on Brands & Selective Models • Products shown here are only indicative • Exchange Rates Conditions apply • Finance at the sole discretion of the financiers • Offers not applicable on Sony & Samsung.
HELPLINE 080 - 408 33 999
Shop Online @ www.adishwarestore.com

ಜಯಿಸುವ ಒತ್ತಡದಲ್ಲಿ ಗಿಲ್ ಬಳಗ

ಭಾರತ–ಆಸ್ಟ್ರೇಲಿಯಾ 2ನೇ ಏಕದಿನ ಪಂದ್ಯ ನಾಳೆ • ರೋಹಿತ್, ಕೊಹ್ಲಿ ಮೇಲೆ ಕಣ್ಣು

ಅಡಿಲೇಡ್: ಶುಭಮನ್ ಗಿಲ್ ನಾಯಕರಾದ ನಂತರ ಭಾರತ ತಂಡವು ಇದೇ ಮೊದಲ ಬಾರಿ ಆಸ್ಟ್ರೇಲಿಯಾದಲ್ಲಿ ಏಕದಿನ ಕ್ರಿಕೆಟ್ ಸರಣಿ ಆಡುತ್ತಿದೆ. ಆದರೆ ಈ ಸರಣಿಯ ಮೊದಲ ಪಂದ್ಯದಲ್ಲಿಯೇ ದಯನೀಯ ಸೋಲು ಅನುಭವಿಸಿದೆ.

ತಂಡದ 'ಸೂಪರ್‌ಸ್ಟಾರ್' ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರ ವೈಫಲ್ಯವೂ ಮೊದಲ ಪಂದ್ಯದಲ್ಲಿ ಕಾಡಿತ್ತು. ಗುರುವಾರ ನಡೆಯಲಿರುವ ಎರಡನೇ ಪಂದ್ಯದಲ್ಲಿ ಈ ಇಬ್ಬರೂ ಆಟಗಾರರು ಲಯಕ್ಕೆ ಮರಳುವ ಜೊತೆಗೆ ತಂಡವು ಪಂದ್ಯವನ್ನೂ ಜಯಿಸಬೇಕಿದೆ. ಇಲ್ಲದಿದ್ದರೆ ಮೂರು ಪಂದ್ಯಗಳ ಸರಣಿ ಜಯದ ಕನಸು ಕೈಜಾರಬಹುದು.

ಪರ್ತ್‌ನಲ್ಲಿ ನಡೆದಿದ್ದ ಮೊದಲ ಪಂದ್ಯಕ್ಕೆ ಮಳೆ ಅಡ್ಡಿಯಾಗಿತ್ತು. ಆದರೆ ಸಿಕ್ಕ ಅವಕಾಶದಲ್ಲಿ ಭಾರತದ ಬ್ಯಾಟರ್‌ಗಳು ತಮ್ಮ ಸಾಮರ್ಥ್ಯ ಮೆರೆಯುವಲ್ಲಿ ವಿಫಲರಾಗಿದ್ದರು. 26 ಓವರ್‌ಗಳಲ್ಲಿ 136 ರನ್‌ಗಳನ್ನು ಮಾತ್ರ ಗಳಿಸಲು ತಂಡಕ್ಕೆ ಸಾಧ್ಯವಾಗಿತ್ತು.

ಈಗಾಗಲೇ ಟೆಸ್ಟ್ ಮತ್ತು ಟಿ20 ಕ್ರಿಕೆಟ್‌ನಿಂದ ನಿವೃತ್ತಿ ಪಡೆದಿರುವ ರೋಹಿತ್ ಮತ್ತು ಕೊಹ್ಲಿ ಅವರು ಏಕದಿನ ಮಾದರಿಯಲ್ಲಿ ಮಾತ್ರ ಆಡುತ್ತಿದ್ದಾರೆ. ಇನ್ನೆರಡು ವರ್ಷಗಳ ನಂತರ ನಡೆಯಲಿರುವ ವಿಶ್ವಕಪ್ ಟೂರ್ನಿಯಲ್ಲಿ ಆಡುವ ಇರಾದೆ ಅವರದ್ದು. ಆದರೆ ಈ ಸರಣಿಯಲ್ಲಿ ಅವರು ತೋರುವ ಆಟವೇ ನಿರ್ಣಾಯಕವಾಗುವ ಸಾಧ್ಯತೆ ದಟ್ಟವಾಗಿದೆ.

ಪರ್ತ್ ಪಂದ್ಯದಲ್ಲಿ ರೋಹಿತ್ 8 ರನ್ ಗಳಿಸಿದರು. ಕೊಹ್ಲಿ ಖಾತೆಯನ್ನೇ ತೆರೆಯಲಿಲ್ಲ. ಅವರು ಮತ್ತೆ ಆಫ್‌ಸ್ಟಂಪ್ ಹೊರಗಿನ ಎಸೆತಕ್ಕೆ ವಿಕೆಟ್ ಒಪ್ಪಿಸಿದರು.

ನಾಯಕ ಶುಭಮನ್, ಶ್ರೇಯಸ್ ಅಯ್ಯರ್, ನಿತೀಶ್ ರೆಡ್ಡಿ, ವಾಷಿಂಗ್ಟನ್ ಸುಂದರ್ ಅವರು ಬ್ಯಾಟಿಂಗ್‌ನಲ್ಲಿ ಎಡವಿದರು. ಅಕ್ಷರ್ ಪಟೇಲ್ (31ರನ್) ಮತ್ತು ಕೆ.ಎಲ್. ರಾಹುಲ್ (38 ರನ್) ಒಂದಿಷ್ಟು ಹೊತ್ತು ಕ್ರೀಸ್‌ನಲ್ಲಿ ಇದ್ದರು. ಆಸ್ಟ್ರೇಲಿಯಾದ ಅನುಭವಿ ವೇಗಿಗಳಾದ ಮಿಚೆಲ್ ಸ್ಟಾರ್ಕ್, ಹೇಜಲ್‌ವುಡ್, ನೇಥನ್ ಎಲಿಸ್ ಅವರ ಬೌಲಿಂಗ್ ಮುಂದೆ ಪ್ರವಾಸಿ ಬ್ಯಾಟರ್‌ಗಳು ಪರದಾಡಿದ್ದರು.

ಭಾರತದ ಬೌಲಿಂಗ್ ವಿಭಾಗಕ್ಕೆ ಜಸ್‌ಪ್ರೀತ್ ಬೂಮ್ರಾ ಅವರ ಬಲ ಇಲ್ಲ. ಮೊಹಮ್ಮದ್ ಸಿರಾಜ್, ಅರ್ಷದೀಪ್ ಸಿಂಗ್ ಹಾಗೂ ಹರ್ಷಿತ್ ರಾಣಾ ಅವರೇ ವೇಗದ ವಿಭಾಗದ ನಿಭಾಯಿಸಬೇಕಿದೆ. ಈ ಪಂದ್ಯದಲ್ಲಿ ಪ್ರಸಿದ್ಧಕೃಷ್ಣ ಅವರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ.

ಕೆ.ಎಲ್. ರಾಹುಲ್ ಅವರು ನೆಟ್ಸ್‌ನಲ್ಲಿ ಅಭ್ಯಾಸ ನಡೆಸಿದರು ಬಿಸಿಸಿಐ ಚಿತ್ರ

ಆದರೆ, ಮಿಚೆಲ್ ಮಾರ್ಷ್, ಟ್ರಾವಿಸ್ ಹೆಡ್, ಮ್ಯಾಥ್ಯೂ ಶಾರ್ಟ್, ಜೋಶ್ ಫಿಲಿಪ್ ಅವರನ್ನು ಕಟ್ಟಿಹಾಕಲು ವಿಶೇಷ ತಂತ್ರಗಾರಿಕೆ ಹೆಣೆಯುವ ಸವಾಲು ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ನಾಯಕ ಗಿಲ್ ಅವರ ಮುಂದಿದೆ.

ಪಂದ್ಯ ಆರಂಭ: ಬೆಳಿಗ್ಗೆ 9
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಸೆಮಿಫೈನಲ್ ತಲುಪಲು ಭಾರತ ವನಿತೆಯರಿಗೆ ಗೆಲುವು ಅನಿವಾರ್ಯ

ಕೌರ್ ಬಳಗಕ್ಕೆ ನಿರ್ಣಾಯಕ ಸವಾಲು

ನವಿ ಮುಂಬೈ/ಬೆಂಗಳೂರು: ಐಸಿಸಿ ಮಹಿಳಾ ಏಕದಿನ ವಿಶ್ವಕಪ್‌ನಲ್ಲಿ ಸತತ ಮೂರು ಪಂದ್ಯಗಳನ್ನು ಸೋತಿರುವ ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ಸೆಮಿಫೈನಲ್ ಹಾದಿ ಕಠಿಣವಾಗಿದೆ. ಗುರುವಾರ ನಡೆಯಲಿರುವ ನ್ಯೂಜಿಲೆಂಡ್ ಎದುರಿನ ಪಂದ್ಯವು ಭಾರತಕ್ಕೆ ನಿರ್ಣಾಯಕವಾಗಲಿದೆ.

ತವರಿನ ಲಾಭ ಪಡೆದು ಚೊಚ್ಚಲ ಬಾರಿಗೆ ವಿಶ್ವಕಪ್ ಗೆಲ್ಲುವ ನಿರೀಕ್ಷೆಯಲ್ಲಿದ್ದ ಭಾರತದ ವನಿತೆಯರು ಇದೀಗ ಅಂತಿಮ ನಾಲ್ಕರಲ್ಲಿ ಸ್ಥಾನ ಪಡೆಯಲೂ ಪರದಾಡುವಂತಾಗಿದೆ. 5 ಪಂದ್ಯಗಳಲ್ಲಿ ಎರಡು ಗೆಲುವಿನೊಂದಿಗೆ 4 ಅಂಕ ಗಳಿಸಿರುವ ಭಾರತ, ಉಳಿದ ಎರಡು ಪಂದ್ಯ ಗೆದ್ದು ಸೆಮಿಫೈನಲ್ ಪ್ರವೇಶಿಸುವ ಲೆಕ್ಕಾಚಾರದಲ್ಲಿದೆ. ಆದರೆ, ಇಷ್ಟೇ ಅಂಕಗಳನ್ನು ಹೊಂದಿರುವ ಕಿವೀಸ್ ವನಿತೆಯರು ಭಾರತಕ್ಕೆ ಪ್ರಬಲ ಪೈಪೋಟಿ ಒಡ್ಡುವ ಯೋಜನೆಯಲ್ಲಿದ್ದಾರೆ.

ದಕ್ಷಿಣ ಆಫ್ರಿಕಾ ಎದುರು 252 ರನ್ ಹಾಗೂ ಆಸ್ಟ್ರೇಲಿಯಾ ಎದುರು 331 ರನ್ ಮೊತ್ತವನ್ನು ರಕ್ಷಿಸಿಕೊಳ್ಳಲು ವಿಫಲವಾಗಿದ್ದ ಕೌರ್ ಬಳಗಕ್ಕೆ ಇಂಗ್ಲೆಂಡ್ ನೀಡಿದ್ದ 289 ರನ್ ಗುರಿ ಬೆನ್ನಟ್ಟಲೂ ಸಾಧ್ಯವಾಗಿರಲಿಲ್ಲ. ಅದರಲ್ಲೂ, ಕೊನೆಯ 54 ಎಸೆತಗಳಲ್ಲಿ 56 ರನ್ ಗಳಿಸಬೇಕಿದ್ದ ಭಾರತ ಅಂತಿಮ ಕ್ಷಣದಲ್ಲಿ ಗೆಲುವು ಕೈಚೆಲ್ಲಿತ್ತು. ಈ ಹಿನ್ನಡೆಯು ತಂಡದ ತಂತ್ರಗಾರಿಕೆಯ ಮೇಲೆ ಪ್ರಶ್ನೆ ಮೂಡುವಂತೆ ಮಾಡಿದೆ.

ಸ್ಮೃತಿ ಮಂದಾನ ಅವರು ಲಯದಲ್ಲಿರುವುದು ಹಾಗೂ ನಾಯಕಿ ಕೌರ್ ಅವರು ಕಳೆದ ಪಂದ್ಯದಲ್ಲಿ 70 ರನ್ ಗಳಿಸಿರುವುದು ಆತಿಥೇಯ ತಂಡಕ್ಕೆ ಬಲ ತಂದಿದೆ. ಆದರೆ, ಹರ್ಲೀನ್ ಡಿಯೋಲ್ ಹಾಗೂ ಪ್ರತೀಕಾ ರಾವಲ್ ಅವರು ಬ್ಯಾಟಿಂಗ್‌ನಲ್ಲಿ ಇನ್ನೂ ಹೆಚ್ಚಿನ ಕಾಣಿಕೆ ನೀಡಬೇಕಿದೆ.

ಬೌಲಿಂಗ್ ವಿಭಾಗವೂ ಅಷ್ಟೇನೂ ಪರಿಣಾಮಕಾರಿಯಾಗಿಲ್ಲ. ಸ್ಪಿನ್ ವಿಭಾಗದಲ್ಲಿ ದೀಪ್ತಿ ಶರ್ಮಾ ಹಾಗೂ ಶ್ರೀಚರಣಿ ಅವರು ಎದುರಾಳಿ ತಂಡದ ಬ್ಯಾಟರ್‌ಗಳಿಗೆ ಕೊಂಚ ಕಡಿವಾಣ ಹಾಕಿದ್ದಾರೆ. ಆದರೆ, ವೇಗದ ಬೌಲಿಂಗ್ ವಿಭಾಗದಲ್ಲಿ ಕ್ರಾಂತಿ ಗೌಡ್ ಹೊರತುಪಡಿಸಿದರೆ, ಉಳಿದ ಬೌಲರ್‌ಗಳು ಧಾರಾಳವಾಗಿ ರನ್ ಬಿಟ್ಟುಕೊಟ್ಟಿದ್ದಾರೆ.

ಅತ್ತ, ಕೊಲಂಬೊದಲ್ಲಿ ನಡೆದ ಎರಡು ಪಂದ್ಯಗಳು ಮಳೆಯಿಂದಾಗಿ ಸ್ಥಗಿತಗೊಂಡಿದ್ದು ನ್ಯೂಜಿಲೆಂಡ್ ನಿರಾಶೆಗೊಂಡಿದೆ. ಈ ಪಂದ್ಯವನ್ನು ಗೆದ್ದು ಅಗ್ರ ನಾಲ್ಕರಲ್ಲಿ ಸ್ಥಾನ ಪಡೆಯಲು ಸೋಫಿ ಡಿವೈನ್ ಬಳಗ ಕಾತರಿಸುತ್ತಿದೆ. ಆಸ್ಟ್ರೇಲಿಯಾ, ಇಂಗ್ಲೆಂಡ್ ಹಾಗೂ ದಕ್ಷಿಣ ಆಫ್ರಿಕಾ ತಂಡಗಳು ಈಗಾಗಲೇ ಸೆಮಿಫೈನಲ್ ಟಿಕೆಟ್ ಖಚಿತಪಡಿಸಿಕೊಂಡಿವೆ.

(ಎಡದಿಂದ) ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಕ್ರಾಂತಿ ಗೌಡ್ ಹಾಗೂ ಸ್ಮೃತಿ ಮಂದಾನ

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ಕೇಶವ್ ಮಹಾರಾಜ್ ಏಳು ವಿಕೆಟ್ ಸಾಧನೆ

ರಾವಲ್ಪಿಂಡಿ (ಎಎಫ್‌ಪಿ): ಅನುಭವಿ ಸ್ಪಿನ್ನರ್ ಕೇಶವ್ ಮಹಾರಾಜ್ (102ಕ್ಕೆ 7) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಎರಡನೇ ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಪಾಕಿಸ್ತಾನ ತಂಡವನ್ನು 333 ರನ್‌ಗಳಿಗೆ ನಿಯಂತ್ರಿಸಿತು.

ಮೊದಲ ದಿನ 5 ವಿಕೆಟ್‌ಗೆ 259 ರನ್ ಗಳಿಸಿದ್ದ ಆತಿಥೇಯ ಪಾಕ್ ತಂಡ ಎರಡನೇ ದಿನವಾದ ಮಂಗಳವಾರ 74 ರನ್ ಸೇರಿಸಿ ಆಲೌಟ್ ಆಯಿತು.

ಇದಕ್ಕೆ ಉತ್ತರವಾಗಿ ಇನಿಂಗ್ಸ್ ಆರಂಭಿಸಿದ ದಕ್ಷಿಣ ಆಫ್ರಿಕಾ ತಂಡವು ದಿನದಾಟದ ಅಂತ್ಯಕ್ಕೆ 65 ಓವರ್‌ಗಳಲ್ಲಿ 4 ವಿಕೆಟ್‌ಗೆ 185 ರನ್ ಗಳಿಸಿದೆ.

ಅನುಭವಿ ಸ್ಪಿನ್ನರ್ ಆಸಿಫ್ ಆಫ್ರಿದಿ ಪದಾರ್ಪಣೆ ಪಂದ್ಯದಲ್ಲಿ ಎರಡು ವಿಕೆಟ್ ಪಡೆದು ದಕ್ಷಿಣ ಆಫ್ರಿಕಾಕ್ಕೆ ಆಘಾತ ನೀಡಿದರು. 38 ವರ್ಷದ ಆಸಿಫ್ ಅವರು ಟೋನಿ ಮತ್ತು ಡೆವಾಲ್ಡ್ ಬ್ರೆವಿಸ್ ಅವರ ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಪಾಕಿಸ್ತಾನ: 113.4 ಓವರ್‌ಗಳಲ್ಲಿ 333 (ಸೌದ್ ಶಕೀಲ್ 66, ಸಲ್ಮಾನ್ ಆಘಾ 45; ಕೇಶವ್ ಮಹಾರಾಜ್ 102ಕ್ಕೆ 7). ದಕ್ಷಿಣ ಆಫ್ರಿಕಾ: 65 ಓವರ್‌ಗಳಲ್ಲಿ 4 ವಿಕೆಟ್‌ಗೆ 185 (ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 68, ಟೋನಿ ಡಿ ಜೋರ್ಜಿ 55; ಆಸಿಫ್ ಆಫ್ರಿದಿ 24ಕ್ಕೆ 2).

ಫ್ರೆಂಚ್ ಓಪನ್ ಬ್ಯಾಡ್ಮಿಂಟನ್: ಮೊದಲ ಸುತ್ತಿನಲ್ಲೇ ಸೇನ್ ನಿರ್ಗಮನ

ಪ್ಯಾರಿಸ್ (ಪಿಟಿಐ): ಭಾರತದ ಲಕ್ಷ್ಯ ಸೇನ್ ಅವರು ಮಂಗಳವಾರ ಆರಂಭವಾದ ಫ್ರೆಂಚ್ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಮೊದಲ ಸುತ್ತಿನಲ್ಲಿ ಹೊರಬಿದ್ದರು.

24 ವರ್ಷದ ಸೇನ್, ಪುರುಷರ ಸಿಂಗಲ್ಸ್‌ನ 32ರ ಘಟ್ಟದ ಪಂದ್ಯದಲ್ಲಿ 7-21, 16-21ರಿಂದ ಐರ್ಲೆಂಡ್‌ನ ನ್ಹಾಟ್ ನುಯೆನ್ ವಿರುದ್ಧ ಹೆಚ್ಚಿನ ಪ್ರತಿರೋಧ ತೋರದೆ ಸೋತರು.

ಕಳೆದ ತಿಂಗಳು ಹಾಂಗ್‌ಕಾಂಗ್ ಓಪನ್‌ನಲ್ಲಿ ಫೈನಲ್ ತಲುಪಿದ್ದ ಸೇನ್ ಇಲ್ಲಿ ಲಯ ಕಂಡುಕೊಳ್ಳಲು ಪರದಾಡಿದರು. ವಿಶ್ವದ 16ನೇ ಕ್ರಮಾಂಕದ ಅವರು, 29ನೇ ರ್‍ಯಾಂಕ್‌ನ ನುಯೆನ್ ಅವರಿಗೆ ಯಾವುದೇ ಹಂತದಲ್ಲಿ ಸರಿಸಾಟಿಯಾಗಲಿಲ್ಲ.

ಅಲ್ಮೋರಾದ ಈ ಆಟಗಾರ ಕಳೆದ ವಾರ ಡೆನ್ಮಾರ್ಕ್ ಓಪನ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಈ ಹಾದಿಯಲ್ಲಿ ಸೇನ್ ಅವರು ನುಯೆನ್ ಅವರನ್ನು ಮೂರು ಗೇಮ್‌ಗಳ ಹೋರಾಟದಲ್ಲಿ ಮಣಿಸಿದ್ದರು. ಆದರೆ, ಇಲ್ಲಿ ಐರ್ಲೆಂಡ್‌ನ ಆಟಗಾರ ಮುಯ್ಯಿ ತೀರಿಸಿಕೊಂಡರು.

ನುಯೆನ್ ಅವರ ನಿಖರ ಆಟದ ಮುಂದೆ ಮಂಕಾದ ಸೇನ್, ಪದೇ ಪದೇ ವೈಡ್ ಮತ್ತು ನೆಟ್‌ಗೆ ಹೊಡೆದು ಕೈಸುಟ್ಟುಕೊಂಡರು. ಮೊದಲ ಗೇಮ್ ಅನ್ನು ಸುಲಭವಾಗಿ ಕಳೆದುಕೊಂಡ ಅವರು, ಎರಡನೇ ಗೇಮ್‌ನಲ್ಲಿ ಕೊಂಚ ಹೋರಾಟ ತೋರಿದರು.


ಭಾರತದ ಲಕ್ಷ್ಯ ಸೇನ್

ಕರ್ನಾಟಕದ ಆಯುಷ್ ಶೆಟ್ಟಿ ಅವರು ಬುಧವಾರ ಜಪಾನ್‌ನ ಕೋಕಿ ವತಾನಬೆ ವಿರುದ್ಧ ಪುರುಷರ ಸಿಂಗಲ್ಸ್‌ನಲ್ಲಿ ಅಭಿಯಾನ ಆರಂಭಿಸಲಿದ್ದಾರೆ.

ಡಬಲ್ಸ್‌ನಲ್ಲಿ ಭಾರತದ ಅಗ್ರಮಾನ್ಯ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಹಾಗೂ ಚಿರಾಗ್ ಶೆಟ್ಟಿ ಅವರು ಇಲ್ಲಿ ಮೂರನೇ ಬಾರಿ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ.

ಮಹಿಳೆಯರ ಸಿಂಗಲ್ಸ್‌ನಲ್ಲಿ ಅನ್ಮೋಲ್ ಖಾರ್ಬ್, ಅನುಪಮಾ ಉಪಾಧ್ಯಾಯ ಹಾಗೂ ಉನ್ನತಿ ಹೂಡಾ ಸ್ಪರ್ಧೆಯಲ್ಲಿದ್ದಾರೆ.

ಪಡಿಕ್ಕಲ್ ಬದಲಿಗೆ ಪರಂತಾಪ್‌ಗೆ ಸ್ಥಾನ

ಬೆಂಗಳೂರು: ಗೋವಾ ಹಾಗೂ ಕೇರಳ ತಂಡಗಳ ವಿರುದ್ಧ ನಡೆಯಲಿರುವ ರಣಜಿ ಟ್ರೋಫಿ ಪಂದ್ಯಗಳಿಗೆ ದೇವದತ್ತ ಪಡಿಕ್ಕಲ್ ಬದಲು ಆಲ್‌ರೌಂಡರ್ ಯಶೋವರ್ಧನ್ ಪರಂತಾಪ್ ಅವರು ಕರ್ನಾಟಕ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಉಳಿದಂತೆ ಮೊದಲ ಪಂದ್ಯದಲ್ಲಿ ಆಡಿದ ತಂಡವನ್ನೇ ಉಳಿಸಿಕೊಳ್ಳಲಾಗಿದೆ.

ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ಇದೇ 25ರಿಂದ 28ರವರೆಗೆ ಶಿವಮೊಗ್ಗದಲ್ಲಿ ಗೋವಾ ವಿರುದ್ಧ ಹಾಗೂ ನವೆಂಬರ್ 1ರಿಂದ 4ರ ವರೆಗೆ ತಿರುವನಂತಪುರದಲ್ಲಿ ಕೇರಳ ವಿರುದ್ಧ ಆಡಲಿದೆ.

ಎಡಗೈ ಬ್ಯಾಟರ್ ದೇವದತ್ತ ಅವರು ದಕ್ಷಿಣ ಆಫ್ರಿಕಾ 'ಎ' ತಂಡದ ಎದುರು ನಡೆಯಲಿರುವ ಎರಡು 'ಟೆಸ್ಟ್' ಪಂದ್ಯಗಳಲ್ಲಿ ಆಡುವ ಭಾರತ 'ಎ' ತಂಡಕ್ಕೆ ಆಯ್ಕೆಯಾಗಿದ್ದಾರೆ.

ತಂಡ ಹೀಗಿದೆ: ಮಯಂಕ್ ಅಗರವಾಲ್ (ನಾಯಕ), ಕರುಣ್ ನಾಯರ್, ಸ್ಮರಣ್ ಆರ್., ಶ್ರೀಜಿತ್ ಕೆ.ಎಲ್. (ವಿಕೆಟ್ ಕೀಪರ್), ಶ್ರೇಯಸ್ ಗೋಪಾಲ್, ವಿದ್ವತ್ ಕಾವೇರಪ್ಪ, ಅಭಿಲಾಷ್ ಶೆಟ್ಟಿ, ವೆಂಕಟೇಶ್ ಎಂ., ಎಸ್.ಜೆ.ನಿಕಿನ್ ಜೋಸ್, ಅಭಿನವ್ ಮನೋಹರ್, ಕೃತಿಕ್ ಕೃಷ್ಣ (ವಿಕೆಟ್ ಕೀಪರ್), ಅನೀಶ್ ಕೆ.ವಿ., ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಯಶೋವರ್ಧನ್ ಪರಂತಾಪ್.

ದ.ಆಫ್ರಿಕಾ ಪಾರಮ್ಯ: ಮುಗ್ಗರಿಸಿದ ಪಾಕ್

ಕೊಲಂಬೊ (ಪಿಟಿಐ): ಬಿಟ್ಟು ಬಿಟ್ಟು ಸುರಿದ ಮಳೆಯ ನಡುವೆ ಬ್ಯಾಟಿಂಗ್–ಬೌಲಿಂಗ್ ಎರಡರಲ್ಲೂ ಮಿಂಚಿದ ದಕ್ಷಿಣ ಆಫ್ರಿಕಾ ಆಟಗಾರ್ತಿಯರು ಡಕ್ವರ್ಥ್ ಲೂಯಿಸ್ ನಿಯಮದ ಆಧಾರದಲ್ಲಿ ಪಾಕಿಸ್ತಾನ ತಂಡವನ್ನು 150 ರನ್‌ಗಳಿಂದ ಮಣಿಸಿದರು. ಅದರೊಂದಿಗೆ, ಅಂಕಪಟ್ಟಿಯಲ್ಲಿ (10 ಪಾಯಿಂಟ್ಸ್) ಅಗ್ರಸ್ಥಾನಕ್ಕೇರಿದರು.

ಆರ್. ಪ್ರೇಮದಾಸ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 40 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 312 ರನ್‌ಗಳ ಬೃಹತ್ ಮೊತ್ತ ಗಳಿಸಿತು. ನಂತರವೂ ಮಳೆ ಸುರಿದ ಕಾರಣ, ಡಿಎಲ್‌ಎಸ್ ನಿಯಮದಡಿ ಪಾಕಿಸ್ತಾನಕ್ಕೆ ಗೆಲುವಿನ ಗುರಿಯನ್ನು 20 ಓವರ್‌ಗಳಲ್ಲಿ 234 ರನ್‌ಗಳಿಗೆ ಪರಿಷ್ಕರಿಸಲಾಯಿತು.

ಗುರಿ ಬೆನ್ನಟ್ಟಿದ ಪಾಕಿಸ್ತಾನ ತಂಡವು ಆಲ್‌ರೌಂಡರ್ ಮರೈಝಾನ್ ಕಾಪ್ (20ಕ್ಕೆ3) ಅವರ ದಾಳಿ ಎದುರು 7 ವಿಕೆಟ್ ನಷ್ಟಕ್ಕೆ 83 ರನ್ ಗಳಿಸಲಷ್ಟೇ ಶಕ್ತವಾಯಿತು. ನೀರಸವಾಗಿ ಬ್ಯಾಟಿಂಗ್ ಮಾಡಿದ ಫಾತಿಮಾ ಸನಾ ಬಳಗ, ಸುಲಭವಾಗಿ ಸೋಲೊಪ್ಪಿಕೊಂಡಿತು.

ದಕ್ಷಿಣ ಆಫ್ರಿಕಾ ತಂಡದ ಮರೈಝಾನ್ ಕಾಪ್ ಬ್ಯಾಟಿಂಗ್ ಎಎಫ್‌ಪಿ ಚಿತ್ರ

ಇದಕ್ಕೆ ಮೊದಲು, ಟಾಸ್ ಗೆದ್ದ ಪಾಕಿಸ್ತಾನ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಮಳೆ ಸುರಿದ ಕಾರಣ ಆಟ ತಡವಾಗಿ ಆರಂಭವಾಯಿತು. ಡಕ್ವರ್ಥ್ ಲೂಯಿಸ್ ನಿಯಮದ ಅನ್ವಯ ಇನಿಂಗ್ಸ್‌ಗೆ 40 ಓವರ್ ನಿಗದಿ ಮಾಡಲಾಯಿತು. ಆರಂಭಿಕ ಬ್ಯಾಟರ್, ದಕ್ಷಿಣ ಆಫ್ರಿಕಾ ತಂಡದ ನಾಯಕಿ ಲಾರಾ ವೊಲ್ವಾರ್ಟ್ (90; 82ಎ, 4X10, 6X2) ಕೇವಲ ಹತ್ತು ರನ್‌ಗಳಿಂದ ಶತಕ ಕೈತಪ್ಪಿಸಿಕೊಂಡರು. ಲಾರಾ ಹಾಗೂ ಸುನೆ (61; 59ಎ, 4X8, 6X2) ಎರಡನೇ ವಿಕೆಟ್ ಜೊತೆಯಾಟದಲ್ಲಿ 118 ರನ್ ಸೇರಿಸಿದರು.

ಕೊನೆಯಲ್ಲಿ ಮರೈಝಾನ್ ಕಾಪ್ (ಔಟಾಗದೇ 68; 43ಎ, 4X6, 6X3) ಹಾಗೂ ನದೀನ್ (41; 16ಎ, 4X3, 6X4) ಬಿರುಸಿನ ಆಟವಾಡಿ ತಂಡದ ಮೊತ್ತವನ್ನು ತ್ರಿಶತಕದ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 40 ಓವರ್‌ಗಳಲ್ಲಿ 9ಕ್ಕೆ312 (ಲಾರಾ ವೊಲ್ವಾರ್ಟ್ 90, ಸುನೆ ಲೀಸ್ 61, ಮರೈಝುನ್ ಕಾಪ್ ಔಟಾಗದೇ 68, ನದೀನ್ ಡಿ ಕರ್ಕ್ 41,ಸಾದಿಯಾ ಇಕ್ಬಾಲ್ 63ಕ್ಕೆ3, ನಶ್ರಾ ಸಂಧು 45ಕ್ಕೆ3) ಪಾಕಿಸ್ತಾನ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 83 (ಸಿದ್ರಾ ನವಾಜ್ ಔಟಾಗದೇ 22, ನತಾಲಿಯಾ ಪರ್ವೇಜ್ 20, ಮರೈಝಾನ್ ಕಾಪ್ 20ಕ್ಕೆ3, ನೊಂಡುಮಿಸೊ ಶಾಂಗಸೆ 19ಕ್ಕೆ2)

ಪಂದ್ಯದ ಆಟಗಾರ್ತಿ: ಮರೈಝಾನ್ ಕಾಪ್

ವಿಶ್ವಾಸ್ ಮಿಂಚು ಬೆಂಗಾಲ್‌ಗೆ ಜಯ

ನವದೆಹಲಿ: ನಾಯಕ ಎಸ್. ವಿಶ್ವಾಸ್ ಅವರ ಚುರುಕಿನ ದಾಳಿಯ ಬಲದಿಂದ ಬೆಂಗಾಲ್ ವಾರಿಯರ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ತಮಿಳ್ ತಲೈವಾಸ್ ಎದುರು ರೋಚಕ ಜಯ ಸಾಧಿಸಿತು.

ಮಂಗಳವಾರ ನಡೆದ ಪಂದ್ಯದಲ್ಲಿ ಬೆಂಗಾಲ್ ತಂಡವು 44–43ರಿಂದ ತಲೈವಾಸ್ ತಂಡವನ್ನು ಮಣಿಸಿತು. ವಿಶ್ವಾಸ್ 19 ಅಂಕಗಳನ್ನು ಗಳಿಸಿ ತಂಡದ ಗೆಲುವಿನ ರೂವಾರಿಯಾದರು.

ತಲೈವಾಸ್ ತಂಡದ ನಾಯಕ ಅರ್ಜುನ್ ದೇಶವಾಲ್ ಕೂಡ 20 ಅಂಕ ಗಳಿಸಿದರು. ಆದರೆ ತಮ್ಮ ತಂಡಕ್ಕೆ ಜಯ ಕೊಡಿಸಲು ಅವರಿಗೆ ಸಾಧ್ಯವಾಗಲಿಲ್ಲ.

ದಿನದ ಎರಡನೇ ಪಂದ್ಯದಲ್ಲಿ ಯು ಮುಂಬಾ ತಂಡವು 37–36ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ಎದುರು ರೋಚಕ ಜಯ ಸಾಧಿಸಿತು. ಮೂರನೇ ಪಂದ್ಯದಲ್ಲಿ, ಹರಿಯಾಣ ಸ್ಟೀಲರ್ಸ್ ತಂಡವು 50–32ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ನ.8,9ರಂದು 'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ'

ರೋಚಕತೆಯ ಅಲೆಯೆಬ್ಬಿಸುವ 'ಸ್ಕಿನ್ಸ್' ಸ್ಪರ್ಧೆಯ ಆಕರ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿವರ್ಷವೂ ಈಜುಪ್ರಿಯರು ಕಾತುರದಿಂದ ಕಾಯುವ ಅತ್ಯಂತ ರೋಮಾಂಚಕ ಮತ್ತು ಪ್ರತಿಷ್ಠಿತವಾದ 'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ'ಗೆ ವೇದಿಕೆ ಸಿದ್ಧವಾಗಿದೆ. ಈ ಬಾರಿಯೂ ಕೂಟವು ಪದ್ಮನಾಭನಗರದಲ್ಲಿರುವ ನೆಟ್ಟಕಲ್ಲಪ್ಪ ಅಕ್ವಾಟಿಕ್ ಕೇಂದ್ರ (ಎನ್‌ಎಸಿ)ದಲ್ಲಿ ನವೆಂಬರ್ 8 ಮತ್ತು 9ರಂದು ಆಯೋಜನೆಗೊಳ್ಳಲಿದೆ.

ಅತ್ಯಾಧುನಿಕ ಮತ್ತು ಸುಸಜ್ಜಿತವಾದ ಮೂಲಸೌಲಭ್ಯಗಳು ಇರುವ ಎನ್‌ಎಸಿಯಲ್ಲಿ ಪ್ರತಿವರ್ಷವು ನಡೆಯುವ ಈ ಕೂಟವು ಅಂತರರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ಈಜು ಕ್ರೀಡೆಯತ್ತ ಮಕ್ಕಳು, ಯುವಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಕರ್ಷಿಸಲು 'ನೆಟ್ಟಕಲ್ಲಪ್ಪ ಈಜು ಸ್ಪರ್ಧೆ'ಯು ಪ್ರೇರಣೆಯಾಗುತ್ತಿದೆ. ಇದಕ್ಕೆ ಕಾರಣವೆಂದರೆ ಪ್ರತಿ ಬಾರಿಯೂ ಇಲ್ಲಿ ಸ್ಪರ್ಧಿಸುತ್ತಿರುವ ಭಾರತದ ಅಗ್ರಮಾನ್ಯ ಈಜುಪಟುಗಳು, ಒಲಿಂಪಿಯನ್ ಈಜು ಸಾಧಕರು. ಈ ಬಾರಿಯೂ ಖ್ಯಾತನಾಮ ಅಂತರರಾಷ್ಟ್ರೀಯ ಈಜುಪಟುಗಳು 'ಸ್ಪರ್ಧಾ ಕೊಳ'ಕ್ಕೆ ಧುಮುಕಲು ಸಿದ್ಧರಾಗಿದ್ದಾರೆ.

ಎಲ್ಲಕ್ಕಿಂತ ಮುಖ್ಯವಾಗಿ ಈ ಕೂಟದಲ್ಲಿ ಪ್ರತಿವರ್ಷವೂ ನಡೆಯುತ್ತಿರುವ 'ಸ್ಕಿನ್ಸ್' ವಿಭಾಗದ ಸ್ಪರ್ಧೆಗಳು ಪ್ರಮುಖ ಆಕರ್ಷಣೆಯಾಗಿವೆ. ನಾಕೌಟ್ ಮಾದರಿಯ ಈ ರೇಸ್ ವಿಭಾಗದಲ್ಲಿ ಈಜುಪಟುಗಳ ಸಾಮರ್ಥ್ಯದ ನೈಜಪ್ರದರ್ಶನ ನಡೆಯುತ್ತದೆ. ಎಲಿಮಿನೇಷನ್ ಸುತ್ತುಗಳು ಇರುವುದರಿಂದ ಸ್ಪರ್ಧಿಗಳ ಈಜು ಕೌಶಲಗಳಷ್ಟೇ ಅಲ್ಲ. ಅವರ ದೈಹಿಕ ಶಕ್ತಿ, ವೇಗ ಮತ್ತು ಮನೋದಾರ್ಢ್ಯಗಳು ಮುಖ್ಯವಾಗುತ್ತವೆ. ಒಲಿಂಪಿಯನ್ ಈಜುಪಟುಗಳು ಕೂಡ ಈ ಸವಾಲು ಎದುರಿಸುವ ರೀತಿ ಅನನ್ಯವಾಗಿದೆ. ನೋಡುಗರಿಗಂತೂ ರೋಚಕ ರಸದೌತಣವನ್ನು ಈ 'ಸ್ಕಿನ್ಸ್' ನೀಡುತ್ತದೆ.

'ಒಟ್ಟು ₹ 10 ಲಕ್ಷಕ್ಕೂ ಹೆಚ್ಚಿನ ನಗದು ಪ್ರಶಸ್ತಿ ನೀಡಲಾಗುವುದು. ಪ್ರತಿ ಬಾರಿ ಹಲವು ವಿಭಾಗಗಳಲ್ಲಿ ಪುರಸ್ಕಾರ ನೀಡಲಾಗುತ್ತದೆ. ಈ ಸಾಲಿಗೆ ಈಗ 'ಅತ್ಯಮೂಲ್ಯ ಈಜುಗಾರ' ಪ್ರಶಸ್ತಿ ಕೂಡ ಸೇರ್ಪಡೆಯಾಗಲಿದೆ. ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ತಲಾ ಒಬ್ಬರು ಸ್ಪರ್ಧಿಗೆ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು. ವಿಜೇತರಿಗೆ ಒಟ್ಟು ₹50 ಸಾವಿರ ನೀಡಲಾಗುವುದು' ಎಂದು ಎನ್‌ಎಸಿ ಮುಖ್ಯಸ್ಥ ವರುಣ್ ನಿಜಾವನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿವಂಗತ ಕೆ.ಎ. ನೆಟ್ಟಕಲ್ಲಪ್ಪ ಅವರು ಕ್ರೀಡಾಕ್ಷೇತ್ರಕ್ಕೆ ನೀಡಿರುವ ಹಲವು ಕೊಡುಗೆಗಳಿಂದ ಪ್ರೇರಣೆಗೊಂಡಿರುವ ಈಜು ಸ್ಪರ್ಧೆ ಇದಾಗಿದೆ. ಈಜು ಕ್ರೀಡೆಯಲ್ಲಿ ಭವಿಷ್ಯದ ರಾಷ್ಟ್ರೀಯ, ಅಂತರರಾಷ್ಟ್ರೀಯ ಮಟ್ಟದ ತಾರೆಗಳನ್ನು ಬೆಳೆಸುವ ಮಹಾನ್ ಉದ್ದೇಶ ಈ ಕೂಟದ್ದಾಗಿದೆ. ವಿಶ್ವದರ್ಜೆಯ ಈ ಸ್ಪರ್ಧೆಯನ್ನು ಕಣ್ತುಂಬಿಕೊಳ್ಳುವ ಸದಾವಕಾಶ ಈಜುಪ್ರೇಮಿಗಳಿಗೆ ಲಭಿಸಲಿದೆ.

ಹೆಸರು ನೋಂದಾಯಿಸಲು: https://nac.org.in/ nettakallappa-swimming-competition ವೆಬ್ ಸೈಟ್‌ಗೆ ಭೇಟಿ ನೀಡಿ. ವಿವರಗಳಿಗೆ; https://nac.org.in ಜಾಲತಾಣಕ್ಕೆ ಭೇಟಿ ನೀಡಿ.

ವಿಂಡೀಸ್ ಬಳಗಕ್ಕೆ 'ಸೂಪರ್' ಜಯ

ಮೀರ್‌ಪುರ್ (ಎಪಿ): ವೆಸ್ಟ್ ಇಂಡೀಸ್ ತಂಡವು ಮಂಗಳವಾರ ಇಲ್ಲಿ ಬಾಂಗ್ಲಾದೇಶ ಎದುರು ನಡೆದ ಏಕದಿನ ಪಂದ್ಯದಲ್ಲಿ ಸೂಪರ್ ಓವರ್‌ನಲ್ಲಿ ಜಯಭೇರಿ ಬಾರಿಸಿತು. ಅದರೊಂದಿಗೆ 3 ಪಂದ್ಯಗಳ ಸರಣಿಯಲ್ಲಿ 1–1ರ ಸಮಬಲ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾ 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 213 ರನ್ ಗಳಿಸಿತು. ಈ ಇನಿಂಗ್ಸ್‌ನಲ್ಲಿ ಎಲ್ಲ 50 ಓವರ್‌ಗಳನ್ನೂ ವಿಂಡೀಸ್‌ನ ಸ್ಪಿನ್ನರ್‌ಗಳು ಮಾಡಿದರು. ಇದು ಅಪರೂಪದ ದಾಖಲೆಯಾಗಿದೆ.

ಅದಕ್ಕುತ್ತರವಾಗಿ ವೆಸ್ಟ್ ಇಂಡೀಸ್ ಕೂಡ 9 ವಿಕೆಟ್‌ಗಳಿಗೆ 213 ರನ್ ಗಳಿಸಿ ಟೈ ಮಾಡಿತು. ಸೂಪರ್ ಓವರ್‌ನಲ್ಲಿ ವಿಂಡೀಸ್ ತಂಡವು 1 ವಿಕೆಟ್ ನಷ್ಟಕ್ಕೆ 10 ರನ್ ಗಳಿಸಿತು. ಬಾಂಗ್ಲಾ 1 ವಿಕೆಟ್‌ಗೆ 9 ರನ್ ಗಳಿಸಿ ಸೋತಿತು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 50 ಓವರ್‌ಗಳಲ್ಲಿ 7ಕ್ಕೆ 213 (ಸೌಮ್ಯಾ ಸರ್ಕಾರ್ 45, ರಿಷಾದ್ ಹುಸೇನ್ ಔಟಾಗದೇ 39, ಗುಡಕೇಶ್ ಮೋತಿ 65ಕ್ಕೆ3, ಅಲಿಕ್ ಅಥನೇಜ್ 14ಕ್ಕೆ2) ವೆಸ್ಟ್ ಇಂಡೀಸ್: 50 ಓವರ್‌ಗಳಲ್ಲಿ 9ಕ್ಕೆ213 (ಶಾಯ್ ಹೋಪ್ ಔಟಾಗದೇ 53, ನಸುಮ್ ಅಹಮದ್ 38ಕ್ಕೆ2, ರಿಷಾದ್ ಹುಸೇನ್ 42ಕ್ಕೆ3).

ದಕ್ಷಿಣ ಆಫ್ರಿಕಾ 'ಎ' ತಂಡದ ಎದುರು ನಡೆಯಲಿರುವ ಎರಡು 'ಟೆಸ್ಟ್' ಪಂದ್ಯ

ಭಾರತ 'ಎ' ತಂಡಕ್ಕೆ ಪಂತ್ ನಾಯಕ

ನವದೆಹಲಿ (ಪಿಟಿಐ): ದಕ್ಷಿಣ ಆಫ್ರಿಕಾ ಎ ತಂಡದ ಎದುರು ನಡೆಯಲಿರುವ ಎರಡು 'ಟೆಸ್ಟ್' ಪಂದ್ಯಗಳಲ್ಲಿ ಆಡುವ ಭಾರತ 'ಎ' ತಂಡಕ್ಕೆ ವಿಕೆಟ್‌ಕೀಪರ್–ಬ್ಯಾಟರ್ ರಿಷಭ್ ಪಂತ್ ಅವರನ್ನು ನೇಮಕ ಮಾಡಲಾಗಿದೆ.

ಅಕ್ಟೋಬರ್ 30 ರಿಂದ ನವೆಂಬರ್ 2ರವರೆಗೆ ಮೊದಲ ಪಂದ್ಯ ನಡೆಯುವುದು. ಎರಡನೇಯದ್ದು ನ.6 ರಿಂದ 9ರವರೆಗೆ ಎರಡನೇ ಪಂದ್ಯ ನಡೆಯಲಿದೆ. ಎರಡೂ ಪಂದ್ಯಗಳು ಬೆಂಗಳೂರು ಹೊರವಲಯದಲ್ಲಿ ಇರುವ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಶ್ರೇಷ್ಠತಾ ಕೇಂದ್ರದಲ್ಲಿ ನಡೆಯಲಿವೆ.

ಮಂಗಳವಾರ ಎರಡೂ ಪಂದ್ಯಗಳಿಗೆ ಪ್ರತ್ಯೇಕ ತಂಡಗಳನ್ನು ಪ್ರಕಟಿಸಲಾಗಿದ್ದು. ಕೆಲವು ಆಟಗಾರರನ್ನು ಬದಲಿಸಲಾಗಿದೆ. ಮೊದಲ ಮತ್ತು ಎರಡನೇ ಪಂದ್ಯಗಳಿಗೆ ಸಾಯಿ ಸುದರ್ಶನ್ ಅವರು ಉಪನಾಯಕರಾಗಿದ್ದಾರೆ. ಆದರೆ ಎರಡನೇ ಪಂದ್ಯದಲ್ಲಿ ಕೆ.ಎಲ್. ರಾಹುಲ್, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್ ಹಾಗೂ ಪ್ರಸಿದ್ಧಕೃಷ್ಣ ಅವರಿದ್ದಾರೆ. ಅವರು ಮೊದಲ ಪಂದ್ಯದಲ್ಲಿ ಆಡುತ್ತಿಲ್ಲ.

ರಿಷಭ್ ಪಂತ್ ಅವರು ಈಚೆಗೆ ಇಂಗ್ಲೆಂಡ್‌ನಲ್ಲಿ ನಡೆದಿದ್ದ ಟೆಸ್ಟ್ ಸರಣಿಯಲ್ಲಿ ಗಾಯಗೊಂಡಿದ್ದರು. ಅವರು ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ಕಾಲಿಗೆ ಚೆಂಡು ಬಡಿದು ಗಾಯವಾಗಿತ್ತು. ಶಸ್ತ್ರಚಿಕಿತ್ಸೆ ಮತ್ತು ಆರೈಕೆಯ ಕಾರಣಕ್ಕಾಗಿ ಅವರು ಕಳೆದ ಎರಡು ತಿಂಗಳುಗಳಿಂದ ಯಾವುದೇ ಪಂದ್ಯದಲ್ಲಿ ಆಡಿಲ್ಲ. ಅವರು ವೆಸ್ಟ್ ಇಂಡೀಸ್ ಎದುರಿನ ಟೆಸ್ಟ್ ಸರಣಿ ಮತ್ತು ಆಸ್ಟ್ರೇಲಿಯಾ ಎದುರಿನ ಏಕದಿನ, ಟಿ20 ಸರಣಿಗಳಿಂದಲೂ ಹೊರಗುಳಿದಿದ್ದಾರೆ. ನವೆಂಬರ್ 14ರಿಂದ ದಕ್ಷಿಣ ಆಫ್ರಿಕಾ ತಂಡವು ಭಾರತದಲ್ಲಿ ಸರಣಿ ಆಡಲಿದ್ದು, ಅದಕ್ಕೆ ಪೂರ್ವಭಾವಿಯಾಗಿ 'ಎ' ತಂಡಗಳ ಸರಣಿ ನಡೆಯುತ್ತಿದೆ. ಇದು ಪಂತ್ ಅವರ ಫಿಟ್‌ನೆಸ್ ಟೆಸ್ಟ್ ಕೂಡ ಆಗಲಿದೆ.

ರಿಷಭ್ ಪಂತ್

ತಂಡಗಳು: ಮೊದಲ ಪಂದ್ಯ: ರಿಷಭ್ ಪಂತ್ (ನಾಯಕ/ವಿಕೆಟ್‌ಕೀಪರ್), ಆಯುಷ್ ಮ್ಹಾತ್ರೆ, ಎನ್. ಜಗದೀಶನ್ (ವಿಕೆಟ್‌ಕೀಪರ್), ಸಾಯಿ ಸುದರ್ಶನ್ (ಉಪನಾಯಕ), ದೇವದತ್ತ ಪಡಿಕ್ಕಲ್, ರಜತ್ ಪಾಟೀದಾರ್, ಹರ್ಷ ದುಬೆ, ತನುಷ್ ಕೋಟ್ಯಾನ್, ಮಾನವ ಸುತಾರ, ಅನ್ಷುಲ್ ಕಾಂಬೋಜ್, ಯಶ್ ಠಾಕೂರ್, ಆಯುಷ್ ಬಡೋನಿ, ಸಾರಾಂಶ್ ಜೈನ್:

ಎರಡನೇ ಪಂದ್ಯ: ರಿಷಭ್ ಪಂತ್ (ನಾಯಕ/ವಿಕೆಟ್‌ಕೀಪರ್), ಕೆ.ಎಲ್ ರಾಹುಲ್, ಧ್ರುವ ಜುರೇಲ್ (ವಿಕೆಟ್‌ಕೀಪರ್), ಸಾಯಿ ಸುದರ್ಶನ್ (ಉಪನಾಯಕ), ದೇವದತ್ತ ಪಡಿಕ್ಕಲ್, ಋತುರಾಜ್ ಗಾಯಕವಾಡ, ಹರ್ಷ ದುಬೆ, ತನುಷ್ ಕೋಟ್ಯಾನ್, ಮಾನವ್ ಸುತಾರ, ಖಲೀಲ್ ಅಹಮದ್, ಗುರ್ನೂರ್ ಬ್ರಾರ್, ಅಭಿಮನ್ಯು ಈಶ್ವರನ್, ಪ್ರಸಿದ್ಧಕೃಷ್ಣ, ಮೊಹಮ್ಮದ್ ಸಿರಾಜ್, ಆಕಾಶ್ ದೀಪ್.